
ಕರ್ನಾಟಕ ಸಾಹಿತ್ಯ ಅಕಾಡೆಮಿ

# ರಾ.ಶಿ.

ವಿಜಯಲಕ್ಷ್ಮಿ ಕೆ.ಎಂ



ಅಕಾಡೆಮಿ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ

# ರಾ.ಶಿ.


ಪ್ರಧಾನ ಸಂಪಾದಕರು
ಪ್ರೊ. ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ

ಲೇಖಕರು

ವಿಜಯಲಕ್ಷ್ಮಿ ಕೆ.ಎಂ.



ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ:080–22211730/22106460
www.karnatakasahithyaacademy.org
Email: sahithya.academy@gmail.com

**RAA.SHI.**
**NASUNAGEYINDA NIGOODHADAVAREGE**
**Written by: Vijayalakshmi K.M.**

Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | |
|---|---|
| ಪುಟಗಳು | : xii+೧೬೬ |
| ಬೆಲೆ | : ₹ ೧೫೫/- |
| ಮೊದಲ ಮುದ್ರಣ | : ೨೦೧೬ |
| ಪ್ರತಿಗಳು | : ೫೦೦ |
| ಮುಖಪುಟ ವಿನ್ಯಾಸ | : ಅರುಣ್‌ಕುಮಾರ್ ಜಿ. |

| | |
|---|---|
| Pages | : xii+166 |
| Price | : ₹ 155/- |
| First impression | : 2016 |
| Copies | : 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು-560 059.
080- 28483133 / 28484518

# ಅಧ್ಯಕ್ಷೀಯ ನುಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾಗಿದ್ದು 1961ರಲ್ಲಿ. ಅದು ಭಾಷಾವಾರು ಪ್ರಾಂತ ರಚನೆಯಾಗಿ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಕುತೂಹಲ, ಅಭಿಮಾನ, ಪ್ರೀತಿ ಸ್ಫೋಟಗೊಂಡ ಸಮಯ. ನಾಡು ನುಡಿ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟಿ ಬೆಳೆಸುವ ಹುಮ್ಮಸ್ಸಿನ ದಿನಗಳಾಗಿದ್ದವು ಅವು. ಜನರ ಬೇಡಿಕೆಗೆ ಸ್ಪಂದಿಸಿ ಅಂದಿನ ಸರಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ್ದನ್ನು ನಾವು ಇಂದು ಕೃತಜ್ಞತೆಗಳೊಂದಿಗೆ ನೆನೆಯಬೇಕು. ಆನಂತರದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಗೌಡ, ಶ್ರೀ ಕೆ.ಎಚ್. ಶ್ರೀನಿವಾಸ್ ಹಾಗೂ ಶ್ರೀ ಆರ್. ಗುಂಡೂರಾವ್‌ರಂಥ ಹಿರಿಯ ರಾಜಕಾರಣಿಗಳು ಸಾಹಿತ್ಯ ಅಕಾಡೆಮಿಯ ಸೂತ್ರಧಾರಿತ್ವ ವಹಿಸಿ ಸಮರ್ಥವಾಗಿ ಮುನ್ನಡೆಸಿದರು.

ಕನ್ನಡದ ದಿಗ್ಗಜ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯರು, ಶ್ರೀರಂಗರು ಅಕಾಡೆಮಿಗೆ ಭದ್ರಬುನಾದಿ ಹಾಕಲು ಪ್ರಯತ್ನಿಸಿದರು. ನಂತರ ಅಧ್ಯಕ್ಷರಾದ ಡಾ. ಹಾ.ಮಾ. ನಾಯಕ, ಡಾ. ನಿಸಾರ್ ಅಹಮದ್ ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಅವರುಗಳು ಅಕಾಡೆಮಿಗೆ ಖಚಿತವಾದ ರೂಪರೇಷೆಗಳ ಚೌಕಟ್ಟನ್ನು ನಿರ್ಮಿಸಿದರು. ಸಮಯದ ಬೇಡಿಕೆಗಳಿಗನುಸಾರವಾಗಿ ಹೊಸ ಯೋಜನೆಗಳನ್ನು ಕೈಗೊಂಡರು. ಅವರು ಪ್ರಕಟಿಸಿದ ಉತ್ತಮೋತ್ತಮ ಗ್ರಂಥಗಳು ಇಂದಿಗೂ ಬೇಡಿಕೆಯಲ್ಲಿವೆ. ನಂತರ ಅಧ್ಯಕ್ಷ ಸ್ಥಾನ ಸ್ವೀಕರಿಸಿದ ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಶಾಂತರಸ ಮತ್ತು ಡಾ. ಗುರುಲಿಂಗ ಕಾಪಸೆಯವರಂಥ ಹಿರಿಯ ಸುಪ್ರಸಿದ್ಧ ಸಾಹಿತಿಗಳು ತಮ್ಮ ನಿಷ್ಠೆ, ಪರಿಶ್ರಮಗಳಿಂದಾಗಿ ಅಕಾಡೆಮಿಗೆ ಘನತೆ, ಗೌರವ ತಂದುಕೊಟ್ಟರು. ಡಾ. ಗೀತಾ ನಾಗಭೂಷಣ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯರಂಥ ಸಾಹಿತಿ, ವಿದ್ವಾಂಸರು ಸಾಹಿತ್ಯ ಅಕಾಡೆಮಿಯ ತೇರನ್ನು ಮುನ್ನಡೆಸಿದರು. ಇವರೆಲ್ಲರ ಸೇವೆಯನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ನನ್ನ ಅವಧಿಯಲ್ಲಿ (2014–17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಶಿವಮೊಗ್ಗೆಯಲ್ಲಿ ಆಗಸ್ಟ್ 3, 2014 ರಂದು ಸಕಲ ಸಡಗರಗಳೊಂದಿಗೆ ನೆರವೇರಿಸಲಾಯ್ತು.

ಡಾ. ಕೆ.ವಿ. ನಾರಾಯಣರಂಥ ಹಿರಿಯ ಸಾಹಿತಿ, ವಿದ್ವಾಂಸರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಇದೇ ವೇದಿಕೆಯಲ್ಲಿ ಡಾ. ಗುರುಲಿಂಗ ಕಾಪಸೆ, ಡಾ. ಗಿರಡ್ಡಿ ಗೋವಿಂದರಾಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯ್ತು (ಡಾ. ನಿಸಾರ್ ಅಹಮದ್ ಮತ್ತು ಡಾ. ಗೀತಾ ನಾಗಭೂಷಣ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯ್ತು). ಆ ನಂತರ ಮುಂದಿನ ಎರಡು ವರ್ಷದ ಅವಧಿಯಲ್ಲಿ ಸುವರ್ಣ ಸಂಭ್ರಮದ ಯೋಜನೆಯಡಿ ಕವಿಗೋಷ್ಠಿ, ಕಮ್ಮಟ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು.

ಸುವರ್ಣ ಮಹೋತ್ಸವದ ಅಂಗವಾಗಿ ಸಮಾರೋಪ ಸಂದರ್ಭದಲ್ಲಿ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದ್ದೇವೆ.

1. ಸಾಹಿತ್ಯ ಅಕಾಡೆಮಿಯ ಹಿಂದಿನ ಹದಿನೆಂಟು ಜನ ಅಧ್ಯಕ್ಷರ ಪರಿಚಯ, ಸಾಹಿತ್ಯ ಸಾಧನೆ ಮತ್ತು ಸಾಹಿತ್ಯ ಅಕಾಡೆಮಿಗೆ ಅವರ ಸೇವೆ ಕುರಿತ ಪುಸ್ತಕ ಮಾಲೆಯನ್ನು ಪ್ರಕಟಿಸಿದ್ದೇನೆ.
2. ಕಳೆದ ಅರ್ಧ ಶತಮಾನದ ಕಾಲಾವಧಿಯಲ್ಲಿ ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳು ಜನಮನದ ಮೇಲೆ ಬೀರಿದ ಪರಿಣಾಮ ಕುರಿತ "ಪರಿಣಾಮ ಅಧ್ಯಯನ" ಗ್ರಂಥವನ್ನು ಪ್ರಕಟಿಸಿದ್ದೇನೆ.
3. ಸಾಹಿತ್ಯ ಅಕಾಡೆಮಿಯನ್ನು ಕುರಿತ ಸಾಕ್ಷ್ಯಚಿತ್ರ ನಿರ್ಮಾಣ.
4. ಕನ್ನಡ ಸಾಹಿತ್ಯ ಸಂವೇದನೆ ಕುರಿತ ರೂಪಕದ ರಂಗಪ್ರಯೋಗ.

ಸುವರ್ಣ ಮಹೋತ್ಸವದ ಉದ್ಘಾಟನೆ ಹಾಗೂ ಈ ಮಹೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಸರಣಿ ಕಾರ್ಯಕ್ರಮಗಳಲ್ಲದೆ, ಈಗ ಸಮಾರೋಪ ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲ ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಮತ್ತು ಸುವರ್ಣ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಸಲಹೆ ನೀಡಿದ ತಜ್ಞ ಸಾಹಿತಿಗಳಾದ ಡಾ. ಹಂ.ಪ. ನಾಗರಾಜಯ್ಯ, ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಅಕಾಡೆಮಿಯ ಸದಸ್ಯರಾದ ಶ್ರೀಮತಿ ಬಿ.ಟಿ. ಜಾಹ್ನವಿ ಅವರುಗಳನ್ನು ಮನಃಪೂರ್ವಕ ನೆನೆಯುತ್ತೇನೆ. ನಮ್ಮ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಮತ್ತು ಜಂಟಿ

ನಿರ್ದೇಶಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನದಲ್ಲಿ ತರಲು ಅಪಾರ ಪರಿಶ್ರಮ ವಹಿಸಿದ ರಿಜಿಸ್ಟ್ರಾರರಾದ ಶ್ರೀಮತಿ ಸಿ.ಎಚ್. ಭಾಗ್ಯ ಅವರಿಗೂ ಹೃದಯಪೂರ್ವಕ ವಂದನೆಗಳು. ಸಾಹಿತ್ಯ ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀಮತಿ ಟಿ. ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ವಿ. ಹರೀಶ್‌ಕುಮಾರ್, ಶ್ರೀ ಕೃಷ್ಣಪ್ಪ ಡಿ., ಶ್ರೀ ಹರೀಶ್ ಮತ್ತು ಶ್ರೀಮತಿ ಎಸ್.ಜಿ. ಸುಚಿತ್ರ ಇವರೆಲ್ಲರೂ ಕೈಜೋಡಿಸದಿದ್ದರೆ ಇಂಥ ಬೃಹತ್ ಕಾರ್ಯಕ್ರಮಗಳು ಅಸಾಧ್ಯ. ಇವರೆಲ್ಲರ ನಿಷ್ಠೆ, ಪರಿಶ್ರಮಗಳನ್ನು ಮನಃಪೂರ್ವಕ ನೆನೆಯುತ್ತೇನೆ. ಹಾಗೆಯೇ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016

**ಮಾಲತಿ ಪಟ್ಟಣಶೆಟ್ಟಿ**
ಅಧ್ಯಕ್ಷರು

# ಸಂಪಾದಕೀಯ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ ಇದು ಅಪರಂಜಿ ವರುಷ. ಐವತ್ತು ವರುಷ ತುಂಬಿದ ಈ ಸಾರ್ಥಕ ಸಾಧನೆಯ ಸಂದರ್ಭದಲ್ಲಿ ಸಂಸ್ಥೆಯು ತನ್ನನ್ನು ಈ ಎತ್ತರಕ್ಕೆ ಬೆಳೆಸಿದ ಹಿಂದಿನ ಅಧ್ಯಕ್ಷರುಗಳ ಸಾಧನೆಗಳನ್ನು ಕುರಿತು ಹೊತ್ತಗೆಗಳನ್ನು ಹೊರತರುತ್ತಿರುವುದು ಸಂತಸದ ಸಂಗತಿ. ಆರಂಭಕ್ಕೆ ಮಂತ್ರಿ ಮಹೋದಯರುಗಳು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಯನ್ನು ಮುನ್ನೋಟದಿಂದ ನಡೆಸಿದರು. ನಂತರ ಅಧ್ಯಕ್ಷರ ಸ್ಥಾನಕ್ಕೆ ನಾಡಿನ ಹಿರಿಯ ಸಾಹಿತಿ ಮುತ್ಸದ್ದಿಗಳನ್ನು ಆಯ್ಕೆ ಮಾಡುವ ಕ್ರಮ ಜಾರಿಗೆ ಬಂತು. ಹೀಗಾಗಿ ಈ ಪ್ರತಿಷ್ಠಿತ ಅಕಾಡೆಮಿಗೆ ಇದುವರೆಗೆ 18 ಮಂದಿ ಅಧ್ಯಕ್ಷರಾಗಿ ಅಕಾಡೆಮಿಯನ್ನು ಭಾರತ ದೇಶದ ಗಮನಾರ್ಹ ಸಾಹಿತ್ಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.

'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ' ಎನ್ನುವ ನಾಮನಿರ್ದೇಶನದಡಿ ಈ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿದೆ. ಒಂದು ಸಂಸ್ಥೆ ನಾಡಿನೊಳಗೆ ಸರ್ವಾಂಗೀಣವಾಗಿ, ಸಮೃದ್ಧವಾಗಿ ಬೆಳೆದು ನಾಡಿನ ಜನರ ಮೇಲೆ ದೀರ್ಘಕಾಲಿಕ ಪ್ರಭಾವವನ್ನು ಬೀರಬೇಕಾದರೆ ಅದರ ಮುಂಚೂಣಿಯಲ್ಲಿ ನಿಂತು ನಡೆಸುವ ಅಧ್ಯಕ್ಷೀಯ ಸ್ಥಾನದ ಪಾತ್ರ ಮಹತ್ವವಾದದ್ದು. ಹಾಗೆಯೇ ಒಂದು ಸಂಸ್ಥೆಯ ಇತಿಹಾಸದಲ್ಲಿ ಐವತ್ತು ವರ್ಷಗಳ ಕಾಲಮಾನ ಕೂಡ ಒಂದು ಮೈಲಿಗಲ್ಲು. ಹೀಗಾಗಿ ಇಂತಹ ಸಂದರ್ಭದಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ನಡೆಸಿದ ಹಿಂದಿನ ಅಧ್ಯಕ್ಷರುಗಳಾಗಿದ್ದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಹಾ.ಮಾ. ನಾಯಕ, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಗುರುಲಿಂಗ ಕಾಪಸೆ, ಡಾ. ರಾ.ಶಿ. (ಎಂ. ಶಿವರಾಂ), ಡಾ. ಶಾಂತರಸ, ನಾಡೋಜ ಗೀತಾ ನಾಗಭೂಷಣ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರುಗಳ ಸಾಧನೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಸೂಕ್ತವೂ, ಸಮಂಜಸವೂ ಆಗಿದೆ. ಈ ಕೃತಿಗಳನ್ನು ಶ್ರದ್ಧೆಯಿಂದ ರಚಿಸಿದ ನಾಡಿನ ವಿವಿಧ ಭಾಗದ ಬರಹಗಾರರಾದ ಶಾ.ಮಂ. ಕೃಷ್ಣರಾವ್, ಕೆ.ಎಂ. ವಿಜಯಲಕ್ಷ್ಮಿ, ಡಾ. ಪದ್ಮಾಶೇಖರ್, ಡಾ. ರಾಮಚಂದ್ರ ಗಣಾಪುರ, ಶೂದ್ರ ಶ್ರೀನಿವಾಸ್, ಎಸ್. ಮಾರುತಿ, ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಗುರುಪಾದ ಮರಿಗುದ್ದಿ, ಡಾ. ಪ್ರಭು

ಖಾನಾಪುರೆ, ಡಾ. ಪ್ರಮೀಳಾ ಮಾಧವ್, ಡಾ. ಎಲ್.ಜಿ. ಮೀರಾ ಈ ಎಲ್ಲರಿಗೂ ಕೃತಜ್ಞತೆಗಳು.

ಈ ಜವಾಬ್ದಾರಿಯನ್ನು ನನಗಿತ್ತು ಈ ಕಾರ್ಯದಲ್ಲಿ ಸಂಪೂರ್ಣ ನೆರವು ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗಕ್ಕೆ ನನ್ನ ನಮ್ರ ಪ್ರಣಾಮಗಳು.

ಪ್ರೊ. ಕೆ.ಎಸ್. ಮಧುಸೂದನ
ಸಂಪಾದಕರು

## ಒಂದು ಮಾತು

ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದ ಎಲ್ಲ ದಿಗ್ಗಜರ ಕುರಿತು ಪುಸ್ತಕಗಳನ್ನು ಬರೆಸುತ್ತಿರುವುದು ಒಂದು ಅಗತ್ಯದ ಹಾಗೂ ಸಂತೋಷದ ವಿಚಾರ. ಸಾಹಿತ್ಯ ಅಕಾಡೆಮಿಯ ಸೇವೆಯ ಜೊತೆಗೆ, ಈ ಸಾಧಕರು ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಉತ್ತಮ ಕಾರ್ಯಗಳ ಕುರಿತು, ಅಕಾಡೆಮಿಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಅವರುಗಳು ಮಾಡಿರುವ ಸಾಧನೆಗೆ ನೀಡುವ ದೊಡ್ಡ ಗೌರವ.

ರಾ.ಶಿ. (ಡಾ. ಎಂ. ಶಿವರಾಂ) ಅವರ ಕುರಿತು ಬರೆಯಲು ನನಗೆ ಆಹ್ವಾನ ಬಂದಿದ್ದು ನನಗೆ ಸಂತೋಷ ಮಾತ್ರವಲ್ಲ ಸೋಜಿಗವೂ. ಅವರನ್ನು ನಾನು ನೋಡಿದ ನೆನಪಿಲ್ಲ. ಅವರ ಮಗಳು ವಿಮಲಾ ನನಗೆ ವಿಶ್ವಾಸದಿಂದ ಕೊಟ್ಟಿದ್ದ ಅವರೇ ಬರೆದ 'ರಾ.ಶಿ.' ಎಂಬ ಕಿರು ಹೊತ್ತಿಗೆಯನ್ನು ಮತ್ತು ಕೊರವಂಜಿಯ ಕೆಲವು ಸಂಚಿಕೆಗಳನ್ನು ಓದಿ ಮೆಚ್ಚಿದ್ದೆ. ಅದು ಬಿಟ್ಟು ಹೆಚ್ಚೇನೂ ಓದಿರಲಿಲ್ಲ. ರಾ.ಶಿ.ಯವರ ಮಗ ಶ್ರೀ ಎಂ. ಶಿವಕುಮಾರ್, ಅವರಿಂದ ಕೊಂಡ ಕೊರವಂಜಿಯ ಸಿ.ಡಿ. ಮತ್ತು ಅವರು ನೀಡಿದ ಮಾಹಿತಿಗಳು, ರಾ.ಶಿ.ಯವರ ಕುರಿತು ತಿಳಿಯಲು ನೆರವಾದವು. ನಾನು ಬರೆದ ಈ ಪುಸ್ತಕವನ್ನು ಅವರು, ತಮ್ಮ ಇತರ ಕೆಲಸಗಳನ್ನು ಬದಿಗೊತ್ತಿ, ಕೊಟ್ಟ ಒಂದೇ ದಿನದೊಳಗೆ ಅಕ್ಷರ ಅಕ್ಷರವನ್ನೂ ಓದಿ, ಸಣ್ಣ ಪುಟ್ಟ ತಿದ್ದುಪಡಿಗಳ ಬಗ್ಗೆ ತಿಳಿಸಿದ್ದನ್ನು ಮರೆಯುವ ಹಾಗಿಲ್ಲ.

ಶ್ರೀ ಎಂ. ಶಿವಕುಮಾರ್ ಅವರಿಗೂ ಹಾಗೂ ನಾನು ಹಿಂತಿರುಗಿ ಕೊಡುವ ಕುರಿತು ಕಿಂಚಿತ್ ಅನುಮಾನವಿಲ್ಲದೆ, ತಮ್ಮಲ್ಲಿದ್ದ ರಾ.ಶಿ.ಯವರ ಹದಿಮೂರು ಪುಸ್ತಕಗಳನ್ನು, ನನಗೆ ತಕ್ಷಣದಲ್ಲಿ ಒದಗಿಸಿಕೊಟ್ಟ ಶ್ರೀ ಶ್ರೀನಿವಾಸ ವೈದ್ಯರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ದಿ. ಜಿ.ಎಸ್.ಎಸ್. ಅವರ ಕವಿತೆಯೊಂದರಲ್ಲಿ "ಎನಿತು ಜನ್ಮದಲಿ ಎನಿತು ಜೀವರಿಗೆ/ ಎನಿತು ನಾವು ಋಣಿಯೋ/ ತಿಳಿದು ನೋಡಿದರೆ ಬಾಳು ಎಂಬುದು/ ಋಣದ ರತ್ನ ಗಣಿಯೋ" ಎಂದಿರುವಂತೆ, ತಮ್ಮ ಜೀವನವನ್ನು ಋಣದ ಗಣಿ ಎಂದೇ ಭಾವಿಸಿ, ತಮ್ಮ ಇಡೀ ಬದುಕಿನ ಉದ್ದೇಶವೇ, ಹಲವು ರೀತಿಯ ಋಣಭಾರವನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಎಂಬಂತೆ, ಹಾಗೂ ಕರ್ಮಗಳನ್ನು ಸವೆಸುವುದಕ್ಕಾಗಿಯೇ ಎಂಬಂತೆ ಜೀವನ ನಡೆಸಿದವರು

ರಾ.ಶಿ.ಯವರು. 'ನಾನು' ಎಂಬ ಅಹಂಕಾರವಾಗಲೀ, 'ನನ್ನದು' ಎಂಬ ಮಮಕಾರವಾಗಲೀ ಹುಟ್ಟದಂತೆ, ವಿಶ್ವ ಕುಟುಂಬವೆಂಬ ಭಾವನೆಯಿಂದ ಮತ್ತು ಜ್ಞಾನಾರ್ಜನೆಯ ಗುರಿಯಿಂದ, ಸಾಹಿತ್ಯ ಸೇವೆ, ಸಾರ್ವಜನಿಕ ಸೇವೆ ಮತ್ತು ವೈದ್ಯಕೀಯ ಸೇವೆ ಮಾಡಿದವರು. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗುವ ಹೊತ್ತಿಗೆ ಆಗಲೇ ಅವರಿಗೆ ಅನಾರೋಗ್ಯ ಕಾಡ ತೊಡಗಿದ್ದರಿಂದ ಮನಸ್ಸಿದ್ದರೂ ಹೆಚ್ಚು ಕೆಲಸಗಳನ್ನು ಮಾಡಲಾಗಿಲ್ಲ. ಇಂಥ ಜ್ಞಾನ–ತಪಸ್ವಿಯ ಕುರಿತು ಪುಸ್ತಕ ಬರೆಯಲು ನನಗೆ ಅವಕಾಶ ಮಾಡಿಕೊಟ್ಟ, ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರಿಗೆ; ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಅವರಿಗೆ ಮತ್ತು ಅಕಾಡೆಮಿಯ ಎಲ್ಲ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ಗೌರವ ಪೂರ್ವಕ ವಂದನೆಗಳು.

ವಿಜಯಲಕ್ಷ್ಮಿ ಕೆ.ಎಂ.

ದಿ: 5–8–2015

# ಪರಿವಿಡಿ


| | |
|---|---|
| ಅಧ್ಯಕ್ಷೀಯ ನುಡಿ | iii |
| ಸಂಪಾದಕೀಯ | vii |
| ಒಂದು ಮಾತು | ix |
| 1. ರಾ.ಶಿ. ನಸುನಗೆಯಿಂದ ನಿಗೂಢದವರೆಗೆ | 1–159 |
| 2. ರಾಶಿಯವರ ಬದುಕಿನ ಪ್ರಮುಖ ಘಟ್ಟಗಳು | 160–162 |
| ಭಾವ ಚಿತ್ರಗಳು | 163–165 |
| ಗ್ರಂಥ ಋಣ | 166 |

## ರಾ.ಶಿ. ನಸು ನಗೆಯಿಂದ ನಿಗೂಢದವರೆಗೆ

ಜ್ಞಾನದಾಹ, ಮಾನವೀಯತೆ, ಸೃಜನಶೀಲತೆ, ಆನಂದದ ಅರಸುವಿಕೆ, ಹಾಸ್ಯ, ಸಾಹಿತ್ಯ–ಪಾಂಡಿತ್ಯ, ವೈದ್ಯವೃತ್ತಿ, ವಿಶಿಷ್ಟ ಜೀವನಾನುಭವಗಳು, ಹಾಸ್ಯ ಪ್ರವೃತ್ತಿ, ಸುಸಂಸ್ಕೃತಿ, ಕೆಣುಕು–ಅಣಕು ಗುಣ, ಉತ್ತಮ ಸಂಸ್ಕಾರ, ಚಿಂತನೆ, ಸಮಾಜ ಸೇವೆ, ಪತ್ರಿಕೋದ್ಯಮ, ಕ್ರೀಡಾ ಪಟುತ್ವ ಇವೆಲ್ಲ ಗುಣಗಳು ಮತ್ತು ಚಟುವಟಿಕೆಗಳ ಒಟ್ಟು ರಾಶಿಯೇ 'ರಾ.ಶಿ'. ಇದು ಡಾ. ಎಂ. ಶಿವರಾಮ್ ಉರುಫ್ ರಾ.ಶಿ.ಯವರ ಒಂದು ಸಾಲಿನ ಪರಿಚಯ. ಸಾಹಿತ್ಯ, ವೈದ್ಯಕೀಯ, ಪುರಾಣ, ವಿಜ್ಞಾನ, ಉಪನಿಷತ್ತು, ಪತ್ರಿಕೋದ್ಯಮ, ಮಾತುಗಾರಿಕೆ, ಅಧ್ಯಾತ್ಮ – ಹೀಗೆ ಬಹುವಿಷಯಗಳ ಬಗ್ಗೆ ಆಳ ಅರಿವನ್ನು ಮಿದುಳಲ್ಲಿ ಮೇಳವಿಸಿಕೊಂಡ ಮೃದು ಮನಸ್ಸಿನ ಮನುಷ್ಯ. ಕಳೆದ ಶತಮಾನದ ಉತ್ತರಾರ್ಧದಲ್ಲಿ, ಕರ್ನಾಟಕದ ಜನತೆಯ ನಡುವೆ ಓಡಾಡುತ್ತಿದ್ದ ಒಂದು ದೊಡ್ಡ ಹೆಸರು. ತಮ್ಮ ಹೆಸರಿನಲ್ಲಿದ್ದ ಇಬ್ಬರು ದೇವರುಗಳಲ್ಲಿ ಮುಂದಿದ್ದ 'ಶಿವ'ನನ್ನು ಹಿಂದೆ ಕಳಿಸಿ, ಹಿಂದಿದ್ದ 'ರಾಮ'ನನ್ನು ಮುಂದಕ್ಕೆ ತಂದಿಟ್ಟು, 'ರಾಮ ಶಿವ'ನಾಗಿ ಪರಿವರ್ತಿಸಿಕೊಂಡು, ಅದರಲ್ಲಿನ ಒಂದೊಂದು ಅಕ್ಷರವನ್ನು ಕತ್ತರಿಸಿ ಕಣ್ಮರೆಯಾಗಿಸಿ, 'ರಾ.ಶಿ.' ಯಾದರು. 'ರಾ.ಶಿ.' ಎನ್ನುವುದು ಶಿವರಾಂ ಅವರ ಕಾವ್ಯನಾಮ. ಇದೇ ರಾ.ಶಿ.ಯೇ, ಕಣಿ ಹೇಳುವ ಕೊರವರ ಹೆಣ್ಣು 'ಕೊರವಂಜಿ'ಯನ್ನು ಇಪ್ಪತ್ತೈದು ವರ್ಷಗಳ ಕಾಲ ತಮ್ಮ ಜೊತೆಗಿಟ್ಟುಕೊಂಡು, ಅವಳನ್ನೇ ತಮ್ಮ ಉಸಿರಾಗಿಸಿಕೊಂಡು, ಕರೆದವರೆಲ್ಲರ ಮನೆ ಮನೆಗೂ ಹೋಗಿ, ಕುಹಕಿಡಿಸಿದರು, ಉರಿಗಾಳು ತಿನಿಸಿದರು. ಎಲ್ಲರಿಗೂ ನಗೆ ಮಾತ್ರೆ ಕೊಟ್ಟು ನಗಿಸಿದರು, ನಕ್ಕರು, ನಗೆ ವೈದ್ಯರಾದರು. ವೈದ್ಯರಾಗಿ, ಸಾಹಿತಿಯಾಗಿ, ಉತ್ತಮ ನಗೆವಾಗ್ಮಿಯಾಗಿ ಪ್ರಸಿದ್ಧಿ ಪಡೆದರೂ, ಸ್ಪಷ್ಟ ಪರಿಚಯಕ್ಕೆ ಅವರ ಹೆಸರಿನೊಂದಿಗೆ ಸೇರಿ ಒಂದಾಗಿ ಉಳಿದವಳು, ಅವರ ಮಗಳ ಭಾವನೆಯ ಈ ಕೊರವಂಜಿಯೇ. 'ಕೊರವಂಜಿ'ಯ ರಾ.ಶಿ. ಎಂದರೆ ಅದು ಅವರ ಸ್ಪಷ್ಟ ಗುರುತು. ಕನ್ನಡ ಹಾಸ್ಯ ಸಾಹಿತ್ಯಕ್ಕೆ, ನಾಟಕಗಳ ಮೂಲಕ ಕೈಲಾಸಂ ಅವರು ಹಾಕಿದ ಬುನಾದಿಯ ಮೇಲೆ, ಕೊರವಂಜಿಯನ್ನು ಮತ್ತು ತಮ್ಮ ಇತರ ಕೃತಿಗಳ ಇಟ್ಟಿಗೆಗಳನ್ನಿಟ್ಟು ಎತ್ತರಿಸಿದವರು ರಾ.ಶಿ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಲವತ್ತು ಕೃತಿಗಳನ್ನು ರಚಿಸಿದ ಉದ್ದಾಮ ಸಾಹಿತಿ.

ಬೆಂಗಳೂರು ಮೆಡಿಕಲ್ ಕಾಲೇಜಿನ ಸಂಸ್ಥಾಪಕ ಕಾರ್ಯದರ್ಶಿ, ಡಾಕ್ಟರ್ ಎಂ. ಶಿವರಾಂ ಆಗಿ ತಮ್ಮ ರೋಗಿಗಳಿಗೆ ಅತ್ಯಂತ ಆಪ್ತರು. ರೋಗಿಗಳ ಸ್ನೇಹಿತ, ಮಾರ್ಗದರ್ಶಿ, ನಗೆ ಮದ್ದು ನೀಡುವ ವೈದ್ಯ. ಮನಸ್ಸನ್ನು ಅರಿತು ದಾರಿ ತೋರುವ ಗುರು. ಬೆಂಗಳೂರು ನಗರದ ವೈದ್ಯಕೀಯ ಜಗತ್ತಿನಲ್ಲಿ ಮಹೋತ್ತಮ ಸ್ಥಾನ ಗಳಿಸಿದ್ದ ಮಾನವೀಯತೆಯ ಸಾಕಾರ ಮೂರ್ತಿ. ಇವರ ಸಾಹಿತ್ಯ ಕ್ಷೇತ್ರ, ವೈದ್ಯಕೀಯ ಕ್ಷೇತ್ರ, ಸಾರ್ವಜನಿಕ ಕ್ಷೇತ್ರ, ಜೀವನ ಕ್ಷೇತ್ರ ಮತ್ತು ವ್ಯಕ್ತಿತ್ವಗಳೆಲ್ಲದರ ಮೇಲೆಯೂ ಒಂದು ಇಣುಕು ನೋಟ ಹಾಯಿಸಿರುವ ಕಿರು ಹೊತ್ತಿಗೆ ಇದು.

**ಕರ್ನಾಟಕ ಸಾಹಿತ್ಯ ಅಕಾಡೆಮಿ:**

ರಾ.ಶಿಯವರು ವಿವಿಧ ಸಂಘ ಸಂಸ್ಥೆಗಳಲ್ಲಿ, ವಿವಿಧ ಪದವಿಗಳಲ್ಲಿ ನೇಮಕಗೊಂಡು, ಸಲ್ಲಿಸಿದ ಸೇವೆ ಗಣನೀಯವಾದುದು. ಅವುಗಳಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿ ಪ್ರಮುಖವಾದುದು. ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿಯು ಅಸ್ತಿತ್ವಕ್ಕೆ ಬಂದಿದ್ದು 1961ರಲ್ಲಿ. ಆಗ ರಾಜ್ಯ ಶಿಕ್ಷಣ ಸಚಿವರೇ ಆಕಾಡೆಮಿಯ ಅಧ್ಯಕ್ಷರಾಗುತ್ತಿದ್ದರು. ನಂತರ ಖ್ಯಾತ ಸಾಹಿತಿಗಳಾದ ಎ.ಎನ್. ಮೂರ್ತಿರಾವ್, ಪ್ರೊ. ಸಿ.ಕೆ. ವೆಂಕಟರಾಮಯ್ಯ, ಖ್ಯಾತ ಶಿಕ್ಷಣ ತಜ್ಞ ಪ್ರೊ. ಕೆ.ಎಸ್ ಧರಣೇಂದರಯ್ಯ, ಮುಂತಾದವರು ನಿರ್ದೇಶಕರಾಗಿ ಅಕಾಡೆಮಿಯ ಕಾರ್ಯ ನಿರ್ವಹಿಸಿದರು. ಮೈಸೂರು ರಾಜ್ಯದ ಹೆಸರು 1973ರಲ್ಲಿ 'ಕರ್ನಾಟಕ' ಎಂದು ನಾಮಕರಣವಾದ ಮೇಲೆ 'ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ'ಯು 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಎಂಬ ಹೆಸರು ಪಡೆಯಿತು. ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಒಂದು ಭಾಗವಾಗಿ ಈ ಅಕಾಡೆಮಿಯ ಕಾರ್ಯ ಕಲಾಪಗಳು ನಡೆಯುತ್ತಿದ್ದವು. ನವೆಂಬರ್ 1977ರಲ್ಲಿ ಕರ್ನಾಟಕ ಸರ್ಕಾರದ ಸಂವಿಧಾನದಲ್ಲಿ ಅನೇಕ ತಿದ್ದುಪಡಿಯನ್ನು ಮಾಡಿ ಅಕಾಡೆಮಿಗಳ ಸನ್ನದನ್ನು (ಚಾರ್ಟರ್) ಪ್ರಕಟಿಸಿತು. ಅದರ ಪ್ರಕಾರ ಅಕಾಡೆಮಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಸರ್ಕಾರವೇ ನಾಮಕರಣ ಮಾಡುತ್ತ ಬಂದಿತು ಮತ್ತು ಅಧ್ಯಕ್ಷರ ಕಾರ್ಯಾವಧಿ, ಮೂರು ವರ್ಷಗಳಿಗೆ ನಿಗದಿಗೊಂಡಿತು. ಜೊತೆಗೆ ಸಾಹಿತ್ಯ ಕ್ಷೇತ್ರದ ಸೇವಾರ್ಥಿಗಳಿಂದ ಒಬ್ಬ ಅನುಭವಿ ಸಾಹಿತಿಯನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂಬ ಒತ್ತಡಗಳು ಬಂದವು. ಈ ಬದಲಿತ ವ್ಯವಸ್ಥೆ ಬಂದ ಮೇಲೆ, ಮೊದಲ ಅಧ್ಯಕ್ಷರಾಗಿ ನೇಮಕಗೊಂಡವರು ರಾ.ಶಿ.ಯವರು.

ದಾಖಲೆಯ ಪ್ರಕಾರ, ರಾ.ಶಿ.ಯವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, 1978ರಿಂದ 1980ರ ವರೆಗಿನ ಮೂರು ವರ್ಷಗಳ ಅವಧಿಗೆ.

ಆದ್ಯ ರಂಗಾಚಾರ್ಯರು 1971ರಲ್ಲಿ ಒಂದು ವರ್ಷ ಕಾಲ, ಅಧ್ಯಕ್ಷತೆಯ ಚುಕ್ಕಾಣಿ ಹಿಡಿದಾಗ, ಒಂದು ಹೊಸ ಯೋಜನೆ ರೂಪುಗೊಳಿಸಿದ್ದರು. ವಿವಿಧ ರಾಜ್ಯಗಳ ಸಾಹಿತಿಗಳನ್ನು ರಾಜ್ಯಕ್ಕೆ ಕರೆಸಿಕೊಳ್ಳುವುದರಿಂದ ಮತ್ತು ಅದೇ ರೀತಿಯಲ್ಲಿ ಇಲ್ಲಿಯ ಸಾಹಿತಿಗಳನ್ನು ಬೇರೆ ರಾಜ್ಯಗಳಿಗೆ ಕಳಿಸಿ ವಿಚಾರ ವಿನಿಮಯ ಮಾಡಿಕೊಳ್ಳುವುದರಿಂದ ರಾಷ್ಟ್ರೀಯ ಭಾವೈಕ್ಯತೆಯ ರೀತಿಯಲ್ಲಿಯೇ ರಾಜ್ಯಗಳ ಸಾರಸ್ವತ ಹಾಗೂ ಸಾಂಸ್ಕೃತಿಕ ರಂಗದಲ್ಲಿಯೂ ಭಾವೈಕ್ಯತೆ ಸಾಧ್ಯ ಎಂಬ ದೃಷ್ಟಿಯಿಂದ, ಇಬ್ಬರು ಸಾಹಿತಿಗಳನ್ನು ಆಯ್ಕೆ ಮಾಡಿ ಕೇರಳ ರಾಜ್ಯಕ್ಕೆ ಕಳಿಸಿ ಕೊಡುವ ವ್ಯವಸ್ಥೆ ಮಾಡಿದ್ದರು. ಶ್ರೀರಂಗರ ಆ ಯೋಜನೆಯ ಪ್ರಯೋಜನವನ್ನು ಕಂಡುಕೊಂಡ ರಾ.ಶಿ. ಯವರು, ತಮ್ಮ ಅಧ್ಯಕ್ಷಾವಧಿಯಲ್ಲಿ ಈ 'ಸಾಂಸ್ಕೃತಿಕ ವಿನಿಮಯ' ಯೋಜನೆಯನ್ನು ಇನ್ನೂ ಹೆಚ್ಚು ವ್ಯಾಪಕಗೊಳಿಸಿದರು. ಹೊರ ರಾಜ್ಯ ಹಾಗೂ ನಮ್ಮ ರಾಜ್ಯದ ಸಾಹಿತಿಗಳಿಂದ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಿಚಾರಗಳ ಪರಸ್ಪರ ವಿನಿಮಯ ಕಾರ್ಯಕ್ರಮಗಳು ಮಾತ್ರವಲ್ಲದೆ, ಹೊರನಾಡ ಕನ್ನಡಿಗರು ನಡೆಸುವ ಸಂಘ–ಸಂಸ್ಥೆಗಳಿಗೆ ನಮ್ಮ ರಾಜ್ಯದ ಉತ್ತಮ ಕನ್ನಡ ಪುಸ್ತಕಗಳನ್ನು ದಾನವಾಗಿ ನೀಡುವ ಕಾರ್ಯಕ್ರಮವನ್ನೂ ಇವರು ಆರಂಭಿಸಿದರು. ಇದರಿಂದ ಬೇರೆ ರಾಜ್ಯದ ಕನ್ನಡಿಗರು ಇಲ್ಲಿಯ ಉತ್ತಮ ಪ್ರಕಟಣೆಗಳನ್ನು ಓದುವಂತಾಯಿತು.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ, ಜಿಲ್ಲಾ ಮಟ್ಟದಲ್ಲಿ ಎರಡು ಮತ್ತು ರಾಷ್ಟ್ರ ಮಟ್ಟದಲ್ಲಿ ಒಂದು ವಿಚಾರ ಸಂಕಿರಣಗಳನ್ನು ನಡೆಸುವ ವ್ಯವಸ್ಥೆ ಮಾಡಿದರು. ಪುಸ್ತಕ ಪ್ರಕಟಣೆಗಾಗಿ ಆರ್ಥಿಕ ನೆರವನ್ನೂ, ಶ್ರೇಷ್ಠ ಗ್ರಂಥ ಕರ್ತರಿಗೆ ಪ್ರಶಸ್ತಿಯನ್ನೂ ರಾ.ಶಿ.ಯವರ ಅವಧಿಯಲ್ಲಿ ನೀಡಿದ್ದೂ ಉಲ್ಲೇಖನೀಯ.

ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿರುವ ಕನ್ನಡದ ಸಾಹಿತಿಗಳಿಗೆ ಪ್ರತಿವರ್ಷ ಗೌರವ ಪ್ರಶಸ್ತಿಯನ್ನು ನೀಡುವ ಮೂಲಕ ಸನ್ಮಾನಿಸುವುದು, ಅಕಾಡೆಮಿ ಆಚರಿಸುತ್ತ ಬಂದಿರುವ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು. ಸಾಹಿತ್ಯ ಕ್ಷೇತ್ರದಲ್ಲಿ ಗಮನೀಯ ಸೇವೆ ಸಲ್ಲಿಸಿದ

ಶ್ರೀ. ವಿ. ಸೀತಾರಾಮಯ್ಯನವರಿಗೆ ಗೌರವ ಪ್ರಶಸ್ತಿಯನ್ನು ನೀಡಲು ಆ ವರ್ಷ ಅಕಾಡೆಮಿಯು ಅಪೇಕ್ಷಿಸಿತ್ತು. ಆದರೆ ಪ್ರಶಸ್ತಿಯ ಬಯಕೆ ಇಲ್ಲದ ವಿ.ಸೀ. ಯವರು ಅದನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ರಾ.ಶಿ.ಯವರು ಅಕಾಡೆಮಿಯ ಅಧ್ಯಕ್ಷರಾದ ಕೂಡಲೇ ಮೊದಲು ಮಾಡಿದ ಕೆಲಸವೇ ವೀ.ಸೀ.ಯವರನ್ನು ಗೌರವ–ಸನ್ಮಾನಕ್ಕೆ ಒಪ್ಪಿಸಿದ್ದು. 'ನೀವು ಒಪ್ಪದಿದ್ದರೆ, ನಾನು ಅಕಾಡೆಮಿಯ ಅಧ್ಯಕ್ಷ ಪದವಿಯನ್ನೇ ತ್ಯಜಿಸುತ್ತೇನೆ" ಎಂದು ರಾ.ಶಿ.ಯವರು ತಮ್ಮ ನಿರ್ಧಾರವನ್ನು ತಿಳಿಸಿದಾಗ, ಅಕಾಡೆಮಿಯಲ್ಲಿ ಉತ್ತಮ ಕೆಲಸಗಳ ಮುಂದುವರಿಕೆಗೆ ಇಂತಹವರ ಸೇವೆ ಅತ್ಯಗತ್ಯವೆಂಬುದನ್ನು ಮನಗಂಡಿದ್ದ ವಿ.ಸೀ.ಯವರು ಅವರ ಒತ್ತಾಯಕ್ಕೆ ಮಣಿದರು. ಸಾಹಿತ್ಯ ಅಕಾಡೆಮಿಯು ಕೊಡ ಮಾಡಿದ ಗೌರವ ಪ್ರಶಸ್ತಿಯನ್ನು ಸ್ವೀಕರಿಸಿದರು.

1979ನೆಯ ವರ್ಷದ ಗೌರವ ಪ್ರಶಸ್ತಿಗಳಿಗೆ ಆಯ್ಕೆಯಾದವರು; ಸಾಹಿತ್ಯದಲ್ಲಿ ಮೇರು ಸಾಧನೆ ಮಾಡಿದಂತಹ ಅಂತಾರಾಷ್ಟ್ರೀಯ ಖ್ಯಾತಿಯ ಡಾ. ಕೆ.ವಿ. ಪುಟ್ಟಪ್ಪ, ಕನ್ನಡದ ಆಸ್ತಿ ಎನಿಸಿದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ದಿ.ಪ್ರೊ. ಕೆ.ವಿ. ಅಯ್ಯರ್, ಗೀತಾಕುಲಕರ್ಣಿ, ಶ್ರೀ. ಕೋ. ಚನ್ನಬಸಪ್ಪ ಹಾಗೂ ಗಮಕಿ ಶ್ರೀ. ಕೆ.ಟಿ. ರಾಮಸ್ವಾಮಿ ಅಯ್ಯಂಗಾರ್ ಇವರುಗಳು. ಸನ್ಮಾನಿತರಿಗೆ ಈ ಗೌರವ ಪ್ರಶಸ್ತಿಗಳನ್ನು ನೀಡಲು ಸಮಾರಂಭವನ್ನು ಏರ್ಪಡಿಸಿದ್ದು 1980ರ ಮಾರ್ಚ್ ಒಂಬತ್ತರಂದು, ಬೆಂಗಳೂರಿನಲ್ಲೇ. ಆಗಿನ ರಾಜ್ಯಪಾಲರಾಗಿದ್ದ ಶ್ರೀ ಗೋವಿಂದ ನಾರಾಯಣ ಅವರು ಈ ಎಲ್ಲ ಗೌರಾವಾನ್ವಿತರಿಗೆ ಪ್ರಶಸ್ತಿಗಳನ್ನು ನೀಡಿದ್ದರು.*

ಅಲ್ಲದೇ ಪ್ರತಿ ವರ್ಷ ವಿವಿಧ ಪ್ರಕಾರಗಳಲ್ಲಿ ಪ್ರಕಟವಾಗುವ ಕನ್ನಡ ಪುಸ್ತಕಗಳಲ್ಲಿ ಅತ್ಯುತ್ತಮ ಪುಸ್ತಕವನ್ನು ಆಯ್ದು ಬಹುಮಾನ ಕೊಡುವ ಯೋಜನೆಯನ್ನೂ ಅಕಾಡೆಮಿಯು ನಡೆಸಿಕೊಂಡು ಬರುತ್ತಿದ್ದು, ಕೆಲವು ಕಾರಣಗಳಿಂದಾಗಿ ಹಿಂದಿನ ಮೂರು ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳಿಗೆ ಬಹುಮಾನ ನೀಡಲಾಗಿರಲಿಲ್ಲ. ರಾ.ಶಿ.ಯವರು ಅಧ್ಯಕ್ಷರಾದ ಮೇಲೆ ಮೂರು ವರ್ಷಗಳ ಪುಸ್ತಕ ಬಹುಮಾನ ನೀಡಿದ್ದೊಂದು ವಿಶೇಷ.

---

ಬಿ.ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ 'ವಾರ್ತಾ ಪತ್ರ'ದ ಜನವರಿ–ಮಾರ್ಚ್ 1980ರ ಸಂಚಿಕೆಯ 'ಅಭಿನಂದನೆ'

ಬರವಣಿಗೆ ಎಲ್ಲರಿಗೂ ಒಲಿಯುವಂತಹದಲ್ಲ. ಆದರೆ ಸರಸ್ವತಿ ಒಲಿದವರಿಗೆ, ಸಾಹಿತ್ಯದಲ್ಲಿ ಒಲವಿದ್ದವರಿಗೆ ಅಗತ್ಯ ಅರಿವು ನೀಡಿ, ಅನುಕೂಲ ಮಾಡಿ ಕೊಟ್ಟರೆ, ಅರಳುವ ಪ್ರತಿಭೆಗಳು, ಅರಳಿಸುವ ಕೃತಿಗಳಲ್ಲಿ ಅರಿವಿನ ಪರಿಮಳವೂ ಸೇರುತ್ತದೆ. ಕೃತಿಗಳ ಮೌಲ್ಯ ಖಂಡಿತ ಹೆಚ್ಚುತ್ತದೆ. ಈ ನಿಟ್ಟಿನಲ್ಲಿ ಚಿಂತಿಸಿ ತರಬೇತಿ ಶಿಬಿರಗಳನ್ನು ನಡೆಸಿ ಯುವಜನರಿಂದ ಉತ್ತಮ ಕೃತಿಗಳ ರಚನೆ ಮಾಡುವಂತೆ ಪ್ರೇರೇಪಿಸುವುದು ಒಂದು ಮಹತ್ವದ ಕಾರ್ಯವೇ. ಬರವಣಿಗೆಯ ಮಟ್ಟವನ್ನು ಹೆಚ್ಚಿಸುವುದಕ್ಕಾಗಿ ರಾ.ಶಿ.ಯವರು ಇಂಥ ಸಾಹಿತ್ಯ ರಚನೆಯ ಶಿಬಿರಗಳನ್ನು ನಡೆಸಿ, ಸಂಪನ್ಮೂಲ ವ್ಯಕ್ತಿಗಳಿಂದ, ಯುವ ಬರಹಗಾರರನ್ನು ತರಬೇತುಗೊಳಿಸಿದರು.

ಆದರೆ ರಾ.ಶಿ.ಯವರಿಗೆ ಈ ಅವಧಿಯಲ್ಲಿ ಆಗಲೇ ಅನಾರೋಗ್ಯದ ತೊಂದರೆಗಳು ಹೆಚ್ಚಾಗತೊಡಗಿತ್ತು. ಆದ್ದರಿಂದ ಅವರಿಗೆ ಇನ್ನೂ ಹೆಚ್ಚಿನ ಯೋಜನೆಗಳನ್ನು ರೂಪಿಸುವ ಮತ್ತು ಹೊಸ ಹೊಸ ಕಾರ್ಯಕ್ರಮಗಳನ್ನು ನಡೆಸುವ ಮಹದಾಸೆ ಇದ್ದರೂ, ಅವರ ಅನಾರೋಗ್ಯ ಅವರಿಗೆ ಅಡ್ಡಿ ಪಡಿಸಿತು. ರಾ.ಶಿ.ಯವರು ತಮ್ಮ ಅನೇಕ ಆಸಕ್ತಿಗಳನ್ನು ಕಾರ್ಯರೂಪಕ್ಕೆ ತರಲಾಗದ ಅತೃಪ್ತಿಯೊಂದಿಗೇ ಅಧ್ಯಕ್ಷ ಪದವಿಗೆ ಮುಕ್ತಾಯದ ಹಾಡು ಹಾಡಿದರು.

**ಪತ್ರಿಕೋದ್ಯಮಕ್ಕೆ ಪ್ರೇರೇಪಿಸಿದ ಪುಸ್ತಕ ಪ್ರೀತಿ:**

ಸದಾ ಅಧ್ಯಯನಶೀಲ ರಾ.ಶಿ.ಯವರಿಗೆ ಪುಸ್ತಕಗಳೆಂದರೆ ಮರುಳಾಗಿ ಅದರಲ್ಲೇ ಮುಳುಗಿ ಬಿಡುವಷ್ಟು ಮೈ ಮರೆವು. ವಿಪರೀತವಾದ ಜ್ಞಾನದಾಹ. ಅವರ ಜೀವನದ ಗುರಿಯೇ ಜ್ಞಾನಾರ್ಜನೆ ಮತ್ತು ಜ್ಞಾನದಾನ. ಅವರಿಗೆ ಬಾಲ್ಯದಿಂಲೇ ಸಾಹಿತ್ಯದಲ್ಲಿ ಅತೀವ ಒಲವು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಅವರು ಮಧ್ಯಾಹ್ನದ ಊಟದ ವಿರಾಮದ ವೇಳೆಯನ್ನು ಕಳೆಯುತ್ತಿದ್ದುದು ಗ್ರಂಥಾಲಯದಲ್ಲಿ ಮತ್ತು ರೀಡಿಂಗ್ ರೂಮುಗಳಲ್ಲಿ. ಆ ಸಮಯದಲ್ಲಿ ಇತರೇ ವಿದ್ಯಾರ್ಥಿಗಳೆಲ್ಲ ತಿಂಡಿ ತಿನ್ನಲು ಹೋಟೆಲ್‌ಗೆ ಹೋಗುತ್ತಿದ್ದರು. ಆದರೆ ರಾ.ಶಿ.ಯವರಿಗೆ ಹೋಟೆಲ್‌ನಲ್ಲಿ ತಿನ್ನಲು ಕೈಯ್ಯಲ್ಲಿ ಹಣವಿರುತ್ತಿರಲಿಲ್ಲ. ಮನೆಯಲ್ಲಿ ಬಡತನ. ಅವರು ಹೊಟ್ಟೆಗೆ ಬದಲು, ಪುಸ್ತಕಗಳನ್ನು ಓದಿ ಮಿದುಳಿಗೆ ಆಹಾರ ತುಂಬಿಸುತ್ತಿದ್ದರು. ತಪ್ಪದೇ ಓದುತ್ತಿದ್ದ ಪ್ರಮುಖ ಪತ್ರಿಕೆಯೆಂದರೆ ಇಂಗ್ಲೆಂಡ್‌ನಿಂದ ಬರುತ್ತಿದ್ದ ಹಾಸ್ಯ ಪ್ರಧಾನವಾದ ಬರಹಗಳ 'ಪಂಚ್' ಎಂಬ ಪತ್ರಿಕೆ. ಅದರಲ್ಲಿದ್ದ ವ್ಯಂಗ್ಯ ಚಿತ್ರಗಳು, ಲೇಖನಗಳು,

ಕುಹಕಿಡಿಗಳು, ರಾ.ಶಿ.ಯವರ ಮನಸ್ಸನ್ನು ಸೆರೆ ಹಿಡಿಯುತ್ತಿದ್ದವು. "ಸಮಕಾಲೀನ ಇಂಗ್ಲೆಂಡಿನ ಜೀವನ ವೈಪರೀತ್ಯವನ್ನು ಆ ಪತ್ರಿಕೆ ಎಷ್ಟು ಚುರುಕಾಗಿ ಎತ್ತಿ ತೋರಿಸುತ್ತಿತ್ತು ಎಂದರೆ ಆಮೇಲೆ ಆ ಪತ್ರಿಕೆಯನ್ನು ಓದುವುದೇ ಒಂದು ಒಲವಿನ ಅಭ್ಯಾಸವಾಗಿ ಬಿಟ್ಟಿತು" ಎನ್ನುವುದು ರಾ.ಶಿ.ಯವರ ಮಾತು. ಈ ಪುಸ್ತಕ–ಪ್ರೀತಿ ಅವರ ಎಲ್ಲ ಮಕ್ಕಳಿಗೂ ವಾತಾವರಣದ ಪ್ರಭಾವದಿಂದ ಸಾಗಿ ಬಂದಿರುವ ಬಳುವಳಿ.

ವರ್ಷದ ಕೊನೆಯಲ್ಲಿ ಐವತ್ತೆರಡು ಸಂಚಿಕೆಗಳನ್ನು ಹರಾಜಿಗೆ ಹಾಕುವುದು ಆ ಕಾಲೇಜಿನ ಪ್ರತಿವರ್ಷದ ರೂಢಿ. ಕೊಂಡು ಕೊಳ್ಳುವವರು ಕೊಡಬಯಸುವ ಮೊಬಲಗನ್ನು ಹರಾಜು ಪುಸ್ತಕದಲ್ಲಿ ಬರೆಯಬೇಕಾಗಿದ್ದುದು ಪ್ರತಿವರ್ಷ ಪಾಲಿಸುತ್ತಿದ್ದ ಕ್ರಮ. ಆ ವರ್ಷ ಮೂರು ಜನ ತಮ್ಮ ತಮ್ಮ ಹೆಸರು ಬರೆದಿದ್ದರು. ಹೆಚ್ಚಿನ ಹಣ ಬರೆದಿದ್ದು ಎರಡೂವರೆ ರೂಪಾಯಿ. ಯಾರೇ ಆದರೂ ಅದರಲ್ಲಿ ಬರೆಯಲು ಶುಕ್ರವಾರವೇ ಕೊನೆಯ ದಿನ. ರಾ.ಶಿ.ಯವರ ಬಳಿ ಹಣ ಇರಲಿಲ್ಲವಾದರೂ ಪತ್ರಿಕೆಯನ್ನು ಕೊಳ್ಳುವ ಆಸೆ ಮೂರು ರುಪಾಯಿ ಎಂದು ಬರೆಸಿಯೇ ಬಿಟ್ಟಿತು. ಬರೆಯುವುದು ಸುಲಭವಿತ್ತು. ಆದರೆ ಹಣ ಹೊಂದಿಸಲು ತಮ್ಮ ಅಮ್ಮನನ್ನು ಸೋಮವಾರದವರೆಗೆ ಪುಸಲಾಯಿಸಿದರು. ಪಾಪ ಅಮ್ಮನಾದರೂ ಏನು ಮಾಡಿಯಾರು? ಇದ್ದರೆ ತಾನೇ ಕೊಡುವ ಆಲೋಚನೆ? "ಮುಂದಿನ ವಾರ ಸಂಬಳ ಬರುತ್ತೆ. ಬಂದ ಮೇಲೆ ಏನಾದರೂ ಮಾಡಬಹುದು" ಎಂದರಂತೆ ಅಮ್ಮ. ಹಣ ಹೊಂದಿಸಲು ಅವರಿಗೆ ಆಗಲೇ ಇಲ್ಲ. ಹರಾಜು ಪುಸ್ತಕದಲ್ಲಿ, ಮೂರು ರುಪಾಯಿ ಎಂದು ಸವಾಲು ಹಾಕಿ ಬರೆದಾಗಿತ್ತು. ಹಣ ಕೇಳಿದರೆ ಏನು ಮಾಡುವುದು ಎನ್ನುವ ಚಿಂತೆ ಜೊತೆಗಿಟ್ಟುಕೊಂಡೇ ವಿರಾಮದ ವೇಳೆಯಲ್ಲಿ ರೀಡಿಂಗ್ ರೂಮಿಗೆ ಹೋಗಿ ಹರಾಜು ಪುಸ್ತಕವನ್ನು ವೀಕ್ಷಿಸಿದಾಗ ಅವರಿಗೆ ಆಶ್ಚರ್ಯ. ಹರಾಜಿನ ಹಣ ನಾಲ್ಕು ರುಪಾಯಿಗೆ ಹೆಚ್ಚಿಸಿ ಬರೆದಿದ್ದರು. ಬರೆದವರು ಇವರ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ.ಫೆಸರ್ ಮೆಲ್‌ಅಲ್ವೈನ್ ಅವರು. "ಒಂದು ಕ್ಷಣ ಅವರ ಮೇಲೆ ಅಸಾಧ್ಯ ಅಸೂಯೆ. ಸಾವಿರ ರುಪಾಯಿ ಸಂಬಳ ತಿಂತಾನೆ. ನನ್ನ ಜೊತೆಗೆ ಸವಾಲು ಹಾಕಲು ಬರ್ತಾನೆ. ಎಂತಹ ಮುತ್ತೈದೆ ಮಗ ಇವನು?" ಎಂದು ಮನಸ್ಸಿನಲ್ಲೇ ಬೈದುಕೊಂಡರಂತೆ. ಆದರೆ ಮೂರು ರುಪಾಯಿ ತರಬೇಕಾಗಲಿಲ್ಲವಲ್ಲ! ಸದ್ಯ ಎನ್ನುವ ಸಮಾಧಾನ ಇನ್ನೊಂದು ಕಡೆ.

ಯಾವುದೇ ಹಂಬಲ ತೀವ್ರವಾದಾಗ ಬಯಸಿದ ಫಲ ಪಕ್ಕಕ್ಕೆ ಬಂದು ನಿಲ್ಲುತ್ತದಂತೆ. ರಾ.ಶಿ.ಯವರಿಗೆ ಮರುದಿನ ಕೆಮಿಸ್ಟ್ರಿ ತರಗತಿಯಲ್ಲಿದ್ದಾಗ ಅದೇ ಪ್ರಾಂಶುಪಾಲರಿಂದ ಮೆಮೊ ಬಂದಿತ್ತು. ತರಗತಿಯ ಅಧ್ಯಾಪಕರು ಜೋರಾಗಿ ಓದಿದ ಆ ಮೆಮೋನಲ್ಲಿ, ಶಿವರಾಂ ಬಂದು ಪ್ರಾಂಶುಪಾಲರನ್ನು ಕಾಣಬೇಕೆಂದು ಹೇಳಲಾಗಿತ್ತು. ಶಿವರಾಂ ಅವರಿಗೆ ಭಯದ ನಡುಕ. 'ನನ್ನನ್ನು ಯಾಕೆ ಕರೀತಾರೆ? ಅಂಥ ತಪ್ಪು ನಾನೇನು ಮಾಡಿದೆ? ಫೀಸ್ ಕೊಟ್ಟಾಗಿತ್ತು. ಲೈಬ್ರರಿ ಪುಸ್ತಕವನ್ನು ನಾನು ಎರವಲು ಪಡೆದಾಗಲೇ ಚಿತ್ರ ಇದ್ದ ಹಾಳೆ ಇರಲೇ ಇಲ್ಲ. ಮತ್ತೆ ಯಾಕೆ ಕರೆಯುತ್ತಿದ್ದಾರೆ? ಏನು ಅಪಾಯ ಕಾದಿದೆಯೋ" ಎಂದು ಹೆದರುತ್ತಲೇ ಪ್ರಾಂಶುಪಾಲರ ಕೊಠಡಿಗೆ ಹೋದರು. "ಮೆಮೋ ಕಳಿಸಿದ್ದಿರಲ್ಲಾ? ಎಂದು ತೊದಲಿದರು.

ಪ್ರಾಂಶುಪಾಲರು, 'ಪಂಚ್ ಪತ್ರಿಕೆ ನಿನಗೆ ತುಂಬ ಇಷ್ಟವೇ"? ಎಂದಾಗ ಆ ಪತ್ರಿಕೆಯ ಹೆಸರೇ ಉತ್ಸಾಹ ತುಂಬಿಸಿತ್ತು. ಹೌದೆಂದು ಉತ್ಸಾಹದಿಂದ ಉತ್ತರ ಕೊಟ್ಟರೂ ಮರುಕ್ಷಣ ಅದನ್ನು ತೆಗೆದುಕೊಳ್ಳಲು ಕೊಡಬೇಕಾದ ಮೂರು ರೂಪಾಯಿಗಳ ನೆನಪಾಗಿ, ಅದನ್ನು ಎಲ್ಲಿಂದ ತರುವುದೆಂಬ ಚಿಂತೆಯೂ ಕಾಡಿತು. "ಹ್ಞೂ ಸರ್, ಆದರೆ ಈಗ ಹಣ ಇಲ್ಲ ಸರ್" ಎಂದು ಬೆವರುತ್ತ ತೊದಲು ಉತ್ತರ ಕೊಟ್ಟರು.

'ಪಂಚ್ ಪತ್ರಿಕೆಯನ್ನು ಆಸೆಯಿಂದ ಓದುವ ಹುಡುಗರನ್ನು ಕಂಡರೆ ನನಗೆ ತುಂಬ ಇಷ್ಟ" ಎಂದ ಪ್ರಾಂಶುಪಾಲರು, "ಅದಕ್ಕೇ ಆ ಸಂಚಿಕೆಗಳನ್ನೆಲ್ಲಾ ನಾನೇ ಹರಾಜಿನಲ್ಲಿ ಹೆಚ್ಚು ಸವಾಲ್ ಹಾಕಿ, ಕೊಂಡು, ಅತಿ ಹೆಚ್ಚು ಸವಾಲು ಹಾಕಿದ ವಿದ್ಯಾರ್ಥಿಗೆ ಕೊಡೋಣ ಅಂತ ನಾನೇ ಅವುಗಳನ್ನು ತೆಗೆದುಕೊಂಡೆ. ಆ ಸಂಚಿಕೆಗಳನ್ನೆಲ್ಲಾ ಎರಡು ಕಟ್ಟುಗಳಲ್ಲಿ ಕಟ್ಟಿಸಿ, ಇರಿಸಿದ್ದೀನಿ. ತೆಗೆದುಕೊಂಡು ಹೋಗಿ ಓದಿ ಸಂತೋಷ ಪಡು" ಎಂದು ಹೇಳಿ ಕೈಗಿತ್ತಾಗ ಶಿವರಾಂಗೆ ಸ್ವರ್ಗ ಮೂರೇ ಗೇಣು. ಅವರ ಮನಸ್ಸು, ಸಂತೋಷದ ಅಂಗಳದಲ್ಲಿ ಲಾಗ ಹಾಕಿ ಕುಣಿದಿತ್ತು ಆ ಕ್ಷಣ. ಪ್ರಾಂಶುಪಾಲರ ಈ ದೊಡ್ಡ ಕಾಣಿಕೆಯೇ ಅವರ ಜೀವನಕ್ಕೆ ತಿರುವು ಕೊಟ್ಟ ಅವಿಸ್ಮರಣೀಯ ಅದೃಷ್ಟದ ಘಳಿಗೆ. ನಗುವನ್ನು ಒಳ ತಳ್ಳಿ, ಜೀವನದ ದುಃಖವನ್ನು ಹೊರ ತೆಗೆದು ಎಸೆಯುವ ಇಂಜೆಕ್ಷನ್ ಎಂದರೆ 'ಹಾಸ್ಯ' ಎನ್ನುವುದನ್ನು ಕಲಿಸಿ ಕೊಟ್ಟಿದ್ದು ಈ 'ಪಂಚ್' ಪತ್ರಿಕೆ.

"ಅವರಿಗಂತೂ ಮೂರೂ ಹೊತ್ತು ಪುಸ್ತಕವಿದ್ದರೆ ಸಾಕು. ಪುಸ್ತಕದಿಂದಲೇ ಅವರ ಜೀವನವೆಂದರೆ ಅದೇನೂ ಅತಿಶಯೋಕ್ತಿಯಲ್ಲ" ಎಂದು ಅವರ ಪತ್ನಿ ನಾಗಮ್ಮನವರು ಹೇಳುತ್ತಿದ್ದ ಮಾತು, ಶತಶೇಕಡ ಸತ್ಯ ಎಂಬುದು ರಾ.ಶಿ.ಯವರನ್ನು ಬಲ್ಲವರೆಲ್ಲರಿಗೂ ಗೊತ್ತು.

ಶಿವರಾಂ ಅವರು ಸೆಂಟ್ರಲ್ ಕಾಲೇಜಿನಲ್ಲಿ ಬಿ. ಎ. ಓದುತ್ತಿದ್ದಾಗ ಬಿಡುವಿನ ವೇಳೆಯನ್ನು ಗ್ರಂಥಾಲಯದಲ್ಲಿ ಕಳೆಯುತ್ತಿದ್ದರಲ್ಲ? 1958ರಲ್ಲಿ ಅಂಥದೊಂದು ಗ್ರಂಥಾಲಯವನ್ನು ಮನೆಗೇ ತಂದರು. ಅವರ ಮೂರನೇ ಮಗಳಾದ ಲೀಲಾ ಮಿರ್ಲೆಗೆ, ಮಗ ಹುಟ್ಟಿದಾಗ ಮನೆಯಿಂದ ಹೊರತಾದ ಒಂದು ಗ್ರಂಥಾಲಯವನ್ನು, ಅದಕ್ಕೆ ಹೊಂದಿಕೊಂಡಂತೆ ಒಂದು ವಿಶ್ರಾಂತಿ ಕೋಣೆಯನ್ನೂ ಅವರು ಕಟ್ಟಿಸಿದ್ದು ಈ ಪುಸ್ತಕ ಪ್ರೀತಿಯ ಕಾರಣಕ್ಕೇ. ಅಲ್ಲೇ ಅವರ ವಾಸ, ಸತತ ಓದು, ಕೃತಿಗಳ ರಚನೆ, ಅವರ ಗೆಳೆಯರ ಅಥವಾ ಪರಿಚಿತರ ಭೇಟಿ. ಚರ್ಚೆಗಳು, ಸಂವಾದಗಳು, ಬೇಕೆಂದಾಗ (ಅವರ ನಾಗಾಲ್ಯಾಂಡ್‌ನಿಂದ) ಕಾಫಿ, ಚಹಾಗಳ ಸರಬರಾಜು ಎಲ್ಲ ಈ ಪ್ರತ್ಯೇಕ ಕಛೇರಿ ಕಂ ಗ್ರಂಥಾಲಯದಲ್ಲಯೇ. ಊಟ, ತಿಂಡಿಗೆ ಮಾತ್ರ ಮನೆಗೆ ಹೋಗಿ ಮುಗಿಸಿ ಬರುವ ಪರಿಪಾಠ. ಗ್ರಂಥಾಲಯವೆಂದರೆ ಚಿಕ್ಕದಲ್ಲ. ಯಾವ ಸ್ವಂತ ಮನೆಗಳಲ್ಲೂ ಕಾಣಬರದಷ್ಟು ದೊಡ್ಡದು. ಬರೀ ಪುಸ್ತಕಗಳೇ ಅಲ್ಲ ಈ ಗ್ರಂಥಾಲಯದಲ್ಲಿ ವಾರ, ಮಾಸಿಕ, ದಿನಪತ್ರಿಕೆಗಳೂ ರಾಶಿಯವರ ಓದಿನ ಹಸಿವು ತಣಿಸಲು ಬಂದು ಬೀಳುತ್ತಿದ್ದವು. ಅವರು ತರಿಸುತ್ತಿದ್ದಷ್ಟು ವೈದ್ಯಕೀಯ ಪತ್ರಿಕೆಗಳನ್ನು, ಯಾವ ಮೆಡಿಕಲ್ ಕಾಲೇಜಿನಲ್ಲೂ ತರಿಸುತ್ತಿರಲಿಲ್ಲ ಎಂದೂ ಹೇಳಲಾಗುತ್ತದೆ. ಈ ಗ್ರಂಥಾಲಯವೇ ಅವರ ಪ್ರೀತಿಯ ಪುಸ್ತಕ ಲೋಕ. ಹಗಲು ರಾತ್ರಿಗಳನ್ನು ಮರೆಸಿ ಬಿಡುತ್ತಿದ್ದಂತಹ ಮಾಯಕ ಜಗತ್ತು.

'ಯಾಕೋ ಮನೆ ಬಿಟ್ಟು ಹೊರಗಿದ್ದೀಯ ಶಿವು"? ಎಂದು ಅವರ ಚಿಕ್ಕಮ್ಮ ಕೇಳಿದರೆ, ಅವರು ನೀಡಿದ್ದು ಹಾಸ್ಯದ ಹಾರಿಕೆಯ ಉತ್ತರ, "ಮೊದಲ ಮೊಮ್ಮಗ ಹುಟ್ಟಿದ ಮೇಲೆ ಗೃಹಸ್ಥ, ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕಂತೆ. ಇದು ನನ್ನ ವಾನಪ್ರಸ್ಥಾಶ್ರಮ" ಎಂದಿದ್ದರಂತೆ ರಾ.ಶಿ. ರಾ.ಶಿ.ಯವರ ಓದು ಅಧ್ಯಯನ ವಿಸ್ತಾರವಾದುದು. ಭಗವದ್ಗೀತೆ, ಪುರಾಣ, ಉಪನಿಷತ್ತು, ಮನಶಾಸ್ತ್ರ, ತತ್ವಶಾಸ್ತ್ರ, ಭೌತ ಶಾಸ್ತ್ರ, ರಸಾಯನ ಶಾಸ್ತ್ರ, ವಿಜ್ಞಾನ, ವೈದ್ಯಕೀಯ, ಮುಂತಾಗಿ ಅನೇಕ ವಿಷಯಗಳ ವಿಪುಲ ಅಧ್ಯಯನವನ್ನು ಮಾಡಿದರು. ಅದಕ್ಕಾಗಿಯೇ

ಅವರಿಗೆ 'ಓಡಾಡುವ ವಿಶ್ವಕೋಶ' ಎಂದೂ ಹೇಳುವ ಪರಿಚಿತರಿದ್ದರು. ಅವರ ಕೃತಿಗಳ ರಚನೆಯಲ್ಲೂ ಅವರ ಈ 'ಕೋಶ'ಜ್ಞಾನ ಪ್ರತಿಬಿಂಬಿತವಾಗಿದೆ.

ಪ್ರತಿ ದಿನ ತಮ್ಮ ದವಾಖಾನೆಯಿಂದ ಮನೆಗೆ ರಾತ್ರಿ ಎಂಟೂವರೆಗೋ ಒಂಬತ್ತಕ್ಕೋ ಬಂದು ಊಟ ಮಾಡಿ ಬಿಟ್ಟರೆ ನಂತರ ಅರ್ಧರಾತ್ರಿಯವರೆಗಿನ ಸಮಯ ಪುಸ್ತಕಗಳ ಓದಿಗೆ ಮೀಸಲು. ಓದುವುದೆಂದರೆ ತನುಮನ ಮಿದುಳುಗಳನ್ನು ತಲ್ಲೀನಗೊಳಿಸಿ ಗ್ರಹಿಸುವಂತಹ ಓದು. ಯಾವ ವಿಷಯವನ್ನೇ ಆದರೂ, ಸ್ಪಷ್ಟವಾಗಿ ಅರಿತುಕೊಳ್ಳುವ ಆಳ ಅಧ್ಯಯನ. ಬೇರೆ ಭಾಷೆಗಳ ಧರ್ಮಗ್ರಂಥಗಳನ್ನು ಓದುವಾಗ ಅರಿತವರ ನೆರವು ಪಡೆದರೆ ಹೆಚ್ಚು ತಿಳಿಯಬಹುದೆಂಬ ಭಾವನೆ. ಅದಕ್ಕಾಗಿ ಬೈಬಲ್ ವ್ಯಾಸಂಗಕ್ಕೆ ಸೆಮಿನರಿ ಚರ್ಚಿನ ಫಾದರ್ ಬಳಿ ಕೆಲವು ದಿನಗಳ ಕಾಲ ಹೋಗಿದ್ದರು. ಮುಸ್ಲಿಮರೊಬ್ಬರ ಮನೆಗೆ ಕೆಲ ದಿನಗಳು 'ಕುರಾನ್' ಕಲಿಯಲು ಹೋಗಿದ್ದರು. ದ್ವಂದ್ವ, ಅನುಮಾನಗಳು ಲವಲೇಶವೂ ಇಲ್ಲದಂತೆ ತಿಳಿಯಬೇಕೆಂಬ ಉತ್ಕಟ ಇಚ್ಛೆಯೇ ಇದಕ್ಕೆ ಕಾರಣ.

ಒಮ್ಮೆ ಶ್ರೀರಂಗರು 'ಆನಂದವೇ ಬ್ರಹ್ಮ' ಎಂಬ ಮಾತನ್ನು ಹೇಳಿದ್ದು, ಆ ಬ್ರಹ್ಮಾನಂದವೆಂದರೆ ಏನು, ಅದು ಯಾವ ರೀತಿಯ ಆನಂದ ಎಂಬುದನ್ನು ತಿಳಿಯುವ ಕುತೂಹಲ ಮೂಡಿತು ರಾಶಿಯವರಿಗೆ. ಅದನ್ನು ತಿಳಿಯಲು ಯೋಗಶಾಸ್ತ್ರ ಗ್ರಂಥದ ಅಧ್ಯಯನ ಆರಂಭಿಸಿದರು. ಮೂಲಗ್ರಂಥವು ಸಂಸ್ಕೃತದಲ್ಲಿತ್ತು. ಸಂಸ್ಕೃತ ಭಾಷೆಯನ್ನು ಅರಿಯದವರೇನಲ್ಲ ರಾ.ಶಿ. ಆದರೂ ಅದನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವ ಸಲುವಾಗಿ ಶ್ರೀರಂಗರ ಮನೆಗೆ ತಿಂಗಳುಗಟ್ಟಲೆ ಓಡಾಡಿದ್ದರಂತೆ.

**ವೈದ್ಯರಾಗಿ ಸಲ್ಲಿಸಿದ ಸೇವೆ.:**

ವೈದ್ಯಕೀಯ ವೃತ್ತಿ, ಶಿವರಾಂ ಅವರು, ಜೀವನ ನಿರ್ವಹಣೆಗೆ ಆರಿಸಿಕೊಂಡ ಮಾರ್ಗ. ಸಮಾಜದ ಋಣ ತೀರಿಸಲು ಸುಧಾರಣೆಯ ಹರಿಗೋಲಾಗಿ ಆರಂಭಿಸಿದ್ದು 'ಕೊರವಂಜಿ' ಎಂಬ ತಿಳಿನಗೆಯ ಮಾಸ ಪತ್ರಿಕೆ. ಮನಸ್ಸಿನ ನೆಮ್ಮದಿಗೆ ಹಾಗೂ ಹೃದಯ ಹಗುರಾಗಿಸಲು ಬೆಳೆಸಿಕೊಂಡಿದ್ದು, ಸಾಹಿತ್ಯ ಸೃಷ್ಟಿಯ ಹವ್ಯಾಸ. ದೇಹಾರೋಗ್ಯಕ್ಕೆ ನಿತ್ಯ ಟೆನ್ನಿಸ್ ಆಟ.

ಶಿವರಾಂ ಅವರು ಸ್ವಂತ ದವಾಖಾನೆಯಾದ 'ಸಿಟಿ ಡಿಸ್ಪೆನ್ಸರಿ'ಯನ್ನು ಆರಂಭಿಸಿದ್ದು 1931ರಲ್ಲಿ. 1975ರಲ್ಲಿ ಅವರಿಗೆ ಅನಾರೋಗ್ಯ ಆವರಿಸಿಕೊಳ್ಳುವವರೆಗೆ ವೈದ್ಯರಾಗಿ ದುಡಿದರು. ಅವರಿಗೆ ಆರ್ಥಿಕ ನೆರವು

ನೀಡಿದ್ದೇ ಅಲ್ಲದೆ, ಆ ಡಿಸ್ಪೆನ್ಸರಿಯಲ್ಲಿ ತಮ್ಮ ಕಡೆಯ ಉಸಿರಿರುವವರೆಗೆ ಅವರೊಂದಿಗೆ ದುಡಿದವರೆಂದರೆ ಡಾ.ಎಸ್. ಸುಬ್ಬರಾವ್ ಎಂಬುವ ದವಾಖಾನೆಯಲ್ಲೇ ಅಲ್ಲದೆ ಮನೆಯಲ್ಲೂ ರೋಗಿಗಳನ್ನು ನೋಡುತ್ತಿದ್ದುದರಿಂದ, ಶಿವರಾಂ ಅವರು ಸ್ನಾನ ಮಾಡಿ, ಸಿದ್ಧಗೊಂಡು ಹೊರ ಬರುವ ಹೊತ್ತಿಗಾಗಲೇ ಮನೆಯ ವರಾಂಡದಲ್ಲಿ ಗಿಜಿಗಿಜಿ ಎಂಬಷ್ಟು ಕಾದು ಕೂತ ರೋಗಿಗಳು. ದವಾಖಾನೆಯಲ್ಲಿ ಹೆಜ್ಜೆ ಇಡುವ ಸಮಯಕ್ಕೆ, ಅಲ್ಲಿಯ ರೋಗಿಗಳು ಕಿಕ್ಕಿರಿದು ಕಾದಿರುತ್ತಿದ್ದರು. ವೈದ್ಯರಾಗಿ ದುಡಿದ ನಲವತ್ತೈದು ವರ್ಷಗಳ ದೀರ್ಘ ಅವಧಿಯಲ್ಲಿ, ಅವರಂತಹ ಅತ್ಯುತ್ತಮ ಅರಿವು ಉಳ್ಳವರು ಇನ್ನೊಬ್ಬರಿಲ್ಲ ಎಂಬಷ್ಟು ಎತ್ತರಕ್ಕೇರಿದ್ದ ವರ್ಚಸ್ವಿ ವೈದ್ಯ.

ವೈದ್ಯ ಶಾಸ್ತ್ರದಲ್ಲಿ ನಿಷ್ಣಾತರು. ವೈದ್ಯರಾಗಿ ಅವರು ತಮ್ಮ ರೋಗಿಗಳಿಗೆ ಅತ್ಯಂತ ಆಪ್ತರು. ಸದಾ ನಗುತ್ತ ನಗಿಸುತ್ತಲೇ ರೋಗಿಯನ್ನು ಅತಿ ಶ್ರದ್ಧೆಯಿಂದ ಪರೀಕ್ಷಿಸುವುದು ಅವರ ವಿಶಿಷ್ಠ ಸ್ವಭಾವ. ಅರ್ಧದಷ್ಟು ರೋಗವನ್ನು ವಾಸಿಗೊಳಿಸಲು ಅವರು ಕೊಡುತ್ತಿದ್ದ ಮಾತ್ರೆ ಈ ನಗು ಮಾತು. ಯಾವ ವಯಸ್ಸಿನವನೇ ಇರಲಿ, ಕೆಲವೇ ನಿಮಿಷಗಳಲ್ಲಿ ಅವನ ಅಂತರಂಗವನ್ನು ಅರಿತು ಬಿಡುತ್ತಿದ್ದ ಚಾಣಾಕ್ಷ. ರೋಗ ಪತ್ತೆ ಹಚ್ಚುವುದರಲ್ಲಿದ್ದ ಜಾಣತನ, ಕರಾರುವಾಕ್ಕಾದ ಚಿಕಿತ್ಸೆ, ಎಲ್ಲರೂ ತಮ್ಮವರೇ ಎಂಬಂತಹ ಆತ್ಮೀಯ ಗುಣ, ಜೊತೆಗೆ ನಗೆಯ ಮದ್ದು– ಈ ಎಲ್ಲ ಅಂಶಗಳನ್ನೂ ಒಂದಾಗಿಸಿಕೊಂಡ ಶಕ್ತ ಕೈಗಳಿಗೆ ಸಾಮಾನ್ಯರ ಭಾಷೆಯಲ್ಲಿ ಹೇಳುವ ಪದವೇ 'ಕೈ ಗುಣ'. ದೇವರು ತಲೆಯ ಮೇಲೆ ಕೈ ಇಟ್ಟು ಹರಸುವುದಕ್ಕೆ ಸಮನಾಗಿತ್ತಂತೆ ಇವರ ಈ ಕೈ ಗುಣ. "ವೈದ್ಯ ದಿಟವಾಗಿ ರೋಗಿಗಳ ಸ್ನೇಹಿತ, ಮಾರ್ಗದರ್ಶಿ, ತಾತ್ವಿಕ ಗುರು, ಈ ಧೈರ್ಯವೇ ವೈದ್ಯರಿಗೆ ಬಾಳಬೆಳಕಾಗಿರುವುದು...." ಎಂಬದು ಅವರೇ ತಮ್ಮ 'ಮನೋನಂದನ' ಕೃತಿಯಲ್ಲಿ ವೈದ್ಯರು ಇರಬೇಕಾದ ರೀತಿಯ ಕುರಿತು ಹೇಳಿರುವ ಮಾತು. "ಮೆಡಿಕಲ್ ಕಾಲೇಜಿನಲ್ಲಿ ಕಲಿಸಿ ಕೊಡುವುದು ವೈದ್ಯ ವಿಜ್ಞಾನ. ಅಲ್ಲಿ ಕಲಿಯುವ ವಿದ್ಯೆಗೂ ದಿನನಿತ್ಯದ ವೃತ್ತಿಗೂ ಅಜಗಜಾಂತರ ವ್ಯತ್ಯಾಸ. ವೃತ್ತಿ ಮಾಡುವ ವೈದ್ಯ ಕಲಿಯಬೇಕಾದುದು ವೈದ್ಯಕೀಯ ಕಲೆಯನ್ನು. ಈ ಕಲೆಗೆ ಅವರವರ ಆಲೋಚನಾ ಶಕ್ತಿ ಬಹಳ ಮುಖ್ಯ. ಅದರ ಜೊತೆಗೆ ರೋಗಿಗಳ ಬಗ್ಗೆ ನಿಜವಾದ ಮನಃಪೂರ್ವಕವಾದ ಕಾಳಜಿ. ಈ ಯೋಚನೆ ಮತ್ತು ಕಾಳಜಿಗಳು, ವೈದ್ಯನಾದವನ ಹೃದಯದಿಂದ ಬರಬೇಕು, ಮಿದುಳಿನಿಂದ

ಅಲ್ಲ", ಎಂಬುದು ಅವರ ಹೊರ–ಒಳಗುಗಳ ಅನಿಸಿಕೆ. ಅದು ಅವರು ಇದ್ದ ರೀತಿಯೂ ಹೌದು.

ಯಾರೇ ಆಗಲಿ ಯಾವ ಸಮಸ್ಯೆಯನ್ನು ತೆಗೆದುಕೊಂಡು ಅವರ ಬಳಿ ಹೋದರೂ ಅತ್ಯಂತ ಸಹಾನುಭೂತಿಯಿಂದ ಅದನ್ನು ಕೇಳಿಸಿಕೊಳ್ಳುತ್ತಿದ್ದ ಸದ್‌ವೈದ್ಯ. ನಂತರ ಆ ಸಮಸ್ಯೆಗೆ ಪರಿಹಾರ ಸೂಚಿಸುವಾಗಲೂ ಅದೇ ಸಹೃದಯತೆ. ಮಕ್ಕಳಿಗಂತೂ ಡಾಕ್ಟರ್ ಶಿವರಾಂ ಅವರಲ್ಲಿ ಆಯಸ್ಕಾಂತದಂತಹ ಆಕರ್ಷಣೆ. ಮೊದಲ ನೋಟಕ್ಕೆ ಅವರನ್ನು ಕಂಡು ಮಕ್ಕಳು ಹೆದರುತ್ತಿದ್ದುದೂ ಉಂಟು. ಆದರೆ ಕೆಲವೇ ಕ್ಷಣಗಳಲ್ಲಿ ಅವರ ಆತ್ಮೀಯರಾಗಿ ಬಿಡುತ್ತಿದ್ದರು. ಇದಕ್ಕೆ ಕಾರಣ ಒಂದು, ಮಕ್ಕಳ ಮನಸ್ಸನ್ನು ಸೂರೆಗೊಳಿಸುವಂತೆ ಶಿವರಾಂ ಅವರು ಹೇಳುತ್ತಿದ್ದ, ದೆವ್ವ, ಪಿಶಾಚಿ ಮತ್ತು ಕಳ್ಳರ ಕುತೂಹಲಕಾರಿ ಕತೆಗಳು. ಇನ್ನೊಂದು ನಗು ನಗುತ್ತ ಆಡುತ್ತಿದ್ದ ಪ್ರೀತಿಯ ಮಾತುಗಳು. ಮತ್ತೊಂದು ಸದಾ ಅವರ ಹತ್ತಿರವಿಟ್ಟುಕೊಂಡು ಮಕ್ಕಳಿಗೆ ಕೊಡುತ್ತಿದ್ದ ಸಿಹಿ ಪೆಪ್ಪರ್‌ಮಿಂಟ್‌ಗಳು.

ರಾ.ಶಿ.ಯವರು ರೋಗ ಪರಿಶೀಲನೆ ಮಾಡುವುದು ಮಾತ್ರವಲ್ಲ ಅವರೊಂದಿಗೆ ಮಾತಿನಲ್ಲಿ ತೋರುತ್ತಿದ್ದ ಪ್ರೀತಿ, ಕಾಳಜಿಯ ವರ್ತನೆಯಿಂದಾಗಿ ರೋಗಿಗಳ ಸಂಕೋಚದ ಪೊರೆ ಸರಿದು, ಹೃದಯದ ಕದವೇ ತೆರೆದುಕೊಳ್ಳುತ್ತಿತ್ತು ಅವರ ಮುಂದೆ. ಇದರಿಂದ ಯಾವುದೇ ದೈಹಿಕ ಸಮಸ್ಯೆಯನ್ನೂ ರೋಗಿಗಳ ಮಾನಸಿಕ ಸಮಸ್ಯೆಯನ್ನೂ ಪರಿಹರಿಸಲು ಸುಗಮ ದಾರಿ ಕಾಣುತ್ತಿತ್ತು. ಅವರ ಸ್ಟೆತಸ್ಕೋಪ್‌ನಿಂದ ಹೃದಯದ ಬಡಿತ ತಿಳಿಯುವುದರ ಜೊತೆಗೆ ತಮ್ಮ ನಗೆ ಮಾತುಗಳನ್ನು ಅದರ ಮೂಲಕ ಅವರ ಎದೆಯ ಬಾಂಡಲೆಯೊಳಗೆ ಚಟಪಟಿಸಿ ಅರಳಿಸುತ್ತಿದ್ದರು. "ಹಾಸ್ಯ ಮನೋಧರ್ಮವಿಲ್ಲದವರಿಗೆ ಈ ವೈದ್ಯ ವೃತ್ತಿ ತಲೆ ಚಿಟ್ಟು ಹಿಡಿಸುವಂಥದು" ಎಂಬುದು ಅವರ ಅನಿಸಿಕೆ*. ಒಂದು ಸಲ ಅವರ ಬಳಿಗೆ ತೀರ ಬಡತನವಿದ್ದ ರೋಗಿಗಳು ಬಂದಿದ್ದರು. ಹಸಿವು, ಬಡತನಗಳೇ ಅವರ ಅನಾರೋಗ್ಯಕ್ಕೆ ಕಾರಣ ಎನ್ನುವುದನ್ನು ತಮ್ಮ ಈ ಪ್ರೀತಿ, ಕಾಳಜಿಗಳ ಅಳತೆಗೋಲಿನಿಂದ ಅರಿತ ರಾಶಿಯವರು ತಮ್ಮ ಪರೀಕ್ಷೆ ಮುಗಿದ ಮೇಲೆ ಕೊಟ್ಟಿದ್ದು ಬರೀ ಔಷಧಿ ಮಾತ್ರೆಗಳನ್ನಲ್ಲ. ಅವರನ್ನು ವೆರಾಂಡದಲ್ಲಿ ಕೂಡಿಸಿ, ಒಳಗಿನಿಂದ ದೊನ್ನೆ ದೊನ್ನೆಗಳಲ್ಲಿ ತುಂಬಿಸಿ ತರಿಸಿದ ಅನ್ನ ಹುಳಿ ಮತ್ತು ಚಿತ್ರಾನ್ನಗಳನ್ನು. ಆ ಬಡ ರೋಗಿಗಳ ಅನಾರೋಗ್ಯ ಆ ಕ್ಷಣದಲ್ಲೇ ಅರ್ಧ ಪರಾರಿ.

ವಿದ್ಯಾರ್ಥಿ ದೆಸೆಯಲ್ಲೇ ರಾ.ಶಿ.ಯವರು ಈ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು ಸಣ್ಣವಲ್ಲ. ಹೌಸ್ ಸರ್ಜನ್ ಆಗಿದ್ದಾಗ, ಇವರಿಗೆ ಶಿಕ್ಷಕಿಯಾಗಿದ್ದ ಡಾ. ಆಲ್ಬುಕರ್ಕ್, ವಾಣಿ ವಿಲಾಸ್ ಆಸ್ಪತ್ರೆಯ ವೈದ್ಯಾಧಿಕಾರಿ. ಮಹಾ ಮೇಧಾವಿ ಮಹಿಳೆ. ವೃತ್ತಿಯಲ್ಲಿ ಶ್ರದ್ಧೆ, ರೋಗಿಗಳ ಆರೈಕೆಯ ಬಗ್ಗೆ ಆಸಕ್ತಿ ಇದ್ದವರು, ಮಹಿಳೆಯರ ಹಿತದೃಷ್ಟಿಯಿಂದ ದಕ್ಷಿಣ ಭಾರತದಲ್ಲೇ ಅತ್ಯುತ್ತಮವಾದ ಹೆರಿಗೆ ಆಸ್ಪತ್ರೆಯನ್ನು ಬೆಂಗಳೂರಿನಲ್ಲಿ ಆರಂಭಿಸಬೇಕೆಂಬ ಬಲವಾದ ಇಚ್ಛೆ ಇದ್ದವರು. ಆ ಸಮಯದಲ್ಲಿ ವಾಣಿ ವಿಲಾಸ್ ಆಸ್ಪತ್ರೆ ನಡೆಯುತ್ತಿದ್ದುದು ಒಂದು ಸಣ್ಣ ಕಟ್ಟಡದಲ್ಲಿ. ಚಿಕಿತ್ಸೆ ಪಡೆಯಲು ಬಯಸಿ ಬರುವವರ ಸಂಖ್ಯೆ ಹೆಚ್ಚು. ಆದರೆ ಎಲ್ಲರಿಗೂ ನೆರವು ನೀಡಲು ಸಾಧ್ಯಗೊಳಿಸದ ಸ್ಥಳಾಭಾವ. ಸದಾ ಚುರುಕಾಗಿ ಉತ್ತರಿಸುವ ಶಿವರಾಂ ಅವರನ್ನು ಕಂಡರೆ ಆಕಗೆ ಮಹಾಮೆಚ್ಚುಗೆ. ಈ ಹುಡುಗನ ಸಂಸಾರ ಸಮಸ್ಯೆಗಳನ್ನೂ, ಸ್ನೇಹಿತರ ಸಂಬಂಧಗಳನ್ನೂ ಸಾಕಷ್ಟು ಬಲ್ಲವರು ಆಕೆ. ನಾಟಕ–ವೀರ ಕೈಲಾಸಂ ಅವರು ಇವರ ಸ್ನೇಹಿತರೆಂದು ತಿಳಿದಿದ್ದ ಆಕೆ ತಮ್ಮದೊಂದು ಆಸೆಯನ್ನು ಇವರ ಮುಂದಿಟ್ಟರು. "ಶಿವರಾಂ, ನಿನಗೆ ಕೈಲಾಸಂ ಅವರು ಚೆನ್ನಾಗಿ ಗೊತ್ತಂತಲ್ಲಾ. ಅವರಿಗೆ ಒಪ್ಪಿಸಿ, ಒಂದು ಸಹಾಯಾರ್ಥಕ ನಾಟಕ ಆಡಿಸಿದರೆ ಸ್ವಲ್ಪ ಹಣ ಸಂಗ್ರಹಿಸಬಹುದು. ಅದನ್ನೇ ಮೂಲವಾಗಿ ಇಟ್ಟುಕೊಂಡು ವಿಕ್ಟೋರಿಯಾ ಆಸ್ಪತ್ರೆಯ ಪಕ್ಕದಲ್ಲಿರುವ ದೊಡ್ಡ ನಿವೇಶನವನ್ನು ದಿವಾನರಿಂದ ಪಡೆದು, ಸರ್ಕಾರದ ನೆರವಿನಿಂದ ದೊಡ್ಡದೊಂದು ಮಹಿಳೆಯರ ಆಸ್ಪತ್ರೆ ಪ್ರಾರಂಭಿಸಬಹುದು. ಒಳ್ಳೆಯ ಕೆಲಸ ಕೇಳಿ ನೋಡು" ಎಂದರು.

ವಿದ್ಯಾಗುರುವೇ ಕೇಳಿದ ಮೇಲೆ, ಅದೇ ವೃತ್ತಿಗೆ ಇಳಿಯಲಿರುವ ಶಿಷ್ಯ ಇಲ್ಲವೆಂದಾನೇ? ಶಿಷ್ಯನೇ ಅಲ್ಲ, ಶಿಷ್ಯನ ಸ್ನೇಹಿತನೂ ಇಲ್ಲವೆನ್ನದೆ ಒಪ್ಪಿಕೊಂಡು 'ಹೋಂ ರೂಲ್' ನಾಟಕವನ್ನು ಆಡಿಯೇ ಬಿಟ್ಟರು. ಈ ಸಹಾಯಾರ್ಥ ಪ್ರದರ್ಶನದಿಂದ ಡಾ. ಅಲ್ಬುಕರ್ಕ್ ಅವರು ಸಂಗ್ರಹಿಸಿದ್ದು, ಆ ಕಾಲದ ಬೆಲೆಯ 35,000/– ರೂಪಾಯಿಗಳನ್ನು. ಇಟ್ಟ ಹೆಜ್ಜೆ ಹಿಂದಿಡದೆ ಆಕೆ ಆಗಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರನ್ನು ಭೇಟಿ ಮಾಡಿದರು. ಸರ್ಕಾರದ ಸಹಾಯ ಧನವನ್ನೂ ಪಡೆದರು. ಕೆಲ ಸಮಯದ ನಂತರ ವಾಣಿ ವಿಲಾಸ್ ಆಸ್ಪತ್ರೆಯ ಕಟ್ಟಡಕ್ಕೆ ಅಗತ್ಯ ನಿವೇಶನವನ್ನು ಮಂಜೂರು ಮಾಡಿಸಿಕೊಂಡು, ಶಂಕುಸ್ಥಾಪನೆಯನ್ನೂ ನೆರವೇರಿಸಿಯೇ ಬಿಟ್ಟರು. ಇದಕ್ಕೆಲ್ಲ ಸೇತುವೆಯಾದವರು ಶಿವರಾಂ ಅವರು. ತಮ್ಮ ಈ ಮಹತ್ವಾಸೆಗೆ ಬೆಂಬಲವಾಗಿ

ನಿಂತು, ನಾಟಕ ಪ್ರದರ್ಶಿಸಿ ಸಹಕರಿಸಿದ ಹುಡುಗರನ್ನು ಡಾ. ಅಲ್ಬುಕರ್ಕ್ ಮರೆಯಲಿಲ್ಲ. ಕೈಲಾಸಂ ಅವರಿಗೆ ಧನ್ಯವಾದಗಳನ್ನು ತಿಳಿಸಿ ಪತ್ರ ಬರೆದರು. ತಮಗೆ ನೆರವು ನೀಡಿದ ವಿದ್ಯಾರ್ಥಿ–ಸ್ವಯಂ ಸೇವಕರನ್ನೆಲ್ಲ ಮನೆಗೆ ಆಹ್ವಾನಿಸಿ ಒಂದು ಸಂತೋಷಕೂಟವನ್ನು ಏರ್ಪಡಿಸಿ, ಗೌರವದಿಂದ ಕೃತಜ್ಞತೆಗಳನ್ನೂ ಸಲ್ಲಿಸಿದರು. ಶಿಷ್ಯವೃಂದದ ಹೃದಯಗಳಲ್ಲಿ ದೊಡ್ಡವರಾಗಿ ನಿಂತರು.

ವೈದ್ಯರಾದವರು ತಮ್ಮ ವೃತ್ತಿ ಕ್ಷೇತ್ರದಲ್ಲಿ ಪಳಗಿದ ಮೇಧಾವಿಯಾಗಿದ್ದರೂ, ಎಷ್ಟೋ ಸಲ ರೋಗಿಗಳು, ಮಾನಸಿಕ ಒತ್ತಡದಲ್ಲಿದ್ದಾಗ ಅವರ ದೇಹದಲ್ಲಿ ಆಗುವ ಏರು ಪೇರುಗಳಿಗೆ ಕೊಟ್ಟ ಚಿಕಿತ್ಸೆಗಳು ಪರಿಣಾಮಕಾರಿಯಾಗದೇ ಉಳಿಯುವ ಸಾಧ್ಯತೆಗಳೂ ಉಂಟು. ರೋಗಿಯ ಕೌಟುಂಬಿಕ ಸಮಸ್ಯೆಗಳು, ಎದುರಿಸುತ್ತಿರುವ ಕಷ್ಟ, ಆತಂಕಗಳನ್ನು ತಿಳಿಯುವುದರಿಂದ ಅವರ ದೈಹಿಕ ಖಾಯಿಲೆಗಳಿಗೆ ಚಿಕಿತ್ಸೆ ನೀಡುವುದು ಸುಲಭ ಎಂಬುದನ್ನು ಕಂಡುಕೊಂಡ ಶಿವರಾಂ ಅವರು, ತಮ್ಮ ಬಳಿಗೆ ಬರುವ ಪ್ರತಿ ರೋಗಿಯೊಂದಿಗೆ ತುಂಬ ಪ್ರೀತಿಯಿಂದ ವರ್ತಿಸಿ, ಅವರ ಖಾಯಿಲೆಯ ಮೂಲವನ್ನೂ ತಿಳಿದು ದೇಹದ ಸಮಸ್ಯೆಗಳನ್ನು ಬಗೆ ಹರಿಸಲು ಪ್ರಯತ್ನಿಸುತ್ತಿದ್ದರು. ಅದರಿಂದ ರೋಗಿ ಮತ್ತು ಈ ವೈದ್ಯರ ನಡುವೆ ಸ್ನೇಹ–ಪ್ರೀತಿಯ ಬಂಧವಿರುತ್ತಿತ್ತು. ರೋಗಿ ತುಂಬ ದಿನಗಳು ಬಾರದಿದ್ದರೆ, ಅವನ ವಿಷಯ ತಿಳಿಯದಿದ್ದರೆ ಶಿವರಾಂ ಅವರು ಆ ರೋಗಿಯ ಆರೋಗ್ಯದ ಬಗ್ಗೆ ತಿಳಿದುಕೊಳ್ಳಬೇಕೆಂದು ಚಿಂತಿಸುವಷ್ಟು ಕಾಳಜಿ ಅವರನ್ನು ಕಾಡುತ್ತಿದ್ದುದೂ ಉಂಟು. ಇದಕ್ಕೆ ಉದಾಹರಣೆಗಳು ಅವರು ಬರೆದ 'ಮನೋನಂದನ'ದಲ್ಲಿ ಸಿಗುತ್ತವೆ.

ರಾ.ಶಿ.ಯವರು ಓದುತ್ತಿದ್ದಾಗ ಬೆಂಗಳೂರಿನಲ್ಲಿದ್ದ ಮೆಡಿಕಲ್ ಕಾಲೇಜು, ಇವರ ಓದಿನ ನಂತರ ಮೈಸೂರಿಗೆ ಸ್ಥಳಾಂತರಗೊಂಡಿತು. ವಾಣಿವಿಲಾಸ ಆಸ್ಪತ್ರೆ, ಮಿಂಟೋ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆಗಳು ಸಾಕಷ್ಟು ಚೆನ್ನಾಗಿಯೇ ನಡೆಯುತ್ತಿದ್ದವು. ಆದರೆ ಅವುಗಳನ್ನು ವೈದ್ಯ ವಿಜ್ಞಾನದ ಕಲಿಕೆಗೆ ಬಳಸುತ್ತಿರಲಿಲ್ಲವಾದ್ದರಿಂದ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಇದೊಂದು ಅನನುಕೂಲ ಪರಿಸ್ಥಿತಿ ಇತ್ತು. ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಕುರಿತು ರಾ.ಶಿ.ಯವರ ತಲೆಯ ಬಿಲದಿಂದ ಒಂದೊಂದಾಗಿ ಆಲೋಚನೆಯ ಹುಳುಗಳು ಹೊರ ಬರತೊಡಗಿದವು. ಏನಾದರೂ ಮಾಡಲೇಬೇಕೆಂದು ಚಡಪಡಿಸುವ ಆಕಾಂಕ್ಷೆಯಾದವು. ಯಾರಿಗಾದರೂ ಯಾವುದಾದರೂ

ಮಹತ್ವಾಕಾಂಕ್ಷೆಯೊಂದು ಅಂತರಂಗದಲ್ಲಿ ಹುಟ್ಟುವುದೇ ಗೆಲುವಿನ ಸೂಚನೆ. ಬೆಂಗಳೂರಿನಲ್ಲಿ ಒಂದು ಮೆಡಿಕಲ್ ಕಾಲೇಜಿನ ಸ್ಥಾಪನೆಯಾಗಬೇಕು ಎಂಬ ಅವರ ಈ ಎರಡನೇ ಹೆಬ್ಬಯಕೆಯೇ ಅವರು ಗೆಲುವಿನ ಕಡೆ ಇಟ್ಟ ಇನ್ನೊಂದು ಹೆಜ್ಜೆ. ರಾ.ಶಿ.ಯವರು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಮೊದಲು ಸ್ಥಾಪಿಸಿದ್ದು, 'ಮೈಸೂರು ಎಜುಕೇಷನಲ್ ಸೊಸೈಟಿ' ಎಂಬ ಸಂಸ್ಥೆಯನ್ನು. ಇದು ಸ್ಥಾಪನೆಗೊಂಡಿದ್ದು 1954ರಲ್ಲಿ. ರಾ.ಶಿ.ಯವರೇ ಇದರ ಗೌರವ ಕಾರ್ಯದರ್ಶಿ. ಇವರ ಗುರುಗಳಾಗಿದ್ದ ಡಾ. ಬಿ. ಕೆ. ನಾರಾಯಣರಾಯರು ಈ ಸಂಸ್ಥೆಯ ಅಧ್ಯಕ್ಷರು. ಇದಕ್ಕೆ ಸರ್ಕಾರದ ಅನುಮತಿಯೂ ದೊರಕಿತು. ಬೆಂಗಳೂರಿನ ಹಿರಿಯ ವೈದ್ಯರುಗಳಾಗಿದ್ದ ಡಾ. ಬಿ.ವಿ. ರಾಮಸ್ವಾಮಿ, ಡಾ. ಸಿರ್ಸಿ, ಡಾ. ಟಿ. ಶೇಷಾಚಲಂ, ಡಾ. ಷೆಫಿ ಮೇಕ್ರಿ, ಡಾ.ಸಿಂಗಾರವೇಲು ಮುದಲಿಯಾರ್, ಪ್ರಸಿದ್ಧ ವಕೀಲ ಗಣೇಶರಾಯರು ಹಾಗೂ ಟಾಟಾ ವಿಜ್ಞಾನ ಕೇಂದ್ರದ ಡಾ. ಎಂ.ಎಸ್.ಥ್ಯಾಕರ್, – ಇವರುಗಳು ಸ್ಥಾಪಕ ಸದಸ್ಯರುಗಳಾಗಿ ಕಾರ್ಯ ನಿರ್ವಹಿಸಿದ ಆಸಕ್ತರು.

ಸ್ವಾತಂತ್ರ್ಯ ಸಂಗ್ರಾಮದ ಹಿರಿಯ ನಾಯಕರಾದ ಕೆ.ಸಿ. ರೆಡ್ಡಿಯವರು ಮತ್ತು ಆ ಸಮಯದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು, ಡಾ. ಶಿವರಾಂ ಅವರಿಂದ ಸಲಹೆ ಪಡೆಯುತ್ತಿದ್ದ ರೋಗಿಗಳು ಇಲ್ಲವೇ ಕೊರವಂಜಿಯ ಓದುಗರು. ಅದರಿಂದ ಇವರುಗಳ ಸಹಕಾರ ಪಡೆಯುವುದು ಸುಲಭವಿತ್ತು. ಸಹಾಯ ಸಹಜವಾಗಿಯೇ ಸಿಕ್ಕಿತ್ತು. ಸ್ಥಾಪನೆಯಾದ ಹನ್ನೆರಡು ತಿಂಗಳಲ್ಲಿ ಮೆಡಿಕಲ್ ಕಾಲೇಜು ರೂಪುಗೊಂಡು, ವಿದ್ಯಾರ್ಥಿಗಳ ಪ್ರವೇಶಕ್ಕೆ ಅಗತ್ಯ ಚಟುವಟಿಕೆಗಳು ಆರಂಭಗೊಂಡವು. 1955ರ ಜೂನ್ ತಿಂಗಳಿನಿಂದ ವಿದ್ಯಾರ್ಥಿಗಳ ಪ್ರವೇಶ, ಅರ್ಜಿಗಳಿಗೆ ಓಡಾಟ, ಅಧ್ಯಾಪಕರ ಪಾಠಗಳು, ತುಂಬಿದ ತರಗತಿಗಳು – ಇವುಗಳಿಂದ ಬೆಂಗಳೂರಿನ ಮೆಡಿಕಲ್ ಕಾಲೇಜಿಗೆ ಲವಲವಿಕೆಯ ಜೀವಕಳೆ ಬಂದಿತು. ಆಯ್ಕೆಗೆ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿದ್ದು ರಾ.ಶಿ.ಯವರ ಹೆಣ್ಣುಮಕ್ಕಳು. ಕಾರ್ಯಕಾರಿ ಸಮಿತಿಯ ಮೊದಲ ಸಭೆ ಸೇರಿದ್ದೂ ರಾ.ಶಿ.ಯವರ ಮನೆಯ ನಡುಮನೆಯಲ್ಲಿ. ಕಾಲೇಜಿನ ಕೆಲಸಗಳು, ಬರ ಹೋಗುವವರ ಸಂಖ್ಯೆಯ ಹೆಚ್ಚಳ, ಆಗ ಅವರ ಮನೆ ಎನ್ನುವುದು ಥೇಟ್ ಗದ್ದಲದ ಸಂತೆ. 1955ರಲ್ಲಿ ಆರಂಭಗೊಂಡ ಈ ಕಾಲೇಜು ರಾ.ಶಿ.ಯವರ ಬಯಕೆಯ ಬೇರುಗಳಿಂದ ಟಿಸಿಲೊಡೆದ ವೃಕ್ಷ. ಇದರಲ್ಲಿ ಈ ವರೆಗಿನ ದೀರ್ಘ ಅವಧಿಯಲ್ಲಿ, ಅರಳಿದ

ಫಲ–ಪುಷ್ಪಗಳೆಷ್ಟೋ, ಈ ಫಲ–ಪುಷ್ಪಗಳಿಂದ ಪ್ರಯೋಜನ ಪಡೆದ ಜನರೆಷ್ಟೋ. ಅದು ಅಗಣಿತವೇ.

ಕಾಲೇಜು ಸ್ಥಾಪನೆಯಾದ ಎರಡು ವರ್ಷಗಳಲ್ಲಿ ಸರ್ಕಾರ ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಬಯಸಿತು. ಆದಾಯ ಏರಬಹುದಾದ ಕಡೆ ಆಕರ್ಷಣೆ ಹೆಚ್ಚು. ಆದಾಯದ ಸಂಸ್ಥೆಯಾಗಬಹುದೆನ್ನುವ ಆಲೋಚನೆ ಬರುವ ಮುನ್ನವೇ ಅಂಥ ದುರಾಸೆ ಇಲ್ಲದ ಶಿವರಾಂ ಮತ್ತು ಸಮಿತಿಯ ಇತರ ಸದಸ್ಯರು, ಯಾವುದೇ ತಕರಾರಿಲ್ಲದೆ ಬಿಟ್ಟು ಕೊಡಲು ಒಪ್ಪಿದರು. ಆರಂಭಿಸಿದ ಸ್ಥಾಪಕ ಸದಸ್ಯರಿಗೆ ಇಂತಿಷ್ಟು ಸೀಟ್‌ಗಳನ್ನು ಮೀಸಲಿಡಬೇಕೆಂದಾಗಲೀ, ಸದಸ್ಯತ್ವವನ್ನು ಮುಂದುವರೆಸಬೇಕೆಂದಾಗಲೀ, ತಮ್ಮದೊಂದು ಅಧಿಕಾರವೋ ಪ್ರಭಾವವೋ ನಡೆಯಬೇಕೆಂದಾಗಲೀ, ಯಾವುದೇ ಒಂದು ಶರತ್ತೂ ಇಲ್ಲದ, ಬೇಷರತ್ ಒಪ್ಪಿಗೆ ಅದು. 'ಕಾಲೇಜ್ ದಾನ್' ಎಂಬ ಸಮಾರಂಭದಲ್ಲಿ ಈ ಕಾಲೇಜನ್ನು, ಎರಡೇ ವರ್ಷಗಳಲ್ಲಿ, ಅಂದರೆ 1957ರಲ್ಲಿ, ಮೈಸೂರು ಸರ್ಕಾರದ ಆಧೀನಕ್ಕೆ ಒಪ್ಪಿಸಲಾಯಿತು. ಕಾಲೇಜಿನೊಂದಿಗೆ ಇದರ ಸಕಲ ವಹಿವಾಟುಗಳೂ ಆ ಸರ್ಕಾರಕ್ಕೆ ವರ್ಗಾವಣೆಗೊಂಡವು. ಆಗ ಇದು ಮೈಸೂರು ವಿಶ್ವ ವಿದ್ಯಾಲಯಕ್ಕೆ ನಂತರ ಬೆಂಗಳೂರು ವಿಶ್ವ ವಿದ್ಯಾಲಯಕ್ಕೆ ಅಫಿಲಿಯೇಟ್ ಆಯಿತು. ಈಗ 'ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ' ಎಂಬ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಶಿವರಾಮ್ ಅವರು ದವಾಖಾನೆಯಲ್ಲಿರಲಿ, ಗೆಳೆಯರೊಂದಿಗೆ ಇರಲಿ, ಅಥವಾ ಮನೆಯಲ್ಲಿ ಮಡದಿ ಮಕ್ಕಳೊಂದಿಗೇ ಇರಲಿ, ಅವರಿದ್ದಲ್ಲಿ ಹಾಸ್ಯವೂ ಜೊತೆಗಿರುತ್ತಿತ್ತು. ಅವರ ಹಾಸ್ಯವೆಂದರೆ ಯಾರನ್ನೋ ಗೇಲಿ ಮಾಡಿ, ಹಂಗಿಸಿ, ಇನ್ನೊಬ್ಬರಿಗೆ ನೋವು ಕೊಡುವಂತಹದಾಗಿರಲಿಲ್ಲ. ಯಾವುದೇ ವಿಷಯದ ಬಗ್ಗೆ ಗಂಭೀರವಾಗಿ ಆಲೋಚಿಸಲೂ ಅವರಿಗೆ ಗೊತ್ತಿತ್ತು, ಗಂಭೀರ ವಾತಾವರಣವನ್ನು ತಿಳಿಗೊಳಿಸಿ ನಗಿಸಿ ವಿಡಂಬಿಸುವ ಕಲೆಯೂ ಗೊತ್ತಿತ್ತು. ಹಾಗೆಯೇ ಅವರ ಮಾತಿಗೆ ನಗುವವರೂ ಜೊತೆಗಿರುತ್ತಿದ್ದರು. ಆ ನಗುಮಾತಿನ ಹಿಂದಿನ ಸತ್ಯದಲ್ಲಿ ಇತರರ ಆಲೋಚನೆಗಳನ್ನು ಬಡಿಸೆಬ್ಬಿಸುವ ಅಂಶಗಳಿರುತ್ತಿದ್ದವು. ಈ ಮಾತಿಗೆ ಇಲ್ಲಿ ಕೆಲವು ಉದಾಹರಣೆಗಳಿವೆ.

ಒಮ್ಮೆ ಒಬ್ಬ ರೋಗಿಯನ್ನು ಪರೀಕ್ಷಿಸಿದ ಶಿವರಾಮ್ ಅವರು, ಅಗತ್ಯವಾದೊಂದು ಮಾತ್ರೆಗೆ ಪ್ರಿಸ್ಕ್ರಿಪ್ಷನ್ ಬರೆದು ಕೊಟ್ಟರು. ಅದನ್ನು ಇಸಕೊಂಡ

ವ್ಯಕ್ತಿಗೆ ಅದರಲ್ಲಿ ಏನು ಬರೆದಿದೆ ಎನ್ನುವುದು ತಿಳಿಯಲಿಲ್ಲ. "ಸರ್. ನನಗೆ ನೀವು ಬರೆದಿರೋದು ಅರ್ಥವಾಗ್ತಿಲ್ಲ. ಏನು ಬರೆದಿದ್ದೀರಿ ಇದರಲ್ಲಿ?" ಎಂದು ಅನುಮಾನ ಪರಿಹಾರಕ್ಕಾಗಿ ಕೇಳಿದ ಆತ.

ಶಿವರಾಂ ಅವರು ನಗುತ್ತ ಉತ್ತರಿಸಿದರು. "ಅದು ನಿಮಗೆ ಅರ್ಥವಾಗಬೇಕಾಗಿಲ್ಲ ಬಿಡಿ. ಈ ಚೀಟಿಯನ್ನು ನೀವು ವಿಧಾನ ಸೌಧಕ್ಕೆ ಹೋಗಿ ತೋರಿಸಿದರೆ (ರೆಕಮೆಂಡೇಷನ್ ಲೆಟರ್ ಎಂದು ತಿಳಿದು), ನಿಮಗೊಂದು ಕೆಲಸ ಕೊಡುತ್ತಾರೆ. ಅಂಗಡಿಗೆ ಹೋಗಿ ತೋರಿಸಿದರೆ ಏನಾದರೊಂದು ಸಾಮಾನು ಕೊಡುತ್ತಾರೆ. ಮೆಡಿಕಲ್ ಶಾಪ್‌ಗೆ ಹೋಗಿ ತೋರಿಸಿದರೆ ನಾನು ಬರೆದಿರುವ ಔಷಧಿ ಕೊಡುತ್ತಾರೆ" ಎಂದರಂತೆ. (ರಾ.ಶಿ. ಯವರ ಪ್ರಖ್ಯಾತಿ, ವೈಯಕ್ತಿಕ ಪ್ರಭಾವ ಎಷ್ಟಿತ್ತೆಂಬುದನ್ನೂ ಇದು ತಿಳಿಸುತ್ತದೆನ್ನಬಹುದು) ಈ ಉತ್ತರ ಕೇಳಿದ ಆ ರೋಗಿಗೂ ನಗು.

ಅವರ ಆತ್ಮೀಯ ಸ್ನೇಹಿತರೂ, ವೈದ್ಯರೂ ಆಗಿದ್ದ ಆದಿಕೇಶವಲು ಎಂಬುವವರು ತೀರಿಕೊಂಡರು. ಆಗ ಇವರ ಜೊತೆಗೆ ಡಿಸ್ಪೆನ್ಸರಿಯಲ್ಲಿ ಕೆಲಸ ಮಾಡುತ್ತಿದ್ದ, ಡಾ. ಕೃಷ್ಣಮೂರ್ತಿಯವರಿಗೆ, "ನಾನು ಅವನ ಶವ ನೋಡಲು ಹೋಗಲ್ಲ. ನೀನು ಹೋಗಿ, ನನ್ನ ಪರವಾಗಿ, ಅವನ ದೇಹದ ಮೇಲೆ ಒಂದು ಹೂ ಗುಚ್ಛವನ್ನು ಗೌರವಪೂರ್ವಕ ಇಟ್ಟು ಬಾ. ನಾನು ಸತ್ತಾಗ ಅವನೇನು ಬರಲ್ಲವಲ್ಲ? ಮತ್ತೆ ನಾನು ಯಾಕೆ ಹೋಗಬೇಕು" ಎಂದು ಹೇಳಿದುದು, ಗೆಳೆಯನ ನಿಧನದ ತಮ್ಮ ನೋವನ್ನು ಇಂಥ ಚೇಷ್ಟೆಯ ಮಾತಾಡುವುದರಲ್ಲಿ ಮರೆಸುವ ಪ್ರಯತ್ನ. ಶವದ ಮುಖ ನೋಡದೇ ಸದಾ ಆ ಗೆಳೆಯನ ಜೀವಂತ ಮುಖವನ್ನೇ ಮನದಲ್ಲಿ ಉಳಿಸಿಕೊಳ್ಳುವ ಭಾವನೆ.

ದೊಡ್ಡ ಅಧಿಕಾರಿಯೊಬ್ಬರ ಪತ್ನಿ, ಶಿವರಾಂ ಅವರ ದವಾಖಾನೆಗೆ ಬಂದು, 'ಡಾಕ್ಟ್ರೇ, ನನಗೆ ಇತ್ತೀಚೆಗೆ ಸ್ವಲ್ಪ ಕಿವಿ ಸರಿಯಾಗಿ ಕೇಳಿಸುತ್ತಿಲ್ಲ. ಏನಾಗಿದೆಯೋ ನೋಡಿ" ಎಂದು ಕಿವಿ ತೋರಿಸಲು ಬಂದರು.

ಶಿವರಾಂ ಅವರಿಗೆ ಅವಳ ಗುಣಾವಗುಣಗಳೆಲ್ಲ ಚೆನ್ನಾಗಿ ಗೊತ್ತಿತ್ತು. ಮಹಾ ಜಂಭದ ಮಹಿಳೆ, ಮನೆಯಲ್ಲಿ ಯಾರೊಡನೆಯೂ ಹೊಂದಿಕೊಳ್ಳುವವಳಲ್ಲ. ನಗುತ್ತಲೇ ಪರೀಕ್ಷಿಸುತ್ತ ಹೇಳಿದರು. "ಸೊಸೆ ಬರುವ ವಯಸ್ಸಾಯ್ತಮ್ಮ ನಿನಗೆ. ಕಿವಿ ಕೇಳದಿದ್ದರೇ ಕ್ಷೇಮ. ಸೊಸೆ ಹೇಳುವುದೆಲ್ಲ ಕೇಳಿದರೆ ಮನೆ ಕುರುಕ್ಷೇತ್ರವಾಗುತ್ತಲ್ಲ. ನೀನು ಕಿವುಡಾದರೆ ಸೊಸೆ ಬಚಾವ್.

ಅದಕ್ಕೇ ಈ ಬೇನೆ. ಒಳ್ಳೆಯದೇ ಅಲ್ಲವೇ? ಬರುವ ಸೊಸೆಯನ್ನು ಅರ್ಥ ಮಾಡಿಕೋ. ನಾನು ಕೊಡುವ ಈ ಮಾತ್ರೆ ತೊಗೊ" ಎಂದು.

"ಬರೀ ತಮಾಷೇನೇ ಡಾಕ್ಟ್ರೇ ನಿಮಗೆ. ಆದ್ರೂ ನೀವು ಹೇಳಿದ್ದರಲ್ಲೊ ನಿಜ ಇದೆ. ಹಾಗೇ ಇರಲು ಯತ್ನಿಸುತ್ತೇನೆ" ಎಂದಳಂತೆ ಅವಳು. ಅಂದರೆ ಈ ವೈದ್ಯರು, ರೋಗಿಯ ಕುಟುಂಬದ ಎಲ್ಲ ವಿಚಾರಗಳನ್ನೂ, ರೋಗದ ಹಿನ್ನೆಲೆಯನ್ನೂ ತಿಳಿದುಕೊಂಡು ಚಿಕಿತ್ಸೆ ಮಾಡುತ್ತಿದ್ದುದರಿಂದ, ರೋಗಿಯ ಸಮಸ್ಯೆ ಮಾತ್ರವಲ್ಲ, ಕುಟುಂಬದ ಸಮಸ್ಯೆಯೂ ಕೆಲ ಮಟ್ಟಿಗೆ ಪರಿಹಾರಗೊಳ್ಳುತ್ತಿತ್ತು.

ಇನ್ನೊಬ್ಬ ಪರಿಚಿತ ಮಹಿಳಾ ರೋಗಿ "ನಂಗೆ ತುಂಬ ತಲೆ ತಿರುಗುತ್ತಿದೆ ಡಾಕ್ಟ್ರೇ. ಏನಾಗಿದೆ ನೋಡಿ" ಎಂದಳು.

ಈ ವೈದ್ಯರು ಪರೀಕ್ಷಿಸುವ ಮುನ್ನವೇ, "ಏನಾಗಿದೆ ಅಂತ ಪರೀಕ್ಷೆ ಬೇರೆ ಮಾಡ್ಬೇಕಾ ನಿಂಗೆ? ಹಾಗೇ ಹೇಳ್ತೀನಿ ಕೇಳು, ನಿಂಗೆ ತುಂಬ ಜಂಭ ಬಂದಿದೆ ಕಣಮ್ಮ. ಮಗ ಆಫೀಸರ್ ಆದ. ಡಾಕ್ಟರ್ ಆಗಿರೋ ಅಳಿಯ ಸಿಕ್ಕಿದ. ತಲೆ ತಿರುಗದೆ ಇನ್ನೇನಾಗುತ್ತೆ ಹೇಳು. ಜಂಭ ಸ್ವಲ್ಪ ಕಡಿಮೆ ಮಾಡ್ಕೊಂಡ್ರೆ ಸಾಕು ತಲೆ ತಿರುಗೋದು ನಿಲ್ಲುತ್ತೆ" ಎಂದು ಅವಳ ಜಂಭದ ಗುಣಕ್ಕೂ ನಗುತ್ತ ನಗಿಸುತ್ತಲೇ, ಮಾತಿನ ಮದ್ದು ಕೊಟ್ಟು ಮನಸ್ಸನ್ನು ತಿದ್ದಿ, ವೈದ್ಯಕೀಯ ಚಿಕಿತ್ಸೆಯನ್ನು ಮಾಡಿ ಕಳಿಸಿದರು.

ಯಾರೋ ಒಬ್ಬರು 'ತುಂಬ ತಲೆ ನೋವು. ಏನು ಮಾಡಿದರೂ ಕಡಿಮೆ ಆಗ್ತಿಲ್ಲ" ಎನ್ನುತ್ತ ಬಂದರು.

ಸದಾ ಬರುವ ರೋಗಿ, ಅವರ ಸಮಸ್ಯೆ ಈ ವೈದ್ಯರಿಗೆ ಚೆನ್ನಾಗಿ ಗೊತ್ತು. "ಮೊದಲು ನಿನ್ನ ತಲೆಯಲ್ಲಿರುವ ಚೇಳನ್ನು ಹೊರಗೆ ಓಡಿಸು. ಆಮೇಲೆ ತೊಗೋ ಈ ಮಾತ್ರೆ ದಿನಕ್ಕೆ ಎರಡು ಸಲ ನುಂಗು. ತಲೆಯಲ್ಲಿರುವ ಚೇಳು ಹೊರ ಹೋದರಷ್ಟೇ ಈ ಮಾತ್ರೆಗೆ ಪ್ರಭಾವ." ಎಂದು ರೋಗದ ಮೂಲ ಅವನ ಮನಸ್ಸಿನದು ಎಂಬುದನ್ನು ತಿಳಿದುಕೊಂಡು ಆ ಬಗ್ಗೆ ತಿಳಿಸಿ, ಅವನಿಗೂ ನಗಿಸಿ ಸೂಚನೆ ಕೊಟ್ಟರು.

ರೋಗಿ ಯುವಕನೊಬ್ಬ ತನಗೆ ಹಾರ್ಟ್ ಟ್ರಬಲ್ ಎಂದು ತೋರಿಸಿಕೊಳ್ಳಲು ಬಂದ. ತಕ್ಷಣವೇ ಶಿವರಾಂ ಅವರು, "ಅಯ್ಯೋ ನಿನಗೆಲ್ಲಿ

ಬರುತ್ತೋ ಹಾರ್ಟ್ ಟ್ರಬಲ್? ನಿನಗೆ ಸ್ವೀಟ್‌ಹಾರ್ಟ್‌ದು ಟ್ರಬಲ್ ಇರಬೇಕು ಅಲ್ವಾ? ನಿಜನಾ"? ಎಂದು ನಕ್ಕಾಗ ಅವನೂ ನಕ್ಕ. ಈ ವೈದ್ಯರು ಇಂಥದೇ ಮಾತುಗಳನ್ನು ಮುಂದುವರೆಸಿದ ಮೇಲೆ, ನಗುತ್ತಲೇ ಹೃದಯ ಹಗುರಾಗಿಸಿಕೊಂಡು ಹೋದನಂತೆ ಆ ಹುಡುಗ.

ಆಪ್ತ ಮಿತ್ರರೊಬ್ಬರು ಒಮ್ಮೆ ಡಾ. ಶಿವರಾಂ ಅವರಿಗೆ ಒಂದು ಸಲಹೆ ಕೊಟ್ಟರು. "ಸುಭಾಷ್ ನಗರದ ಎದುರಿಗಿರೋ ಟ್ಯಾಂಕ್ ಬಂಡ್ ರೋಡ್‌ನಲ್ಲಿ ಒಂದು ಒಳ್ಳೆ ಸೈಟ್ ಇದೆ. ದೊಡ್ಡ ಸೈಟ್. ಬರೀ ಐದು ಸಾವಿರ ರೂಪಾಯಿಗೆ ನಾನು ನಿನಗೆ ಕೊಡುಸ್ತೀನಿ ಅದನ್ನ. ತೊಗೊಂಡು ದೊಡ್ಡದೊಂದು ಆಸ್ಪತ್ರೆ ಕಟ್ಟಿಸು. ನಿನಗೆ ಸೈಟ್ ಕೊಡಿಸೋ ಜವಾಬ್ದಾರಿ ನಂದು" ಎಂದು. ದುರಾಸೆ ಇಲ್ಲದ, ಇದ್ದುದರಲ್ಲೇ ತೃಪ್ತಿ ಪಡುವ ಈ ವೈದ್ಯ ಆ ಮಾತಿಗೂ ಕೊಟ್ಟಿದ್ದು ಹಾಸ್ಯದಲ್ಲೇ ಹಾರಿಸಿ ಹಾಕುವ ಜವಾಬು. "ಹೌದಪ್ಪ ಆಸ್ಪತ್ರೆ ದೊಡ್ಡದಿರತ್ತೆ. ದಿನವೂ ಹರಿಶ್ಚಂದ್ರ ಘಾಟ್‌ಗೆ ಹೋಗುವ ಹೆಣಗಳು ಆ ರಸ್ತೆಯಲ್ಲೇ ಹೋಗೋದು. ಅವನ್ನೆಲ್ಲಾ ನಾನು ಕಳಿಸಿದ್ದು ಅಂತ ಅವಕ್ಕೆಲ್ಲ ನನ್ನನ್ನೇ ಹೊಣೆ ಮಾಡಿ ಬಿಟ್ರೆ ಏನ್ ನನ್ನ ಗತಿ?" ಎಂದು. ಆದರೆ ಆ ನಂತರದ ದಿನಗಳಲ್ಲಿ ಆ ಸೈಟ್‌ನಲ್ಲಿ ಆರು ಅಂತಸ್ತಿನ ಹೋಟೆಲ್ ಒಂದು ತಲೆ ಎತ್ತಿತು. ಆಮೇಲೆ "ನೋಡು ನಮ್ಗೆ ವಿದ್ಯೆ ಇದೆ, ಆದ್ರೆ ಬುದ್ಧಿ ಇಲ್ಲ. ನಾನು ಆಗಲೇ ಆ ಸೈಟ್ ಖರೀದಿಸಿದ್ದಿದ್ರೆ ನೀವುಗಳೆಲ್ಲ ಬೆಳಗಿನಿಂದ ಸಂಜೆವರೆಗೆ ದುಡಿಯೋ ಅಗತ್ಯಾನೇ ಬರ್ತಾ ಇರ್ಲಿಲ್ಲ" ಎಂದು ತಮ್ಮ ಸಹೋದ್ಯೋಗಿಯೊಂದಿಗೆ ಹೇಳಿ, ಈ ಬಗ್ಗೆ ಪಶ್ಚಾತ್ತಾಪ ಪಟ್ಟಿದ್ದೂ ಉಂಟು.*

ತಮ್ಮ ವೈದ್ಯಕೀಯ ವೃತ್ತಿಯಲ್ಲಿ ರೋಗಿಗಳ ದೈಹಿಕ ಬಾಧೆಗಳಿಗೆ ಔಷಧಿ ಕೊಡುವಾಗ, ಅನೇಕ ಕಾಯಿಲೆಗಳ ಮೂಲ ಮಾನಸಿಕವಾದದ್ದು, ಶೇಕಡ 70% ಮನಸ್ಸಿನದೇ ಎಂಬುದನ್ನು ಮನದಟ್ಟು ಮಾಡಿಕೊಂಡಿದ್ದರು ಶಿವರಾಂ ಅವರು. ಈ ಬಗ್ಗೆ ಇನ್ನೂ ಹೆಚ್ಚಿನ ವಿಷಯ ತಿಳಿಯಲು ಅವರು ಮನಃಶಾಸ್ತ್ರ ಅಭ್ಯಸಿಸಿದರು. ಮನಸ್ಸಿನ ಮೂಲವನ್ನು ಹುಡುಕುತ್ತಾ ಹೊರಟ ಅವರಿಗೆ ಜರಾಮರಣ ಭೀತಿಯನ್ನು ತೊರೆಯುವ 'ಆನಂದದ ಅನ್ವೇಷಣೆ'ಯೂ ಮುಖ್ಯವೆನಿಸಿತು. ಈ ಹಿನ್ನೆಲೆಯಲ್ಲಿ ಅವರು ಮನಃಶಾಸ್ತ್ರ, ತತ್ವಶಾಸ್ತ್ರ (Philosophy), ಉಪನಿಷತ್ತು, ಮತ್ತು ಭಗವದ್ಗೀತೆಯ ವಿಪುಲ

*(ರಾಶಿ ರಾಶಿ ನೆನಪು' ನಲ್ಲಿ ಡಾ. ಕೃಷ್ಣಮೂರ್ತಿಯವರ ಲೇಖನದ ಮಾಹಿತಿಗಳು)

ಅಧ್ಯಯನವನ್ನು ಮಾಡಿದರು. ವಿವಿಧ ದೈಹಿಕ ಹಾಗೂ ಮಾನಸಿಕ ರೋಗಗಳ ನಿವಾರಣೆಗೆ ಮೂಲಗಳನ್ನು ಪರಿಹಾರ ಮಾರ್ಗಗಳನ್ನೂ ಹುಡುಕುತ್ತ, ಕಂಡುಕೊಂಡದ್ದನ್ನು ಇತರ ವೈದ್ಯರಿಗೆ ಮತ್ತು ರೋಗಿಗಳೊಂದಿಗೆ ಹಂಚಿಕೊಳ್ಳಲು ಈ ಸಂಬಂಧವಾದ ಕೃತಿಗಳನ್ನೂ ಅನೇಕ ಲೇಖನಗಳನ್ನೂ ರಚಿಸಿದರು. ಇದು ವೈದ್ಯಕೀಯ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆ.

**ಸಾಹಿತ್ಯ ಸೇವೆ:**

ರಾ.ಶಿ.ಯವರು ಸಾಹಿತ್ಯದ ಅಂಗಳಕ್ಕಿಳಿದಿದ್ದು ಕಳೆದ ಶತಮಾನದ ಮೂವ್ವತ್ತರ ದಶಕದಲ್ಲಿ. ಅವರ ಮಿತ್ರರಾದ ಅಶ್ವತ್ಥ ನಾರಾಯಣರಾಯರು ಹೊರ ತರುತ್ತಿದ್ದ 'ನವಜೀವನ' ಎಂಬ ದಿನಪತ್ರಿಕೆಯಲ್ಲಿ ಮೊದಲು 'ಸೋಮವಾರದ ಸುಸುದ್ದಿ' ಎಂಬ ಶೀರ್ಷಿಕೆಯಡಿ ಕೊರವಂಜಿ ಎಂಬ ಹೆಸರಿನಲ್ಲೇ ನಗೆ ಚಟಾಕಿಗಳನ್ನು ಹಾರಿಸಿ, ಕುಹಕಿಡಿಗಳನ್ನು ಬರೆಯುತ್ತಿದ್ದರು. ನಂತರ ಅದನ್ನೇ ಅವರು ಮುಂದುವರೆಸಿದ್ದು 'ಕೊರವಂಜಿ' ಎಂಬ ಪತ್ರಿಕೆಯಲ್ಲಿ. ಅವರ ಮೊದಲ ಸಣ್ಣ ಕತೆ, ಪ್ರಕಟವಾದದ್ದು, ಡಾ. ಶಿವರಾಮ ಕಾರಂತರು ಹೊರ ತರುತ್ತಿದ್ದ 'ವಸಂತ' ಎಂಬ ಮಾಸ ಪತ್ರಿಕೆಯಲ್ಲಿ.* ಅವರ ಬರವಣಿಗೆ ವಿವಿಧ ಪ್ರಕಾರಗಳಿಗೆ ವಿಸ್ತರಿಸಿದ್ದು, ಸಾಹಿತ್ಯಾಸಕ್ತಿ ಅಧಿಕಗೊಂಡಿದ್ದು, ಸತತ ಮುಂದುವರೆದಿದ್ದು ಕೊರವಂಜಿ ಪತ್ರಿಕೆಯ ಆರಂಭದ ಮೂಲಕವೇ.

**ಕೊರವಂಜಿ** :

ಬೆಟ್ಟದ ತಪ್ಪಲಲ್ಲಿ, ಗುಡ್ಡ ಕಾಡುಗಳಲ್ಲಿ ವಾಸಿಸುವ ಕೊರವರ ಹೆಣ್ಣುಮಕ್ಕಳಿಗೆ ಬಳಸುವ ಪದ ಕೊರವತಿ ಅಥವಾ 'ಕೊರವಂಜಿ'. ಅಗಾಗ ತಮ್ಮ ಕಾಡಿನಿಂದ ಹೊರ ಬಂದು, ಮನೆ ಮನೆಗಳಿಗೆ ಹೋಗಿ ಕಣಿ ಹೇಳಿ, ಭವಿಷ್ಯ ನುಡಿದು, ಕೊಟ್ಟಷ್ಟು ಹಣವನ್ನು ಪಡೆಯುವುದು ಇವಳ ವೃತ್ತಿ. ಆದರೆ ಬೆಂಗಳೂರಿನಂತಹ ಮಹಾನಗರದಲ್ಲಿ ವಾಸಿಸುತ್ತ, ವೈದ್ಯರಾಗಿಯೂ ಪ್ರಸಿದ್ಧರಾಗಿದ್ದ ಡಾ.ಎಂ. ಶಿವರಾಂ ಅವರ ಹೆಸರಿನೊಂದಿಗೆ ಸೇರಿ, ಈ ಕೊರವತಿ ಸ್ನೇಹ ಬೆಳೆಸಿದ್ದು ಹೇಗೆ? ಅವರ ಅಂತರಂಗದಲ್ಲಿ ಆಲೋಚನೆಗಳ ಅಲೆ ಎಬ್ಬಿಸಿ, ಅಲುಗಾಡದೇ ಉಳಿದು, ಗಟ್ಟಿಯಾಗಿ ಕುಳಿತು, ಬೆಳ್ಳಿ ಹಬ್ಬದ ಸಮಯದವರೆಗೆ 25 ವರ್ಷಗಳ ಕಾಲ ಬದುಕು ನಡೆಸಿ, ರಾ.ಶಿ.ಯವರ

*(ವಿಮಲಾ ಶೇಷಾದ್ರಿ ರಾಶಿ–ಪುಟ 49)

ಹೆಸರಿಗೂ ಮೊದಲು ತನ್ನ ಹೆಸರನ್ನು ವಿಜೃಂಭಿಸಿಕೊಂಡಿದ್ದು ಹೇಗಪ್ಪ ಎನ್ನುವ ಪ್ರಶ್ನೆ ಯಾರಿಗಾದರೂ ಏಳಬಹುದು. ವಾಸ್ತವದಲ್ಲಿ ಈ 'ಕೊರವಂಜಿ' ಹೆಣ್ಣಲ್ಲ, ಗಂಡಲ್ಲ, ಜೀವ ಇರುವ ಪ್ರಾಣಿಯೂ ಅಲ್ಲ. ಆದರೆ ಈ ಏನೂ ಅಲ್ಲದೆಯೂ ಈ ಎಲ್ಲವೂ ಆಗಿ, ರಾ.ಶಿ.ಯವರ ಮಗಳಂತಾಗಿ, ಮನೆ ಮನೆ ಮಂದಿಯ ಮನಸ್ಸುಗಳಲ್ಲಿ ಈಗಲೂ ಸುಮಧುರ ನೆನಪಾಗಿ ಕುಳಿತಿರುವವಳು, ದುಃಖದ ಭಾವದಲ್ಲಿದ್ದವರಿಗೆ ನಗುವಾದವಳು, ಜೀವನದ ಕಹಿ ಕಥೆಗಳನ್ನರುಹಿ ಅನುಕಂಪದ ಅಳು ತರಿಸಿದವಳು, ಮನಶ್ಶಾಂತಿ ಇಲ್ಲದವರಿಗೆ ನೆಮ್ಮದಿ ತಂದವಳು, ಜ್ಞಾನಾರ್ಥಿಗಳಿಗೆ ಜ್ಞಾನ ಹಂಚಿದವಳು, ಸಮಾಜದ ಸುಧಾರಣೆಗೆ ದಾರಿಯಾದವಳು. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು, ವಿಡಂಬನೆ, ವ್ಯಾಯಾಮ, ಆರೋಗ್ಯ ಸೂತ್ರ, ಲಘು ಪ್ರಹಸನ – ಈ ಎಲ್ಲವನ್ನೂ ತನ್ನ ಒಡಲೊಳಗೆ ತುಂಬಿಕೊಂಡು ಓದುಗರ ಮನಸ್ಸುಗಳಿಗೆ ಕಚಗುಳಿ ಇಡುತ್ತಿದ್ದ ನಲವತ್ತು ಪುಟಗಳ ಒಂದು ತಿಳಿನಗೆಯ ಸಚಿತ್ರ ಮಾಸ ಪತ್ರಿಕೆಯ ರೂಪ ಇದು. ಇದನ್ನು ಕಾಡಿನಿಂದ ಕರೆಸಿಕೊಂಡು ಮಗಳಂತೆ ಸಾಕಿ ಬೆಳೆಸಿದರು ರಾ.ಶಿ. ಇವಳ ಹುಟ್ಟಿನ ಹಿಂದಿರುವ ಕಥೆ ಇಲ್ಲಿದೆ.

ಇಂಗ್ಲಿಷ್ ಪತ್ರಿಕೆ 'ಪಂಚ್'ನ ಓದು ರಾ.ಶಿ.ಯವರ, ಸಂಪೂರ್ಣ ಮನ–ಮಿದುಳುಗಳನ್ನು ಆವರಿಸಿಕೊಂಡಿತ್ತು. ಅಮೇರಿಕನ್ ಅಂಕಣಕಾರರಾದ ವಾಲ್ಟರ್ ಮಿಂಚೆಲ್, ಮಾರ್ಕ್ ಹೆಲ್ಲಿಂಗರರ್, ಬಾಬ್ ಹೋಪ್, ಅಲೆಕ್ಸಾಂಡರ್ ವೊಲ್ಕಾಟ್, ಮುಂತಾದವರ ಬರಹಗಳನ್ನು ಓದಿ ನಕ್ಕು, ಗೆಳೆಯರೊಡನೆಯೂ ಹೇಳಿ ನಲಿದ ಮೇಲೆ, ಈ ಸುಖ–ಸಂತೋಷಗಳನ್ನು ಒದಗಿಸಿಕೊಟ್ಟ ದೈವಕ್ಕೆ ತಾನು ಋಣಿ ಎನಿಸಿತಂತೆ ಅವರಿಗೆ. ಅಲ್ಲಿ ಕಲಿತಿದ್ದನ್ನು ಇಲ್ಲಿ ನಮ್ಮವರಿಗೆ ಬಡಿಸುವುದರಿಂದ ಈ ಸಾಂಸ್ಕೃತಿಕ ಋಣವನ್ನು ತೀರಿಸಲು ಸಾಧ್ಯ ಎಂಬ ಭಾವನೆ; ಕೀರ್ತಿಶೇಷ ಕೈಲಾಸಂ ಅವರೊಡನೆ ಓಡಾಡುವಾಗ ಕನ್ನಡದಲ್ಲಿ ಇಂತಹ ತಿಳಿ ಹಾಸ್ಯವನ್ನು ಅರಿತು ನಲಿಯುವ ಮಂದಿ ಕಡಿಮೆಯೇ ಇದ್ದರೂ, ಅವರು ಚಪ್ಪರಿಸುವಂತೆ ಹಾಸ್ಯವನ್ನು ಮಿಂಚಿಸಬಹುದು ಎನ್ನುವ ಆಲೋಚನೆಗಳು; ಸಮಾನ ಧರ್ಮವಿದ್ದ ಒಬ್ಬ ಸಿಕ್ಕಿದರೆ ಸಾಕು ಎಂಬ ಅನಿಸಿಕೆ,— ಇವೆಲ್ಲ ಮನದ ಪಾತ್ರೆಯಲ್ಲಿ ಬಯಕೆಗಳಾಗಿ ತಿರುಗಣೆಯಾಡತೊಗಿದವು. ಇಂಗ್ಲಿಷ್ ಪತ್ರಿಕೆ 'ಪಂಚ್'ನ ತೆರದಲ್ಲಿಯೇ, ಕನ್ನಡದಲ್ಲೂ ಮಾಸ ಪತ್ರಿಕೆಯೊಂದನ್ನು ಆರಂಭಿಸಬೇಕೆಂಬ ಆಸೆಯ ಗಟ್ಟಿ ಬೆಣ್ಣೆ ಮೇಲೇಳುತ್ತಿದ್ದ ಹೊತ್ತಿನಲ್ಲೇ ಕಸ್ತೂರಿಯವರ ಪುಸ್ತಕವೊಂದು ಅವರ ಕೈಗೆ

ಸಿಕ್ಕಿತು. ಇವರು ಮನಸ್ಸಿನಲ್ಲಿ ಯಾವ ಹಾಸ್ಯದ ಕನಸು ಕಾಣುತ್ತಿದ್ದರೋ, ಅವನ್ನೆಲ್ಲ ಆತ ಯಶಸ್ವಿಯಾಗಿ ಬಲು ಅಚ್ಚುಕಟ್ಟಾಗಿ ಬರೆದಿಟ್ಟಿದ್ದರು. ಇಂತಹ ಸ್ಫೂರ್ತಿವಂತರು, ಹಾಸ್ಯ ಮನೋಧರ್ಮವನ್ನು ಹೊಂದಿದವರು, ತಮಗೆ ಬೆನ್‌ಬಲವಾಗಿ ದೊರೆತರೆ ಯಾವ ಹೊರೆಯನ್ನಾದರೂ ಹೊರಬಹುದೆಂಬ ಧೈರ್ಯ ಮೂಡಿತು.

ಇಂಥ ಬಯಕೆಯ ಮೊಳಕೆಯೇ ಒಂದು ಸಾಧನೆಯ ಕುರುಹು ತಾನೇ? ರಾ.ಶಿ.ಯವರು ಗೆಲುವಿನ ಜೀವನದ ಕಡೆ ಇಟ್ಟ ಮೊದಲ ಹೆಜ್ಜೆ ಇದು. ಆ ಸಮಯದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ರಾ.ಶಿ.ಯವರು ವೈದ್ಯರಾಗಿ ಕೆಲಸ ಮಾಡುತ್ತಿದ್ದರು. ನಾ. ಕಸ್ತೂರಿಯವರ ಮಗ ಶ್ರೀ ನಾರಾಯಣ ಮೂರ್ತಿ ಅಲ್ಲಿಯ ವಿದ್ಯಾರ್ಥಿ. ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ನಾ. ಕಸ್ತೂರಿಯವರು ಅಧ್ಯಾಪಕರು. ಈ ವೈದ್ಯರು ಅಲ್ಲಿಯ ಮಕ್ಕಳ ಆರೋಗ್ಯ ಪರಿಶೀಲನೆ ಮತ್ತು ಚಿಕಿತ್ಸೆ ಮಾಡುವಾಗ ನಗುತ್ತ, ನಗಿಸುತ್ತ ಚಿಕಿತ್ಸೆ ಕೊಡುವುದನ್ನು ನೋಡಿ, "ಸರ್ ನೀವೂ ನಮ್ಮ ತಂದೆಯವರ ಹಾಗೇ ಮಾತಾಡುತ್ತೀರಿ" ಎಂದರಂತೆ. "ಯಾರು ನಿಮ್ಮ ತಂದೆ"? ಎಂದು ವಿಚಾರಿಸಿದಾಗ ನಾ. ಕಸ್ತೂರಿ ಎಂಬುದು ತಿಳಿಯಿತು. ಇನ್ನೇನು ಕೈ ಮುಗಿವ ಮೊದಲೇ ದೇವರು ತಥಾಸ್ತು ಎಂದು ವರ ಕರುಣಿಸಿ ಕಸ್ತೂರಿಯವರ ಮನೆಗೆ ದಾರಿ ತೋರಿದ್ದ.

ಕಸ್ತೂರಿಯವರ ಪರಿಚಯವೇ ರಾ.ಶಿ.ಯವರ ಸಾಧನೆಗೆ ಸಿಕ್ಕ ಸಹಾಯದ ಸಾಧನ. ತಾವು ಕನ್ನಡದಲ್ಲಿ ಹಾಸ್ಯ ಪತ್ರಿಕೆಯೊಂದನ್ನು ಆರಂಭಿಸಬೇಕೆಂದಿರುವ ವಿಷಯವನ್ನು ರಾ.ಶಿ.ಯವರು ತಿಳಿಸಿದಾಗ, ಅದನ್ನೇ ಬಯಸುತ್ತಿದ್ದ ಕಸ್ತೂರಿಯವರು ಹೃತ್ಪೂರ್ವಕವಾಗಿ ಹರಸಿದರು. ಪ್ರಚೋದಿಸಿದರು. ಅಲ್ಲದೆ 1950ರ ವರೆಗೆ ಎಂಟು ವರ್ಷಗಳ ಕಾಲ ರಾಶಿಯವರಿಗೆ ಒತ್ತಾಸೆಯಾಗಿ ನಿಂತರು. ಸಲಹೆಗಾರರಾದರು. ಪ್ರಕಟಣಾ ಪ್ರಪಂಚದಲ್ಲಿ ಅತಿ ಜಾಣರಾದ ಬಿ.ಎನ್. ಗುಪ್ತರವರು ಪ್ರಕಟಣೆಯ ಹೊಣೆ ಹೊರಲು ಒಪ್ಪಿದರು. ಅಲ್ಲಿಂದ ಹತ್ತು–ಹದಿನೆಂಟು ದಿನಗಳಲ್ಲಿ ಉಗಾದಿ. ಆ ಹೊತ್ತಿಗೆ ಮೊದಲ ಸಂಚಿಕೆ ತರುವ ನಿರ್ಧಾರ ಮಾಡಿದರು ಈ ತ್ರಿಮೂರ್ತಿಗಳು. ದೈನಂದಿನ ಪತ್ರಿಕೆಗಳಲ್ಲಿ ಕೊರವಂಜಿ ಎಂಬ ಹೆಸರಿನಲ್ಲಿ ರಾ.ಶಿ.ಯವರು ಬರೆಯುತ್ತಿದ್ದುದರಿಂದ ತಮ್ಮ ಪತ್ರಿಕೆಗೆ ಅದೇ ಹೆಸರನ್ನೇ ಇಡಲಾಯಿತು.

'ಕೊರವಂಜಿ', ತನ್ನ ಹಾಸ್ಯ–ವಿಡಂಬನೆಗಳ ವಸ್ತ್ರ ಧರಿಸಿ, ಭವಿಷ್ಯ ಹೇಳುವ ಬೊಂಬೆ ಹಿಡಿದು, ಕನ್ನಡಿಗರ ಸೇವೆಗಾಗಿ ಕಂಕಣ ತೊಟ್ಟು ಹೊರ ಬಂದಿದ್ದು, 1942ರ ಮಾರ್ಚ್ ಒಂಬತ್ತರ ಯುಗಾದಿ ಹಬ್ಬದ ದಿನದಂದು. ಆ ಸಮಯದಲ್ಲಿ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಕನ್ನಡ ಪತ್ರಿಕೆಗಳು ನಡೆಯುತ್ತಿದ್ದರೂ, ಲಂಡನ್‌ನಿಂದ ಹೊರಡುತ್ತಿದ್ದ 'ಪಂಚ್'ಗೆ ಹೋಲುವ ತಿಳಿಹಾಸ್ಯದ ಪತ್ರಿಕೆಗಳು ಹೆಚ್ಚು ಬೆಳೆದಿಲ್ಲ ಎಂಬ ಅನಿಸಿಕೆಯೇ ಈ ಪತ್ರಿಕೆಯ ಆರಂಭದ ಮೂಲ ಎನ್ನುವುದು ರಾ.ಶಿ.ಯವರು ಕೊಟ್ಟಿರುವ ಕಾರಣ. ಯಾರನ್ನಾದರೂ ನೋಯಿಸುವುದಾಗಲೀ, ಅಣಕಿಸುವುದಾಗಲೀ ಇದರ ಉದ್ದೇಶವಾಗಿರಲಿಲ್ಲ. "ಸಮಾಜದ ಕುಂದು ಕೊರತೆಗಳು ಕೊರವಂಜಿಗೆ ವಸ್ತುವೇ ವಿನಹಾ ಸಮಾಜದ ವ್ಯಕ್ತಿಗಳಲ್ಲ. ರೂಢಿಯ ಅವಿವೇಕಗಳನ್ನು ಹಾಸ್ಯ ಮಾಡುವುದೇ ವಿನಹಾ ರೂಢಿಗಾರರನ್ನಲ್ಲ. ಸುಪ್ರಸಿದ್ಧ ಕವಿತೆಗಳ ಅಣಕುವಾಡುಗಳು, ಕವಿಗಳಿಗೆ ಕೊರವಂಜಿಯ ನಮ್ರ ಕಾಣಿಕೆಯೇ ವಿನಹಾ ಬೇರೆ ಅಲ್ಲ" ಎಂದು ಈ ಪತ್ರಿಕೆಯ ಉದ್ದೇಶವನ್ನು ಹಾಸ್ಯದ ಹಿಂದಿನ ಇಂಗಿತವನ್ನು, ತಮ್ಮ ಮೊಟ್ಟ ಮೊದಲ ಸಂಚಿಕೆಯಲ್ಲಿ ಸ್ಪಷ್ಟ ಪಡಿಸಿದ್ದರು ಸಂಪಾದಕರು. ಯಾವುದೇ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಈ ಪತ್ರಿಕೆಯಲ್ಲಿ ಅವಕಾಶವಿಲ್ಲ ಎಂಬುದೂ ಈ ಸಂಪಾದಕರು ಪ್ರಕಟಿಸಿದ ನಿಯಮಗಳಲ್ಲಿ ಒಂದು.(ಕೊರವಂಜಿ. ಸೆಪ್ಟಂಬರ್ 1954).

ಕಳೆದ ಶತಮಾನದ ಐದನೇ ದಶಕದಲ್ಲಿ ಕನ್ನಡ ಮಣ್ಣಿನಲ್ಲಿ ಮಂದಹಾಸ ಸೂಸುತ್ತಿದ್ದ ಎರಡು ಹಾಸ್ಯ ಪತ್ರಿಕೆಗಳೆಂದರೆ 'ವಿಕಟ ವಿನೋದಿನಿ' ಮತ್ತು 'ನಗುವ ನಂದ'. ಈ ಪತ್ರಿಕೆಗಳೂ ಆ ನಂತರದಲ್ಲಿ ನಿಂತು ಹೋದುದರಿಂದ 'ಕೊರವಂಜಿ'ಯೇ ಏಕಮೇವಾದ್ವಿತೀಯವಾಗಿ ಉಳಿದಿದ್ದು ನಿಜ. ಆಗ ಇದ್ದ ಹಾಸ್ಯ ಪತ್ರಿಕೆಗಳೂ ಕಡಿಮೆ. ಕೊಂಡು ಓದುತ್ತಿದ್ದವರ ಸಂಖ್ಯೆಯೂ ಕಡಿಮೆ. ಜೀವನದ ಅಗತ್ಯಗಳಿಗೇ ಹಣ ಹೊಂದಿಸಲಾಗದಂತಹ ಬಡತನದ ಕಾಲವದು. ಆದರೆ ಓದುಗರ ಸಂಖ್ಯೆ ಮಾತ್ರ ಕಡಿಮೆ ಇರಲಿಲ್ಲ. ಪ್ರತಿ ಮನೆಯಲ್ಲೂ ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಿರುತ್ತಿದ್ದುದಲ್ಲದೆ, ಕೊಳ್ಳಲಾಗದವರು ಕೊಳ್ಳುವವರಿಂದ ಎರವಲು ಪಡೆದು ಓದುತ್ತಿದ್ದುದರಿಂದ, ಅಕ್ಕಪಕ್ಕದವರಿಂದಲೋ ಗ್ರಂಥಾಲಯಗಳಿಂದಲೋ ಪುಸ್ತಕ, ಪತ್ರಿಕೆಗಳನ್ನು ಶೋಧಿಸಿ, ಹುಡುಕಿ ತಂದು ಓದುತ್ತಿದ್ದುದೂ ಉಂಟು. ಮನರಂಜನಗೆ ಬೇರೆ ಯಾವುದೇ ಮಾಧ್ಯಮಗಳು ಇಲ್ಲದಿದ್ದ ಸಮಯವದು. ಜ್ಞಾನಾರ್ಜನೆಗೆ,

ಮನರಂಜನೆಗೆ, ಸಮಯದ ಸದುಪಯೋಗಕ್ಕೆ, ಇದ್ದ ಒಂದೇ ಮಾರ್ಗ ಪತ್ರಿಕೆ–ಪುಸ್ತಕಗಳ ಓದು. ಪುಸ್ತಕಗಳೇ ಜನರಿಗೆ ಪ್ರಮುಖ ಆಕರ್ಷಣೆಯಾಗಿದ್ದ ಹೊತ್ತು. ಜೊತೆಗೆ ಯುರೋಪ್, ಜಪಾನ್‌ಗಳನ್ನು ಉಧ್ವಸ್ತ ಮಾಡಿದ ಯುದ್ಧ ಕಾಲ. ಎರಡನೇ ಮಹಾಯುದ್ಧದ ಪ್ರಭಾವ ಪರಿಣಾಮಗಳಿಂದ ಜನರ ಮನಸ್ಸು ಕಳವಳಗೊಂಡಿದ್ದ ಕಾಲ.. ಜನರ ಮನಸ್ಸು ಅರಳಿಸಲು ನಗೆ ಔಷಧಿಯ ಅಗ್ತತ್ಯವಿತ್ತು. ಹಾಸ್ಯದ ಬೀಜ ನೆಡಲು ನೆಲ ಹದವಾಗಿತ್ತು. ಬೆಳೆ ಬೆಳೆಯಲು ಫಲವತ್ತಾಗಿತ್ತು.

ಚಿನ್ನದ ಬಣ್ಣದ ಉಡುಪಿನೊಳಗೆ ಮುಚ್ಚಿ ಕುಳಿತು, ಜರಿದಾರದ ಕುಚ್ಚು ಬಿಚ್ಚಿಸಿಕೊಂಡು, ಚಪ್ಪಾಳೆಯ ಅಬ್ಬರದಲ್ಲಿ, ಅದ್ದೂರಿ ಕಾರ್ಯಕ್ರಮದಲ್ಲಿ, ವೇದಿಕೆಯಿಂದ ಇಳಿದು ಬರಲಿಲ್ಲ 'ಕೊರವಂಜಿ'. ಜನಸಾಗರದ ಮುಂದೆ ಲೋಕಾರ್ಪಣೆಗೊಳ್ಳಲಿಲ್ಲ. ಪ್ರಸಿದ್ಧರ ಅಥವಾ ಪ್ರಭಾವೀ ವ್ಯಕ್ತಿಗಳ ಹೊಗಳಿಕೆಯ ಹಾರ ಹಾಕಿಸಿಕೊಂಡು ಮಾತುಗಳಿಂದ ಮೆರೆದ ಮದುಮಗಳಾಗಲಿಲ್ಲ. ಸುಮ್ಮನೆ ಸದ್ದಿಲ್ಲದೇ ಸಂತೆಯ ಮಾರುಕಟ್ಟೆಗೆ ಬಂದಳು. ಅವಳ ಅಂತರಂಗವನ್ನು ವರಿಸಿದವರ ಮನಗಳಲ್ಲಿ ಸದಾ ಸರ್ವದಾ ಸಂತೋಷದ ಸದ್ದೆಬ್ಬಿಸಿದಳು. ಪ್ರೀತಿ ಹುಟ್ಟುವಂತೆ ನಡೆದುಕೊಂಡಳು. ಜನರಿಗೆ ಅವಳ ಬಗ್ಗೆ ಹುಟ್ಟಿದ ಈ ಪ್ರೀತಿ ಹೆಚ್ಚುತ್ತ ಹೆಚ್ಚುತ್ತ ಕಿರು ಅವಧಿಯಲ್ಲಿಯೇ ಕರ್ನಾಟಕಾದ್ಯಂತ ಸುಮಾರು **ಹತ್ತು ಸಾವಿರ*** ಮನೆ–ಮಠಗಳು ಚಂದಾದಾರರಾಗಿ, ಆಕೆ ತಮ್ಮ ಮನೆಗೆ ಬರುವ ವ್ಯವಸ್ಥೆ ಮಾಡಿಕೊಂಡರು. ಹತ್ತು ಸಾವಿರ ಪ್ರತಿಗಳ ಸರ್ಕುಲೇಷನ್ ಆಗುವುದೊಂದು ಸಾಧನೆಯ ಸಂಗತಿಯೇ. ಕೆಲವು ಶಾಲೆಗಳಲ್ಲಿ ನಡೆಸುತ್ತಿದ್ದ, ಕಂಠಪಾಠ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ನೆನಪಿನ ಪರೀಕ್ಷೆ, ಮುಂತಾದವುಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ 'ಕೊರವಂಜಿ'ಯ ಸಂಚಿಕೆಗಳನ್ನು ಬಹುಮಾನವಾಗಿ ಕೊಡುತ್ತಿದ್ದುದೂ ಇತ್ತು. 'ಕೊರವಂಜಿ' ಹೆಸರು ಕಿವಿಗೆ ಬಿದ್ದೊಡನೆ ಆಕೆಯನ್ನು ಬಲ್ಲವರ ತುಟಿಯ ಮೇಲೆ ಈಗಲೂ ನಗು ಅರಳುತ್ತದೆ. ಆ ಪತ್ರಿಕೆಯ ಎಲ್ಲ ನೆನಪುಗಳ ಸುದ್ದಿ ಸಂಗತಿಗಳೂ ನಗುವನ್ನು ಸುತ್ತಿಕೊಂಡೇ ಹೊರ ಬರುತ್ತವೆ.

ಪತ್ರಿಕೋದ್ಯಮಕ್ಕೆ ಕಾಲಿಡುವ ಯಾವುದೇ ಸಂಪಾದಕರು; ಭೂಗೋಳ, ಚರಿತ್ರೆ, ರಾಜಕೀಯ, ಸಾಹಿತ್ಯ, ಭಾಷೆ, ಜಾನಪದ, ಪುರಾಣ, ಮಹಾಕಾವ್ಯ, ಮುಂತಾಗಿ ಹಲವು ಕ್ಷೇತ್ರಗಳ ಜ್ಞಾನವನ್ನು ನುಂಗಿದ ದೈತ್ಯರಾಗಿರಬೇಕು.

(*ಚಿರಂಜೀವಿಯವರ 'ಕನ್ನಡಕ್ಕೆ ಕೊರವಂಜಿ ಕೊಟ್ಟ ರಾಶಿ ಲೇಖನದಲ್ಲಿ ರಾಶಿಯವರೇ ಹೇಳಿದ್ದು ಪುಟ 130)

ಎಲ್ಲ ಅರಿವುಗಳೂ ಇನ್ನೂ ಇನ್ನೂ ಬೇಕುಬೇಕೆಂದು ನಾಲಿಗೆ ಚಾಚಿ ನುಂಗುವ ಪಿಶಾಚಿಯೊಂದು ಅಂತರಂಗದೊಳ ಹೊಕ್ಕು ಆವಾಹಿಸಿರಬೇಕು. ಅಂಥದೇ ಅರಿವು ಮತ್ತು ಹಸಿವಿನ ಪಿಶಾಚಿಯೊಂದು ರಾ.ಶಿ.ಯವರ ಒಳ ಹೊಕ್ಕಿದ್ದರಿಂದ ಇಪ್ಪತ್ತೈದು ವರ್ಷಗಳ ಕಾಲ, ಕರ್ನಾಟಕದ ಅಂಗಡಿ ಬೀದಿಯೊಳಗೆ, ಜನ ಮನದೊಳಗೆ ತಮ್ಮ ಗೆಲುವಿನ ರಥ ಓಡಿಸಲು ಅವರಿಗೆ ಸಾಧ್ಯವಾಗಿದ್ದು.

ಆರಂಭದಲ್ಲಿ ಕಛೇರಿ, ಸಿಬ್ಬಂದಿ ಯಾವುದೂ ಇಲ್ಲದ ಕೊರವಂಜಿಯ ಸಾರೋಟಿಗೆ, ರಾ.ಶಿ.ಯವರೊಬ್ಬರೇ ಸಾರಥಿ. ಲೇಖನಗಳನ್ನು ಬರೆಯುವುದಲ್ಲದೆ, ಭಾನುವಾರಗಳಂದು ಲೇಖಕರನ್ನೂ, ವ್ಯಂಗ್ಯ ಚಿತ್ರಕಾರರನ್ನೂ ಮನೆಗೆ ಕರೆಸಿ, ಆದರಿಸಿ, ವಿಷಯಗಳನ್ನೂ ಸಲಹೆಗಳನ್ನೂ ಕೊಟ್ಟು ಬರೆಸುವುದರಿಂದ ಹಿಡಿದು ಪ್ರೂಫ್ ನೋಡುವವರೆಗಿನ ಎಲ್ಲ ಕೆಲಸಗಳನ್ನೂ ತಾವೇ ನೋಡಿಕೊಳ್ಳುತ್ತಿದ್ದರು. ಪುರುಸೊತ್ತಿಲ್ಲದ ಕೆಲಸ. ದಣಿವಿಲ್ಲದ ಮನಸ್ಸು, ಮಾಡಲೇಬೇಕೆಂಬ ಉತ್ಸಾಹ. ಕೊರವಂಜಿಯನ್ನು ಬೆಳ್ಳಿ ವರ್ಷದವರೆಗೆ ಜೀವಂತವಾಗಿಟ್ಟವು.

ಇವರ ಬೆಂಬಲಕ್ಕೆ ನಿಂತ ನಾ. ಕಸ್ತೂರಿಯವರು ತಾವೇ ಅಲ್ಲದೇ ತಾವು ಮೆಚ್ಚಿದ ತಮ್ಮ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯೂ, ವ್ಯಂಗ್ಯ ಚಿತ್ರಕಾರನೂ ಆಗಿದ್ದ, ಆರ್ ಕೆ. ಲಕ್ಷ್ಮಣ್ ಅವರನ್ನೂ ತಮ್ಮೊಂದಿಗೆ 'ಕೊರವಂಜಿ'ಯಲ್ಲಿ ತೊಡಗಿಸಿದರು. 'ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯಲ್ಲಿ ಸೇರಿಕೊಳ್ಳುವ ಮುನ್ನ, ಕೊರವಂಜಿಯ ಆರಂಭದ ನಾಲ್ಕು ವರ್ಷಗಳು, 1942ರಿಂದ 1946ರ ವರೆಗೆ, ಲಕ್ಷ್ಮಣ್‌ಅವರು ಕೊರವಂಜಿಗೆ ವ್ಯಂಗ್ಯ ಚಿತ್ರಗಳನ್ನು ಬರೆದರು. ಆರಂಭದಿಂದ ಅಂತ್ಯದವರೆಗೆ ಪ್ರತಿ ಸಂಚಿಕೆಯಲ್ಲಿ ಮುಖಪುಟದಲ್ಲಿ ಕಾಣ ಬರುವ ಚಿತ್ರ ಒಂದೇ. ಅದು ಬೊಂಬೆ ಹಿಡಿದ ಕೊರವಂಜಿಯದು. ಆ ಮುಖಪುಟ ಚಿತ್ರ ಬರೆದಿದ್ದು ಅವರೇ. ಕೊರವಂಜಿಯ ಬಗ್ಗೆ ಜನರಿಗೆ ಆರಂಭದಲ್ಲೇ ಆಕರ್ಷಣೆ ಹುಟ್ಟಲು, ಅರ್ ಕೆ. ಲಕ್ಷ್ಮಣ್ ಅವರ ಈ ನಗೆ–ವ್ಯಂಗ್ಯ ಚಿತ್ರಗಳೂ ಕಾರಣ. ಕೊರವಂಜಿಯ ಮೆಟ್ಟಿಲಿನಿಂದ, ಭವಿಷ್ಯದಲ್ಲಿ ಅವರು ಅಂತಾರಾಷ್ಟ್ರೀಯ ಮೆಟ್ಟಲವರೆಗೇರಿ ಖ್ಯಾತಿ ಪಡೆದದ್ದು ಎಲ್ಲರಿಗೂ ತಿಳಿದ ವಿಷಯ.

ಮೊದಲು ಮೊದಲು ನಾ. ಕಸ್ತೂರಿ ಮತ್ತು ರಾ.ಶಿ ಇವರಿಬ್ಬರೇ ಬೇರೆ ಬೇರೆ ಹೆಸರುಗಳಲ್ಲಿ, ಬೇರೆ ಬೇರೆ ಪ್ರಕಾರಗಳಲ್ಲಿ ತಯಾರಿಸುತ್ತಿದ್ದ ಬರಹಗಳ

ಆಹಾರವೇ 'ಕೊರವಂಜಿ'ಯ ಹೊಟ್ಟೆ ತುಂಬಿಸುತ್ತಿದ್ದವು. ರಾ.ಶಿ.ಯವರು ತಮ್ಮ ಗಂಡು ಮಕ್ಕಳಾದ ಶಿವಕುಮಾರ್, ಓಂ ಪ್ರಕಾಶ್ ಮತ್ತು ರಾಮಸ್ವಾಮಿ ಇವರುಗಳ ಉತ್ತರಾರ್ಧದ; ಕುಮಾರ್, ಪ್ರಕಾಶ್, ಸ್ವಾಮಿ ಅಥವಾ ಬಚ್ಚಾ ಎಂಬ ಹೆಸರುಗಳಲ್ಲಿ ಹಾಗೂ ನಾ. ಕಸ್ತೂರಿಯವರು ಪಾಟಾಳಿ, ರುದ್ರಮ್ಮ, ಖಾರಾಂತ, ರೇವಣ್ಣ, ಎಂಬ ಹೆಸರುಗಳಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ನಿಶಾಚರ, ಮೂರ್ಖ, ಪಾಪಿ, ಪಾಪ, ಬಿದಿರು, ಡೂನು, ಎಂಬುದೂ ರಾ.ಶಿ.ಯವರ ಕಾವ್ಯನಾಮಗಳಲ್ಲಿ ಕೆಲವು. ಈ ಹೆಸರುಗಳೇ ನಗೆ ಜೇನನ್ನು ತುಟಿಯ ಮೇಲೆ ಸವರುವಂತಹವು.

ತಮ್ಮ ಹೆಸರು ಎಲ್ಲರಿಗಿಂತ ಮುಂದಿರಬೇಕು, ಎಲ್ಲಕ್ಕಿಂತ ಎತ್ತರದಲ್ಲಿರಬೇಕು ಎಂಬುದಕ್ಕಾಗಿ ಹಲವು ರೀತಿಯ ಪ್ರಭಾವಗಳನ್ನು ಬಳಸುವ, ಅನೇಕ ಕಸರತ್ತುಗಳನ್ನು ಮಾಡುವ ಇಂದಿನ ಕಾಲದವರಿಗಿಂತ, ಆ ಕಾಲದವರು ಎಷ್ಟು ಭಿನ್ನ ಎಂಬುದನ್ನು, ಈ ರೀತಿ ಅವರು ತೆರೆಯ ಮರೆಯಲ್ಲಿಯೇ ಹೆಸರಿಲ್ಲದೆ ಇದ್ದು ಮಾಡುತ್ತಿದ್ದ ಕೆಲಸಗಳಿಂದ ಗಮನಿಸಬಹುದು. ಇಂಗ್ಲಿಷಿನ ಹಾಸ್ಯಪತ್ರಿಕೆ 'ಪಂಚ್' ಸಾಪ್ತಾಹಿಕದಲ್ಲಿ ಸಮಕಾಲೀನ ಜೀವನದ ವಿಶ್ಲೇಷಣೆಯನ್ನು ಕಟಕಿ, ವ್ಯಂಗ್ಯ ಮತ್ತು ಚತುರೋಕ್ತಿಗಳಿಂದ ಮಾಡುವ ರೀತಿ ಅವರಿಗೆ ತುಂಬ ಮೆಚ್ಚುಗೆಯಾಗಿದ್ದರಿಂದ ಅದನ್ನು ತಮ್ಮ ಲೇಖನಗಳಲ್ಲಿ ಮತ್ತು ಸಂಭಾಷಣೆಗಳಲ್ಲಿಯೂ ಅಳವಡಿಸಿಕೊಂಡರು ರಾ.ಶಿ.

ಆದರೆ ಕೊರವಂಜಿಯ ಬಲಗೈನಂತಿದ್ದ, ನಾ. ಕಸ್ತೂರಿಯವರ ಜೀವನದಲ್ಲಿ ನಡೆದ ಕೆಲವು ದುಃಖದ ಸಂಗತಿಗಳು, ಅವರಿಗೆ ಜೀವನದಲ್ಲಿದ್ದ ಆಸಕ್ತಿಗಳನ್ನೆಲ್ಲ ಹೀರಿ ಬರಿದು ಮಾಡಿದ್ದರಿಂದ, ಅವರು ಸು. 1950ರಲ್ಲಿ, ಲೌಕಿಕ ವಿಷಯಗಳಿಂದ ದೂರವಾಗಿ, ಘುಟಪರ್ತಿಗೆ ಹೋಗಿ ನೆಲೆಸಿದರಂತೆ. ಮುಂದಿನ ದಿನಗಳಲ್ಲಿ ರಾ.ಶಿ.ಯವರೇ ಕೊರವಂಜಿಗೆ ಏಕೈಕ ಸಾರಥಿ, ಕನ್ನಡಿಗರೇ ಅವರನ್ನು ಬೆಂಬಲಿಸುತ್ತಿದ್ದ ಬೃಹತ್ ಸೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಬೆಂಗಳೂರಿನ ಮೇಯರ್, ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು; ಹೀಗೆ ನಾನಾ ಸಂಸ್ಥೆಗಳಲ್ಲಿ ದುಡಿದ ಶ್ರೀ ಜಿ. ನಾರಾಯಣರವರು 1951ರಲ್ಲಿ ಪ್ರಥಮ ಗಣರಾಜ್ಯೋತ್ಸವದಂದು 'ವಿನೋದ' ಎಂಬ ಹಾಸ್ಯಪತ್ರಿಕೆಯನ್ನು ಆರಂಭಿಸಿದರು. ಕೊರವಂಜಿ ರಾಶಿಯವರಿಗೆ ಮಗಳಾದಂತೆ,

ವಿನೋದ ಅವರಿಗೆ ಮಗನಾದ. ತುಮಕೂರಿನಿಂದ 'ನಗೆಮುಗುಳು' ಎನ್ನುವ ಹಾಸ್ಯ ಪತ್ರಿಕೆ ಚಲಾವಣೆಗೆ ಹೊರ ಬಂದಿದ್ದು ಆ ನಂತರದ ವರ್ಷಗಳಲ್ಲಿ. ಈಗ ಕರ್ನಾಟಕದಾದ್ಯಂತ ನಡೆಯುತ್ತಿರುವ ಹಾಸ್ಯ ಪತ್ರಿಕೆಗಳು ಮೂರು ಮಾತ್ರ ಎನ್ನಲಾಗಿದೆ. ಇಲ್ಲಿ ತಿಳಿಸಿರುವ ಈ ಎರಡು ಪತ್ರಿಕೆಗಳು ಮತ್ತು ರಾ.ಶಿ.ಯವರಿದ್ದಾಗಲೇ ಅವರ ಮಗ ಎಂ. ಶಿವಕುಮಾರ್ ಅವರ ಸಂಪಾದಕತ್ವದಲ್ಲಿ 1983ರಲ್ಲಿ ಆರಂಭಗೊಂಡ 'ಅಪರಂಜಿ'. ಇವೆಲ್ಲ ಬೇರೆ ಊರುಗಳಲ್ಲೂ ಸರಬರಾಜು ಆಗುತ್ತಿರಬಹುದಾದರೂ, ಇವುಗಳ ಹೆಸರು ಅಥವಾ ಪ್ರಭಾವಗಳು ಮಾತ್ರ ಕೊರವಂಜಿಯ ಮಟ್ಟಕ್ಕೆ ಏರಿಲ್ಲ.

ವೈದ್ಯಕೀಯ ವೃತ್ತಿಯ ತಮ್ಮ ಬಿಡುವಿಲ್ಲದ ಕೆಲಸಗಳ ಜೊತೆಗೆ ಕೊರವಂಜಿಯನ್ನು ಬೆಳೆಸಲು ರಾ.ಶಿ.ಯವರು ಪಟ್ಟ ಶ್ರಮ ಬಹಳ. ಜೇಬು ಚಿಕ್ಕದಿದ್ದರೂ ಅವರ ಪ್ರತಿಭೆ ದೊಡ್ಡದಿತ್ತು. ಆಸಕ್ತಿ, ಅಧ್ಯಯನ ದೈತ್ಯ ಶಕ್ತಿಯದಾಗಿತ್ತು. "ಪ್ರತಿ ತಿಂಗಳ ಮೂರನೆಯ ವಾರ ರಾತ್ರಿ 9ರಿಂದ 11ರ ವರೆಗೆ ಕೊರವಂಜಿಗೆ ಲೇಖನಗಳನ್ನು ಬರೆಯಲು ಕುಳಿತುಕೊಳ್ಳುತ್ತಿದ್ದೆ. ಹತ್ತು ಹದಿನೈದು ನಿಮಿಷಗಳು 'ಪಂಚ್' ಪತ್ರಿಕೆ ಓದುವ ಹೊತ್ತಿಗೆ ಹೊಸ ವಿಚಾರಗಳು ಸ್ಫುರಿಸುತ್ತಿದ್ದವು." ಎಂದು ಸಂದರ್ಶನವೊಂದರಲ್ಲಿ ಅವರು ಹೇಳಿದ ಮಾತು.

ವಾರ್ತೆ ಮತ್ತು ಘಟನೆಗಳನ್ನು ತಿಳಿಹಾಸ್ಯದ ಹಿನ್ನೆಲೆಯಲ್ಲಿ ಕಣಿ ಹೇಳುವಂತೆ ವರದಿ ಮಾಡುವುದೇ ಈ ಪತ್ರಿಕೆಯ ಉದ್ದೇಶವಾಗಿತ್ತು. ಕಣಿ ಹೇಳಲು ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳನ್ನು ಬಳಸಿಕೊಂಡದ್ದೇ ಅಲ್ಲದೆ, ಪ್ರಪಂಚದ ಇತರ ಭಾಷಾ ಸಾಹಿತ್ಯದಲ್ಲಿ ನೂತನವಾಗಿ ಬಂದ ಪ್ರಕಾರಗಳನ್ನು ಕನ್ನಡಕ್ಕೆ ಅಳವಡಿಸಿಕೊಂಡಿತು. ಅಣಕವಾಡು, ಲಘುಪದ್ಯ, ಹಾಸ್ಯದ ಹರಟೆ, ಪಂಚಪಂಕ್ತಿ (ಲಿಮರಿಕ್ಸ್), ಕಿರು ಪ್ರಹಸನ, ಮುಂತಾದ ಹೊಸ ಪ್ರಕಾರಗಳನ್ನು ಇದು ಒದಗಿಸಿಕೊಟ್ಟಿತು. ಅಶ್ಲೀಲವಲ್ಲದ, ಎರಡರ್ಥಗಳಿಲ್ಲದ, ಶುದ್ಧವಾದ, ಮೇಲ್ಮಟ್ಟದ, ಯಾರಿಗೂ ನೋಯಿಸದ, ಯಾರನ್ನೂ ಹಾಳು ಮಾಡದ, ಆರೋಗ್ಯಕರ–ಹಾಸ್ಯ–ಬರಹಗಳನ್ನು ಒಳಗೊಂಡಿರುತ್ತಿತ್ತು ಈ ಪತ್ರಿಕೆ ಎನ್ನುವುದು ಈ ಕಾಲಕ್ಕೆ ಅತಿ ಮುಖ್ಯವಾದ ವಿಷಯ.

ಇದರಲ್ಲಿ ಅರವಮೊದ್ದು, ಕೊರವ, ಘಟು, ಕೊರಮ, ಜಗ್ಗೋಜಿ, ಕನ್ನೋಜಿ, ಮಿಟುಕಲಾಡಿ ಮೀನಾಕ್ಷಿ, ಮುಂತಾದ ನಗೆ ತರಿಸುವ ಹೆಸರುಗಳು ರಾ.ಶಿ.ಯವರ ಕಲ್ಪನೆಯ ಪಾತ್ರಗಳು. ಹೆಬ್ಬಿ ಗುಬ್ಬಾಲೆ, ರಾಜೀವಮರ ಸಂಸ್ಥಾನ,

ಹಿಂದಘಟ್ಟ ಜಿಲ್ಲೆ, ಗುಂಜಾಲಸಂದ್ರ, ಇತ್ಯಾದಿ ಅವರ ಕಲ್ಪನೆಯ ಊರುಗಳು. ಈ ಊರುಗಳಲ್ಲಿ, ಈ ಪಾತ್ರಗಳ ಮೂಲಕ ಸರ್ಕಾರದ ಮತ್ತು ಸಮಾಜದ ವೈಪರೀತ್ಯಗಳನ್ನು ಹಾಸ್ಯದ ಮೂಲಕ ಕತೆಗಳಾಗಿ, ಸಂಗತಿಗಳಾಗಿ ಇದರಲ್ಲಿ ಬಿಂಬಿಸುವ ಯತ್ನ ಅತ್ಯಂತ ಫಲಕಾರಿಯಾಗಿತ್ತು.

ಟಿ. ಸುನಂದಮ್ಮ, ಕೇ.ಫ.(ಡಾ. ಕೇಶವಮೂರ್ತಿ), ದಾಶರಥೀ ದೀಕ್ಷಿತ್, ಆರ್.ಕೆ. ಲಕ್ಷ್ಮಣ್, ಮುಂತಾಗಿ ಅನೇಕ ಹಾಸ್ಯ ಬರಹಗಾರರನ್ನೂ, ವ್ಯಂಗ್ಯ ಚಿತ್ರಕಾರರನ್ನೂ, ಕೊರವಂಜಿ ಹುಡುಕಿ ಹೊರ ತೆಗೆದು, ಜನರಿಗೆ ಪರಿಚಯಿಸಿದಳು. ನಾ, ಕಸ್ತೂರಿಯವರ 'ಅನರ್ಥ ಕೋಶ', ಆರ್.ಕೆ. ಲಕ್ಷ್ಮಣ್ ಅವರ ವ್ಯಂಗ್ಯ ಚಿತ್ರಗಳು; ದಾಶರಥೀ ದೀಕ್ಷಿತರ ದಫೇದಾರ ದೇರಣ್ಣ ಮತ್ತು ಸಾವಂತ್ರಮ್ಮ ಹಾಗೂ ಗಾಂಪರ ಗುಂಪು (ಮೂಲ: ಆರ್.ನರಸಿಂಹಾಚಾರ್ಯರದು); ಕನ್ನಡದಲ್ಲಿ ಏಕೈಕ ಹಾಸ್ಯ ಲೇಖಕಿಯಾಗಿ ಸುಮಾರು ದಶಕಗಳ ಕಾಲ ಮೆರೆದಿದ್ದ ಶ್ರೀಮತಿ ಟಿ. ಸುನಂದಮ್ಮನವರ ಸ್ಥಾಯೀ ದಂಪತಿಗಳಾದ ಚುರುಕು ಬುದ್ಧಿಯ ಸರಸು ಮತ್ತು ಮಂದಮತಿ ಮೈಲಾರಯ್ಯ ; ಕೇ.ಫ. ಅವರ  ಪಾಂಡು–ಶೌರಿ (ವುಡ್ ಹೌಸ್‌ರ ಪಾತ್ರಗಳಾದ ಬರ್ಟಿ ವೂಸ್ಟರ್ ಮತ್ತು ಜೀವ್ಸ್); ಪುಂಗನೂರು ಪಾಪಯ್ಯನವರ (ಪಾತಾಳದಲ್ಲಿ) ಪಾಪಯ್ಯ'; ಮುಂತಾದವರೆಲ್ಲ ಜನ್ಮ ತಾಳಿದ್ದು ಈ ಕೊರವಂಜಿಯ ಆಸ್ಪತ್ರೆಯಲ್ಲೇ. ಆಗಿನ ಓದುಗರ ಮನದಲ್ಲಿ ಈ ವರೆಗೂ ಮುದವಾಗಿ, ಶಾಶ್ವತವಾಗಿ ಬೀಡು ಬಿಟ್ಟಿರುವ ಉತ್ತಮ ಪಾತ್ರಗಳು ಇವು.

ಕಸ್ತೂರಿಯವರ 'ಅನರ್ಥ ಕೋಶ' ಮತ್ತು 'ಅಪರಂಜಿ ವಚನಗಳು'; ಅ.ರಾ.ಸೇ. (ಎ.ಆರ್. ಸೇತೂರಾಮ ರಾವ್) ಅವರ 'ಮಧ್ಯಂತರ ಕವಿನ ವಿಚಾರ', ಬೀರಣ್ಣ ಎಂಬ ಹೆಸರಿನಲ್ಲಿ ಬಿ.ಆರ್. ನಾರಾಯಣಯ್ಯಂಗಾರ್ ಅವರು ಬರೆದ 'ಪುಟ್ಟೂರಾಯನ ಪಥ್ಯ', ರಂಗಪ್ಪ ಮತ್ತು ರಾವಣ ಭಾತ್, ಗಾಳಿ ಬಂದಾಗ ತೂರಿಕೋ; ರಾಮಿ (ಎ.ಎಸ್. ರಾಮಕೃಷ್ಣ ಅವರ ''ಕೊರವೇಶ್ವರ ವಚನಗಳು; ವಿವಿಧ ಲೇಖಕರ ವಿವಿಧ ಬಗೆಯ 'ಪತ್ರಗಳು, ಪ್ರಶ್ನೋತ್ತರಗಳು' ಮುಂತಾದವು ಅತ್ಯುತ್ತಮ ನಗೆ ಬರಹಕ್ಕೆ ಮಾದರಿಗಳು. ಈ ಎಲ್ಲ ಲೇಖಕ, ಲೇಖಕಿಯರು ಹುಟ್ಟಿದ್ದು, ಬೆಳೆದಿದ್ದು, ಪ್ರಸಿದ್ಧರಾದದ್ದು ಈ ಪತ್ರಿಕೆಗೆ ಸತತವಾಗಿ ಬರೆಯುವ ಮೂಲಕವೇ.

ಇವರುಗಳೇ ಅಲ್ಲದೆ, ಕೊರವಂಜಿಯು ಕಟ್ಟಿದ ನಗೆಸಾಹಿತಿಗಳ ಸೇನೆಯಲ್ಲಿ; ಜಿ.ಪಿ. ರಾಜರತ್ನಂ, ಗಂಗಾಧರ, ಟೀಯಸ್ಸಾರ್ರಾವ್, ಹಾ. ರಾ., ಅ.ರಾ. ಮಿತ್ರ, ಎಸ್.ಎನ್. ಶಿವಸ್ವಾಮಿ, ಬಿ.ಜಿ. ಎಲ್. ಸ್ವಾಮಿ, ಮುಂತಾದವರು ಸೇರಿಕೊಂಡು, ಸತತ ಲೇಖನಗಳನ್ನು ಬರೆಯುತ್ತಿದ್ದರು. ಬಹು ಗಂಭೀರ ಸಾಹಿತ್ಯಕ್ಕೆ ಪ್ರಸಿದ್ಧರಾದ ಡಾ. ಶಿವರಾಮ ಕಾರಂತ, ಶ್ರೀರಂಗ, ಇವರುಗಳೂ ಈ ಸೇನೆಯಲ್ಲಿ ಸೇರಿ ಬರೆಯುತ್ತಿದ್ದುದು ವಿಶೇಷ. ಕಂ.ಭಂ.ಕೃಷ್ಣಮೂರ್ತಿ (ಕೆ.ಎನ್. ಕಿಟ್ಟನ್), ಹಾ.ರಾ., ಡಾ. ಕೃಷ್ಣಮೂರ್ತಿ, ನೀಲತ್ತಹಳ್ಳಿ ಕಸ್ತೂರಿ, ಮೊದಲಾದವರು ತಮ್ಮ ಮೊಟ್ಟ ಮೊದಲ ರಚನೆಯ ಸುಖವನ್ನೂ, ಪ್ರಕಟಣೆಯ ಪರಮಾನಂದವನ್ನೂ ಪಡೆದವರು. ಸಂಭಾವನೆಯ ಮರ್ಯಾದೆಯನ್ನೂ ಅನುಭವಿಸಿದವರು. ಎಲ್ಲ ಕೊಟ್ಟಿದ್ದು ಕೊರವಂಜಿ. ಸಾಹಿತ್ಯ ಜಗತ್ತಿನಲ್ಲಿ, ನಂತರದ ದಿನಗಳಲ್ಲಿ ಹೆಸರು ಮಾಡಿರುವ ಪ್ರೇಮಾ ಭಟ್, ಈಶ್ವರಚಂದ್ರ, ಸಿ.ಕೆ.ಎನ್. ರಾಜ, ಸಿ.ಪಿ.ಕೆ, ಹಾ.ಮ್ಯೆ. ಸೂರಿ, ಸುನೀತಿ ಕೃಷ್ಣಸ್ವಾಮಿ, ಮುಂತಾದವರೂ ಈ ಪತ್ರಿಕೆಗೆ ಬರೆದಿರುವುದುಂಟು. ಈಗ ಇತರ ಪತ್ರಿಕೆಗಳಲ್ಲಿ ಇವರ ಇಂತಹ ಲೇಖನಗಳು ಮುಂದುವರೆಯುತ್ತಿವೆ.

ಉರಿಗಾಳು, ಕುಹಕಿಡಿಗಳು ಮತ್ತು ಕೊರವಾವಲೋಕನ ಎಂಬ ಅಂಕಣಗಳನ್ನು ರಾ.ಶಿ.ಯವರು ತಮ್ಮ ಹೆಸರು ನಮೂದಿಸದೇ ಬರೆಯುತ್ತಿದ್ದ ಶಾಶ್ವತ ಅಂಕಣಗಳು. ಈ ಅಂಕಣಗಳು ಸಮಾಜದ ಆಗು ಹೋಗುಗಳಿಗೆ ಸ್ಪಂದಿಸುತ್ತಿದ್ದವು, ಕುಹಕವಾಡುತ್ತಿದ್ದವು, ವಿಚಾರಗಳ ಕೊಕ್ಕಿನಿಂದ ಓದುಗರ ತಲೆ ಕುಕ್ಕುತ್ತಿದ್ದವು, ಅಲೋಚನೆಗಳನ್ನು ಹೊರಗೆಳೆಯುತ್ತಿದ್ದವು. ಜೊತೆಗೆ ನಗುವನ್ನೂ ಹೊರ ಚೆಲ್ಲುವಂತೆ ಮಾಡುತ್ತಿದ್ದವು. ನಗುವಿನ ಹುಟ್ಟು, ನಗಿಸುವ ಕಾರ್ಯ ಸುಲಭದ್ದಲ್ಲ. 'ನಗು' ಉಕ್ಕಿ ಹೊರ ಬರುವ ರೀತಿಯಷ್ಟೇ ಸುಲಭ. ನಗುವಿಗೆ ಹೊಸ ಹೊಸ ವಿಷಯ–ವಿಧಾನಗಳೇ ಬೇಕು. ಒಮ್ಮೆ ಒಂದು ವಿಷಯ ತಿಳಿಯಿತೆಂದರೆ ಆ ವಿಷಯಕ್ಕೆ ಮತ್ತೆ 'ನಗು ಎಂಬುದು ಕಾಣಿಸಿಕೊಳ್ಳುವುದಿಲ್ಲ. ಗೊತ್ತಿಲ್ಲದ ವಿಷಯ, ತಿಳಿಯದ ವಿಧಾನ, ಅನಿರೀಕ್ಷಿತ ಅಂಶ_ಇವೇ ನಗುವಿನ ಹುಟ್ಟಿಗೆ ಷರತ್ತುಗಳು. ರಾ.ಶಿ.ಯವರು ನಗುವಿನ ಈ ಷರತ್ತುಗಳನ್ನು ಒಪ್ಪಿದ್ದರು. ಹೊಸ ಹೊಸ ವಿಷಯಗಳನ್ನು, ವಿಧಾನಗಳನ್ನು ಹುಡುಕುತ್ತಿದ್ದರು. ಓದುಗರನ್ನು ನಗಿಸುತ್ತಿದ್ದರು. ಕೊರವಂಜಿಯಲ್ಲಿ ತಿಳಿಹಾಸ್ಯದೊಂದಿಗೆ ತಿಳಿವು ಒದಗಿಸುತ್ತಿದ್ದ ಇವರ 'ಉರಿಗಾಳು' 'ಕುಹಕಿಡಿಗಳು' ತುಂಬಾ ಪ್ರಸಿದ್ಧವಾದವು'. 'ಉರಿಗಾಳು',

ಮತ್ತು 'ಕುಹಕಿಡಿಗಳು'ನಲ್ಲಿ ಬರೆಯುತ್ತಿದ್ದ ಕಟುಕಿ ಅಂಶಗಳ ಕೆಲವು ಸ್ಯಾಂಪಲ್‌ಗಳು ಈ ಕೆಳಗಿನವು:

**ಕುಹಕಿಡಿಗಳು :**

- "ಈ ಸಲ ಗೋಕುಲಾಷ್ಟಮಿ ಹಬ್ಬವನ್ನು ಸಾರ್ವಜನಿಕರು ಹೋಟೆಲುಗಳಲ್ಲಿ ವಿಜೃಂಭಣೆಯಿಂದ ನೆರವೇರಿಸಿದರಂತೆ" (ಕೊರವಂಜಿ ಸೆಪ್ಟೆಂಬರ್ 1951)
- "ನಮ್ಮ ಹುಡುಗ ಹಿಂದಿ ಕಲಿಯಕ್ಕೆ ಶುರು ಮಾಡಿದ ಮೇಲೆ ಜಟಕಾ ಕುದುರೆಗಳು ಕೂಡ ಅವನ ಮಾತು ಅರ್ಥ ಮಾಡಿಕೊಳ್ಳುತ್ತಿವೆ ಎಂದು ಆಚಾರ್ಯರು ಬರೆದಿದ್ದಾರೆ" (ಕೊರವಂಜಿ ಸೆಪ್ಟೆಂಬರ್ 1951)
- "ರಾಜಿ ಆಗದೇ ಇದ್ದರೆ ರಾಜೀನಾಮೆ—

  _ ಹಾಗೇ ಬಾಜಿ ಗೆಲ್ಲದೇ ಇದ್ದರೆ ಬಾಜೀನಾಮೆ ಅನ್ನಬಹುದೆ?"
- "ಜೋಧ್‌ಪುರದ ರಾಜಕುಮಾರಿಗೆ ಆಕೆಯ ಮದುವೆಯಲ್ಲಿ ಬೇರೆ ಒಂದು ಆನೆಯನ್ನೂ ಬಳುವಳಿ ಕೊಟ್ಟಿದ್ದಾರಂತೆ" (ಕೊರವಂಜಿ ಮೇ –1950)
- ಶಾಂತಿದೂತನಾಗಿ ದೇಶವೆಲ್ಲಾ ಹಾರಾಡಿ ಬಂದ ಟ್ರಿಗ್ವಿಲೀ ಅವರನ್ನು ಯುನೋದಲ್ಲಿ ಇನ್ನು ಮೇಲೆ 'ಶ್ರೀ ಕೃಷ್ಣ ಪರಮಾತ್ಮ" ಎಂದು ಕರೆವರಂತೆ.– ಅಂದರೆ ಈ ಶಾಂತಿದೂತನೂ ಕುರುಕ್ಷೇತ್ರಕ್ಕೆ ಕಾರಣನಾಗುತ್ತಾನೆ ಎಂದೇ?
- ಈ ಸೆನ್ಸಸ್‌ನವರು ಬಂದು ತನಿಖೆ ಮಾಡಿದಾಗಲೇ ನನಗೆ ಇಷ್ಟು ಜನ ಮಕ್ಕಳು ಎಂಬುವುದು ಗೊತ್ತಾಯಿತು ಎಂದೊಬ್ಬ ಹೇಳುತ್ತಿದ್ದ (ಕೊರವಂಜಿ ಮಾರ್ಚ್–1951)
- ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಾಗಿ ರೈಲು ಕಂಬಿ ಮೇಲೆ ತಲೆ ಇರಿಸಿಕೊಂಡು ಮಲಗಿದ್ದ ಬಡಪ್ರಾಣಿ ಒಬ್ಬ ರೈಲಿಗಾಗಿ ಕಾದು ಕಾದು ಉಪವಾಸದಿಂದಲೇ ಪ್ರಾಣ ಬಿಟ್ಟನಂತೆ.
- ಮಂತ್ರಿಯ ಅಳಿಯ ಯಾವುದೇ ಸರಕಾರಿ ಕೆಲಸಕ್ಕೆ ಸೇರಿದರೂ ಸರ್ವಿಸಿನಲ್ಲಿ ವಿಷ ಏರಿದಂತೆ ಏರಿ ಬಿಡ್ತಾನೆ.

**ಉರಿಗಾಳು :**

- ಒಂದು ಕೋಟಿ ಸ್ವಯಂ ಸೇವಕರನ್ನು ಕೂಡಿಸಿ ಅವರಿಗೆ ಸರ್ಕಾರವೇ ಅನ್ನ ಬಟ್ಟೆ ಒದಗಿಸಿ, ಅವರಿಂದ ವ್ಯವಸಾಯ ನಡೆಯಿಸಿ, ಆಹಾರ ಸಮಸ್ಯೆಯನ್ನು ಬಗೆ ಹರಿಸಬೇಕೆಂದು ಡಾ. ರಾಂ ಮನೋಹರ ಲೋಹಿಯಾ ಹೇಳಿದರು....

  –– ಸರ್ಕಾರವೇ ಅನ್ನ ಬಟ್ಟೆ ಕೊಡುವುದಾದರೆ, ಮುವ್ವತ್ತು ಕೋಟಿ ಸ್ವಯಂ ಸೇವಕರು ದೊರೆತಾರು. (ಕೊರವಂಜಿ ಏಪ್ರಿಲ್–1950)

- ವಯಸ್ಕರ ಶಿಕ್ಷಣದ ಪ್ರಚಾರವಾಗುತ್ತಿರುವುದರಿಂದ, ಮಕ್ಕಳು ತಾವು ದೊಡ್ಡವರಾದ ನಂತರ ಅಕ್ಷರ ಕಲಿಯುತ್ತೇವೆಂದು ಹಟ ಹಿಡಿಯಲಾರಂಭಿಸಿದ್ದಾರಂತೆ" (ಕೊರವಂಜಿ ಏಪ್ರಿಲ್–1950)

- ನಮ್ಮ ಸಂಸ್ಥಾನಕ್ಕೆ ಕೆರೆಗಳೇ ಭಾರೀ ಆಸ್ತಿ (ಭಾಷಣ) ..

  ಹೌದು ಕಟ್ಟ ಕಡೆಗೆ ಅವೇ ಆಧಾರ. (ಕೊರವಂಜಿ ಮೇ–1950)

- ಕೂಡಲೇ ಐವತ್ತು ಲಕ್ಷ ಮರಗಳನ್ನು ನಾವು ನೆಟ್ಟರೆ, ಅವು ಬೆಳೆದು ಗಗನ ಮಾರ್ಗದಲ್ಲಿ ಸಂಚರಿಸುವ ಮೋಡಗಳನ್ನು ತಡೆದು ಮಳೆ ಹುಯ್ಯಿಸಿ ಕೆರೆ ಕಟ್ಟೆ ತುಂಬ ಕಾಲುವೆಗಳಲ್ಲಿ ನೀರು ಹರಿದು ಗದ್ದೆಗಳಿಗೆ ಹಾಯ್ದು ಪಯಿರು ಬೆಳೆದು ತೆನೆ ಬಿಟ್ಟು ಸುಗ್ಗಿಯಾಗಿ ಧಾನ್ಯ ರೇಷನ್ ಡಿಪೋಗಳಿಗೆ ಬಂದು ಜನರು ಸುಖವಾಗಿಬಹುದೆಂಬುದೇ ನಮ್ಮ ಆಶಯ_ಎಂದು ಆಹಾರ ಮಂತ್ರಿ ಹೇಳಿರುವುದು ನಮ್ಮ ಮೊಮ್ಮಕ್ಕಳಿಗೆ ತುಂಬ ಆಶಾದಾಯಕವಾಗಿದೆ. (ಕೊರವಂಜಿ ಜೂನ್ –1950)

- ಮಂತ್ರಿಗಳು ವಾಸ ಮಾಡುತ್ತಿರುವ ಮನೆಯಲ್ಲಿ ದೆವ್ವವಿದೆ ಎಂಬ ಬೆದರಿಕೆ ಹುಟ್ಟಿದೆ" (ಸುದ್ದಿ) ಇದು ತಿಳಿಯದವರು ಮಾಡಿರುವ ಆರೋಪಣೆಯೋ, ತಿಳಿದವರು ಮಾಡುವ ದೂಷಣೆಯೋ? (ಕೊರವಂಜಿ ಫೆಬ್ರವರಿ–1951)

- ರೇಡಿಯೋ ಕಾರ್ಯಕ್ರಮಗಳಲ್ಲಿ ನಿಮಗೆ ಅತ್ಯಂತ ಪ್ರಿಯವಾದದ್ದು ಯಾವುದು, ಎಂದು ಸಾರ್ವಜನಿಕರನ್ನು ಕೇಳಲಾಗಿ, ಅವರು 8.15, 10, 10.30, 2.30, 2.45, ಗಂಟೆಗಳಲ್ಲಿ ನಡೆಯುವ 'ಪ್ರಸಾರ ಸಮಾಪ್ತಿ' ಕಾರ್ಯಕ್ರಮ ಎಂದು ಉತ್ತರ ಬರೆದಿರುವರಂತೆ (ಕೊರವಂಜಿ ಮಾರ್ಚ್–1951)

- ಮೈಸೂರು ಸಂಸ್ಥಾನ ಮತ್ತು ಕೊಡಗಿನಲ್ಲಿ ಇನ್ನು 24 ಗಂಟೆಗಳ ಕಾಲ ಮಳೆಯ ಸೂಚನೆ ಇಲ್ಲ" ಎಂದು ಹವಾ ಭವಿಷ್ಯ ಹೇಳಿತ್ತು. -- -- – ಆ ಪತ್ರಿಕೆ ಮಳೆಯಿಂದ ತೋಯ್ದಿತ್ತು (ಸೆಪ್ಟೆಂಬರ್ 51)

- ದಾವಣಗೆರೆ ಸಮ್ಮೇಳನದಲ್ಲಿ ಹತ್ತೋಟಿ ಹೋಗಬೇಕು ಅಂತ ಹತ್ತೋಟಿ ಇಲ್ಲದೆ ಹಲವರು ಹಾರಾಡಿದರಂತೆ

- ಹುಲಿಯು ಮನುಷ್ಯರನ್ನು ತಿಂದಿತು (ಸುದ್ದಿ)

  – ಏನು ಮಹಾ ಸುದ್ದಿಯೋ! ಈ ಕಾಲದಲ್ಲಿ ಮನಷ್ಯರು ಮನುಷ್ಯನನ್ನೇ ಕಿತ್ತುಕೊಂಡು ತಿನ್ನೋವಾಗ!

- ನಮ್ಮ ಮಗು ಏನೇನೋ ಮಾತಾಡುತ್ತಿದೆ. ಒಂದೂ ಖಚಿತವಾಗಿ ಅರ್ಥವಾಗುಲ್ಲ ಅಂತ ತಾಯಿ ಹೇಳಿದರೆ,

  'ಹೆದರಬೇಡಿ ತಾಯಿ. ಮುಂದೆ ಮಂತ್ರಿ ಆಗ್ತಾನೆ" ಅಂತ ವೈದ್ಯರು ಭರವಸೆ ನೀಡಿದರಂತೆ.

- ಪಾನನಿರೋಧ ಮಾಡಬೇಕು ಎಂದು ಕಾಂಗ್ರೆಸ್‌ನವರು ಹಾರಾಡ್ತಾ ಇರೋದರ ಕಾರಣ ಈಗ ತಿಳಿಯಿತು. ಏನೂ ಕುಡಿಯದೆಯೇ ನಮಗೆ ಅಮಲೇರಿದೆ. ನಮ್ಮ ಹಾಗೆ ಎಲ್ಲರೂ ಕುಡಿಯದೆಯೇ ಕುಡಿದವರ ಹಾಗೆ ಹಾರಾಡಬಾರದೇ ಎನ್ನುವುದೇ ಕಾರಣ.

ರಾ.ಶಿ.ಯವರ ಅರೆದಿನಚರಿಯ ಅವಲೋಕನವೇ ಬಹುಮಟ್ಟಿಗೆ 'ಕೊರವಂಜಿ'ಯ 'ಕೊರವಾವಲೋಕನ' ಎಂಬ ಅಂಕಣ. ಈ ಕೊರವ ನಗೆಸರಸಿ, ಸೂಕ್ಷ್ಮಮತಿ, ತೀಕ್ಷ್ಣಮತಿ, ಕೆಂಚುರಿ ಕ್ಲಬ್‌ನಲ್ಲಿ ಇವನೇ ಪ್ರಮುಖ ವ್ಯಕ್ತಿ. ಇದು ಪಿ.ಜಿ. ಉಡ್‌ಹೌಸ್‌ನ ಪಾತ್ರಕ್ಕೆ ಹೋಲುವ ಸೃಷ್ಟಿ. ರಾಜ್ಯದಲ್ಲಿ ನಡೆಯುವ ಮುಖ್ಯ ಸಂಗತಿಗಳನ್ನು ಅರೆದು ಕೊರೆದು ಲೇವಡಿ ಮಾಡುವ ಚಾಣಾಕ್ಷ ಅವಲೋಕನವೇ ಈ ಅಂಕಣದ ತಿರುಳು. ಪ್ರತಿದಿನ ಸೆಂಚುರಿ ಕ್ಲಬ್‌ಗೆ ಟೆನ್ನಿಸ್ ಆಡಲು ಹೋಗುವ ರೂಢಿ ಇಟ್ಟುಕೊಂಡಿದ್ದರು ರಾ.ಶಿ. ಅವರು. ತಮ್ಮ ಚುರುಕು ಮಾತು ಮತ್ತು ಆಟಗಳಿಂದ, ಅಲ್ಲಿ ಎಲ್ಲರ ಗಮನ ಸೆಳೆಯುವ ವ್ಯಕ್ತಿಯಾಗಿದ್ದರಂತೆ. ಇವರ ಆಗಮನವೇ ಅಲ್ಲಿಯ ಹಲವರಿಗೆ ಸ್ಫೂರ್ತಿ.

ಅಲ್ಲಿಯ ಚರ್ಚೆ, ತೀರ್ಮಾನಗಳ ತಿರುಳೇ ಕೊರವನ ಅವಲೋಕನ ಎಂಬುದು ಅವರನ್ನು ಬಹು ಬಲ್ಲವರು ಹೇಳುವ ಮಾತು.

ವಿವಿಧ ಅಂಕಣಗಳೇ ಅಲ್ಲದೇ ಜಗತ್ತಿನ ಎಲ್ಲ ವಿಷಯಗಳನ್ನೂ ತಮ್ಮ ಬರವಣಿಗೆಗೆ ವಸ್ತುವಾಗಿಸಿಕೊಂಡು, ಎಲ್ಲ ಪ್ರಕಾರಗಳಲ್ಲಿಯೂ ಇವರು ಕಥೆ, ಕಾದಂಬರಿ, ಲೇಖನ, ಕವನ, ಚುಟುಕು, ಮುಂತಾದವನ್ನು ಈ ಪತ್ರಿಕೆಗೆ ಬರೆದರು. ಇವುಗಳಲ್ಲಿ ಹಲವನ್ನು ಆ ನಂತರದಲ್ಲಿ ಪುಸ್ತಕ ರೂಪದಲ್ಲಿಯೂ ಪ್ರಕಟಣೆ ಮಾಡಿದರು. ಎಲ್ಲದರಲ್ಲೂ ಪ್ರಧಾನವಾಗಿದ್ದೆಂದರೆ ತಿಳಿನಗೆಯ ನಿರೂಪಣೆ ಮೂಲಕ ಜನರಲ್ಲಿ ಅರಿವು ಮೂಡಿಸುವುದು. ಸಮಾಜವನ್ನು ಎಚ್ಚರಿಸುವುದು, ಪತ್ರಿಕೆಯ ಪ್ರಕಟಣೆಗೆ ಆಯ್ಕೆ ಮಾಡುತ್ತಿದ್ದ ಬರಹಗಳಲ್ಲೂ ಅವರು ಅಪೇಕ್ಷಿಸುತ್ತಿದ್ದುದು ಇದನ್ನೇ. ಈ ಲೇಖನಗಳಲ್ಲಿ ಆರಂಭದಿಂದ ಅಂತ್ಯದವರೆಗೆ ಓದಿದರಷ್ಟೇ ಉದ್ದಕ್ಕೂ ಮೂಡಿಸುವ ಮಂದನಗೆ, ಅರಿಯ ಬೇಕಾದ ವಿಷಯಗಳು ಚೆನ್ನಾಗಿ ಅರ್ಥವಾಗುವುದರಿಂದ ಅಂಥ ಲೇಖನಗಳ ವಿವರಣೆ ಕೊಡುವುದು ಕಷ್ಟಸಾಧ್ಯ. ರಾ.ಶಿ.ಯವರ ಹಾಗೂ ಹೆಚ್ಚು ಹೆಸರು ಮಾಡದವರೂ ಬರೆದ ಬರಹದಲ್ಲಿರುತ್ತಿದ್ದ ಹಾಸ್ಯವನ್ನು ಇಲ್ಲಿ ಒಂದೆರಡು ಝಲಕ್‌ಆಗಿ ಕಾಣಿಸಬಹುದಷ್ಟೆ.

'ಇಂದಿರಾಪ್ರಿಯ' ಎಂಬ ಹೆಸರಿನಲ್ಲಿ ಎಂ.ಜಿ. ಶಿರಾಳಿ ಎಂಬುವವರು ಬರೆದ 'ಮುಂಬರುವ ಪಠ್ಯ ಪುಸ್ತಕದಲ್ಲಿ" ಎಂಬ ತಲೆಬರಹದಡಿಯ ಒಂದು ಪುಟ್ಟ ಬರಹ ಕೆಳಗಿನಂತಿದೆ.

ನಮ್ಮ ದೇಹದ ಪೋಷಣೆಗೆ ಅಗತ್ಯವಾದ ಆಹಾರ

1) ಹೆಚ್ಚು ಪ್ರೋಟೀನ್ಯುಕ್ತವಾದ ಇಲಿ, ಹೆಗ್ಗಣಗಳ ಮಾಂಸ

2) ಒಂಟೆಯ ಹಾಲು

3) ವಿವರಣೆ– ಮಾನವನ ಆಹಾರಗಳನ್ನೇ ಧ್ವಂಸ ಮಾಡುವ ಇಲಿ ಹೆಗ್ಗಣಗಳನ್ನೇ ಮಾನವ ತಿಂದು ಧ್ವಂಸ ಮಾಡಿದಂತಾಗುವುದು. ಆದರೆ ಇದರಲ್ಲಿ ಸರ್ಕಾರಿ ಗೋದಾಮುಗಳಲ್ಲಿನ ಹಳೇ ಇಲಿ ಹೆಗ್ಗಣಗಳನ್ನು ತಿಂದು ಜೀರ್ಣಿಸಿಕೊಳ್ಳಲು ಸಾಧ್ಯವೇ? ಎಂಬುದು ಇನ್ನೂ ವಿವಾದಾಸ್ಪದ ವಿಷಯವೇ ಆಗಿದೆ. ಅದಕ್ಕೊಂದು ಸಮಿತಿ ಏರ್ಪಡಿಸಲಾಗಿದೆ. (ಕೊರವಂಜಿ. 1966 ಅಕ್ಟೋಬರ್)

*****

ರಾಮಿ ಎಂಬುವವರು ಬರೆದ 'ಕೊರವೇಶ್ವರ ವಚನಗಳು' ಎಂಬ ಒಂದು ಸಂಚಿಕೆಯ ಸ್ಯಾಂಪಲ್:

"ಎಲ್ಲರೂ ಎನ್ನ ಕಾಯವ ಬ್ಯಾಟಾಗಿ ಮಾಡಯ್ಯ; ಶಿರವ ಬಾಲಾಗಿ ರೂಪಿಸಯ್ಯ; ಕೈ ಕಾಲುಗಳ ವಿಕೆಟ್ಟಾರಾಗಿ ಮಾಡಯ್ಯ; ಪ್ಯಾಡು ಗ್ಲೌಸು ಸಂಪುಗಳಿಂದ ನನ್ನ ಅಂಗಾಂಗಗಳನು ಕಡೆಸಯ್ಯ; ಧರೆಯೆಲ್ಲವನೂ ಕ್ರಿಕೆಟ್ ಗ್ರೌಂಡಾಗಿ ಮಾಡಯ್ಯ ಎಂದು ಬೇಡಿಕೊಂಬುದ ಕಂಡ ಕೊರವೇಶ್ವರ". .. .. .. "ಎಲ್ಲರೂ ಧೀರರೂ, ಎಲ್ಲರೂ ವೀರರು, ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು, ಕಿರಿಕೆಟ್ಟಿನ ಭಕ್ತರಿಗೆ ಬ್ಯಾಟೇ ದೇವತೆ, ಬಾಲೇ ದೈವ; ಅದನ್ನೆತ್ತಿ ಒಗೆದು ಬಡಿದು ಓಡಾಡುವರೇ ಅಥಿರಥ ಮಹಾರಥರು; ಏನಿದು ಸೋಜಿಗವೆಂದು ಕಣ್ಣು ಮಿಟುಕಿಸುವ ನಮ್ಮ ಕೊರವೇಶ್ವರ" ...... "ದೇವಲೋಕ ಮರ್ತಲೋಕವೆಂದರೆ ಬೇರಲ್ಲ ಕಾಣಿರೋ; ಕಿರಿಕೆಟ್ಟು ಇರುವಲ್ಲಿಯೇ ಮರ್ತಲೋಕ; ಇಲ್ಲದಿರುವಲ್ಲಿಯೇ ಹಾಳು ದೇವಲೋಕ; ಹೌಸಾಟ್ ಎಂಬ ರವ ಕೇಳಿಬರದಲ್ಲಿ; ಬೌಂಡರಿ, ರನ್ನು, ನೋ ಬಾಲು ಕ್ಯಾಚುಗಳ ಸದ್ದೆ ಇಲ್ಲದಿರುವಲ್ಲಿ ಸ್ವರ್ಗವಾದರೂ ಏತಕಯ್ಯ; ಈ ಮರ್ತಲೋಕವೇ ಸಾಕು ನನಗೆ ಎಂದು ಕ್ರಿಕೆಟ್ ಭಕ್ತ, ಭಕ್ತಿ ಭಾವ ಸಮಾಧಿಯಲಿ ಮುಳುಗಿದುದ ಕಂಡು ಬೆರಗಾದ ಕೊರವೇಶ್ವರ".. .. ಎಂಬುದು ಕ್ರಿಕೆಟ್‌ನ ಹುಚ್ಚನ್ನು ಅತಿಯಾಗಿಸಿಕೊಂಡ ಜನರನ್ನು ಕಂಡು ಬರೆದ ವಚನಗಳ ಕೆಲವು ಸಾಲುಗಳು, (ಕೊರವಂಜಿ ಫೆಬ್ರವರಿ 1959)

*******

ಕೊರಮ' ಹೆಸರಿನಲ್ಲಿ ಬರೆದ ಒಂದು ಕಿರು ಲೇಖನ **'ನಿದ್ದೆ ಬರುಲ್ಲ'**. (ಕೊರವಂಜಿ 1966 ಅಕ್ಟೋಬರ್). ಇದರಲ್ಲಿ ಕೊರಮನ ನಿದ್ದೆ ಎಂಥದು ಎಂಬುದನ್ನು ಓದಿಯೇ ನಗುವುದು ಒಳ್ಳೆಯದು.

'ಎದ್ದೇಳೋ ಲೇ ಎಷ್ಟು ಹೊತ್ತೋ ಮಲಗೋದು ಥು ಥೂ" ನನ್ನ ತಮ್ಮನ ಧ್ವನಿ ಕಿವಿಗೆ ತುಸು ತುಸು ಕೇಳಿಸಿತು.

"ಕಾಫಿ ತಿಂಡಿ ಆರಿ ಹೋಗುತ್ತೆ ಏಳಪ್ಪಾ ಕೊರಮ" ಅಮ್ಮನ ಆದರದ ಮಾತು ಸ್ವಲ್ಪ ಕೇಳಿಸಿತು.

“ಇನ್ನೂ ಏಳಲಿಲ್ವಾ? ಎಂಥ ಶೋಂಭೇರೀ. ಬೇಗ ಎದ್ದು ಸ್ನಾನ ಸಂಧ್ಯಾವಂದನೆ ಹೋಗಲಿ ಕಡೆಗೆ ಎರಡು ಆಚಮನ ಆದರೂ ಮಾಡಬೇಡವೇ”? ಎಲ್ಲೋ ದೂರದಿಂದ ಅಪ್ಪನ ದನಿ ಕೇಳಿಸಿತು. ಅಮ್ಮನ ಧ್ವನಿಯನ್ನು ಅಪ್ಪನ ಧ್ವನಿಯೂ ಹಿಂಬಾಲಿಸುವುದು ವಾಡಿಕೆ.

ದಿನ ಬೆಳಗಾದರೆ ಇದೇ ಉದಯರಾಗಗಳು. ಸೂರ್ಯವಂಶದಲ್ಲಿ ಹುಟ್ಟಿದವನು ನಾನು. ದೊಡ್ಡವರು ಮೊದಲೆದ್ದು ಹೊರಟ ಮೇಲೆ ನಾನು ಎದ್ದು ಹಿಂಬಾಲಿಸುವುದು ಶ್ರೇಯಸ್ಕರ ಅಂತ ಸ್ವಲ್ಪ ಆರಾಮವಾಗಿ ಬಿದ್ದುಕೊಂಡಿದ್ದರೆ ಮನೆಯವರೆಲ್ಲರೂ ಈ ರೀತಿ ಘಢಾಯಿಸುತ್ತಾರೆ. ರಾತ್ರಿ ಎಲ್ಲ ನಿದ್ದೇನೇ ಬರುಲ್ಲ. ಬೆಳಗಿನ ಝಾಮ ಸ್ವಲ್ಪ ಝೋಂಪು ಹತ್ತುತ್ತೆ ಅಷ್ಟೆ. ಆದರೂ ಮನೆಯವರು ಆಡಿ ಕೊಳ್ಳುವುದನ್ನು ಕೇಳಿದರೆ ನಂಬುಕ್ಕೇ ಆಗುಲ್ಲ.

“ಕೊರಮ ಮಲಗಿದ್ದಾಗ ಚೇಳು ಕುಟುಕಿತು. ನಾನು ನೋಡಿದೆ. ಆದರೂ ಅವ ಏಳಲೇ ಇಲ್ಲ” ಅಂತ ಸೋದರ ಮಾವ ಅಂತಾನೆ.

“ಕೊರಮ ಮಲಗಿದ್ದಾಗ ಪಟಾಕಿ ಸಲ ಹಚ್ಚಿದ್ಲೆ ಏಳಲೇ ಇಲ್ಲ” ಅಂತ ಒಂಬತ್ತು ವರ್ಷದ ಮಾಧವಿ ತೊದಲುತ್ತಾ ನಗುತ್ತಾಳೆ. ರ–ಲ ಎರಡೂ ಅವಳಿಗೆ ಒಂದೇ.

“ಕೊರಮ ಮಲಗಿದ್ದಾಗ ಎರಡು ಚೊಂಬು ತಣ್ಣೀರು ಹಾಕಿದೆ. ಹಾಸಿಗೆ, ತಲೆ, ಮೈ ಎಲ್ಲ ಒದ್ದೆ ಆದರೂ ಭಡವ ಏಳಬೇಕಲ್ಲ” ಅಂತ ಅಣ್ಣನ ಅಂಬೋಣ.

“ಹತ್ತು ಘಂಟೆಗೆ ತಂಗೀನ ಧಾರೆ ಎರೆದು ಕೊಟ್ಟಾಗ ಕೊರಮ ನಿದ್ರೆ ಮಾಡ್ತಾ ಇದ್ದ ಮದುವೆ ಮನೇಲಿ” ಅಂತ ಅಮ್ಮ ಕೂಡ ಅಂತಾರೆ.

ಆಡೋರ ಮಾತನ್ನು ಕೇಳ್ತಾ ಕೂತ್ರೆ ನಿದ್ದೇನೇ ಬರುಲ್ಲ.

*****

‘ಕೊರವಂಜಿ’ ಹರಡಿದ ನಗುಬಳ್ಳಿ, ಅರಳಿಸಿದ ನಗೆ ಹೂಗಳ ಸುವಾಸನೆ ಯಾವ ಲೆಕ್ಕಕ್ಕೂ ನಿಲುಕದ್ದು. ಓದುಗರು ಕೊರವಂಜಿಗಾಗಿ ಪ್ರತಿ ತಿಂಗಳು ಕಾದು ಕಾದು ಬರಮಾಡಿಕೊಳ್ಳುತ್ತಿದ್ದರು. ಎಳೆದು, ಕಿತ್ತಾಡಿ ಓದುವ ವಾಚಕರಿದ್ದರು. ತಿಂಗಳಿಗೆ ನಾಲ್ಕು ಸಲ ಬರಬಾರದೇ ಈಕೆ ಎಂದು

ಹಂಬಲಿಸುವವರೂ ಇದ್ದರು. ಆ ನಗೆಯ ಮುಗುಳು, ಅದರ ಸ್ಮೃತಿ, ಆಗಿನ ವಾಚಕರ ಮನದಂಗಳದಲ್ಲಿ ಈಗಲೂ ಸುಮಧುರವಾಗಿ ಉಳಿದಿದೆ.

ರಾ.ಶಿ.ಯವರ ಬಳಿ ರೋಗಿಗಳಾಗಿ (ಪೇಷಂಟ್ಸ್ ಆಗಿ) ಬರುತ್ತಿದ್ದ ಕೆಲವು ಸಿನಿಮಾ ಹಂಚಿಕೆದಾರರು, ಹೊಸ ಸಿನಿಮಾಗಳು ಬಿಡುಗಡೆಗೊಂಡಾಗ ಆ ಸಿನಿಮಾಗಳಿಗೆ ಸಂಬಂಧಿಸಿದಂತೆ, ಜಾಹಿರಾತುಗಳನ್ನು ಕೊರವಂಜಿಗೆ ಕೊಡುತ್ತಿದ್ದರು. ಈ ಸಿನಿಮಾ ಡಿಸ್ಟ್ರಿಬ್ಯೂಟರ್ಸ್ ಅಲ್ಲದೇ ಮೈಸೂರು ಸಿಲ್ಕ್ಸ್, ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಯ ಗೌರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಮೈಸೂರು ಸರ್ಕಾರದ ವಿಮಾ ಇಲಾಖೆ, ಇತ್ಯಾದಿ ಸರ್ಕಾರದ ಕೆಲವು ಇಲಾಖೆಗಳು; ಹಾಗೂ ಮೈಸೂರು ಕಿರ್ಲೋಸ್ಕರ್, ರಾಜಾ ಸ್ನೋ, ಬೆಂಗಾಲ್ ಬಲ್ಬ್ಸ್, ಮೈಸೂರು ಇಂಡಸ್ಟ್ರಿಯಲ್ ಆಂಡ್ ಟೆಸ್ಟಿಂಗ್ ಲ್ಯಾಬೋರೇಟರಿ, ಮೈಸೂರು ವೆಜಿಟೆಬಲ್ ಆಯಿಲ್ ಪ್ರಾಡಕ್ಟ್ಸ್, ಮದ್ರಾಸ್ ಆಯುರ್ವೇದಾಶ್ರಮಂ, ಮೈಸೂರು ಲ್ಯಾಂಪ್ ವರ್ಕ್ಸ್ ಲಿ, ಮುಂತಾದ ಖಾಸಗಿ ಕಂಪೆನಿಗಳು, ಕೊರವಂಜಿಗೆ ಆಗಾಗ ಜಾಹಿರಾತುಗಳನ್ನು ನೀಡುವುದರ ಮೂಲಕ ಆರ್ಥಿಕ ನೆರವು ನೀಡುತ್ತಿದ್ದವು. ಆದರೂ ಹಣಕ್ಕಿಂತ ಹೆಸರಿನ ಲಾಭವೇ ಹೆಚ್ಚು ದೊರೆತಿದ್ದು ಈ ಪತ್ರಿಕೆಗೆ. ಇದು ಮುದ್ರಣಗೊಳ್ಳುತ್ತಿದ್ದುದು ಬಿ.ಎಸ್. ಐಯ್ಯಂಗಾರ್ ಅವರ ಮುದ್ರಣಾಲಾಯದಲ್ಲಿ.

ಕ್ರಮೇಣ ಈ ಜಾಹಿರಾತಿನ ನೆರವುಗಳು ಕಾರಣಾಂತರಗಳಿಂದ ಕಡಿಮೆಯಾಗುತ್ತ ಹೋದವು. ಇನ್ನಿತರ ಮಾಧ್ಯಮಗಳ ಆಗಮನದಿಂದ ಓದುಗರಲ್ಲಿ ಮೂಡತೊಡಗಿದ ಅನಾಸಕ್ತಿ, ಗ್ರಾಹಕರ ಕೊರತೆ, ಆರ್ಥಿಕ ದುಸ್ಥಿತಿ, ಎಲ್ಲಕ್ಕಿಂತ ಆಧ್ಯಾತ್ಮದ ಕಡೆಗೆ ವಾಲಿದ ಈ ಸಂಪಾದಕರ ಒಲವು – ಈ ಎಲ್ಲವೂ ಕೊನೆ ಕೊನೆಯಲ್ಲಿ ಸೇರಿ ಒಂದಾಗಿ ಕೊರವಂಜಿಯನ್ನು ಪುನಃ ಕಾಡಿಗೆ (ಮೂಲ ಸ್ಥಾನಕ್ಕೆ) ಕಳಿಸಿ ಕಣ್ಮರೆಯಾಗಲು ಕಾರಣವಾದವು. "ಜಾಹಿರಾತು ಸಿಗ್ತಿರಲಿಲ್ಲ. ಕಾಗದ ಮತ್ತು ಮುದ್ರಣಗಳ ಬೆಲೆ ಜಾಸ್ತಿ ಆಗ್ಹೋಯ್ತು. ಹತ್ತು ಸಾವಿರ ಪ್ರಸಾರ ಇದ್ರೂ ನಷ್ಟ ಆಗ್ತಿತ್ತು. ನನ್ನ ಸಂಪಾದನೆ ಎಲ್ಲ ಇದಕ್ಕೆ ಹೋಗ್ತಿತ್ತು" ಎಂದು, ಲೇಖಕರಾದ ಚಿರಂಜೀವಿಯವರ ಮುಂದೆ ಹೇಳಿದ್ದಾರೆ ರಾ.ಶಿ.*

*(ಚಿರಂಜೀವಿಯವರ 'ಕನ್ನಡಕ್ಕೆ ಕೊರವಂಜಿ ಕೊಟ್ಟ ರಾ.ಶಿ, ಲೇಖನದಲ್ಲಿ ರಾಶಿಯವರೇ ಹೇಳಿದ್ದು ಪುಟ 130)

“ಹಲವು ಶ್ರೀಮಂತರನಕ ಜಾಹೀರಾತಿಗಾಗಿ ಕೊರವಂಜಿಯನ್ನು ಕುಣಿಸಿ, ದಣಿಸಿ, ಕೊನೆಗೆ ಹಣ ಕೊಡುವ ಸಮಯ ಬಂದಾಗ ತಾರಮ್ಮಯ್ಯ ಆಡಿಸಿದರು. ಶ್ರೀಮಂತರು ಎಂದರೆ ಹೇಗೆ? ಲಕ್ಷಾಧೀಶ್ವರರಲ್ಲ, ಮಿಲಿಯಾಧೀಶ್ವರರು” ಎಂದು ಶ್ರೀಮಂತರಿಂದ ಜಾಹೀರಾತಿನ ಹಣಸಂಗ್ರಹಕ್ಕೆ ಪಟ್ಟ ಕಷ್ಟವನ್ನೂ; “ಹಣದ ತೊರೆಯನ್ನು ವೈಯುಕ್ತಿಕವಾಗಿ ಹರಿಸಿದೆ” ಎಂದು ಸ್ವಂತ ಹಣ ಹಾಕಿದ್ದನ್ನೂ ಯಾರು ಯಾರೋ ಚಿತ್ರಕಾರರಿಗೆ ಕಾಫಿ ತಿಂಡಿ ಕೊಟ್ಟು ಪುಸಲಾಯಿಸಿ ವ್ಯಂಗ್ಯ ಚಿತ್ರಗಳ ಅರ್ಥ–ಅಂತರಾಳದ ಬಗ್ಗೆ ಉಪದೇಶಿಸಿ, ಚಿತ್ರ ಬರೆಸಲು ಪಟ್ಟಪಾಡನ್ನೂ, ತಿಳಿಸಿ, ನೆರವಾದವರಿಗೆ ಧನ್ಯವಾದ ಅರ್ಪಿಸಿದರು ರಾ.ಶಿ. ಕೊನೆಯ ಸಂಚಿಕೆಯಲ್ಲಿ. ಆದರೆ ಈ ಯಾವುದರ ಅರಿವೂ ಇಲ್ಲದೆ, ಈಕೆ ಪ್ರತಿ ತಿಂಗಳು ತಮ್ಮ ಮನೆಗೆ ಬರುವುದನ್ನು ನಿಲ್ಲಿಸಬಾರದಿತ್ತು ಎಂದು ಬೇಸರಗೊಂಡ ಓದುಗರು ಮಾತ್ರ ನೂರಾರು ಜನ.

ಕೊರವಂಜಿಗೆ ಸಾಮಾನ್ಯವಾಗಿ ಬರೆಯುತ್ತಿದ್ದ ಟಿ.ಸುನಂದಮ್ಮ, ಶ್ರೀರಂಗ, ಅ.ರಾ.ಸೇ. ರಾಮಿ, ದಾಶರಥೀ ದೀಕ್ಷಿತ್, ಇವರುಗಳು “ಹೋಗಿ ಬರ್ತೀಯಾಮ್ಮಾ”? ಎಂಬ ಒಂದೇ ಶೀರ್ಷಿಕೆಯಡಿ ತಮ್ಮ ತಮ್ಮ ಅಳಲು, ಅನಿಸಿಕೆಗಳನ್ನು ಬರೆದು ತಲೆ ನೇವರಿಸಿ, ಹರಸಿ, ‘ಕಾಗದ ಬರೀತಿರಮ್ಮಾ”, ಎಂದು ಕಣ್ಣಂಚಿನಲ್ಲಿ ನೀರು ತಂದು, ಕಾಡಿಗೆ ಕಳಿಸಿಕೊಟ್ಟರು. 1967ರ ಮಾರ್ಚ್‌ನಲ್ಲಿ ಹೊರ ಬಂದ ಕೊನೆಯ ಸಂಚಿಕೆಯ ಪುಟಗಳ ವಿಶೇಷತೆ ಎಂದರೆ ಈ ಘಟಾನುಘಟಿಗಳ ಹೃತ್ಪೂರ್ವಕ ವಿದಾಯದ ಪತ್ರಗಳೇ.

ಮಗಳ ಭಾವನೆಯಿಂದ ಬೆಳೆಸಿದ ಕೊರವಂಜಿಯನ್ನು ಕಾಡಿಗೆ ಕಳಿಸುವ ನಿರ್ಧಾರ ತಿಳಿಸಿದಾಗ, “ಹೋಗಿ ಬರ್ತೀನಿ ಅಂದ್ಯಾಮ್ಮಾ? ಇಷ್ಟು ದಿನ ನೀನು ಒಳಗೆ ಇದ್ದದ್ದೇ ನನಗೆ ಗೊತ್ತಿರಲಿಲ್ಲ”. ಎಂದು ಕನ್ನಡದ ಜನಪ್ರತಿನಿಧಿಯ (ಮಹಿಷೂರ ಕನ್ನಡಿಗ) ಹೇಳಿಕೆಯಾಗಿ ಒಂದು ವ್ಯಂಗ್ಯ ಚಿತ್ರದಲ್ಲಿ ತೋರಿಸಿರುವುದು, ಕನ್ನಡ ಜನರು ‘ಕೊರವಂಜಿ’ಯ ಉನ್ನತ ಮಟ್ಟದ ಹಾಸ್ಯಕ್ಕೆ ಸರಿಯಾದ ಪ್ರತಿಕ್ರಿಯೆ ತೋರಲಿಲ್ಲ ಎಂಬ ನೋವಿನಲ್ಲಿ. ಮನದ ಎಲ್ಲ ನೋವನ್ನು ತಮ್ಮ ತಾತ್ವಿಕ ಚಿಂತನೆಯ ನೆಲೆಯಲ್ಲಿ ಯೋಚಿಸಿ ನಿವಾರಿಸಿಕೊಂಡ ರಾ.ಶಿ.ಅವರು ಹಿತವಾದ ನಗೆಯಿಂದಲೇ ವಿದಾಯ ಹೇಳಿ, ಕೊರವಂಜಿಯನ್ನು ಬೀಳುಕೊಟ್ಟರು.

"ವಯಸ್ಸಾದವರು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು ಅಂತ ನೀವೇ ಘಂಟಾಘೋಷವಾಗಿ ಹೇಳುತ್ತಿದ್ದಿರಿ. ಹೇಳಿದಂತೆ ನೀವು ಮಾಡಬೇಕು ಅಲ್ಲವೇ?" ಕಾಡಿನಲ್ಲಿ ನನ್ನ ಜೊತೆಯಲ್ಲೇ ಉಳಿದುಕೊಳ್ಳಿ." .... .. "ನಾಡಿನವರ ಋಣಗಳನ್ನೆಲ್ಲ ಸಾಕಷ್ಟು ಮಟ್ಟಿಗೆ ಬಡ್ಡಿ ಸಮೇತ ತೀರಿಸಿದ್ದೀರಿ".. .. .. "ಯಾವ ಬಂಧನವೂ ಇಲ್ಲದೆ, ಯಾವ ನಿರ್ಬಂಧವೂ ಇಲ್ಲದೆ ಮನಸ್ಸಿಗೆ ಬಂದದ್ದನ್ನು ನುಡಿದು ನಲಿಯೋಣ" ... "ಕಾಡಿಗೆ ಹೋಗೋರಿಗೆ ಉಡಿಗೆ, ತೊಡಿಗೆ ಎಲ್ಲ ಯಾಕೆ? ಕಾಡಿನಲ್ಲಿ ಮನ ಒಲಿದಾಗ ಮಾಯ ಹರಿಯುತ್ತೆ." ಎಂಬ ಕೊರವಂಜಿಯೊಂದಿಗೆ ನಡೆಸಿದ 'ಮಂಗಳ ಸಂಭಾಷಣೆ'ಯಲ್ಲಿ ರಾ.ಶಿ.ಯವರ ಅಧ್ಯಾತ್ಮದ ಒಲವು ಹಾಗೂ ಇನ್ನು ಇದೆಲ್ಲವೂ ಸಾಕು ಎಂಬ ನಿಲುವಿಗೆ ತಲುಪಿದ ನಿರ್ಧಾರದ ಮನ, ಬಹಿರಂಗಗೊಂಡಿದೆ. ವಾಚಕರು ಮುಂಗಡವಾಗಿ ಕೊಟ್ಟ ಹಣವನ್ನು ಉಳಿಸಿಕೊಳ್ಳದೇ ಹೊತ್ತಗೆಯ ರೂಪದಲ್ಲಿ ಅಥವಾ ಅವರಿಷ್ಟದಂತೆ ಹಣದ ರೂಪದಲ್ಲೇ ಹಿಂತಿರುಗಿಸುವ ವ್ಯವಸ್ಥೆಯೂ ಮಾಡಿದರು. ಉಳಿಸಿಕೊಂಡಿದ್ದು ವಾಚಕರ 'ಒಲವಿನ ಋಣ' ಮಾತ್ರ..

'ಕೊರವಂಜಿ' ನಿಂತರೂ ಅದು ಸೃಷ್ಟಿಸಿದ ಹಾಸ್ಯ ಪರಂಪರೆ ನಿರಂತರವಾಗಿ ಸಾಗುತ್ತಿದ್ದು, ಕನ್ನಡದ ಎಲ್ಲಾ ಪತ್ರಿಕೆಗಳಿಗೂ, ಸಾಹಿತ್ಯ ಸಮ್ಮೇಳನದ ಗೋಷ್ಠಿಗಳಿಗೂ ಮತ್ತು ಆ ನಂತರದ ದಿನಗಳಲ್ಲಿ ಮೇಲಿಂದ ಮೇಲೆ, ಎಲ್ಲೆಂದರಲ್ಲಿ ನಡೆಯುವ ಹಾಸ್ಯ ಕಾರ್ಯಕ್ರಮಗಳಿಗೂ, ಅದು ಹಬ್ಬಿ ಹರಡಿಕೊಂಡು ನಿಂತಿರುವುದು ಗಮನಾರ್ಹ. ಬೆಂಗಳೂರಿನಲ್ಲಿ ವರ್ಷಕ್ಕೊಮ್ಮೆ ನಿಗದಿತ ದಿನಗಳಂದು ಹಾಸ್ಯ ಸಾಹಿತಿಗಳ ಹೆಸರಿನಲ್ಲಿ ನಡೆಯುವ ಹಾಸ್ಯೋತ್ಸವ, ಹಾಸ್ಯಮೇಳಗಳಲ್ಲಿ, ಹಾಗೂ ರಾಜ್ಯದ ಮೂಲೆ ಮೂಲೆಗಳಲ್ಲಿ ಏರ್ಪಡುವ ಹಾಸ್ಯ ಸಂಕ್ರಮಣ, ಹಾಸ್ಯಧಾರೆ, ನಗೆಹಬ್ಬ, ಮುಂತಾದವುಗಳಲ್ಲಿ, ಈಗಲೂ ರಾಶಿಯವರ ತಮಾಷೆ–ತುಣುಕುಗಳು, ಹಾಸ್ಯದ ಹೇಳಿಕೆಗಳು, ಇತರರ ಹಾಸ್ಯ ಚುಟುಕುಗಳೊಂದಿಗೆ ವೇದಿಕೆಗಳ ಮೇಲೆ ಮಂದಹಾಸದ ಮಾತಿನೊಡನೆ ಮೂಡಿ, ಕೇಳುಗರ ಬಾಯಿಗಳಲ್ಲಿ ಗಹಗಹಿಸುತ್ತವೆ. ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಮತ್ತು ಕೆಲವು ನಗರ ಪತ್ರಿಕೆಗಳಲ್ಲಿ ಪ್ರಕಟವಾಗುವ; ಛೂ ಬಾಣ, ಚಿನಕುರುಳಿ, ವಂಡರ್‌ಗಣ್ಣು, ಅನ್ಯಾರ್ಥಕೋಶ, ಅಪರಂಜಿ ಕಿಡಿ, ಹಿರಿಯ ಕವಿಗಳ ಕವನಗಳನ್ನನುಸರಿಸಿ ಬರೆಯುವ ಅಣಕುವಾಡು ಅಥವಾ ಕೆಣಕುವಾಡು ಪದ್ಯಗಳು_ಇತ್ಯಾದಿ ಇತ್ಯಾದಿಗಳೆಲ್ಲವೂ 'ಕೊರವಂಜಿ' ಕಲಿಸಿ ಕೊಟ್ಟ ಕಿಡಿಪಾಠಗಳೇ ಇರಬಹುದು. ಅದೇ ಮಾದರಿಗಳೇ.

ಹಾಸ್ಯವನ್ನೇ ಸಾಧನವಾಗಿಟ್ಟುಕೊಂಡು "ಲೇಖನಗಳು ಹಾಗೂ ವ್ಯಂಗ್ಯ ಚಿತ್ರಗಳಿಗಾಗಿಯೇ ಮೀಸಲಾಗಿದ್ದ ಇದು ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ಭಾರತದಲ್ಲಿಯೇ ವಿಶಿಷ್ಟವಾದ ಒಂದು ಪತ್ರಿಕೆ" ಎಂಬುದು ಪತ್ರಕರ್ತ ಹಾಗೂ ವಾರಪತ್ರಿಕೆಯ ಸಂಪಾದಕರಾಗಿದ್ದ ದಿ. ಬಿ.ವಿ. ವೈಕುಂಠರಾಜು ಅವರ ಹೇಳಿಕೆ.

ಟಿ. ಸುನಂದಮ್ಮನವರು ಕೊನೆಯ ಸಂಚಿಕೆಯಲ್ಲಿ ಬರೆದಿರುವ ಪ್ರಕಾರ ಈ ಕೊರವಂಜಿ, "ಕನ್ನಡ ತಾಯಿಯ ನಗೆ ಮಗಳಾಗಿ, ಕನ್ನಡಿಗರ ಮನಮನೆಗಳನ್ನು ಅರಳಿಸಿ ನಗಿಸಿದಳು. ಸಮಾಜದ ಕುಂದು ಕಲ್ಮಶಗಳಿಗೆ ಹಾಸ್ಯದ ಹೊದಿಕೆ ಹೊದಿಸಿ ಜನತೆಯ ಎದುರಿಗಿಟ್ಟಳು. ನಗೆಯ ಚೌಕಟ್ಟಿನಲ್ಲಿ ಸಮಾಜದ ಓರೆಕೋರೆಗಳಿಗೆ ಕನ್ನಡಿ ಹಿಡಿದಳು. ತಪ್ಪು-ಒಪ್ಪುಗಳ ಕಹಿ ಗುಳಿಗೆಗೆ ವಿನೋದದ ಸಕ್ಕರೆ ಮುಸುಕಿಟ್ಟು ಉಣ ಬಡಿಸಿದಳು. ತಿಳಿಹಾಸ್ಯದ ಕಲ್ಲುಸಕ್ಕರೆ ಪಾನಕ ಕುಡಿಸಿದಳು. ಕನ್ನಡ ಮಕ್ಕಳ ಮನೆಮಾತಾದಳು".

ಇದು ಕನ್ನಡದ ಹಾಸ್ಯ ಸಾಹಿತ್ಯದ ಒಂದು ಪತ್ರಿಕೆಯ ಸಂಪಾದಕರಾಗಿ, ರಾ.ಶಿ.ಯವರು ಪತ್ರಿಕೋದ್ಯಮಕ್ಕೆ, ಕನ್ನಡಿಗರಿಗೆ, ಕನ್ನಡ ಭಾಷೆಗೆ ಸಲ್ಲಿಸಿದ ಬೃಹತ್ ಸೇವೆ. ಅವರ ಈ ಕನ್ನಡ ಸೇವೆ, ಅದ್ಭುತವಾದುದು, ಅನುಪಮವಾದುದು. ನಗುತ್ತಲೇ ಸಮಾಜವನ್ನು ಎಚ್ಚರಿಸುವುದಕ್ಕೆ ಮಾದರಿಯಾದುದು.

**ಸಾಹಿತ್ಯ ಕೃತಿಗಳ ರಚನೆ:**

ಇವರು ಬರೆದ ಒಟ್ಟು ಪ್ರಕಟಿತ ಕೃತಿಗಳ ಸಂಖ್ಯೆ 40. ಯೇಸುಕ್ರಿಸ್ತನ ಕುರಿತ ಒಂದು ಅಪ್ರಕಟಿತ ಕೃತಿಯೂ ಸೇರಿದರೆ 41. ಇದರಲ್ಲಿ ಐದು ಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿವೆ. ಮನುಷ್ಯನ ಭಾವನೆಗಳು, ಕನಸುಗಳು, ಸಮಾಜ ಸುಧಾರಣೆ, ರಾಜಕೀಯ ವ್ಯವಸ್ಥೆಯಲ್ಲಿ ಸುಧಾರಣೆ, ಮೂಢ ನಂಬಿಕೆಯ ವಿರುದ್ಧ ವಿಡಂಬನೆ, ವೈದ್ಯ ಜಗತ್ತು, ರೋಗಿ-ವೈದ್ಯರ ನಡುವಿನ ಅತ್ಮೀಯತೆ, ಮಾನವೀಯ ಕಳಕಳಿ, ದೆವ್ವದ ಕಥೆಗಳು, ವಿಜ್ಞಾನ, ಜಾನಪದ, ಭೌತಶಾಸ್ತ್ರ, ಮನಸ್ಸು, ಆತ್ಮ, ಆನಂದದ ಗಳಿಕೆ _ ಈ ಎಲ್ಲವೂ ಇವರ ಕೃತಿಗಳಿಗೆ ವಸ್ತು-ವಿಷಯಗಳಾದವು. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ, ರಾ.ಶಿ.ಯವರು ಬರೆಯದೇ ಬಿಟ್ಟ ವಿಷಯಗಳಿಲ್ಲ.

ಕವನ, ಅಣಕುವಾಡುಗಳು, ಕಥೆಗಳು, ಕಾದಂಬರಿ, ವೈಚಾರಿಕ ಲೇಖನಗಳು, ನಗೆ ಲೇಖನಗಳು, ಆರೋಗ್ಯ, ವೈದ್ಯಕೀಯ, ವ್ಯಕ್ತಿ ಚಿತ್ರಣ,

ಮುಂತಾಗಿ ಹಲವು ಪ್ರಕಾರಗಳ ಪುಸ್ತಕಗಳು ಇವರ ರಚನೆ. ಇವರ ಬರಹಗಳಲ್ಲಿ ಪ್ರಧಾನ ಸ್ರೋತವಾದದ್ದು ಅನುಕಂಪ. ಮಾನವೀಯತೆ, ಆರೋಗ್ಯಕರ ತಿಳಿ ಹಾಸ್ಯ. ಅತೀವ ಜೀವನ ಶ್ರದ್ಧೆ ಇರುವ ಲೌಕಿಕತೆ ಇವರ ಕನ್ನಡ ಕೃತಿಗಳಲ್ಲಿ ಕಾಣ ಬರುವ ಪ್ರಧಾನ ಲಕ್ಷಣ.

ಮುನ್ನುಡಿ ಬರೆದವರೇ ಬೇರೆ, ಲೇಖಕರೇ ಬೇರೆ ಎಂಬಂತೆ, ಗೊತ್ತಿರುವವರೂ ಒಮ್ಮೆ ಅನುಮಾನ ಪಡುವಂತೆ, ಇವರ ಕೆಲವು ಪುಸ್ತಕಗಳ ಮುಖಪುಟದಲ್ಲಿ ರಾಶಿ ಮತ್ತು ಡಾ. ಎಂ. ಶಿವರಾಂ ಎಂಬ ಹೆಸರುಗಳ ಪ್ರಕಟಣೆ ಇದೆ. ಅಂದರೆ ಇದು, ತಮ್ಮ ಆ ಬರವಣಿಗೆಯಿಂದ ಹೊರ ನಿಂತು, ಒಬ್ಬ ಓದುಗನಾಗಿ, ವಿಮರ್ಶಕನಾಗಿ, 'ನಾನು'ಯಿಂದ ಬಿಡುಗಡೆ ಮಾಡಿಕೊಂಡು ಮಾತಾಡುವ ಮುನ್ನುಡಿ. ಸಾಹಿತ್ಯ ಕೃತಿಗಳ ಕೃತಿಕಾರ ರಾ.ಶಿ.ಯವರಾದರೆ ಮುನ್ನುಡಿ ಬರೆಯುವವರು ಡಾ. ಎಂ. ಶಿವಾರಾಂ ಅವರು. ಮನೋವಿಜ್ಞಾನ ಅಥವಾ ವೈದ್ಯಕೀಯಕ್ಕೆ ಸಂಬಂಧಿಸಿದ ಕೃತಿಗಳ ರಚನೆಕಾರ ಡಾ. ಎಂ. ಶಿವಾರಾಂ ಅವರಾದರೆ ಮುನ್ನುಡಿ ರಾ.ಶಿ.ಯವರದು. ಎರಡೂ ರೀತಿಯ ಪುಸ್ತಕಗಳಲ್ಲಿ ಲೇಖಕರ ಮಾತು ಪ್ರತ್ಯೇಕ. ಈ ರೀತಿ ತಮ್ಮ ಪುಸ್ತಕಕ್ಕೆ ಅದು ತಾವು ಬರೆದುದೇ ಅಲ್ಲವೆಂಬ ಭಾವನೆಯಿಂದ ಮುನ್ನುಡಿಯನ್ನೂ, ಹಾಗೂ ಲೇಖಕನ ಮಾತನ್ನೂ ಬರೆದಿರುವವರು ಕನ್ನಡದಲ್ಲಿ ಬಹುಶಃ ರಾ.ಶಿ.ಯವರೊಬ್ಬರೇ ಇರಬಹುದು. 'ಕೆಣಕೋಣಬಾರ'ದ ಕೃತಿಕಾರ ರಾ.ಶಿಯವರು. ಅದಕ್ಕೆ ಮುನ್ನುಡಿ ಬರೆದವರು ಡಾಕ್ಟರ್ ಎಂ. ಶಿವರಾಂ. 'ಮನೋನಂದನ' ಕೃತಿಗೆ ರಾ.ಶಿ.ಯವರ ಮುನ್ನುಡಿ, ಬರೆದವರು ಅವರ ಮಾನ್ಯ ಮಿತ್ರ ಡಾಕ್ಟರ್ ಎಂ. ಶಿವರಾಂ ಅವರು.

**'ತುಟಿ ಮೀರಿದುದು':** ರಾ.ಶಿ.ಯವರ ಈ ಮೊದಲ ಸಂಕಲನ ಪ್ರಕಟವಾದದ್ದು **1939**ರಲ್ಲಿ. ಇದು ಲಘು ಹರಟೆ ಮತ್ತು ಕವನಗಳ ಗುಚ್ಛ. ಈ ಪುಸ್ತಕದ ಮುಖ ಪುಟದ ಮೇಲೆ ಒಂದು ದೊಡ್ಡ ಕತ್ತರಿ. ಅದರ ಹಿಡಿಕೆಯಲ್ಲೊಂದು ಗ್ರಂಥ. ಮುಂದೆ ರಾಶಿ ಎಂಬ ಬರಹ. ಹೀಗೆ ತಮ್ಮನ್ನು ತಾವೇ ಮುಖ ಪುಟ ಚಿತ್ರದಲ್ಲೇ ಗೇಲಿ ಮಾಡಿಕೊಂಡಿರುವುದಲ್ಲದೇ,. "ಈ ಪುಸ್ತಕದಲ್ಲಿ ಇಂಗ್ಲಿಷ್ ಮೂಲಗಳಿಂದ ಧಾರಾಳವಾಗಿ ಕತ್ತರಿ ಪ್ರಯೋಗ ನಡೆಸಿ ಬರೆದ ಲೇಖನಗಳಿವೆ" ಎಂದು ಅವರೇ ಹಿನ್ನುಡಿಯಲ್ಲಿ ಸಾರಿಕೊಂಡಿರುವುದೂ ಸತ್ಯ.'ಸ್ವತಂತ್ರ್ಯ ಶೈಲಿ', ಕನ್ನಡಿ ಒಳಗಿನ ಗಂಟು, ಹಾರ್ಮ್ಯನಿಯಂ ಗಾನ, ಆಶಾ ಕಾಕಿ, ಕುಪ್ಪಣ್ಣ,

ಸೋಪಿನಶಾಮಿ ರಾವಬಹದ್ದೂರನಾಗಿದ್ದು, ಅಮ್ಮಣ್ಣಿ, ಚೆಲುವನ ಚೆನ್ನ, ಮುಂತಾಗಿ ಇದರಲ್ಲಿರುವ ಲೇಖನಗಳು ಉತ್ತಮ ನಗೆಸಾಹಿತ್ಯದ ಮಾದರಿಗಳು.

ಕಾವ್ಯದ ಹೊಳಹು, ಚಿಂತನೆ, ಪದಗಳ ಚಮತ್ಕಾರ, ಅರ್ಥ, ಲಯ, ಛಂದಸ್ಸು, ಮಾತ್ರೆ, ಕಟ್ಟು, ನಿಯಮ, – ಈ ಯಾವುದೂ ಇಲ್ಲದೇ ಬರೆದ ಗದ್ಯ ವಾಕ್ಯಗಳನ್ನೇ, ಎಲ್ಲೆಂದರಲ್ಲಿ ಕತ್ತರಿಸಿ ಪದ್ಯದ ನಮೂನೆಯಲ್ಲಿ ಒಂದರ ಕೆಳಗೊಂದು ಬರೆದಿಟ್ಟರೆ ಕವಿತೆಯಾಗುವುದಿಲ್ಲ, ಎಂಬುದನ್ನು ಲೇವಡಿ ಮಾಡಿ ಬರೆದಿರುವ ಲೇಖನ, 'ಸ್ವತಂತ್ರ್ಯ ಶೈಲಿ'. ಅದು ನವ್ಯ ಕಾವ್ಯಗಳ ಸೃಷ್ಟಿಯ ಕಾಲ. ಇಂಥ ಪದ್ಯಗಳು ಹೇರಳವಾಗಿ ಹೊರ ಬರುತ್ತಿದ್ದವು. 'ಯುವಕ ಕವಿ ಸಮ್ಮೇಳನ'ವೊಂದರಲ್ಲಿ ತಮ್ಮನ್ನೇ ತಾವು ಕವಿ ಎಂದು ಭಾವಿಸಿದವರು ಓದುತ್ತಿದ್ದ ಪದ್ಯಗಳನ್ನು ಕೇಳಿಸಿಕೊಂಡ ಲೇಖಕ, ಇವಕ್ಕೆ ಕವಿತೆಯ ಸ್ವರೂಪವೇ ಇಲ್ಲವಲ್ಲ ಎಂದು ಅನುಮಾನಿಸಿದಾಗ, ಪರಿಚಿತ ಸದಸ್ಯನೊಬ್ಬ,"ಇದನ್ನು ಕವಿಗಳಿಗೆ, ಪ್ರತಿಭಾಶಾಲಿಗಳಿಗೆ ಬಿಟ್ಟು ಬಿಡು. ಮೊದಲಿನಂತೆ ಕಟ್ಟು ನಿಯಮಗಳಿಗೆ ಹೆಚ್ಚು ಪ್ರಾಧಾನ್ಯ ಕೊಡದೆ, ಹೇಳಲಿರುವ ವಿಷಯವನ್ನು ಕವನಾಶಕ್ತಿಯಿಂದ ಬೆಳಗಿಸಿ ಬರೆಯುವುದು ಈಗಿನ ನೂತನ ಪದ್ಧತಿ" ಎಂದು, ಈತ ಏನೂ ಗೊತ್ತಿಲ್ಲದ ಪಾಮರನೆಂಬಂತೆ ಹೇಳುತ್ತಾನೆ. ಆಗ ಹುಟ್ಟಿದ ಕೋಪದಲ್ಲಿ ಆ ಮಾತುಗಳನ್ನೇ ಸವಾಲಾಗಿಸಿಕೊಂಡು, ಒಂದೇ ದಿನದಲ್ಲಿ, ಕಣ್ಣಿಗೆ ಬಿದ್ದುದನ್ನೆಲ್ಲ ಬರೆದು ಪದ್ಯವಾಗಿಸಿ ಬಿಡುತ್ತಾರೆ ಈ ಲೇಖಕ, ಸ್ವತಂತ್ರ ಶೈಲಿಯಲ್ಲಿ, 'ಬಿದಿ–ನಾಯಿ (ಬೀದಿ ಅಲ್ಲ)' ಆಲದ ಮರ(ಆಲದ ಚಿತ್ರದೊಳಗೆ ತುಂಬಿದ ಅಕ್ಷರಗಳ ಪದ್ಯ), ಊರೂರ ಸಂತೆ, ಶಾಲೆಯ ಪದ್ಯ, ಮುಂತಾಗಿ ಹಲವಾರು ಕವನಗಳು ಒಂದೇ ದಿನದಲ್ಲಿ ಪುತಪುತನೆ ಉದುರಿ ಬಿಡುತ್ತವೆ ಕಾಗದದ ಮೇಲೆ.

> "ಮೇರಿ ಎಂಬುದೊಂದು ನಾಯಿ/
> ಜಾನಿ ಎಂಬುದೊಂದು ನಾಯಿ
> ತಾರಾಚಂದ್ರರಂತೆ ನಲಿದು ಬೊಗಳುತ್ತಿದ್ದವು.
> ಅಕಟಕಟಾ ಒಂದು ದಿನ
> ಮೇರಿ ಎಂಬ ನಾಯಿಯದು
> ಮೋಟಾರ್ ಗಾಡಿ ಕೆಳಗೆ ಸಿಕ್ಕಿ
> ––––––– ಬಿಟ್ಟಿತು.

ಮುಂದೆ ಪೋದ ಮೋಟಾರ್ ನೋಡಿ

ಜಾನಿ ಎಂಬ ನಾಯಿ ಓಡೆ

ದೂರಲಿದ್ದ ಕವಿಯು ಇದನು ಬರೆಯುತ್ತಿದ್ದನು/".. ಎಂಬುದು ನಾಯಿಯ ಬಗ್ಗೆ ಬರೆದ ಪದ್ಯವಾದರೆ; ಕೆಲಸಕ್ಕೆ ಹೋಗಹತ್ತಿದಾಗ, ಮಳೆ ಬಂದು ಛತ್ರಿಯ ನೆನಪಾಗಿ, "ಉದ್ಧೃತ ವರ್ಷ ಸಂರಕ್ಷಣೇ" ಎಂಬ ಯಾರಿಗೂ ಅರ್ಥವಾಗದ ಸಂಸ್ಕೃತ ಶೀರ್ಷಿಕೆ ಕೊಟ್ಟು, ಛತ್ರಿಯ ಆಕಾರದೊಳಗೆ ಬಾಯಿಗೆ ಬಂದ ಸಾಲುಗಳನ್ನು ಬರೆದು ಇನ್ನೊಂದು ಕವಿತೆಯಾಗಿಸಿ ಬಿಡುತ್ತಾರೆ. ಸಮ್ಮೇಳನದ ಎರಡನೇ ದಿನ, ದೊಡ್ಡ ಮನುಷ್ಯರೆನಿಸಿದ ನಾಲ್ವರು ಆಯ್ಕೆ ಮಾಡಿದ, ಪ್ರತಿಭಾಶಾಲಿ ಕವಿಗೆ, ಅರಸನ ಪಾರಿತೋಷಕವನ್ನು ಕೊಡುವುದಾಗಿ ಘೋಷಿಸಿದಾಗ, ಆ ಪಾರಿತೋಷಕವು ಮೇಲಿನ ಕವಿತೆಗಳನ್ನು ಬರೆದ ಲೇಖಕನಿಗೇ ಬರುತ್ತದೆ.

ಪದ್ಯ ಬರೆದ ಕವಿಗೆ ಹಣ ಕೊಡಬಹುದಾದರೆ, ಒಂದು ರೂಪಾಯಿ ಖರ್ಚು ಮಾಡಿ ಚಿತ್ರ ಬರೆದ ಚಿತ್ರಕಾರನಿಗೆ ಸಾವಿರಾರು ರೂಪಾಯಿ ಕೊಡಬಹುದಾದರೆ, ನೀವು ಹಿಡಿದ ಕಬ್ಬಿನ ಜಲ್ಲೆ, ನನ್ನ ಕಣ್ಣಿಗೆ ತಗುಲದಿದ್ದರೂ ತಗುಲಿದೆ ಎಂದೋ, ಎಸೆದ ಬಾಳೆ ಹಣ್ಣಿನ ಸಿಪ್ಪೆ ಮೇಲೆ ನಾನು ಜಾರದಿದ್ದರೂ ಜಾರಿ ಬಿದ್ದೆನೆಂದೋ ನಟಿಸಿದರೆ ಅದೂ ಕಲೆಯೇ. ಆ ಕಲೆಗೆ ನಿಮ್ಮಿಂದ ಹಣ ಪಡೆದರೆ ತಪ್ಪಿಲ್ಲ ಎನ್ನುವ 'ಚೆಲುವನ ಚೆನ್ನ' ಒಂದು ರೀತಿಯಾದರೆ, ಸೋಪಿನ ಶಾಮಿ, ಕುಪ್ಪಣ್ಣ, ಅಮ್ಮಣ್ಣಿ, ಮುಂತಾದವರು ಇನ್ನಿತರ ರೀತಿಯ ವಿಶೇಷ ಗುಣಲಕ್ಷಣಗಳಿರುವ ವ್ಯಕ್ತಿ ವಿಚಿತ್ರಗಳು. ಸಾಮಾನ್ಯರು ಗಮನಿಸದ ಕೆಲವು ಅಂಶಗಳನ್ನು ಈ ಲೇಖಕ ಈ ವ್ಯಕ್ತಿಗಳಲ್ಲಿ ಕಾಣುತ್ತಾರೆ. ಅಂಥ ವ್ಯಕ್ತಿಗಳ ಲಕ್ಷಣದ ವರ್ಣನೆಯೇ ಹಾಸ್ಯಭರಿತ.

ಕುಪ್ಪಣ್ಣನ ಕುರಿತ ಈ ವರ್ಣನೆ, "ಕುಪ್ಪಣ್ಣ, ಹತ್ತು ಹದಿನಾರು ವರ್ಷದ ಪ್ರಾಯ ತುಳುಕುತ್ತಿರುವ ನವಯುವಕ. ಸುಮಾರು ಆರೇಳು ಅಡಿ ಎತ್ತರ. ಇದೇನಿದು? ಒಂದು ಅಡಿ ಎತ್ತರ ಹೆಚ್ಚು ಕಡಿಮೆಯಾಗಬಹುದೇ? ಎನ್ನಬೇಡಿ. ತಲೆ ತಗ್ಗಿಸಿ ವಿನಯದಿಂದ ನಡೆಯುವಾಗ ಅವನು ಆರಡಿ ಎತ್ತರ. ಸ್ವಲ್ಪ ಜಂಭ ಬಂದಾಗ, ಸಾಹಸಿಕ ಕಾರ್ಯ ಮಾಡಿದ್ದೇನೆಂದು ತಿಳಿದಾಗ ಏಳಡಿ ಎತ್ತರ ಆಗುತ್ತಿದ್ದ." (ಕುಪ್ಪಣ್ಣ).

ಶ್ಯಾಮಣ್ಣ, ರಾಮಣ್ಣ, ಕಾಮಣ್ಣ ಎಂಬಂತೆ ಪುಲ್ಲಿಂಗವನ್ನು ಸೂಚಿಸುವ ಪದವಾಗಿ ಕಂಡ, ಈ ಲೇಖಕರ ಪರಿಚಯಕ್ಕೆ ಬಂದ ಒಂದು ಕನ್ಯಾರತ್ನದ ಹೆಸರು 'ಅಮ್ಮಣ್ಣ'. ಆಕೆಯ ಬಗೆಗಿನ ವರ್ಣನೆ ಹೀಗಿದೆ, "ಅಮ್ಮಣ್ಣನ ಮುಖವೇ ಹೇಳುವಂತೆ, ಕಾವಲಿ ಮೇಲೆ ದೋಸೆ ಬಿಟ್ಟ ಹಾಗೆ ದುಂಡಗಿತ್ತು. ಅಲ್ಲಲ್ಲೆ ಕಲ್ಲು ಮುಳ್ಳು ಹುಯ್ದ ಕಳೆ. ಅಮ್ಮಣ್ಣ ಹುಡುಗಿ ಆಗಿದ್ದಾಗ, ಸ್ಕೂಲು ಇನ್ಸ್‌ಪೆಕ್ಟರು 'ನಿನ್ನ ಮೂಗು ಬಲು ಚೆನ್ನು' ಎಂದಿದ್ದರಂತೆ. ಅಂದಿನಿಂದ ಮೂಗನ್ನೇ ನೋಡಿ ನೋಡಿ ಅವಳಿಗೆ ಮೆಳ್ಳೆಗಣ್ಣಾಗಿತ್ತು"

ಈ ಲೇಖಕ ತಮ್ಮನ್ನು ತಾವೇ ಟೀಕಿಸಿಕೊಳ್ಳಲೂ ಹಿಂಜರಿಯುವವರಲ್ಲ. "ಕನ್ನಡಿಯೊಳಗಿನ ಗಂಟು' ಎಂಬ ಲೇಖನದಲ್ಲಿ ರಾ.ಶಿ.ಯವರು, ಹುಚ್ಚಾಸ್ಪತ್ರೆಗೆ ಒಬ್ಬ ಹುಚ್ಚನನ್ನು ನೋಡಿ ಬರಬೇಕಾದ ಸಂದರ್ಭ ಬರುತ್ತದೆ. ಕನ್ನಡಿಯ ಮುಂದೆ ನಿಂತು ನೋಡುವಾಗ ಆ ಹುಚ್ಚನ ಹುಚ್ಚು ಹೆಚ್ಚುವುದನ್ನು ಗಮನಿಸಿದ ರಾ.ಶಿ.ಯವರು ಮನೆಗೆ ಬಂದ ಮೇಲೆ, ಕನ್ನಡಿಯಲ್ಲಿ ಹುಚ್ಚನ್ನು ಉದ್ರೇಕಿಸುವಂತಹದ್ದೇನಿದೆ ಎಂದು ಪರಿಶೀಲಿಸಲು ಕನ್ನಡಿಯ ಮುಂದೆ ಐದು ನಿಮಿಷ ದಿಟ್ಟಿಸಿ ನೋಡುತ್ತೇನೆ ಎಂದು ನಿಲ್ಲುತ್ತಾರೆ. ಕನ್ನಡಿಯಲ್ಲಿ ಕಂಡ ತಮ್ಮನ್ನು ಅವರು ವಿವರಿಸಿರುವ ಪರಿ ಇದು;

"ಪಾಪಾಸಿನಂತಹ ಮುಖ, ಮುಖಕ್ಕಿಂತಲೂ ಅಸಹ್ಯವಾದ ಅಗಲವಾದ ಹಣೆ. ವಿದ್ಯುಚ್ಛಕ್ತಿಯ ಊರಿನಲ್ಲಿ ಸೀಮೆ ಎಣ್ಣೆ ಲಾಂದ್ರದಂತೆ ಪ್ರಕಾಶಮಾನವಾದ ಕಣ್ಣುಗಳು. ದೊಡ್ಡದಾದ ಸುಟ್ಟ ಬದನೇಕಾಯಿಯಂತೆ ಇರುವ ಮೂಗು, ಊರಗಲ ಬಾಯಿ, ಬಾಯಿಂದ ಹೊರ ಬೀಳುತ್ತಿರುವ, ಹೊರಬಿದ್ದಿರುವ ದಂತಮಾಲೆ. ನೋಡುತ್ತಾ, ನೋಡುತ್ತಾ ಕಾಲಿನಲ್ಲಿರುವ ಪಾಪಾಸನ್ನು ಕಳಚಿಕೊಂಡು ಕೊಡೋಣವೇ ಎನಿಸಿತು. ಅರೆ, ಆದರೆ ಅದು ನನ್ನದೇ ಮುಖ! ಆಗ ತಿಳಿಯಿತು ನನಗೆ ಮಕ್ಕಳು ನನ್ನನ್ನು ಕಂಡಾಗ ಕಿರುಚಿಕೊಳ್ಳುವುದರ ಕಾರಣ. ಆ ಕಾರಣದಿಂದಲೇ ಇರಬೇಕು ನನಗೆ ನನ್ನಲ್ಲಿರುವ ಮೋಹವು ನನ್ನಾಕೆಗೆ ಇಲ್ಲದಿರುವುದು." ಎಂಬ ಒಂದು ವರ್ಣನೆಯೇ ಯಾರಿಗಾದರೂ ನಗೆ ಉಕ್ಕಿಸುವಂಹದು.

ಹಲವು ವರ್ಷಗಳು ತಲೆಯಲ್ಲಿ ಕುಳಿತು ಕೊರೆದು ಆಲೋಚನೆಗಳಿಂದ ಗಟ್ಟಿಯಾಗಿ, ಹರಳುಗೊಂಡ ವಿಷಯಗಳು, ಮೊದಲ ಕೃತಿಯಲ್ಲಿ ಹೊರಬರುವುದರಿಂದ, ನಿಜವಾದ ಸಾಹಿತಿಯ ಪ್ರಥಮ ಕೃತಿಗೆ ತೂಕ ಹೆಚ್ಚು.

ಅಂಥ ನೆಗೆ ಮೌಲ್ಯವುಳ್ಳದ್ದು, ಸಶಬ್ದವಾಗಿ ನಗು ಉಕ್ಕಿಸುವಂಥ ಲೇಖನಗಳನ್ನೊಳಗೊಂಡದ್ದು ಈ ಪುಸ್ತಕ, 'ತುಟಿ ಮೀರಿದುದು'

**ಕೆಣಕೋಣುಬಾರ (1957)**

ಡಾ. ಎಂ. ಶಿವರಾಂ ಅವರ ಮುನ್ನುಡಿಯೊಂದಿಗೆ ರಾ.ಶಿ. ಬರೆದ ಇಪ್ಪತ್ತೊಂಬತ್ತು ಕವಿತೆಗಳಿರುವ ಪುಸ್ತಕವಿದು. ಎಂ. ಶಿವರಾಂ ಅವರ ಮುನ್ನುಡಿಯಲ್ಲಿ; ಯಾವುದೇ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಲು, ಸಮಾಜದಲ್ಲಿ ಸಂಸಾರದಲ್ಲಿ ತನ್ನ ಎಳೆತನದಿಂದಲೂ ಬೆಳದು ಬಂದು ರಾಗ–ದ್ವೇಷಗಳನ್ನೆಲ್ಲ ಸಮನ್ವಯಗೊಳಿಸಿಕೊಂಡು, ಮನದೊಳಗಿನ ನಂಜನ್ನು ಪರಿಹರಿಸಿಕೊಳ್ಳಬೇಕು. ಈ ನಂಜಿನ ಪರಿಹಾರಕ್ಕೆ ಶಾಸ್ತ್ರೀಯವಾದ ಕೆಣಕುವಾಡು, ಅಣಕವಾಡು, ಕುಹಕಿಡಿ, ವ್ಯಂಗ್ಯಹಾಡುಗಳು ಔಷಧಿಗಳಾಗುತ್ತವೆಂಬ ಹಾಗೂ ಸಮಾನ ಮನಸ್ಕರು ಇದನ್ನು ಸೇವಿಸಿದರೆ ನೆಮ್ಮದಿ ಖಂಡಿತವೆಂದು ಹೇಳಿದ್ದಾರೆ. ಈ ನಂಬಿಕೆಯಿಂದಲೇ ರಾ.ಶಿ.ಯವರು ಈ ಹಾಡುಗಳನ್ನು ಬರೆದಿದ್ದಾರೆ. ಓದುಗರು ಈ ಹಾದಿಯಲ್ಲಿ ನಡೆದು, ಮನಸ್ಸಿನಲ್ಲಿರುವ ಸರ್ವ ನಂಜುಗಳನ್ನು ಪರಿಹಾರ ಮಾಡಿಕೊಂಡು ನೆಮ್ಮದಿಯಿಂದಿರಲಿ ಎಂಬುದು ಅವರ ಹೃತ್ಪೂರ್ವಕ ಪ್ರಾರ್ಥನೆ. ಇದು ಸಾಹಿತಿಯಾಗಿ, ವೈದ್ಯರಾಗಿ ಅವರು ಕಂಡುಕೊಂಡ ಹೊಸದೊಂದು ಔಷಧ. ಮಾಡಿರುವ ಪ್ರಯೋಗ ಓದುಗ ರೋಗಿಗಳ ಮೇಲೆ. ಓದುಗರಲ್ಲಿ ಮೂಡುವ ಮುಗುಳುನಗೆಯೇ ಈ ಪ್ರಯೋಗದ ಪ್ರಥಮ ಪರಿಣಾಮ.

ಮೂಲ ಕವಿಗಳು ಕಂಡುಂಡು ಆಸ್ವಾದಿಸಿದ ಪ್ರಕೃತಿಯನ್ನು, ಪ್ರೇಮವನ್ನು, ಅಥವಾ ಕಾಣದ ಶಕ್ತಿಯ ಚಮತ್ಕಾರಗಳನ್ನು, ಹೊಸತೊಂದು ರೀತಿಯಲ್ಲಿ ನೋಡಬಹುದು, ಹೊಸ ವಿಷಯಗಳಿಗೆ ಅಳವಡಿಸಬಹುದು, ಹಾಸ್ಯ ಪ್ರಜ್ಞೆಯಿಂದ ಪರಿಕಿಸಿ ಹಾಡಬಹುದು, ಪ್ರತಿ ದಿನ ಕಾಣುವ ಹಲವು ಸಂಗತಿಗಳನ್ನು ನಗು ನಗುತ್ತಲೇ ಅನುಭವಿಸಲೂ ಬಹುದು ಎಂಬ ಅನಿಸಿಕೆಯನ್ನು ಈ ಸಂಕಲನದ ಕವನಗಳು ಮೂಡಿಸುತ್ತವೆ.

ವರಕವಿಗಳಾದ ದ.ರಾ.ಬೇಂದ್ರೆ, ಕುವೆಂಪು, ಕೆ.ಎಸ್. ನರಸಂಹಸ್ವಾಮಿ, ವಿ. ಸೀತಾರಾಮಯ್ಯ ಇವರುಗಳ ಕವನಗಳನ್ನು ಮೂಲವಾಗಿಟ್ಟುಕೊಂಡು, ಆ ಕವನಗಳ ರಾಗ, ಮಾತ್ರೆ, ಶಬ್ದ ಸಂಪತ್ತುಗಳನ್ನು ತಮ್ಮ ಅನುಭದ ವ್ಯಾಪ್ತಿಗೆ ಮತ್ತು ವಿಷಯವ್ಯಾಪ್ತಿಗೆ ಅಳವಡಿಸಿಕೊಂಡಿರುವುದೇ ಈ ಸಂಕಲನದಲ್ಲಿಯ ಕವಿತೆಗಳ ಸೃಷ್ಟಿಯ ವಿಧಾನ. ಪ್ರತಿ ಕವಿತೆಗಳ ರಚನೆಗೆ ತಾವು ಆಧರಿಸಿದ

ವರಕವಿಗಳ ಅನುಮತಿ ಪಡೆದು, ಆ ಮೂಲಕವನಗಳನ್ನೂ ಸಂಪೂರ್ಣವಾಗಿ ಇದರಲ್ಲಿ ಪ್ರಕಟಿಸಿರುವುದು ಅವರ ನೀತಿ–ನಿಯತ್ತಿಗೆ ಕನ್ನಡಿ. ಪಾನ ನಿರೋಧ ಪ್ರದೇಶ, ದಿನನಿತ್ಯದ ಆಗುಹೋಗುಗಳು, ಸಾಲ, ಕರಗ, ಪ್ರೇಮ–ಪ್ರೀತಿ, ರಾಜಕೀಯ. ಮುಂತಾದವು, ಇಲ್ಲಿಯ ಕವಿತೆಗಳ ಬದಲುಗೊಂಡ ವಸ್ತುಗಳಾಗಿವೆ.

ಅಧಿಕಾರದಲ್ಲಿರುವ ರಾಜಕೀಯ ಪಕ್ಷದಲ್ಲಿ ಮುಂದಾಗ ಬೇಕಾದರೆ 'ಜೈಲುವಾಸದ ಅನುಭವ'ವೇ ಅದಕ್ಕೆ ಅಗತ್ಯ ಅರ್ಹತೆ ಎಂದು ಹಿರಿಯ ನಾಯಕರೊಬ್ಬರು ಆಡಿದ ಮಾತಿಗೆ ರಾಶಿಯವರ ಅಂತರಂಗದಲ್ಲಿ ಮೂಡಿದ ಅಣಕವಾಡು, 'ಜೈಲಾಗುವಾ' ಎಂಬುದು. ಕುವೆಂಪುರವರ 'ನಾ ನಿನಗೆ ನೀ ನನಗೆ ಜೇನಾಗುವಾ/ ರಸದೇವ ಗಂಗೆಯಲಿ ಮೀನಾಗುವಾ" ಎಂಬ ಕವನದಲ್ಲಿ, ಪ್ರೇಮದ ಪರಮಾವಧಿಗೆ ತಲುಪಿ, ಶಿವ ಶಿವೆಯರ, ಇಂದ್ರ–ಚಂದ್ರಿಯರ, ರಾಮ ಸೀತೆಯರ, ಕೃಪೆಯಿಂದ ನೋಂಪಿಯ ಸುಧಾರಕ್ಷೆಯನ್ನು ಪಡೆಯುವ ಬಗ್ಗೆ ಹೇಳಿರುವುದನ್ನು ಕಾಣುತ್ತೇವೆ. ಅದೇ ಸಾಲುಗಳ, ಅದೇ ಧಾಟಿಯಲ್ಲಿ ಹೆಣೆದ 'ಜೈಲಾಗುವಾ' ರಾಶಿಯವರದು. "ಜೈಲಿಂದ ಹೊರಬಂದು ಜನಮಂದೆ ಕರೆತಂದು ನವರಾಜಕೀಯದಲಿ ಈಜಾಡುವಾ" ಎನ್ನುವುದು ಇದರ ಪಲ್ಲವಿ. ಆದರೆ 'ಜೈಲಾಗುವಾ'ದಲ್ಲಿ; ರಾಜಕೀಯ ಖೈದಿಗಳಿಗೆ ಜೈಲುವಾಸದಲ್ಲಿ ಸಿಗುವ ಭೋಗ ಜೀವನದ ಅನುಭವ ಪಡೆದು, ಹೊಸ ರಾಜಕೀಯಕ್ಕೆ ಇಳಿದು, "ರಾಮಚಂದ್ರನ ನೆನೆವ ಮಹಾತ್ಮನಂತೆ, ಅವನ ರಕ್ಷೆಯ ಪಡೆದ ನೆಹ್ರೂಜಿಯಂತೆ/ ಅವರ ಹರಕೆಯನೊಸಗೆ ಮಂಚ ಮಾಡಿ, ಅಧಿಕಾರ ಕಸಿದು, ಅವರ ನೋಂಪಿಯ ಸುಧಾರಕ್ಷೆ ಬೇಡಿ/ ನಾ ನೀನು ಅವನೂನು ಜೈಲಾಗುವಾ" ಎಂದು ರಾಜಕೀಯದಲಿ ಮುಂದೆ ಬರುವ ಮಾರ್ಗದ ಬಗ್ಗೆ ಹೇಳಿರುವುದು ಅರ್ಥಬದ್ಧ ತಮಾಷೆ.

"ಜೀವನದ ಪ್ರಗತಿಯಲ್ಲಿ 'ಪ್ಯಾರಾಮೀಸಿಯಂ' ಮೊದಮೊದಲ ಹಂತದ ಏಕಾಣು ಜೀವಿ. ಇದು ಕೊಚ್ಚೆ ನೀರಿನಲ್ಲಿ, ಬಚ್ಚಲ ನೀರಿನಲ್ಲಿ ಹೇರಳವಾಗಿರುತ್ತವೆ. ಇದು ಒಂದೊಡೆದು ಎರಡಾಗಿ ಮಾಡಿಕೊಳ್ಳುವ ಸಂತಾನಾಭಿವೃದ್ಧಿಯು ನಾಲ್ಕುನೂರು ಜನ್ಮಗಳ ನಂತರ ತಟಸ್ಥವಾಗುತ್ತದೆ" ಎಂಬುದನ್ನು ವಿವರಿಸಿರುವ ರಾ.ಶಿ.ಯವರು, ಸುಸ್ತಾದ ಒಂದು 'ಪ್ಯಾರಾಮೀಸಿಯಂ, ಇನ್ನೊಂದು ಅಂತಹ 'ಪ್ಯಾರಾಮೀಸಿಯಂ'ನ್ನು ಕಂಡಾಗ ಅಥವಾ ಆ ಅಣುವಿನಲ್ಲಿ ವಿಶ್ವರೂಪವನ್ನೇ ಕಂಡ ವಿಜ್ಞಾನಿಯು

ಹಾಡಬಹುದಾದ ಸಾಲುಗಳನ್ನು, 'ಪ್ಯಾರಾಮೀಸಿಯಮರು' ಎಂಬ ಕವಿತೆಯಲ್ಲಿ ಹಾಡಿಸಿದ್ದಾರೆ. ಈ ರಚನೆಗೆ ಮೂಲವಾದ ಕವಿತೆ, ವೀ.ಸೀ.ಯವರ, "ಪ್ರಿಯರು".

"ಎನ್ನರಸಿ ನೀನಲ್ಲಿ/ ನಿನ್ನರಸ ನಾನಿಲ್ಲಿ/ ಚೆನ್ನರಸಿ ನೀನಿರುವೆ/ಎನ್ನೊಲುಮೆ ರಾಜ್ಯದಲಿ' .."ಎಲೆವೊಲಾನಿದ್ದಂದು/ಹೂವಿನೊಲು ನೀನಿದ್ದೆ/ಸುಮದಲಾನಿರುತಿರಲು/ನೀನು ಪರಿಮಳವು/" .. .. ನಿನ್ನ ಕಣ್ ಹೊಳಪಿನಲಿ/ಸ್ನೇಹದಲಿ, ಪ್ರೇಮದಲಿ,/ ನಿನ್ನ **<u>ಕಣ್ಣಾಲಯಗಳ</u>** ಜ್ವಲಿಪ ಜೊನ್ನದಲಿ--" ಎಂದು ವೀ.ಸೀ.ಯವರು ಹಾಡಿದರೆ;

"ತಣ್‌ಕೊಚ್ಚೆ ನೀರಿನಲಿ/ಬಚ್ಚಲಿನ ತಟದಲ್ಲಿ/ಹಚ್ಚನಾ ಹೊಂಡದಲಿ/ ತಂಗಾಳಿ ರೊಯ್ಯನೇ ಬೀಸುವಲ್ಲಿ—".. .. ನಿನ್ನ **<u>ಪೊರೆ</u>** ಹೊಳಪಿನಲಿ/ ಸ್ನೇಹದಲಿ, ಪ್ರೇಮದಲಿ,/ ನಿನ್ನ **<u>ಕ್ರೋಮಸೋಮಗಳ</u>** ಜ್ವಲಿಪ ಜೊನ್ನದಲಿ--" ಎಂದು ರಾ.ಶಿ. ಯವರು ಹಾಡುತ್ತಾರೆ.

ಅಂಬಿಕಾತನಯದತ್ತರ 'ಸಖೀಗೀತ'ದ 'ಬಾ ಕೈ ತಾ' ಎಂಬ ಕವಿತೆಯಲ್ಲಿ; ಪ್ರಕೃತಿಯಲ್ಲಿ ನಡೆಯುವ ನಾನಾ ಸಂಗತಿಗಳನ್ನು ಕಂಡಾಗ, ಮನದಲ್ಲಿ ಮೂಡುವ ಜಗದ ರೂಪನಿಗೆ 'ಕೈಗೆ ಕೈಯ ತಾ' ಎಂದು ಕೋರುವಂತಹ ಅದ್ಭುತ ಕಲ್ಪನೆ ಇದೆ. ಆದರೆ ಈ ಹಾಡಿನ ಧಾಟಿಯಲ್ಲಿ ರಾಶಿಯವರ ಕಲ್ಪನೆ ಓಡುವುದು 'ಲಂಚ ಕೈಗೆ ತಾ' ಎಂಬ ಕಡೆ. "ಗೆಲುವಿನಲಿ ಮೂಡಿರುವಿ/ಜುಲುಮಿನಲಿ ತಾಕಿರುವಿ/ಜಗದಿ ರೂಪ ತಾಳಿರುವಿ ಕೈಗೆ ಕೈಯ ತಾ'.. .. .. "ಬೆಣ್ಣೆ ಕೈಯ ಹೊಸೆಯುತಿರೆ/ಕಣ್ಗೆ ಸುಣ್ಣ ಬೀಳುತಿರೆ/ಎಣ್ಕೆ 'ಬಿಲ್ಲ' ಹಿಡಿಯುತಿರೆ ಚಾಚಿದ ಕೈ ತಾ" ಎಂದು ಆ ಕಾಲದಲ್ಲೇ ಅವತರಿಸಿದ ಲಂಚದ ಸುತ್ತ ಹೆಣೆದಿರುವ ಕವಿತೆ ಈ 'ಲಂಚ ಕೈಗೆ ತಾ', ಎಂಬುದು.

ಕೆ.ಎಸ್. ನರಸಿಂಹಸ್ವಾಮಿಯವರು, "ನೀ ಬರುವ ದಾರಿಯಲಿ/ಹಗಲು ತಂಪಾಗಿ".. .. ಹಕ್ಕಿಗಳು ಹಾಡಿ ಬೆಳ್ದಿಂಗಳಿಂಪಿನಲಿ ತಾರೆಗಳು ಮೂಡಿ/.. .. "ಮುಂದೆ ಕಾದಿಹ ನೂರು/ಹರುಷಗಳ ಕಣ್‌ತೆರೆದು/ ಪಯಣವೋ ನಿಲುಗಡೆಯೊ ನೀನರಿಯದಂತಿರಲಿ/" ಎಂದು 'ದೀಪದ ಮಲ್ಲಿ'ಗಾಗಿ ಕವಿತೆ ರಚಿಸಿದರೆ; ರಾ.ಶಿ.ಯವರ ಆಸಕ್ತಿ, ಜೂಜಿನಲ್ಲಿ ಓಡುವ ಪಂದ್ಯದ ಕುದುರೆಗಳಿಗಾಗಿ, 'ನೀ ಬರುವ ದಾರಿಯಲಿ' ಎಂಬ ಕವಿತೆ ರಚಿಸುತ್ತದೆ. "ನೀ ಬರುವ ದಾರಿಯಲಿ ಹುಲ್ಲು ಹಸನಾಗಿ ಸಾಲ್ ಸಾಲು ಕಂಬಗಳು/ಥಳಿಸಿ ಬೆರಗಾಗಿ/" .. .. .. "ಪಂದ್ಯ ಮುಗಿಯುವ ತನಕ/ಎಳೆಬಿಸಿಲು ಬರವನಕ/

ತುಂತುರ್ಧ್ವನಿ ಅಲ್ಲಲ್ಲ ನೆಲವ ತಣಿಸಿರಲಿ"/ .. .. .. "ಮುಂದೆ ಕಾದಿಹ ನೂರು/ಹರುಷಗಳ ಕಣ್ ತೆರೆದು/ ಪಂದ್ಯವೋ? ಕುಣಿಗಲೋ? ನೀನರಿಯುವಂತಿರಲಿ" ಎಂದು ಹೆಸರಾಂತ ಜೂಜಿನ ಕುದುರೆಗಳು ಸೋಲ ತೊಡಗಿದಾಗ ಕುಣಿಗಲ್‌ಗೆ ಕಳಿಸುವ ವಾಡಿಕೆಯಂತೆ, ಅಂಥ ಕುದುರೆಗಳಿಗೆ ಸೋಲಾಗದಿರಲಿ ಎಂದು ಹಾರೈಸುತ್ತಾರೆ ರಾ.ಶಿ.ಯವರು.

ಇದೇ ರೀತಿ, ಪ್ರಕೃತಿಯ ವಿಸ್ಮಯ, ಹಸಿರು, ತಂಪು, ಕಂಪು, ಸಡಗರ–ಸಂಭ್ರಮಗಳೆಲ್ಲದರ ಮೆರವಣಿಗೆಯನ್ನು ಮನಸ್ಸಿನಲ್ಲಿ ಹೊರಡಿಸುವ, ಒಂದು ಸುಂದರ ವರ್ಣನೆಯುಳ್ಳ ಮನಸ್ಸಿಗೆ ಮುದ ನೀಡುವ ಅಂಬಿಕಾತನಯದತ್ತರ ಕವನ, 'ಶ್ರಾವಣಾ ಬಂತು ಕಾಡಿಗೆ/ ಬಂತು ನಾಡಿಗೆ, ಬಂತು ಬೀಡಿಗೆ.." ಎಂಬುದು. ಈ ಪದ್ಯವನ್ನನುಕರಿಸಿ, ಇದಕ್ಕೆ ವ್ಯತಿರಿಕ್ತವಾಗಿ ರಾ.ಶಿಯವರು ಬರೆದಿರುವ 'ಚುನಾವಣಾ  ಬಂತು ನಾಡಿಗೆ/ ಬಂತು ಬೀಡಿಗೆ/ ಬಂತು ಬೀದಿಗೆ.. .." ಎಂಬ ಕವನ, ಓದುಗರನ್ನು ಕರೆದೊಯ್ಯುವುದು; ಗದ್ದಲ, ಗಲಾಟೆ, ಸಂಘರ್ಷ, ರಾಜಕೀಯ ಕತೆಗಳ ನೆನಪಿಗೆ ತರುವ ಬೇರೆಯದೇ ಆದ ಮೋದಕ ಲೋಕಕ್ಕೆ.

ಅಂಬಿಕಾತನದತ್ತರ 'ಸಖೀಗೀತ'ದ ಒಂದು ಕವಿತೆ 'ತುಂಬಿ ಬಂದಿತ್ತು', "ಬೆಳಕಿಗಿಂತ ಬೆಳ್ಳಗೆ ಇತ್ತ/ ಗಾಲಿಗಿಂತ ತೆಳ್ಳಗೆ ಇತ್ತ, ಜಡಿಯಿಂದಿಳಿದ ಗಂಗೀ ಹಾಂಗ/ಚಂಗನೆ ನೆಗೆದಿತ್ತ' ಎಂದು ಆರಂಭವಾಗುವ ಚರಣದಲ್ಲೇ ಏನೆಲ್ಲ ಅರ್ಥ ವಿಸ್ತಾರಗಳಿಗೆ ಮನಸ್ಸನ್ನು ಹರಡಿಸಿ ಬಿಡುವಂತಹ ಅನನ್ಯ ಕವಿತೆ. ಆ ಮಾರ್ಗದಲ್ಲಿ ಬರೆದ ರಾ.ಶಿ.ಯವರ 'ತುಂಬಿ ಬಂದಿತ್ತ' ಕವಿತೆ ನಮ್ಮನ್ನು ಕೊಂಡೊಯ್ಯುವುದು ತರಕಾರಿ ಮಾರುವ ಹೆಂಗಸೊಬ್ಬಳ ಹತ್ತಿರಕ್ಕೆ. ತರಕಾರಿ ಮಾರುವ ಹೆಂಗಸು, ತನ್ನ ವ್ಯಾಪಾರದ ನಡುವೆ, ಜಗಿದ ಎಲೆಅಡಿಕೆಯನ್ನು ಥೂಕರಿಸಿ ಉಗಿದಾಗ ಅದನ್ನು ಕಂಡು ಆದ ಅಸಹ್ಯವನ್ನು, ದ.ರಾ.ಬೇಂದ್ರೆಯವರ ಈ 'ತುಂ ತುಂ ತುಂಬಿ ಬಂದಿತ್ತ' ಎಂಬ ಕವಿತೆಯ ಪಾತ್ರೆಯಲ್ಲಿಟ್ಟು ಉಣಿಸಿದ್ದಾರೆ ಹಾಸ್ಯಾಸಕ್ತರಿಗಾಗಿ.

"ಥುಮ್ ಥುಮ್ ಥುಕ್ ಥುಮ್ ಥುಮ್ ಥುಕ್ ಥುಕ್ ಥುಮ್/ತುಂಬಿ ಬಂದಿತ್ತ ಆಕೆಯ ಬಾಯ್ ತುಂಬಿ ಬಂದಿತ್ತ/ಸಂಜೆಗಿಂತ ಕೆಂಪಗೆ ಇತ್ತ/ಬುಲಾಕಿನಂತೆ ಗಟ್ಟಿಗೆ ಇತ್ತ/ಜಡೆಯಿಂದಿಳಿದ ಗಂಗೆ ಹಾಂಗ ಛಂಗನೆ ಹಾರಿತ್ತ ಬಾಯೊಳಗಿರುವ ಹಲ್ಲು ಹಲ್ಲಿಗೂ / ತಾಕಿಯೆ

ಬಂದಿತ್ತ/"ಎಂದು ಉಗಿದ ಎಲೆ ಅಡಿಕೆಯ ಒಂದು ಸಣ್ಣ ವಿಷಯವನ್ನು ಹೀಚಿಸಿ ಹಿಗ್ಗಿಸಿ ಹಾಡುವುದಲ್ಲದೆ, ಮುಂದುವರೆದು ಮಾವ, ಮಡದಿಯರ ಹೋಲಿಕೆಗಳನ್ನೆಲ್ಲ ಉಪಮೆಗೆ ಎಳೆದು, ಮಡದಿ ಹಾಂಗ ಅಂಟಿ ಬಿದ್ದು/ ಮಾವನ್ಹಾಂಗ ಗಂಟು ಬಿದ್ದು/ ಎದ್ದೇ ಬಂದು ಎದುರಾಗೇನೇ/ಬಿದ್ದೇ ಬಿಟ್ಟಿತ್ತ/ ಹಗಲಿನ ಬೆಳಕಲಿ ಇರುಳೇ ಮಬ್ಬಿ. ಕಣ್ಣಿನೆ ಕಟ್ಟಿತ್ತ .. ವಾಂತಿಯೆ ಬಂದಿತ್ತ/.." ಎಂದು ಮಾಡಿರುವ ವರ್ಣನೆ ಕೇಳುಗರಿಗೂ ಆ ಅನುಭವವನ್ನು ಹೊರ ಹಾಕುವಂತೆ ಮಾಡುತ್ತದೆ. ಅದು ಮತ್ತು ಇದು ಈ ಎರಡೂ ಲೋಕಗಳ ತುಲನಾತ್ಮಕ ಕಲ್ಪನೆಗಳನ್ನು ಎದುರಿಗಿಟ್ಟು ನಗು ತರಿಸುತ್ತದೆ.

ವಿಜ್ಞಾನಿ ಅಲೆಕ್ಸಾಂಡರ್ ಫ್ಲೆಮ್ಮಿಂಗ್‌ನು ತನ್ನ ನೆಗಡಿಯ ಹನಿಯಲ್ಲಿ ರೋಗನಿವಾರಕ ಲೈಸೋಜೈಮ್ ಇರುವುದನ್ನು ಗಮನಿಸಿದ ಹಾಗೆ; ಸ್ಟೆಫೆಲೋಕಾಕಸ್ ಎಂಬ ರೋಗಾಣುವಿನ ಸುತ್ತ ಕಟ್ಟಿಕೊಂಡ ಹಸಿರು ಬೂಸ್ಟಿನಲ್ಲಿ, ಪೆನ್ಸಿಲಿನ್‌ನ ರೋಗಾಣುಹಂತಕ ಮಹಿಮೆಯಿರುವುದನ್ನು ಕಂಡುಕೊಂಡ ಹಾಗೆ; ರಾ.ಶಿ.ಯವರಲ್ಲಿ ಇದ್ದಂತಹ ಸಣ್ಣ ಸಣ್ಣ ವಿಷಯವನ್ನೂ ಗಮನಿಸುವ ಗುಣ ಮತ್ತು ಹಾಸ್ಯ ಪ್ರಜ್ಞೆ ಈ ಸಂಕಲನದ ಎಲ್ಲ ಕವಿತೆಗಳಲ್ಲಿ ಕಾಣ ಬರುತ್ತದೆ.

**ಸಾಕ್ಷಿ ಸಂಕಲಿಕೆ' (1964):**

ರಾ.ಶಿ.ಯವರ ಸತ್ಯಶೋಧಕ ಮನಸ್ಸನ್ನು ಮತ್ತು ಜೀವನದ ಅನುಭವಾಮೃತವನ್ನು ತುಂಬಿಕೊಂಡ ಅರವತ್ತಾರು ಬಾಳವಚನಗಳ ಸಂಕಲನವಿದು. ಪ್ರಕಟವಾಗಿದ್ದು 1964ರಲ್ಲಿ. "ಸಂಕಲಿಕೆಯೊಲವನು ವಿಜ್ಞಾನ ಸಾಕ್ಷಿಯನು ಮೇಳೈಸಿ ನುಡಿಯುವೆನು" – ಎಂದು ಆರಂಭವಾಗುವ ಗೀತೆಗಳು 'ಚಂದದೂರಿಗೆ ಹೋಗೋಣು' ಎಂಬ ಅತ್ಯಂತ ಪ್ರಬುದ್ಧವಾದ, ಬಾಳಿನ ಸಾರವನ್ನೆಲ್ಲ ಅರುಹುವ ಕವನದಿಂದ ಮುಕ್ತಾಯಗೊಳ್ಳುತ್ತದೆ. ಚೆಂದದೂರಿಗೆ ಹೋಗಿ ನಾವು ಬಂಧನಗಳನು ಕಳಚೋಣ ಹಿಂದಿನ ಎಲ್ಲ ಜನುಮಗಳನ್ನು ನೆನಪುಗಳಾಗಿಯೂ, ಮುಂದಿನ ಸಾವಿರ ಜನುಮಗಳನ್ನು ಇಂದೇ ಇಲ್ಲೇ ನೋಡಿಯೂ ಮುಗಿಸೋಣ ಎಂದು ಕೆಳಗಿನ ಸಾಲುಗಳಲ್ಲಿ ;

ಹಿಂದಿನ ಎಲ್ಲ ಜನುಮಗಳನ್ನೂ/ ನೆನಪಿನ ಕಣ್ಣಲಿ ಕಾಣೋಣು//

ಮುಂದಿನ ಸಾಸಿರ ಜನುಮಗಳನ್ನೂ/ ಇಂದೇ ಇಲ್ಲೇ ನೋಡೋಣು//

ಎಂದು ಹೇಳುವ ಈ ಕವಿ, ಮನನ, ಧ್ಯಾನ, ಇವುಗಳಿಂದಾಗಿ ಹಸನುಗೊಂಡಂತಹ ಮನಸ್ಸಿಗೆ ಭವಿಷ್ಯತ್ತಿನ ಅರಿವೂ, ಹಿಂದಿನ ಜನ್ಮಗಳ ನೆನಪೂ ಬೆರೆತು, ಕಾಲಾತೀತರಾಗಬಹುದು ಎಂಬ ಅಂಶಗಳನ್ನೂ ಇದರಲ್ಲಿ ಸೇರಿಸಿದ್ದಾರೆ. ಆಗ 'ಕಾಲ'ವು ಅವರ ಭಾಗಕ್ಕೆ ಶೂನ್ಯವಾಗಿ ಕಾಲ ದೇಶಗಳ ಬಂಧನವಿಲ್ಲದೆ ಚಂದದೂರನ್ನು ಕಾಣುವಂತಾಗುತ್ತಾರೆ ಎಂದಿರುವುದು, ಗಹನ ಅರ್ಥದ ತಿಳಿವಿನ ದೀಪ ಹಚ್ಚಿ ತೋರಿದಂತೆ.

"ಮಂಗಳ ಸತ್ಯದ ಚೆಂದದ ಊರು/ ಮೈಯನು ಮರೆತರೆ ಹತ್ತಿರವು/ ಮನದೊಳಡಗಿಹ ಚೆಂದದು ಊರು/ಮನವನು ಮೆಟ್ಟಲು ಸಿಕ್ಕುವುದು" .. ಎಂದು ದೇಹದ ಮೇಲಿನ ಮೋಹವನ್ನು ಮರೆತು, ಮನವನ್ನು ಮೆಟ್ಟಿ ನಿಂತರೆ, ಈ ಚೆಂದದೂರಿಗೆ ಹೋಗಬಹುದು, ಎಲ್ಲವನ್ನೂ ಜಯಿಸಬಹುದು' ಎಂಬ ಗೂಢಾರ್ಥವುಳ್ಳ ಈ ಕವನ ಅತ್ಯಂತ ಮೌಲಿಕ.

'ನಾನು', 'ನನ್ನತನ' ಎಂಬುದನ್ನು ಬಿಟ್ಟು, ಅಂತರಂಗದ ಆನಂದದ ಕಡೆ, ಆತ್ಮ ಸ್ವಾತಂತ್ರ್ಯವನ್ನು ಸಾಧಿಸುವ ಕಡೆ ಅವರ ಮನಸ್ಸಿನ ಪ್ರಯಾಣ ಆರಂಭವಾಗಿತ್ತು ಎಂಬದುನ್ನು ತಿಳಿಸುವಂತಿವೆ ಇಲ್ಲಿಯ ಕೆಲವು ವಚನಗಳು.

'ನನ್ನ' ತನ ಇರುವನಕ ಆಸೆ ಕನಸುಗಳುಂಟು
ಎನ್ನ ಮನಸಿನ ತುಂಬ ದುಃಖ ತೋಡುವುವು
ಮನದಲ್ಲಿ ನನದೆಂಬ ಹುಂಬತನ ಕಂಡಾಗ
ಮನವು ನಂದನವನವು ಮನಜಗನ್ಮಿಥ್ಯ/ (ಮೊದಲ ತೊದಲ್ನುಡಿ)

ಜೀವನದಲ್ಲಿ ಬೆಳಕು ಮತ್ತು ನೆರಳುಗಳೆರಡೂ ಇರುತ್ತವೆ. ಬೆಳಕಿಗೆ ಅಡ್ಡವಿದ್ದ ವಸ್ತುಗಳ ಕಡೆ ದೃಷ್ಟಿ ಹಾಯಿಸಿದರೆ ಕಪ್ಪು ನೆರಳೊಂದೇ ಕಾಣುವುದು. ತಿಳಿವಿನ ದೀವಿಗೆ ಹಿಡಿದು ಅಡ್ಡವಿದ್ದುದನ್ನು ಸರಿಸಿ ನೋಡಿದರೆ ಬೆಳಕು ತಾನಾಗಿಯೇ ಕಾಣುತ್ತದೆ ಎಂಬುದನ್ನು ಕಂಡುಕೊಂಡ ಈ ಕವಿ, ಎಲ್ಲೆಲ್ಲಿ ಯಾವ ಯಾವ ವಸ್ತುಗಳು ಈ ಕಣ್ಣಿಗೆ ಮೊರೆಯಾಗಿ ಅಡ್ಡ ನೆರಳಾಗಿ ಕಾಡುತ್ತವೆ ಎಂಬುದನ್ನು 'ಇಳಿದು ಬಂದಿತ್ತ' ಎಂಬ ಪದ್ಯದಲ್ಲಿ ಕಾಣಿಸಿದ್ದಾರೆ.

ಇಳಿದು ಬಂದಿತ್ತ/ ಬೆಳಗಿನ ದೀಪವು ಇಳಿದೂ ಬಂದಿತ್ತ/
ಹೊಳೆಯುತ ಬಂದು/ ಅಳಿಸಿತು ನೆರಳನು; ತಿಳಿವನು ಮೂಡಿಸಿತ//
ಎಂದು ಆರಂಭಿಸಿ, ಕೊನೆಯಲ್ಲಿ

ಆಲಯದಾಚೆಯ ಬಯಲಿನ ಗಾಳಿಯು/ ಬೆಳಕನು ನೆರಳನು ಕುಣಿಸಿತ್ತು
ಆಲಯದೊಳಗೆ ಅಲುಗದೆ ಕುಳಿತಿಹ/ ನಾನೋ! ಸ್ವಯಂಭುವಂತಿದ್ದೆ//

ಎಂದು ಕತ್ತಲು ಹರಿದ ಮೇಲೆ ತಾವೇ ಸ್ವಯಂಭುವಂತಿದ್ದುದನ್ನು ಗಮನಿಸುತ್ತಾರೆ. ಹರಿದಾಸರುಗಳು ತಮ್ಮ ಸಮಾಜದ ಸುತ್ತಮುತ್ತಲಿನ ಪ್ರಪಂಚವನ್ನು ನೋಡಿ ಮೂಡಿದ ಒಳಅರಿವಿನಿಂದ ಜೀವನ ತತ್ವದ ಹಾಡುಗಳನ್ನು ಹಾಡಿ, ಏನೂ ಅರಿಯದ ಜನರಿಗೂ ಒಂದು ಸಮಾಧಾನ ಮತ್ತು ಆನಂದವನ್ನು ಮೂಡಿಸುತ್ತಾರೆ. ವಚನಕಾರರೂ ತಮ್ಮ ವಚನಗಳ ಮೂಲಕ ಇದೇ ಸಾಧನೆ ಮಾಡಿದ್ದಾರೆ. ಒಲವಿಗರು, ವಿಜ್ಞಾನಿಗಳು, ಆತ್ಮಜ್ಞಾನಾನ್ವೇಷಿಗಳು– ಈ ಎಲ್ಲರೂ ತಮ್ಮ ತಮ್ಮ ಪಥಗಳಲ್ಲಿ ಸಾಗಿ ಕೊನೆಗೆ ತಲುಪುವುದು ಇದೇ 'ಆನಂದ'ದ ಹಂತಕ್ಕೇ ಎಂಬುದು ಇವರ 'ಜ್ಞಾನ–ವಿಜ್ಞಾನ'ದಲ್ಲಿ ಕಂಡು  ಕೊಂಡಿರುವ ಒಂದು ಮಹತ್ವದ ಅಂಶ.

ಈ ಸಂಕಲನದಲ್ಲಿಯ ಬಹುತೇಕ ಕವಿತೆಗಳು; ಮನಷ್ಯನ ಅಸ್ತಿತ್ವದ ಮೂಲದ ಬಗ್ಗೆ, ಜೀವನದ ಅರ್ಥದ ಬಗ್ಗೆ, ಆಲಯ ಪ್ರೇಮ, ಮನಷ್ಯನ ಅಹಂಕಾರ, ನಂತರದ ಬೆಳಕು, ಆನಂದ– ಇವುಗಳ ಬಗ್ಗೆ ಚಿಂತನ ನಡೆಸಿರುವಂತಹ ಕವಿತೆಗಳು. 'ಏಳು ಕಿಟಕಿಗಳು', ಆದಿ ಮೂಲ – ಅಂತ್ಯ ಸಾಹುಕಾರ, ಹೊರ ಪೊರೆಯೊಲವು, ಕಂಡೆ ಮನುಜರಲಿ, ಗಿರಿಜಾ ಕಲ್ಯಾಣ, ತಾಸು:ಎರಡು, ಮೂರು, ಮೊದಲ ತೊದಲ್ನುಡಿ, ದೃಷ್ಟಿ – ವಾಸನೆ, ದಾರ್ಶನಿಕ –Alexis Carrel, ಆತುಮದ ನಗೆ ಕಿರಣ,  ಜ್ಞಾನ– ವಿಜ್ಞಾನ, ಮುಂತಾದವು ಈ ಮಾತಿಗೆ ಉದಾಹರಣೆಗಳು.

ಜೀವನಕ್ಕೆ ಹೋಲುವ ತತ್ವಗಳು, ಕ್ರಮಗಳು, ರೀತಿ–ನೀತಿಗಳು ರಾ.ಶಿಯವರಿಗೆ ಸುತ್ತ ಮುತ್ತಲ ಎಲ್ಲ ವಸ್ತುಗಳಲ್ಲೂ, ಪ್ರಾಣಿಗಳಲ್ಲೂ ಮಾತ್ರವಲ್ಲ, ಭೌತ ಶಾಸ್ತ್ರ, ಭೂಗೋಳ, ರಸಾಯನ ಶಾಸ್ತ್ರ, ಮುಂತಾದವುಗಳಲ್ಲೂ ಕಾಣುವಂತಹ ವಿಶೇಷ ದೃಷ್ಟಿ ಇದೆ. ಈ ಬಗ್ಗೆ  ಒಮ್ಮೆ ರಾಶಿ ರಾಶಿ ತಾಪತ್ರಯಗಳ ಕೊರಗಿನಿಂದಾಗಿ ನಿದ್ದೆ ಬಾರದೆ ಕಾಡಿನಂಚಿನ ಗೂಡಿನಿಂದ, ಕಾಡಿನಲ್ಲಿ ನಡೆದಾಗ ಬಳ್ಳಿಯ ಆಸರೆ ಬಯಸಿ ಹೂವು ಅಳುತ್ತಿರುವಂತೆ, ಚಿರತೆಗೆ ಹೆದರಿದ ಮಂಗನ ಮರಿ ತಾಯಿಯನ್ನು ಅಪ್ಪಿಕೊಂಡಂತೆ, ಮಗುವ ತಿಂದ ಗಡವನೊಂದಿಗೆ ಬೆಕ್ಕು ಹೋರಾಡುತ್ತಿರುವಂತೆ, ಗಾಳಿಗೆ ಧೂಳಾಗಿ ಹಾರಿ ಹೋಗುವ ಭಯದಿಂದ ದೊಡ್ಡ ಹೇಂಟೆ, ಕಲ್ಲನ್ನು ತಬ್ಬಿಕೊಂಡಂತೆ, ಕಣ್ಣಿಗೆ

ಕಂಡಾಗ, ಇಡೀ ಪ್ರಕೃತಿಯ ಚಲನೆಯ ಕ್ರಮ, ರೀತಿ–ನೀತಿಗಳೇ ಹೀಗೆ ಎಂಬುದು ಅರಿವಿಗೆ ಬಂದು ಮನಸ್ಸಿಗೆ ಗೆಲುವು ಮೂಡಿ ಮನದ ತಾಪತ್ರಯಗಳು ಕರಗಿ ಹೋಗುವುದನ್ನು ಕಾಣುತ್ತೇವೆ, 'ತಾಸು: ಎರಡು, ಮೂರು' ಎಂಬ ಕವಿತೆಯಲ್ಲಿ.

ಜನರನ್ನೂ, ಜೀವನವನ್ನು, ಪ್ರಕೃತಿಯೊಳಗಿನ ಮರ. ಗಾಳಿ, ಬಯಲು, ಹುಳು, ಕೀಟಗಳು– ಇವನ್ನೆಲ್ಲ ವೀಕ್ಷಿಸುತ್ತ, ತಮ್ಮ ಸಮಸ್ಯೆಗೆ ಪರಿಹಾರವನ್ನೂ, ಮನಸ್ಸಿಗೆ ಸಮಾಧಾನವನ್ನೂ ಕಂಡುಕೊಳ್ಳುವ ಕಣ್ಣುಗಳನ್ನು 'ಒಂಟಿ–ಸುಂಟರಗಾಳಿ, ಮಿಂಚಿನ ಹುಳು, ಜೇಡ–ಮಡದಿ, ಸಾವಿರ ಕಾಲು–ಲಕ್ಷ್ಮಿ ಚೇಳು, ಲೊಟ್ಟೆ ಮುಂತಾದ ಕವನಗಳಲ್ಲಿ ಕಾಣಬಹುದು. ಕೆಲವು ಕವನಗಳಿಗೆ ಸ್ಪಷ್ಟವಾದ, ಅರ್ಥಪೂರ್ಣ ವಿವರಗಳನ್ನೂ ಕವಿಯೇ ನೀಡಿದ್ದಾರೆ.

ಜೀವನ ಮೋಕ್ಷ, ಬಯಲಾಗುವ ಅಪೇಕ್ಷೆಗಳಿರುವ ಈ ಸಂಕಲನದ ವಚನಗಳು, ರಾಗ–ಲಯಗಳೊಂದಿಗೆ  ಗೇಯತೆಯನ್ನು ಒಳಗೊಂಡಂತಹವು. 'ತತ್ವಂ ಅಸಿ', ಅಹಂಬ್ರಹ್ಮಾಸ್ಮಿ' ತತ್ವವನ್ನು ತಿಳಿಸುವ ಕವನಗಳೂ ಇವೆ ಇದರಲ್ಲಿ. ಬದುಕಿನ ಬಗ್ಗೆ ಇವರ ವಿಶಿಷ್ಟ ಚಿಂತನ ವಿಧಾನವನ್ನು ಅರಿವಿಗೆ ತರುವ ಒಂದು ಪ್ರತ್ಯಕ್ಷ ಸಾಕ್ಷಿ, ಈ 'ಸಾಕ್ಷಿ ಸಂಕಲಿಕೆ'.

**ಭಯ–ಸರಳ ವಿಶ್ಲೇಷಣೆ (1969) :**

ಹೊರಮನಸ್ಸಿನ ಧೈರ್ಯ, ಅಂತರಂಗದ ನಿಜವಾದ ಧೈರ್ಯ ಮತ್ತು ಅಧೈರ್ಯಗಳು, ಭಯಕ್ಕೆ ಕಾರಣಗಳು, ಭಯದ ಪರಿಣಾಮಗಳು, ಭಯದ ಲಕ್ಷಣಗಳು, ಭಯವಿಲ್ಲದ ಅವಸ್ಥೆಗಳು, ಭಯದ ಅಗತ್ಯಗಳು ಮನೋನಿಯಂತ್ರಣ, ಭಯ ನಿವಾರಣೆಯ ಮಾರ್ಗಗಳು– ಈ ಎಲ್ಲ ಅಂಶಗಳನ್ನೂ ಬಹಳ ಸರಳವಾಗಿ ಎಂಥ ಸಾಮಾನ್ಯ ಓದುಗನಿಗೂ ಸುಲಭವಾಗಿ ಮನನವಾಗುವಂತೆ ವಿಶ್ಲೇಷಿಸಿರುವ ಉಪಯುಕ್ತ ಕೃತಿ 'ಭಯ–ಸರಳ ವಿಶ್ಲೇಷಣೆ'. ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಸ್ಥಾಪನೆಗೊಂಡ ಪ್ರಚಾರೋಪನ್ಯಾಸ ಶಾಖೆಯ ವತಿಯಿಂದ ನಗರದ ಹಲವಾರು ಕೇಂದ್ರಗಳಲ್ಲಿ ಮತ್ತು ಸಮೀಪದ ಹಳ್ಳಿಗಳಲ್ಲಿ ತಜ್ಞರಿಂದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿದ್ದು, ಸಂಬಂಧಿತ ಉಪನ್ಯಾಸಕರು ಮಾಡಿದ ಭಾಷಣಗಳ ವಿಷಯಗಳ ಕುರಿತಾಗಿ ಬರೆಸಿ, ಪುಟ್ಟ ಪುಸ್ತಕಗಳ ರೂಪದಲ್ಲಿ ಪ್ರಕಟಿಸಿದ್ದು 1969ರಲ್ಲಿ.

ಭಯ'ದ ಕುರಿತು ಉಪನ್ಯಾಸ ನೀಡಿದ ರಾ.ಶಿ.ಯವರು ಬರೆದು ಕೊಟ್ಟ ಪುಟ್ಟ ಪುಸ್ತಕವೇ 'ಭಯ–ಸರಳ ವಿಶ್ಲೇಷಣೆ'.

"ರೋಗದ ಭಯವು ಎಷ್ಟೋ ಸಾರಿ ರೋಗಕ್ಕಿಂತಲೂ ಮಿಗಿಲಾಗಿ ಮನುಷ್ಯನನ್ನು ನರಳಿಸುತ್ತದೆ. ಸಂಕಟ ಪಡಿಸುತ್ತದೆ. ಭಯದ ಭಯಂಕರ ಪರಿಣಾಮಗಳಲ್ಲಿ ವಿನಾ ಕಾರಣ ನರಳಿಸುವುದೂ ಮುಖ್ಯವಾದುದು"; "ಭಯ ಇರದಿದ್ದವರು, ದುಷ್ಪರಿಣಾಮವಾಗಬಹುದಾದ ಬೇನೆಗಳು ಬಂದರೂ, ಸುಲಭವಾಗಿ ಗುಣ ಹೊಂದಬಹುದು" ; 'ಮನುಷ್ಯನ ಬಾಳಿನಲ್ಲಿ, ಭಯವು, ಬೇನೆಗಿಂತಲೂ ಹೆಚ್ಚು ಕಷ್ಟ ಕೊಡಬಹುದು, ಹಾಗೂ ಭಯವಿಲ್ಲದಿದ್ದರೆ ಸಂಭವಿಸಬಹುದಾದ ದುಷ್ಪರಿಣಾಮವನ್ನು ತಪ್ಪಿಸಲು ಸಾಧ್ಯ" ಮತ್ತು "ಕಾಮಾತುರನಾದಾಗ, ಅವತಾರ ಪುರುಷ (Megalomania) ತಾನೆಂಬ ಭಾವನೆ ಇದ್ದಾಗ, ಮೆದುಳಿನ ಏರಿಯಾ 24 ಎಂಬ ಭಾಗವು ಹಾನಿಗೊಳಪಟ್ಟಾಗ, ಸಿಫಿಲಿಸ್ ಖಾಯಿಲೆ, ಹುಚ್ಚು, ಮದ್ಯಪಾನ ಮಾಡಿದಾಗ, ಮನುಷ್ಯ ನಿರ್ಭಯನಾಗುತ್ತಾನೆ" ಎಂಬಂತಹ ಅನೇಕ ಅಗತ್ಯ ಅಂಶಗಳನ್ನು, ಕುತೂಹಲಕರ ಸಂಗತಿಗಳನ್ನು, ನಿದರ್ಶನಗಳ ಸಹಿತ ನಿರೂಪಿಸಿರುವುದೇ ಈ ಪುಟ್ಟ ಪುಸ್ತಕದ ಒಳಒಕ್ಕಣೆ.

ಪ್ರತಿಯೊಂದು ವಿಷಯವನ್ನೂ ವೈಜ್ಞಾನಿಕ ಸತ್ಯದ ಒರೆಗೆ ಹಚ್ಚಿ ಅರೆದು ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರುವುದು, ರಾ.ಶಿ.ಯವರ ಎಲ್ಲ ಕೃತಿಗಳಲ್ಲೂ ಕಾಣ ಬರುವ ಗುಣ. ಮಗುವಿನ ಅವಸ್ಥೆಯಲ್ಲಿಯೇ ಹುಟ್ಟುವ, 'ಫಿಯರ್ ಆಫ್ ಪನಿಷ್‌ಮೆಂಟ್' ಅಂದರೆ ಇಂಥದೊಂದು ಕೆಲಸ ಮಾಡಿದರೆ ನೋವೋ, ಶಿಕ್ಷೆಯೋ, ಸಂಕಷ್ಟವೋ ಆಗುತ್ತದೆಂಬ ಅರಿವನ್ನು ಗಳಿಸುವುದರಿಂದ ಪ್ರಾರಂಭಿಸಿ, ಸಾವಿನ ನಂತರ ಏನು ಎನ್ನುವುದರ ಚಿಂತನೆ ನಡೆಸುವ ಅವಧಿಯವರೆಗೆ ರಾ.ಶಿ.ಯವರ ವಿಚಾರಗಳು; ವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಣೆಗೊಂಡು, ಓದುಗರನ್ನು ಕುತೂಹಲದ ಅಂಗಳದಲ್ಲಿ ಆಡಿಸುತ್ತವೆ. ಗ್ರಹಣದ ಬಗೆಗಿನ ಭಯ, ನಂಬಿಕೆಗಳು, ಮೌಢ್ಯ, ಈ ಬಗೆಗಿನ ಚರ್ಚೆಗಳು, ಓದಿಗೆ, ಗ್ರಹಿಕೆಗೆ, ಆಕರ್ಷಕ.

ತೋರ ಮನಸ್ಸಿನ ಭಯವನ್ನು, ವಿಶ್ವರೂಪ ದರ್ಶನದಿಂದಲೂ, ವಿಶ್ವದ ಪರಿಚಯ ಜ್ಞಾನದಿಂದಲೂ ನಿವಾರಿಸಿಕೊಳ್ಳಬಹುದೆಂದೂ: ಆಳ ಮನಸ್ಸಿನ ಭಯವನ್ನು ವಿಶ್ವೇಶ್ವರನ ದರ್ಶನದಿಂದ, ಅವನನ್ನು ಸಾಕ್ಷಾತ್ ಅರಿಯುವುರಿಂದ ನಿವಾರಿಸಿಕೊಳ್ಳಬಹುದೆಂದೂ, ದ್ವಿವಿಧದ ಭಯಕ್ಕೆ ಅಂತಿಮವಾದ ಒಂದು

ಪರಿಹಾರ ಮಾರ್ಗವನ್ನೂ ಸೂಚಿಸಿರುವುದು ಮಹತ್ವದ ಮಾತೇ ಸರಿ. 91 ಪುಟಗಳ ಪುಟ್ಟ ಪುಸ್ತಕ ಇದಾದರೂ, ಇದರೊಳಗೆ ಅಡಗಿಸಿರುವ ವಿಷಯಗಳು ಒಂದೊಂದೂ ಮನನೀಯ. ಕೊನೆಯಲ್ಲಿ,

"ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚಿನ//

ಅಂದರೆ ಮನಸ್ಸು ಮತ್ತು ಮಾತು ಯಾವುದನ್ನು ಪಡೆಯಲಾಗದೇ ಹಿಂತಿರುಗಿದವೋ, ಆ ಆನಂದವೇ ಬ್ರಹ್ಮ ಎಂದು ಯಾರು ಅರಿಯುತ್ತಾರೋ, ಅವರು ಎಂದೆಂದಿಗೂ 'ನ ಬಿಭೇತಿ' ಭಯ ಪಡುವುದೇ ಇಲ್ಲ" ಎಂಬ ಉಪನಿಷತ್ಕಾರರ ಅನುಭವಾಮೃತ ವಚನ, ಪ್ರತಿಯೊಬ್ಬರ ಮನಸ್ಸಿನ ಭಯ ಪರಿಹಾರಕ್ಕೆ ಮತ್ತು ಆಚರಣೆಗೆ ಅಗತ್ಯವಾದ ಅರಿವು. ಈ ಹೊತ್ತಗೆಯಲ್ಲಿ ಸಿಗುವ ಒಂದು ಆಸಕ್ತಿಪೂರ್ಣ ಹೊಸ ವಿಚಾರ.

**ಕೊರವಂಜಿ ಕಂಡ ನಗು ಸಂಸಾರಗಳು (1969):**

ರಾಜೀವಪುರ ಸಂಸ್ಥಾನ, ಹಿಂದಘಟ್ಟ ಜಿಲ್ಲೆ, ಗುಂಜಾಲಸಂದ್ರ, ಹೆಬ್ಬಿ, ಗುಬ್ಬಾಲೆ ಮುಂತಾದವು ರಾ.ಶಿ.ಯವರ ಸಾಂಕೇತಿಕ ಕಲ್ಪಿತ ಊರುಗಳು. ಈ ಸ್ಥಳಗಳಲ್ಲಿರುವ ಸಂಸಾರಗಳ ಸಂಗತಿಗಳೇ ಈ ಕೃತಿಯ ವಸ್ತು. ಈ ಸ್ಥಳಗಳು, ಇಲ್ಲಿಯ ಸಂಗತಿಗಳು, ವಾಸ್ತವಿಕವಾದ ಯಾವುದೇ ರಾಜ್ಯಗಳಿಗೆ ಊರುಗಳಿಗೆ ಅನ್ವಯಿಸುವಂತಹವು.

'ನಾನು' ಎಂಬುವವರು, ತಮ್ಮ ಮಗಳಿಗೆ, ಗಂಡು ಹುಡುಕುವ ಬಗ್ಗೆ ಚಿಂತಿಸತೊಡಗಿದಾಗ, ಈರಣ್ಣ ಮತ್ತು ಬಸವಣ್ಣ ಎಂಬ ಗೆಳೆಯರಿಬ್ಬರು, ತಮಗೆ ಹೆಣ್ಣು ಕೊಟ್ಟ ಮಾವಂದಿರ ಮನೆಗಳಿರುವ ರಾಜೀವಪುರದಲ್ಲಿ ಶಹಣೆ ವರಗಳು ಮನೆ ಮನೆಯಲ್ಲೂ ಗೊಂಚಲು ಗೊಂಚಲಾಗಿ ಜೋತಾಡುತ್ತಿವೆ, ಅಲ್ಲಿಗೆ ಹೋಗಿ ನೋಡಿಕೊಂಡು ಬರಬಹುದೆಂದು ಸಲಹೆ ಕೊಡುತ್ತಾರೆ. "ರಾ.ಶಿ. ಅಂದರೆ ರಾಜೀವ ಪುರದ 'ಶಿ' ಅಂತಲೇನ್ರೀ? ಎಂದು ಗೆಳೆಯರೊಬ್ಬರು ಕೇಳಿದಾಗ, ರಾಜೀವಪುರ ನನ್ನ ಊರಲ್ಲ ಎಂದು ಪುಸ್ತಕದಲ್ಲಿ ಮೊದಲೇ ಅರಿಕೆ ಮಾಡಿಕೊಂಡಿರುವುದರಿಂದ, ಇಲ್ಲಿ ಬರುವ 'ನಾನು' ರಾ.ಶಿ.ಯವರು ಅಲ್ಲ ಎಂದುಕೊಳ್ಳಬಹುದು. ಈ 'ನಾನು' ಗೆಳೆಯರ ಸಲಹೆಯಂತೆ ಒಂದು ತಿಂಗಳ ರಜೆ ಹಾಕಿ, ರಾಜೀವಪುರದ ವಿವರಗಳನ್ನು ಸಂಗ್ರಹಿಸುತ್ತಾರೆ. ರಾಜೀವಪುರಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಆ ಸಂಸ್ಥಾನದ ಹೆಸರನ್ನು ಆರಾಂಪುರ ಎಂದು

ಬದಲಾಯಿಸಿರುವುದು ತಿಳಿದು ಬರುತ್ತದೆ. ಊರು ತಲುಪಿ ಮಜೇಂದ್ರ ಭವನದ ಒಂದು ಕೋಣೆಯಲ್ಲಿ ಉಳಿದುಕೊಂಡಾಗ, ಹಿಂ. ಸುಂದರಮ್ಮ ಎಂಬ ಹೆಣ್ಣಿನ ಪರಿಚಯ ಅನಾಯಾಸವಾಗಿ ಆಗುತ್ತದೆ. ಮಿತ ಸಂತಾನದ ಪ್ರಚಾರಕ್ಕಾಗಿ ಕೆಲಸ ಮಾಡುವ ಈಕೆ, 'ನಾನು' ಪತ್ರಿಕೋದ್ಯಮಿ ಎಂಬುದು ತಿಳಿದ ಮೇಲೆ, ತಾನು ಬರೆದ ಲೇಖನಗಳ ಮೂರು ಬೊಂತೆಗಳನ್ನು ಪ್ರಕಟಣೆಗಾಗಿ, 'ನಾನು'ಗೆ ಒಪ್ಪಿಸುತ್ತಾಳೆ. ಅವಳು ಬರೆದ ಮೊದಲ ಬೊಂತೆಯೇ ಯಥಾವತ್ ಪ್ರಕಟವಾಗಿರುವ ಈ 'ಕೊರವಂಜಿ ಕಂಡ ನಗು ಸಂಸಾರಗಳು' ಎಂಬುದು 'ನಾನು'ನ ಹೇಳಿಕೆ.

ಇದು, 'ಹಿಂದಘಟ್ಟದ ಸುಂದರಮ್ಮ, ಒರಳು ನೋಡಿ, ಎಲ್.ಎಂ.ಸಿ. ಲಕ್ಷ್ಮಣರಾಯರು, ಜರ್ಮನ್ ಶೂರ, ನಮ್ಮ ರಾಮಾಣ್ಯ, ಕೀಕಲ ಧ್ವನಿ, ನೋಡಲಾರೆ ಕಣೆ, ಮುಂತಾಗಿ ಒಟ್ಟು ಮುವ್ವತ್ತಮೂರು ಲೇಖನಗಳ ಒಂದು ಕಂತೆ. ಇಲ್ಲಿಯ ಕೆಲವು ಬರಹಗಳಿಗೆ ಕಿರುಕಥೆಗಳ ಸ್ವರೂಪವೂ ಇದೆ. ಅಂತಹವನ್ನು ಕಥೆ ಎಂದೇ ಹೇಳಬಹುದು. ಇದರಲ್ಲಿ ಎರಡು ರೀತಿಯ ಬರಹಗಳಾಗಿ ವಿಂಗಡಿಸಿಕೊಳ್ಳಬಹುದು. ಮುಖ್ಯ ಪಾತ್ರಗಳು ತಮ್ಮ ತಮ್ಮ ಕಾರ್ಯ ಸಾಧಿಸಿಕೊಳ್ಳಲು ಬಳಸುವ ಜಾಣತನದ ತಂತ್ರಗಳು, ತಮ್ಮ ತಮ್ಮ ಮನೆಗಳಲ್ಲೇ ಪತಿ–ಪತ್ನಿಯರು, ಸ್ನೇಹ–ಸಂಬಂಧಿಕರು, ಬಾವೀ ಬೀಗರ ನಡುವೆ ಹಾಕುವ ಯೋಜನೆಗಳು ಇಲ್ಲಿಯ ಒಂದು ಭಾಗದ ಬರಹಗಳ ಪ್ರಮುಖ ವಸ್ತು. 'ನಿಶ್ಚಿತಾರ್ಥ', 'ನಂಬಬಾರದು ಈ ಹೆಂಗಸರನ್ನು', 'ಪೀಕೋ ಹಾಗೆ ಆದರೆ', ಮೊದಲ ನಾಲ್ಕು ದಿನ', ಗೌರಿ ಉಡುಗೊರೆ', ಮುಂತಾದವು ಈ ತೆರನ ಬರಹಗಳು.

ಸಾವಿತ್ರಮ್ಮ ಪಾಪ ತಮ್ಮ ತೂಕ ತಗ್ಗಿಸಲು, ಟೆನ್ನಿಸ್ ಆಡಬಯಸಿ, ತಮ್ಮ ಸೊಂಟ ಹಿಡಿದಿದೆಯೆಂದೂ, ಅದರ ಪರಿಹಾರಕ್ಕಾಗಿ ಟೆನ್ನಿಸ್ ಆಡುವೆನೆಂದೂ, ಮನೆ ಖರ್ಚಿಗೆ ಹತ್ತು ರೂಪಾಯಿ ಹೆಚ್ಚು ಕೊಡಬೇಕೆಂದೂ ತನ್ನ ಗಂಡನನ್ನು ಕೇಳುತ್ತಾಳೆ. ಆದರೆ ಸೋದರ ಸಂಬಂಧಿ ಶ್ಯಾಮರಾಯ ಮನೆಗೆ ಬಂದು, ತೆಳ್ಳಗಾಗಿರುವ ಸಾವಿತ್ರಮ್ಮನ ಮುಖದಲ್ಲಿ ನೆರಿಗೆ ಬಿದ್ದಿದೆ ಎಂದೂ, ಡಾಕ್ಟರಿಗೆ ತೋರಿಸು ಎಂದೂ ಹೇಳಿ ಹೋದ ಮರುದಿನದಿಂದಲೇ ಸಾವಿತ್ರಮ್ಮ ಟೆನ್ನಿಸ್‌ಗೆ ಹೋಗುವುದಿಲ್ಲ ಎಂಬ ನಿರ್ಧಾರ ಮಾಡುತ್ತಾಳೆ. ಗಂಡನ ಉಪಾಯ ಫಲಿಸುತ್ತದೆ, 'ಮೊದಲ ನಾಲ್ಕು ದಿನ'ದಲ್ಲಿ.

ಹಿರಿಯರು ಉಡಲು ಒಪ್ಪದಂತಹ ಆರು ಗಜದ ತೆಳುವಾದ ಸೀರೆಯನ್ನು, ತನ್ನ ಅತ್ತೆ ಗೌರಮ್ಮನವರಿಗೆ, ಗೌರಿ ಹಬ್ಬದ ಉಡುಗೊರೆಯಾಗಿ ಕಳಿಸುವಂತೆ ಪರ ಊರಿನಲ್ಲಿರುವ ತನ್ನ ಗಂಡನಿಗೆ ಸಲಹೆ ನೀಡುತ್ತಾಳೆ ಸೊಸೆ ಸರಸೂ. ಮಗ ಕಳಿಸಿದ ಉಡುಗೊರೆಯ ಬಗ್ಗೆ, ಪಕ್ಕದ ಮನೆ 'ಬಾಯಿ'ಯವರ ಮುಂದೆ ತೋರಿಸಿಕೊಂಡು, ಹಿರಿ ಹಿಗ್ಗುವ ಅತ್ತೆ, ನಂತರ ಪಾಪ ಏನೂ ತಿಳಿಯದ ಮಗ ಖರೀದಿಸಿದ್ದೆಂದು ಹೇಳಿ, ತನ್ನ ಸೊಸೆಗೇ ಆ ಸೀರೆ ಸೂಕ್ತವೆಂದು ವರ್ಗಾಯಿಸುತ್ತಾಳೆ. ಸೊಸೆಯ ಯೋಜನೆ ಸುಗಮವಾಗಿ ನೆರವೇರುತ್ತದೆ, 'ಗೌರಿ ಉಡುಗೊರೆ'ಯಲ್ಲಿ.

ಹನುಮೇಶಿಯ ಮಗಳು ಶಾರಿಗೆ ವಿವಾಹದ ವಯಸ್ಸು 'ನಿಶ್ಚಿತಾರ್ಥ' ಎಂಬ ಕತೆಯಲ್ಲಿ. ಅವರ ಗೆಳೆಯ ಕುಲಕರ್ಣಿಯ ಮಗನಿಗೆ ವಿಚಾರಿಸಬೇಕೆಂಬ ಹನುಮೇಶಿಯ ಹೆಂಡತಿಯ ಅನಿಸಿಕೆಗೆ ಕುಲಕರ್ಣಿಯ ಹೆಂಡತಿ ಅನುವು ಮಾಡಿಕೊಡದೆ ತಾನು ಅಟ್ಟದ ಮೇಲಿರುವಂತೆ ವರ್ತಿಸುತ್ತಾಳೆ. ಬುದ್ಧಿವಂತ ಈಕೆ, ಮಂತ್ರಿಗಳ ಪತ್ನಿಯಾದ ತನ್ನ ಸ್ನೇಹಿತೆಯಿಂದ ಒಂದು ಪತ್ರ ಬರೆಸಿ ಕುಲಕರ್ಣಿ ತಮ್ಮ ಮನೆಗೆ ಬರುವ ಸಮಯದಲ್ಲಿ ಅದು ಕೈಗೆ ಸಿಗುವಂತೆ ತಂತ್ರ ಹೂಡುತ್ತಾಳೆ. ಮಂತ್ರಿಗಳಂತಹ ಮೇಲ್ಮಟ್ಟದ ಹಣವಂತರೇ ನಿಮ್ಮ ಮಗಳನ್ನು ಮಾಡಿಕೊಳ್ಳುವ ಉತ್ಸಾಹ ತೋರಿದಾಗ, ನಾವು ಯಾವ ಮಹಾ ಎಂದು ಕುಲಕರ್ಣಿ ಹೇಳುತ್ತಾನೆ. ಆಗ, ಮಂತ್ರಿಗಳಿಗಿಂತ ಸ್ನೇಹಿತನ ಮಗನೇ ವಾಸಿ ಎಂದು ಕುಲಕರ್ಣಿಗೆ ತಮ್ಮ ಒಪ್ಪಿಗೆ ಸೂಚಿಸಿ, ಅವನ ಹೆಂಡತಿಯ ಅಹಂಗೆ ಬುದ್ಧಿ ಕಲಿಸಿ, ಕಾರ್ಯ ಸಾಧಿಸಿಕೊಳ್ಳುತ್ತಾಳೆ ಹನುಮೇಶಿಯ ಹೆಂಡತಿ.

ಪಟೇಲ್ ತಿಮ್ಮಯ್ಯ ಕಛೇರಿ ಕೆಲಸವೆಂದು ಹೆಂಡತಿ ನಾಗವೇಣಿಗೆ ಸುಳ್ಳು ಹೇಳಿ ಸ್ನೇಹಿತರ ಜೊತೆ ಇಸ್ಪೀಟಾಡಿ, ನಾಟಕ ನೋಡಿ ಬರುವ ಯೋಜನೆ ಹಾಕುತ್ತಾನೆ, 'ನಂಬಬಾರದು ಈ ಹೆಂಗಸರನ್ನು' ಕತೆಯಲ್ಲಿ. ಈ ಬಗ್ಗೆ ತಿಳಿದುಕೊಂಡ ಜಾಣೆ ನಾಗವೇಣಿ, ಷಹರಿನಲ್ಲಿ ಅಸಿಸ್ಟೆಂಟ್ ಪೋಲಿಸ್ ಸೂಪರಿಂಟೆಂಡೆಂಟ್ ಆಗಿರುವ ತನ್ನ ಗೆಳತಿಯ ಅಣ್ಣನಾದ ರಾಮೇಗೌಡನ ಸಹಾಯದಿಂದ, ಗೆಳತಿಯೊಂದಿಗೆ ಅದೇ ಷಹರಿಗೆ ಹೋಗಿ ಗಂಡನಿಗಿಂತ ಆರಾಮಾದ ಆಸನಗಳಲ್ಲಿ ಕುಳಿತು, ನಾಟಕ ನೋಡಿ, ಸಕಲ ಮರ್ಯಾದೆಯೊಡನೆ ಗೌಡರ ಮನೆಯಲ್ಲಿ ಪಟ್ಟಾದ ತಿಂಡಿ ಊಟಗಳನ್ನೂ ಮುಗಿಸಿ, ಅವರದೇ ಮೋಟಾರಿನಲ್ಲಿ ಯಾವುದೇ ಶ್ರಮವೂ ಇಲ್ಲದೆ ಊರಿಗೆ ಹಿಂತಿರುಗುತ್ತಾಳೆ. ಸುಳ್ಳು ಹೇಳಿದ ತಿಮ್ಮಯ್ಯ ಮರುದಿನ ಬಸ್ಸಿನಲ್ಲಿ ವಾಪಸು

ಬಂದಾಗ, "ಷಹರಿನ ಕೆಲಸವೆಲ್ಲಾ ಮುಗಿಯಿತಾ?" ಎಂದು ಏನೂ ತಿಳಿಯದವಳಂತೆ ಕೇಳುತ್ತಾಳೆ, ನಾಗವೇಣಿ, ತನ್ನ ತಂತ್ರದ ಬಗ್ಗೆ ಒಂದು ಮಾತೂ ಆಡದೇ.

'ಪೀಕೋ ಹಾಗೆ ಆದರೆ' ಯಲ್ಲಿ, ಬಿಸಿ ಬಿಸಿ ಕಾಫಿ, ತಿಂಡಿ, ಆಂಬೊಡೆಗಳ ಮೂಲಕ ಗಂಡನನ್ನು ಓಲೈಸಿ, ಲಾಟರಿ ತರಹ ಬರುವ ಹಣವನ್ನು ತನಗೇ ಕೊಡಬೇಕು ಎಂಬ ಆಶ್ವಾಸನೆ ಪಡೆವ ಹೆಂಡತಿಗೆ, ನಿಜವಾಗಿಯೂ ಹಣ ಸಿಕ್ಕು ಕೊಡಬೇಕಾಗಿ ಬರುತ್ತದೆ. ಆಶ್ವಾಸನೆ ಪಡೆದ ಹೆಂಡತಿಯ ತಂತ್ರ ಫಲಿಸುತ್ತದೆ. ಆದರೆ ನಂತರ, ಸೀರೆಗಳ ಜಾಹೀರಾತುಗಳನ್ನೂ, ಅಂತಹ ಸೀರೆಯಲ್ಲಿ ಆಕೆಯ ಅಂದ ಹೆಚ್ಚುತ್ತದೆಂದೂ ಹೇಳಿ ಹೊಗಳಿಕೆಯ ತಂತ್ರ ಬಳಸುವ ರಂಗಮ್ಮಯ್ಯ, ಅವಳಿಗೆ ಒಪ್ಪುವಂತಹ ಫ್ಯಾನ್ಸಿ ಸೀರೆಯನ್ನು ತಾನೇ ತರುವುದಾಗಿ ಹೇಳಿ, ಅವಳಿಂದ ಹಣ ವಾಪಸ್ ಪಡೆದು, ತನ್ನ ಇಸ್ಪೀಟು ಸಾಲವನ್ನು ತೀರಿಸಿಕೊಳ್ಳುವಲ್ಲಿ ಸಫಲನಾಗುತ್ತಾನೆ.

ಪ್ರತಿನಿತ್ಯ ಕಾಫಿಪುಡಿಯನ್ನು ಕಡ ಕೇಳಲು ಬರುವ ಪಕ್ಕದಮನೆ ಲಲಿತೆ ಎಂಬ ಹುಡುಗಿಗೆ ಮದುವೆ ಗೊತ್ತಾದಾಗ, ಅವಳಿಗೆ ಏನು ಉಡುಗೊರೆ ಕೊಡಬೇಕು ಎಂಬ ಜವಾಬ್ದಾರಿಯನ್ನು, ತಾನು ಹೊತ್ತುಕೊಳ್ಳುವ ಗಂಡ, ಮದುವೆ ದಿನ ಒಂದು ಜರಿ ಕಾಗದದಲ್ಲಿ ಸುತ್ತಿದ ಕಾಣಿಕೆಯನ್ನು ಪುರೋಹಿತರ ಮೂಲಕ ಓದಿಸುತ್ತಾನೆ. ನಂತರ ಇವರ ಮನೆಗೆ ಅರಿಷಿಣ ಕುಂಕುಮ ಕೊಡಲು, ಲಲಿತಳ ತಾಯಿ ಬಂದಾಗ, 'ನೀವು ಕೊಟ್ಟ ಉಡುಗೊರೆಯನ್ನು ಲಲಿತ ಜೀವನದಲ್ಲಿ ಮರೆಯಲು ಸಾಧ್ಯವೇ ಇಲ್ಲ' ಎಂದು ಹೇಳಿ, ಬಂದ ಕೆಲಸ ಮುಗಿಸಿ ಹಿಂತಿರುಗುತ್ತಾಳೆ, 'ಜರಿ ಕಾಗದದಲ್ಲಿ ಸುತ್ತಿದ ಒಂದು ಬಟ್ಟಲು ಕಾಫಿ ಪುಡಿ"ಯೇ ಗಂಡ ಕೊಟ್ಟಿದ್ದ ಆ ಕಾಣಿಕೆ. ಮರ್ಯಾದೆ ಇರುವವರು ಇನ್ನೊಮ್ಮೆ ಕಡ ಕೇಳದಂತೆ ಮಾಡಲು, ಗಂಡ ಬಳಸಿದ ಒಂದು ತಂತ್ರ ಇದು ಎಂದುಕೊಳ್ಳಬಹುದು.

ಕಾಲೇಜಿನಲ್ಲಿ ಓದುವ ಲೀಲಳಿಗೆ; ವೆಂಕಜ್ಜಿಯಿಂದ ನಾಲ್ಕೆಕರೆ ಜಮೀನು ಸಿಗಬಹುದೆನ್ನುವ ಆಸೆಯಿಂದಾಗಿ, ಆಗಾಗ ಸಿದ್ದೀಕಟ್ಟೆಗೆ ಹೋಗಿ ಅಜ್ಜಿಗೆ ನಮಸ್ಕಾರ ಹಾಕಿ ಮಾತಾಡಿಸಿ ಬರುವ ನೇಮ ಇಟ್ಟುಕೊಳ್ಳಬೇಕೆಂದು ಕಾಗದ ಬರೆದು ತಿಳಿಸುತ್ತಾಳೆ ಅವಳಮ್ಮ. ಆ ಆಸೆಗೆ "ಏನು ಮಾಡಲಿ ವೆಂಕಜ್ಜಿ, ಬಂದ ಗಂಡುಗಳೆಲ್ಲಾ 'ಹುಡುಗೀಗೆ ಏನು ಸಂಪಾದನೆ, ಎಷ್ಟು ಆಸ್ತಿ ಇದೆ ಅಂತಲೇ

ಕೇಳುತ್ತಾರೆ. ನಮ್ಮಪ್ಪನ ಆಸ್ತಿ ಗೊತ್ತಲ್ಲಾ? ಖಾಲಿ ನಶ್ಯದ ಡಬ್ಬಿ." ಎಂದು ಲೀಲ, ತಾನೇ ಜಾಣೆ ಎಂಬಂತೆ "ಅದಕ್ಕೇನೇ ಓದಿ, ಸಂಪಾದಿಸಿ, ಸಂಸಾರ ಮಾಡುಕ್ಕೆ ಬೇಕಾಗುವಷ್ಟು ಹಣ ಸಿಕ್ಕಾಗ, ಮದುವೆ ಮಾಡಿಕೊಳ್ಳೋಣ ಅಂತಿದೀನಿ' ಎನ್ನುತ್ತಾಳೆ. ಇವಳಿಗಿಂತ ಘಾಟಿಯಾದ ವೆಂಕಜ್ಜಿ, "ನೀನು ಜಾಣೆ ಹಾಗೇ ಮಾಡು. ನಿನಗೆ ಕೊಡಬೇಕೆಂದಿದ್ದ ನಾಲ್ಕೆಕರೆಗಾಗಿಯೇ ಹುಡುಗ ಮದುವೆ ಮಾಡಿಕೊಂಡರೆ ಎಂಬ ಅನುಮಾನ ಬಂದುದರಿಂದ, ಅದನ್ನು ಸಿದ್ದಿಕಟ್ಟೆಯ ಅಶ್ವತ್ಥ ನಿಲಯಕ್ಕೆ ದಾನ ಮಾಡಿಬಿಟ್ಟಿದ್ದೀನಿ" ಎನ್ನುತ್ತಾಳೆ. ಈ ಸುದ್ದಿ ತಿಳಿದ ಲೀಲಳ ಅಮ್ಮ, 'ಇನ್ನು ಮುಂದೆ ಸಿದ್ದಿಕಟ್ಟೆಯ ಕಡೆ ಹೋಗುವ ನೆಪ ಮಾಡಿಕೊಂಡು ಮಾರ್ಕಟ್‌ನಲ್ಲೆಲ್ಲಾ ಸುತ್ತ ಬೇಡ" ಎಂದು ತನ್ನ ಉಪದೇಶದ ಪ್ಲೇಟನ್ನು ಮಗುಚಿ ಹಾಕುತ್ತಾಳೆ. ಅಜ್ಜಿ, ಅಮ್ಮಂದಿರ ಪ್ರೀತಿಯ ನಾಟಕಗಳೆಲ್ಲ ಆಸ್ತಿ ಅಥವಾ ಹಣಕ್ಕಾಗಿಯೇ ಎಂಬುದು 'ಸಿದ್ದಿಕಟ್ಟೆಯ ವೆಂಕಜ್ಜಿ' ಲೇಖನದ ಸಾರ.

ಈ ಪುಸ್ತಕದಲ್ಲಿರುವ ಇನ್ನೊಂದು ರೀತಿಯ ಲೇಖನಗಳ ಪ್ರಮುಖ ಅಂಶವೆಂದರೆ, ವ್ಯಕ್ತಿ ಭಾವಿಸುವುದೊಂದು ನಡೆಯುವ ಹಾಸ್ಯದ ನಿಜ ಸಂಗತಿ ಇನ್ನೊಂದು ಎಂಬುದು. 'ಮಿ. ಅಲ್ಕಾಟರ ಭೇಟಿ', 'ಕಾಲು ಕೆರೀತಾ', 'ಹೆಣ್ಣು ನೋಡುಕ್ಕೆ ಬಂದಾಗ', 'ರಂಗಜ್ಜಿ ಹಾಕಿದ ಮಣಿಪಟ' ಮುಂತಾದವು ಈ ತೆರನ ಬರಹಗಳು.

'ಮಿ. ಅಲ್ಕಾಟರ ಭೇಟಿ'ಯಲ್ಲಿ, ಭಾರತ ಮತ್ತು ಅಮೇರಿಕಾದೊಡನೆ ವ್ಯಾಪಾರ ಕುದುರಿಸುವ ಆಶಯದೊಂದಿಗೆ, ಭಾರತಕ್ಕೆ ಬರುವ ಅಮೆರಿಕಾದ ಮಿ. ಡಾನ್ ಅಲ್ಕಾಟರನ್ನು ಹಳೇ ಕಂದಾಚಾರದ ಕುಮಾರ್ ಮನೆಗೆ, ಗೆಳೆಯ ಶಾಮಣ್ಣ ಕರೆತರುತ್ತಾನೆ. ಅಂತಹ ದೊಡ್ಡ ಮನುಷ್ಯ ಮನೆಗೆ ಬರುತ್ತಾನೆಂದು, ಹರಿದ ಬೆತ್ತದ ಕುರ್ಚಿ ಮುಚ್ಚಲು ತ್ಯಾಪೆಯ ದಟ್ಟ ಹಾಕಿ, ಸಂದೂಕದ ಮೇಲೆ ಹಳೆಯ ಬಿಳಿ ಸೀರೆ ಮುಚ್ಚಿ, ಸಾಧ್ಯವಾದಷ್ಟೂ ಅಂದ ಕಾಣಿಸುವ ಪ್ರಯತ್ನ ಮಾಡುತ್ತಾನೆ ಕುಮಾರ್. ಆದರೆ ಆ ಅಲ್ಕಾಟರು ಅದೇ ತ್ಯಾಪೆಯ ದಟ್ಟ, ಮಣಕುಹಿಡಿದ ಮಣಿಸರ, ಉಲ್ಲನ್ ದಾರದ ಪಟಗಳು, ಇತ್ಯಾದಿಗಳನ್ನು ನೋಡಿ, ನೋಡಿ, ಸೊಗಸಾದ ಕಲಾಪೂರ್ಣ ಕೃತಿಗಳೆಂದು ಮನಸ್ಸು ಕುಣಿಸಿ, ಮೆಚ್ಚಿ ಮಾತಾಡುತ್ತಾರೆ. ಭರತ ನಾಟ್ಯದ ಕುಣಿತ ಕುಣಿಯುತ್ತಾರೆ. ಅಲ್ಲದೆ, ಮಗುವಿಗೆ ಹಾಸುವ ಹಾಗೂ ಅದರ ಮೇಲೆ ಅದು ಎಲ್ಲವನ್ನೂ ಮಾಡಿರುವ, ದಟ್ಟವನ್ನು ಒಂದು ಸಾವಿರ ರೂಪಾಯಿ ಕೊಟ್ಟು, ಕಲಾಕೃತಿ ಎಂದು ಕೊಂಡುಕೊಳ್ಳುತ್ತಾರೆ. ಇದು ಇದರಲ್ಲಿಯ ತಮಾಷೆ.

'ಕಾಲು ಕೆರೀತಾ' ಲೇಖನದಲ್ಲಿ, ಪತಿ ಶಾಮಾಶಾಸ್ತ್ರಿಗಳ ಜೊತೆ ಎಕ್ಸಿಬಿಷನ್‌ಗೆ ಹೋಗುವ ಪತ್ನಿ, ಅಲ್ಲಿ ಸೋದರ ಸೊಸೆ ಸುಮಿತ್ರೆ ಜೊತೆ ತುರಿಯುವ ಮಣೆ ತರಲೆಂದು ಬೇರ್ಪಡುತ್ತಾರೆ. ಶಾಮಾಶಾಸ್ತ್ರಿಗಳು ರಾಮರಾವ್ ಜೊತೆ ಸುತ್ತುತ್ತಾರೆ. ಒಂದು ಕಡೆ ಒಬ್ಬ ಹೆಂಗಸು ಬಗ್ಗಿ ಕಾಲು ಕೆರಿತಾ, ಸೊಂಟ ಅಲುಗಿಸುತ್ತ ನಿಂತಿದ್ದರೆ ಅವಳ ಜೊತೆಗಿದ್ದವಳು ಗಾಳಿಗೆ ಹಾರುವ ಸೆರಗನ್ನು ಬೆರಳ ತುದಿಯಿಂದ ಬಿಗಿ ಹಿಡಿದಿರುತ್ತಾಳೆ. ಈ ಲಕ್ಷಣಗಳು ಅಭಿಸಾರಿಕೆಯರದೆಂದೂ, ಇಂತಹವರು ಇಲ್ಲಿಗೆ ಬಂದಿದ್ದಾರೆಯೇ ಎಂದೂ ಅನುಮಾನಿಸುವ ಶಾಸ್ತ್ರಿಗಳ ಬಳಿಗೇ ಆ ಹೆಂಗಸರಿಬ್ಬರೂ ಬಂದಾಗ ಅವರು ಬೇರಾರೂ ಅಲ್ಲ, ಚಪ್ಪಲಿಯ ಉಂಗುಷ್ಟ ಕಿತ್ತ ತಮ್ಮ ಪತ್ನಿ ಹಾಗೂ ಹುರಿಗಾಳು ಹಿಡಿದ ಸೊಸೆ ಸುಮಿತ್ರೆ ಎಂಬುದು ಸ್ಪಷ್ಟಗೊಳ್ಳುವುದೊಂದು ಮೋಜಿನ ವಿಷಯ.

ಸಂಪ್ರದಾಯಸ್ಥ ಮನೆಯ ಸುಬ್ಬಾಶಾಸ್ತ್ರಿಗಳು ತಮ್ಮ ಮನೆಗೆ ಹೆಣ್ಣು ನೋಡಲು ಬರುವವರೆಂದು, ಜನಿವಾರ ಹಾಕಿಕೊಂಡು, ಮನೆಯ ತುಂಬ ವೈದಿಕದ ಕಳೆ ತುಂಬಿಸಲು, ಕಂಡಲ್ಲಿ ಕೆಮ್ಮಣ್ಣು ಕಾರಣೆ ಹಾಕಿ, ದೇವರಪಟ, ಕೃಷ್ಣಾಜಿನ, ಹುಲಿಚರ್ಮ, ಮುಂತಾದವುಗಳೇ ತಾಂಡವವಾಡುವಂತೆ ಮನೆಯ ವ್ಯವಸ್ಥೆ ಬದಲಿಸುವ ರಂಗರಾಯರು, ಮಂಚದ ಕೆಳಗಿನ ತಮ್ಮ ಶೀಷೆಯನ್ನೇ ಮುಚ್ಚಿಡಲು ಮರೆಯುತ್ತಾರೆ. ನೆಂಟರು ಬಂದು ಹೊರಡುವ ಹೊತ್ತಿಗೆ ಸರಿಯಾಗಿ ಇವರ ಮೂರು ವರ್ಷದ ಮಗು ಆ ಶೀಷೆಯನ್ನು ಅತಿ ಸಂಪ್ರದಾಯಸ್ಥ ಬೀಗಿತಿಯ ಮುಂದೇ ಹಿಡಿದು ಪ್ರದರ್ಶಿಸುತ್ತದೆ. ಶೀಷೆಯ ಅಂದ ನೋಡಿ, ಅದನ್ನು ಕೊಬ್ಬರಿ ಎಣ್ಣೆ ಹಾಕಲೆಂದು ಆಕೆ ಅದನ್ನು ಇಸಕೊಂಡು ಹೋಗುತ್ತಾಳೆ. ಥತ್! ಈ ಕಾರಣಕ್ಕೆ ಇನ್ನು ಈ ಮದುವೆ ತಪ್ಪಿತು ಎಂದು ರಂಗರಾಯರು ಅಂದುಕೊಂಡದ್ದು ನಿಜವಾಗದೇ ಮದುವೆ ನಡೆದೇ ಹೋಗುತ್ತದೆ. "ಅದೊಂದು ಗಂಧದ ನೀರು, ಗಂಗಾಜಲವನ್ನು ತುಂಬಲು ಈಗೆಲ್ಲಾ ಇಂಥ ಚಂದದ ಬಾಟಲುಗಳನ್ನು ಬಳಸುತ್ತಾರೆ" ಎಂದು ವರ ಹೇಳುವ ಮೊದಲೇ ಅವನ ಅಪ್ಪನೇ ಹೇಳಿ, ಬೀಗಿತ್ತಿಯನ್ನು ಯಾಮಾರಿಸಿ ಬಿಟ್ಟಿರುತ್ತಾರೆ. ಶಾಸ್ತ್ರ ಸಂಪ್ರದಾಯಗಳ ವಿಡಂಬನೆಯೂ, ಮೂಢನಂಬಿಕೆಯೂ, ಕಾರ್ಯ ಸಾಧನೆಗೆ ಒಂದು ಸಣ್ಣ ಸುಳ್ಳೂ 'ಹೆಣ್ಣು ನೋಡುಕ್ಕೆ ಬಂದಾಗ' ಎಂಬ ಈ ಬರಹವನ್ನು ಹಾಸ್ಯದ ಸಂಗತಿಯಾಗಿ ಪರಿವರ್ತಿಸುತ್ತದೆ.

'ರಂಗಜ್ಜಿ ಹಾಕಿದ ಮಣಿಪಟ'ದಲ್ಲಿ ಹಳೇ ಟ್ರಂಕೊಂದನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಒಂದು ರಜೆಯ ದಿನ ಮನೆಯವರೆಲ್ಲರೂ

ತೊಡಗುತ್ತಾರೆ. ಆಗ ಕೈಗೆ ಸಿಗುವ ರಂಗಜ್ಜಿ ಹಾಕಿದ ಮಣಿಪಟವನ್ನು ಮುಂಗೋಣೆಯ ಗೋಡೆಯ ಮೇಲೆ ಹಾಕಿದರೆ, ರಂಗಜ್ಜಿಯ ಗಮನಕ್ಕೆ ಬಂದು ಆಕೆ ಬರೆಯುವ ಉಯಿಲಿನಲ್ಲಿ ತಮ್ಮ ಹೆಣ್ಣು ಮಕ್ಕಳಿಗೂ ಪಾಲು ಸಿಗುತ್ತದೆಂದು ದಂಪತಿಗಳು ಯೋಚಿಸಿ ಅದರಂತೆ ಹಾಕುತ್ತಾರೆ. ಆದರೆ ಸುಪ್ರಸಿದ್ಧ ಕತೆಗಾರ ದಂಪತಿಗಳು ಬಂದಾಗ ಅವರು ಅಸಹ್ಯವೆಂದ ಕಾರಣಕ್ಕೆ ಆ ಮಣಿಪಟದ ಮೇಲೆ ಹೊಸ ಕ್ಯಾಲೆಂಡರ್ ತೂಗಿಸಿ ಅದನ್ನು ಮುಚ್ಚುತ್ತಾರೆ. ನಂತರ ಬರುವ ರಂಗಜ್ಜಿ ಮುಚ್ಚಿರುವ ಮಣಿಪಟವನ್ನು ನೋಡಿ ಹಿಂತಿರುಗಿದಾಗ, ಬರುವ ಹಣವನ್ನು ಕಳೆದುಕೊಳ್ಳುವಂತೆ ಮಾಡಿದೆವಲ್ಲ ಎಂದು ಪರಿತಪಿಸುತ್ತಾರೆ. ಆದರೆ ರಂಗಜ್ಜಿ ಸತ್ತ ಸುದ್ದಿ ತಿಳಿಸುವ ಆಕೆಯ ಲಾಯರ್, ಹೆಣ್ಣು ಮಕ್ಕಳಿಗೆ ತಲಾ ಹತ್ತು ಸಾವಿರದಂತೆ ನಲವತ್ತು ಸಾವಿರಗಳನ್ನೂ ಆಶೀರ್ವದಿಸಿ ಕೊಟ್ಟಿದ್ದಾರೆಂದು ತಿಳಿಸುವ ಕಾಗದ ಬರುತ್ತದೆ.

'ಬಾಗಿಲು'ನಲ್ಲಿ ಇನ್ನೊಂದು ರೀತಿಯ ತಮಾಷೆ. ಮನೆಗೆ ಬರಲಿರುವ ಭಾವಮೈದುನ, ತನ್ನ ಎತ್ತರ, ಗಾತ್ರ, ಅಂಗಾಲಳತೆ ಎಲ್ಲ ಭಾವನದೇ ಅಳತೆ ಎನ್ನುತ್ತ ತನ್ನ ಬಟ್ಟೆ, ಬರೆ, ಬೂಡ್ಸು, ಕಾಲುಚೀಲ, ಚಪ್ಪಲಿ, ಚೌರದ ಸಾಮಾನುಗಳನ್ನೆಲ್ಲ, ಅವನ ಕೈಗೆ ಸಿಗದಂತೆ ಸುರಕ್ಷಿತ ಜಾಗದಲ್ಲಿ ಇಡಲೆಂದು ಪಟ್ಟಿ ಮಾಡಿ, ಅಗಸರ ಅಂಗಡಿಯಲ್ಲಿಟ್ಟು, ಹದಿನೈದು ದಿನಗಳು ವಾಪಸ್ ಕೊಡದಂತೆ ಇಟ್ಟುಕೊಳ್ಳಬೇಕೆಂದು ಪತ್ರ ಬರೆದು ಅಂಚೆಗೆ ಹಾಕಲು ಹೊರಟರೆ, ಹೊಸ ಮನೆಯಲ್ಲಿ ದಿಕ್ಕು ತಪ್ಪಿದೆನೆಂದು ಹೆಂಡತಿ, ಆಗಾಗ ಗಂಡನ ಕೋಣೆಗೆ ಪುನಃ ಬರುವಂತೆ, ಇವನೂ ದಿಕ್ಕು ತಪ್ಪಿ ಉಗ್ರಾಣಕ್ಕೆ ಪ್ರವೇಶಿಸಿರುತ್ತಾನೆ. ಹೊಸ ಮನೆಯ ಬಾಗಿಲು ಇವನ ದಿಕ್ಕು ತಪ್ಪಿಸುತ್ತದೆ.

ಈ ಪುಸ್ತಕದ ಲೇಖನಗಳಲ್ಲಿ ಅಲ್ಲಲ್ಲಿ ಕಾಣ ಬರುವ ಕೆಲವು ವಿಡಂಬನಾತ್ಮಕ ವಾಕ್ಯಗಳು ನಗು ತರಿಸುವ ಜೊತೆಗೆ ರಾಜ್ಯದಲ್ಲಿ ನಡೆಯುವ ಸತ್ಯ ವಿಚಾರಗಳತ್ತ ಬೆಟ್ಟು ಮಾಡುತ್ತವೆ. "ರಾಜೀವಪುರ ಸಂಸ್ಥಾನಕ್ಕೆ ಸ್ವಾತಂತ್ರ್ಯ ದೊರೆಕಿತಲ್ಲಾ! ಆಗ ಅವರು ರಾಜ್ಯದ ಹೆಸರನ್ನು ಬದಲಾಯಿಸಿದರು. ಅದೇ ಅಲ್ಲಿನ ಜನತೆ ಮಾಡಿದ ಮೊದಲ ಕೆಲಸ. ಆರಾಂ ಸಂಸ್ಥಾನ ಅಂತ ಹೊಸ ಹೆಸರಿಟ್ಟರು. "ಈ ರಾಜ್ಯದಲ್ಲಿ ಎಲ್ಲರೂ ಆರಾಂ ಆಗಿರುವಂತೆ ಮಾಡುವುದೇ ನಮ್ಮ ಧ್ಯೇಯ, ಗುರಿ ಅಂತ ಪ್ರಕಟಣೆ ಹೊರಡಿಸಿದರು. ಸ್ವಾತಂತ್ರ್ಯಾನಂತರ ಅವರು ಮಾಡಿದ ಎರಡು ಕೆಲಸ ಅಂದರೆ ಕರ್ಣಾಟಕದ ಗ್ಯಾಸೆಟಿಯರಿನಲ್ಲಿ ರಾಜೀವಪುರ ಅಂತ ಇದ್ದುದನ್ನು ಆರಾಂ ಸಂಸ್ಥಾನ ಅಂತ ತಿದ್ದುಪಡಿ ಮಾಡಿಸಿ

ಅಚ್ಚು ಹಾಕಿಸಿದ್ದು. ಈ ಎರಡು ಮಹತ್ಕಾರ್ಯಗಳನ್ನು ಸಾಧಿಸಿದ ನಂತರ ಜನತೆ ಸುಸ್ತಾಗಿ ಹೋಯಿತು. ಆರಾಮಾಗಿ ಬಿಟ್ಟರು" (ಈರಣ್ಣ ಬಸವಣ್ಣ ಇವರ ಸಲಹೆ) – ಈ ಮಾತು ನಮ್ಮ ರಾಜ್ಯದ ಹೆಸರಿನ ಬದಲಾವಣೆಗೆ ಮತ್ತು ಜನತೆಯ ಆರಾಮದ ಗುಣಕ್ಕೆ ಅನ್ವಯಿಸುವ ಮಾತೂ ಆಗಬಹುದು.

"ದುಡಿಯುವವರದೇ ದೊಡ್ಡಿ" ಎಂದು ಹೆದ್ದಕ್ಷರಗಳಲ್ಲಿ ಅಚ್ಚು ಹಾಕಿಸಿದರು. "ನೀವು ಉಳುತ್ತಿರುವ ಭೂಮಿ ನಿಮ್ಮದೇ ಇನ್ನು ಮೇಲೆ, ಇರುವ ಮನೆ ನಿಮ್ಮದೇ, ಮೆಟ್ಟಿದ ಮೆಟ್ಟಿಲು ತಮ್ಮದೇ" ಎಂದು ಜನತೆಗೆ ಆಶ್ವಾಸನೆ ಕೊಟ್ಟು, ಯಾರದೋ ಸ್ವತ್ತನ್ನು ಧಾರಾಳವಾಗಿ ದಾನ ಮಾಡಿದಾಗ ಮಂದೆ ಬೆಳೆಯಿತು" ಎಂಬಂತಹ ಮಾತುಗಳು ಗಂಭೀರ ಚಿಂತನೆಗೆ ತೊಡಗಿಸುವಂತಹವು. "ರಾಮರಾಯರು ಗೌರಮ್ಮನನ್ನು ನೋಡಿದರು. ಎರಡು ಕಣ್ಣು ತುಂಬಾ ನೋಡುವ ದೃಶ್ಯ. ಕಳೆದ ಹತ್ತು ವರ್ಷಗಳಲ್ಲಿ ಮೂರು ಸಾರಿ ಮನೆ ಬಾಗಿಲನ್ನು ದೊಡ್ಡದು ಮಾಡಿಸಬೇಕಾದ್ದನ್ನೂ ಜ್ಞಾಪಿಸಿಕೊಂಡರು". (ಗೌರಿ ಉಡುಗೊರೆ) ಮೇಲ್ಛಾವಣಿಯ ಮೇಲೆ ಸಹಸ್ರ ಟೈಪ್‌ರೈಟರ್‌ಗಳನ್ನು ಸಹಸ್ರ ಮುಖಿಯರು ಟಕಟಕ ಮಾಡಿದಂತೆ, ಮಳೆಯ ಹನಿ ಬೀಳಲಾರಂಭಿಸಿತು" (ನಂಬಬಾರದು ಈ ಹೆಂಗಸರನ್ನು) "ಕಣ್ಣ ನೋಟ ಇರಿಯುವಂತಾಗಿದ್ದರೆ ಆಕೆ ನನ್ನ ಕಡೆ ಬೀರಿದ ನೋಟ ನನ್ನ ಎದೆಯನ್ನು ನಿರಾಯಾಸವಾಗಿ ಕೋರೈಸಿ, ಆರಾಂ ಕುರ್ಚಿಯ ಬೆನ್ನು ಭೇದಿಸಿಕೊಂಡು, ಅದರ ಹಿಂದೆ ಇದ್ದ ಎರಡು ಅಡಿ ಮಣ್ಣಿನ ಗೋಡೆಯನ್ನು ಹಾದು ಹೊರಕ್ಕೆ ಕಾಣಿಸುತ್ತಿತ್ತು. ಅಷ್ಟು ತೀಕ್ಷ್ಣವಾಗಿತ್ತು". (ರಂಗಜ್ಜಿ ಹಾಕಿದ ಮಣಿಪಟ). "ಹುಲಿ ಮೇಲೆ ಹಾವನ್ನು ಬಿಟ್ಟು, ಹಾವಿನಮೇಲೆ ಚಿರತೆ ಬಿಟ್ಟು ತಾನು ನುಣುಚಿಕೊಂಡು ಬಿಡುತ್ತಾನೆ" (ಅಯ್ಯಯ್ಯೋ ಎಂದಳು ಶಾಂತಾ) ಎಂಬಂತಹ ವಾಕ್ಯಗಳು ಓದಲು ಖುಷಿ ಕೊಡುತ್ತವೆ.

**ಕಾಲ (1973) :**

ಕಾಲದ ಅರ್ಥ, ಚಲನ, ದೇಶ, ಮನಸ್ಸಿನ ಚಟುವಟಿಕೆಗಳು, ಕಾಲದ ಸ್ಥಬ್ದತೆ, ಧ್ಯಾನ ಮತ್ತು ದೇಹದ ಕಾಲ, ಧ್ಯಾನ ಮತ್ತು ಮನೋತೀತ ಕಾಲ, ಕಾಲ ಭೈರವಾಷ್ಟಕ, ಮುಂತಾಗಿ ಕಾಲದ ವಿವಿಧ ಆಯಾಮಗಳನ್ನು ವೈಜ್ಞಾನಿಕ ವಿಚಾರಕ್ಕೊಳಪಡಿಸಿ ಚಿಂತನ ಮಾಡಿರುವುದು ಈ ಪುಸ್ತಕದ ವಿಶೇಷತೆ. ಇಂತಹ ಕ್ಲಿಷ್ಟವಾದ ಹಾಗೂ ಜೀವನಕ್ಕೆ ಅತ್ಯಗತ್ಯವಿಲ್ಲದ ವಿಷಯಗಳ ಕುರಿತು ಬರೆಯುವುದು, "ಪ್ರಾಯಶಃ ಪೆಚ್ಚುತನವಿರಬಹುದು" ಎನ್ನುವ ಈ ಸಾಹಿತಿ,

“ಆದರೆ ಜ್ಞಾನಾರ್ಜನೆಗೆ ಪ್ರತಿಫಲವೂ ಅನಗತ್ಯ” ಎಂಬ ಉತ್ತಮ ಅನಿಸಿಕೆಯನ್ನು ತಿಳಿಸಿ, ಈ ಪುಸ್ತಕದ ರಚನೆ, ಚಿಂತನೆಗಳೆಲ್ಲದರ ಉದ್ದೇಶ ಕೇವಲ ಜ್ಞಾನಾರ್ಜನೆ ಎಂಬುದನ್ನು ಸ್ಪಷ್ಟ ಪಡಿಸುತ್ತಾರೆ. ಐನ್‌ಸ್ಟೀನ್‌ನ ಪ್ರಯೋಗಗಳಿಂದ ಪ್ರಾರಂಭವಾಗಿ, ಭೂತ, ವರ್ತಮಾನ ಮತ್ತು ಭವಿಷ್ಯತ್, ಎಂಬ ಮೂರು ಹಂತಗಳಲ್ಲಿ ಕಾಲ ಚಲಿಸುತ್ತಿರುವುದು, ಎಲ್ಲರಿಗೂ ತಿಳಿದಿರುವ ಅಂಶ. ಆದರೆ ಈ ಕಾಲವು ಹಿಂದಕ್ಕೆ ಮುಂದಕ್ಕೆ ಚಲಿಸಿರುವ ಬಗ್ಗೆ, ಸ್ತಬ್ಧಗೊಳ್ಳುವುದರ ಬಗ್ಗೆಯೂ, ಎಲ್ಲ ಆಯಾಮಗಳಲ್ಲಿ, ಆಧುನಿಕ ವಿಜ್ಞಾನದ ಬೆಳಕಿನಲ್ಲಿ ಪರಿಶೀಲಿಸಿ, ಭಾರತೀಯ ಸಂಸ್ಕೃತಿಯೊಂದಿಗೆ ಬೆರೆಸಿ, ಇವರು ಚಿಂತಿಸಿರುವುದರ ಫಲವೇ ಈ ಅನುಪಮ ‘ಕಾಲ’ ಕೃತಿ.

ವೈಕುಂಠದ ದ್ವಾರಪಾಲಕರಾದ ಜಯ ಮತ್ತು ವಿಜಯರು, ತಮ್ಮ ಕಾವಲಿನ ಕರ್ತವ್ಯದಲ್ಲಿ ಒಮ್ಮೆ ಎಸಗಿದ ಲೋಪದಿಂದಾಗಿ ವಿಷ್ಣುವಿನಿಂದ ಶಾಪಗ್ರಸ್ಥರಾಗುವ ಪುರಾಣ ಕಥೆಯನ್ನು ಕಾಲಗತಿಯಲ್ಲಿ ವಿಶ್ಲೇಷಿಸಿ; ದ್ವೇಷ, ಹಿಂಸೆ, ಕ್ರೌರ್ಯ ಇತ್ಯಾದಿ ಮನೋಭಾವಗಳಿಂದ ಕಾಲದ ವೇಗವನ್ನು ತೀವ್ರಗೊಳಿಸಬಹುದು ಮತ್ತು ಬೇಗ ಕಾಲವಾಗಬಹುದು ಹಾಗೂ ಮೋಕ್ಷ ಹೊಂದಬಹುದು ಎಂಬ ನೀತಿಯನ್ನು ಮನಗಾಣುತ್ತಾರೆ. ಜಾತಕದನ್ವಯ ಅಲ್ಪಾಯುಷಿಯಾದ ಭಕ್ತ ಮಾರ್ಕಾಂಡೇಯನ ಕಥೆಯನ್ನು ಕಾಲದ ಹರಿವಿನಲ್ಲಿ ವಿಶ್ಲೇಷಿಸಿ, ಕಾಲದ ವೇಗವು ಮಂದವಾಗುವುದರ ಬಗ್ಗೆ ಅರ್ಥವಾಗುವಂತೆ ನಿರೂಪಿಸಿದ್ದಾರೆ. ಗೌತಮ ಮುನಿಗಳ ಪತ್ನಿ ಅಹಲ್ಯೆಯು ಶಾಪಗ್ರಸ್ಥಳಾಗಿ ಕಲ್ಲಾಗಿ ಬಿದ್ದ ಕಾಲವನ್ನು ವಿಶ್ಲೇಷಿಸಿ, ಶಾಪ ಪಡೆದಾಗಿನಿಂದ ವಿಮೋಚನೆಗೊಳ್ಳುವವರೆಗಿನ ಅವಧಿಯು ಅವಳ ಜೀವನದಲ್ಲಿ ಸ್ತಬ್ಧಗೊಂಡ ಕಾಲವಾಗಿ ಪರಿಗಣಿಸಿದ್ದಾರೆ. ಇದೇ ರೀತಿ ಯಯಾತಿಯ ಕಥೆಯಲ್ಲಿ ಅವನ ಕಾಲ ಹಿನ್ನಡೆಯುವುದನ್ನು ಗಮನಿಸಿದ್ದಾರೆ. ಪುನರ್ಜನ್ಮದ ಸ್ಮರಣೆಗಳನ್ನು ಸರ್ಜನ್ ಒಬ್ಬರು, ಸರ್ಜರಿ ಸಮಯದಲ್ಲಿ ತೀರಿಹೋಗಲಿದ್ದ ರೋಗಿಯ ಆಯಸ್ಸನ್ನು ತಮ್ಮ ಧ್ಯಾನದಿಂದ ಪುನಃ ದೊರಕಿಸಿಕೊಟ್ಟು, ಆ ರೋಗಿಯ ಜೀವಿತ ಕಾಲದ ಅವಧಿಯನ್ನು ವಿಸ್ತರಿಸಿ ಕೊಟ್ಟ ಘಟನೆಯನ್ನು; ಮರಣಶಯ್ಯೆಯಲ್ಲಿದ್ದ ಹರೆಯದ ರೋಗಿಯೊಬ್ಬಳು ಫ್ರಾನ್ಸ್ ದೇಶದ ಲೂರ್ಡ್ಸ್ ಎಂಬ ಸ್ಥಳಕ್ಕೆ ಹೋದ ಮೂರೇ ದಿನದಲ್ಲಿ ಆರೋಗ್ಯವನ್ನು ಹಿಂಪಡೆವ ಮೂಲಕ, ‘ಸ್ಥಳ ಮಹಾತ್ಮೆ’ಯನ್ನು; ಕಾಲದ ಗತಿಯಲ್ಲಿ ಗಮನಿಸಿರುವುದು ಆಸಕ್ತಿ ಹಾಗೂ ಕುತೂಹಲಪೂರ್ಣ ಅಂಶ.

ಭಯವು ಅತಿಯಾಗಿ ಭಯಾನಕ (ಟೆರರ್) ಸ್ಥಿತಿಗೆ ಉಲ್ಬಣಿಸಿದಾಗ ಕಾಲವು ಸ್ಥಬ್ಧಗೊಳ್ಳುವುದು ಹೇಗೆ ಎಂಬುದನ್ನು ಆಸಕ್ತಿಪೂರ್ಣ ಉದಾಹರಣೆಯೊಂದಿಗೆ ಮಂಡಿಸಿದ್ದಾರೆ. ಮಲೆನಾಡಿನ ಕಾಡಿನಲ್ಲಿ ಹುಲಿಯನ್ನು ಕಂಡ ವ್ಯಕ್ತಿಯೊಬ್ಬ ಹೆದರಿ, ಅವನಿಗೇ ತಿಳಿಯದೇ, ಮರ ಏರಿ ಅದೆಷ್ಟು ಹೊತ್ತು ಕುಳಿತಿದ್ದನೋ. ರಾಶಿಯವರ ಜೀಪು ಅತ್ತ ಬಂದಾಗ, ಕೈಕಾಲು ಅಥವಾ ಸೊಂಟ ಮುರಿಯವುದರ ಕಡೆಯೂ ಲಕ್ಷ್ಯವಿಲ್ಲದೆ, ತನ್ನ ಜೀವ ಉಳಿಸಿಕೊಳ್ಳುವ ಒಂದೇ ಒಂದು ಆಸೆಯಿಂದ ಇವರ ಮುಂದೆ ಥಟಗನೆ ಹಾರಿ ನಿಂತ ಒಂದು ಘಟನೆ, ಭಯದಿಂದಾಗಿ ಸ್ತಬ್ಧಗೊಂಡ ಕಾಲಕ್ಕೆ ಇವರು ನೀಡಿರುವ ಒಂದು ಉದಾಹರಣೆ.

ಪುರಾಣ, ಮಹಾಕಾವ್ಯಗಳು ಮಾತ್ರವಲ್ಲ, ಮನೋವಿಜ್ಞಾನ, ವಿಜ್ಞಾನದ ಮೈದಾನಗಳಲ್ಲೂ ಓದುಗರನ್ನು ಓಡಾಡಿಸುವುದು ಈ ಕೃತಿಯ ವೈಶಿಷ್ಟ್ಯ. ಬೆಳದಿಂಗಳ ತಂಪು, ಚಂದ್ರನ ಏರಿಳಿತಗಳಿಗೆ ಕಾರಣಗಳನ್ನೂ; ಕೆರಳಿದ ಕುತೂಹಲಕ್ಕೆ ಉತ್ತರ ಹುಡುಕುವಂತಹ ಸಂದರ್ಭಗಳಲ್ಲಿ ಹುಟ್ಟಿದ ವಿಜ್ಞಾನವು ಸಾಧಿಸಿದ ಪ್ರಗತಿಯನ್ನೂ, ಕಾಲದ ದೃಷ್ಟಿಯಿಂದ ಗಮನಿಸಿದ್ದಾರೆ.

"ನೂರು ವರ್ಷಗಳ ಹಿಂದೆ ವಿಜ್ಞಾನದಲ್ಲಿ ಇಪ್ಪತ್ತು ಮೂವತ್ತು ಮುಖ್ಯ ವಿಭಾಗಗಳಿದ್ದುವು. ಭೌತ, ರಸಾಯನ, ಪ್ರಾಣಿ, ಸಸ್ಯ, ಭೂಗರ್ಭ, ಖಗೋಳ, ಇತ್ಯಾದಿ, ಇತ್ಯಾದಿ ಶಾಸ್ತ್ರಗಳು. ಆದರೆ ಈಗ ಈ ಒಂದೊಂದು ಶಾಸ್ತ್ರಗಳಲ್ಲಿಯೂ ಹತ್ತಿಪ್ಪತ್ತು ಮರು ವಿಭಾಗಗಳಿವೆ. ಜೀವವಿಡೀ ವ್ಯಾಸಂಗ ಮಾಡಿದರೂ ಸರಿಯಾಗಿ ತಿಳಿದುಕೊಳ್ಳಲಾಗದಂತಹ ಮರು ವಿಭಾಗಗಳು. ಒಂದು ರೀತಿಯಲ್ಲಿ ಮಾನವನ ಜ್ಞಾನ ಸಂಪಾದನೆಯು ಸ್ಫೋಟಕದ ಹಂತವನ್ನು ಮುಟ್ಟಿದೆ. ತಮ್ಮ ಅಭೀಷ್ಟ ಶಾಸ್ತ್ರಗಳಲ್ಲಿಯೇ ವಿಜ್ಞಾನಿಗಳಿಗೆ ಸಾಕಷ್ಟು ಅಜ್ಞಾನವಿರುವ ಹಂತಕ್ಕೆ ಏರಿದೆ. ಕಾಲಮಾನದ ದೃಷ್ಟಿಯಲ್ಲಿ ಕಳೆದ ಒಂದು ಶತಮಾನದಲ್ಲಿ ವಿಜ್ಞಾನವು ಸಾವಿರ ಸಾವಿರದಷ್ಟು ಹೆಚ್ಚಿದೆ. ಅಂದರೆ space ದೇಶದಲ್ಲಿ ವಿಜ್ಞಾನವು ಹೊರೆ ಹೊರವಾಗಿ ಹೊಮ್ಮುತ್ತಿದೆ. ಸಹಸ್ರಾರು ದಿಕ್ಕುಗಳಲ್ಲಿ; ಸಹಸ್ರಾರು ಶಾಸ್ತ್ರಗಳಲ್ಲಿ. ಆದರೆ ಒಂದೊಂದು ಸಾಧನೆಯೂ ಸ್ವಲ್ಪ ಕಾಲ ಮಾತ್ರ ಬಾಳುತ್ತದೆ. ಹೊಸ ಸಂಶೋಧನೆಗಳಿಂದ ನೂತನ ವಿಷಯಗಳ ತಿಳಿವಳಿಕೆಯಿಂದ ಹಿಂದಿನ ಸಿದ್ಧಾಂತಗಳು ಕ್ಷಯಿಸಿ ಹೋಗುತ್ತವೆ. space ಹೆಚ್ಚಾದರೂ time ಅಲ್ಪ".. ..
..ಎಂಬಂತಹ ಕುತೂಹಲಕರ ವಿಷಯಗಳು;

ಭಾವನಾ ಅನುಭವಗಳ ದೃಷ್ಟಿಯಿಂದ ಕಾಲವು ಯಾವುದೇ ಪ್ರಗತಿಯನ್ನೂ ಸಾಧಿಸದೇ ಕಾಲಾತೀತವಾಗಿರುವುದು, ಭಾವನಾ ಚಟುವಟಿಕೆಗಳು infinity ತಲುಪಿರುವುದು; ಸಂತುಷ್ಟಿಯ ಪ್ರಮಾಣದಲ್ಲಿ ಏರಿಳಿತವಿಲ್ಲದಿರುವುದು ಎಂಬೆಲ್ಲ ವಿಷಯಗಳ ಸುತ್ತ ಇದರಲ್ಲಿ ನಿರೂಪಿತವಾಗಿರುವ ಸರಳ ವಿಶ್ಲೇಷಣೆಗಳು;

"ಕಾಲದ ಗತಿಯನ್ನು ಎಣಿಸಲು ಗಡಿಯಾರವನ್ನು ಬಳಸುವಂತೆ, ಆರೋಗ್ಯವಂತನ ನಾಡಿ ಮಿಡಿತವನ್ನು ಬಳಸಬಹುದು".. . ಕೀಲಿ ಕೊಟ್ಟ ಗಡಿಯಾರವು 36 ಗಂಟೆಗಳು ನಡೆದು ನಂತರ ನಿಂತು ಹೋಗುವಂತೆ ಮಾನವನ ಅಂಗಾಂಗಳು ಜೀವಂತವಿರುವುದು ನಿಯಮಿತ ಕಾಲಾವಧಿಯವರೆಗೆ ಮಾತ್ರ. ಆದರೆ ಗಡಿಯಾರಕ್ಕೆ ಕೀಲಿ ಕೊಟ್ಟು ನಡೆಸುವಂತೆ ಮುಪ್ಪಾದ ಅಂಶಗಳಿಗೆ ಕೀಲಿ ಕೊಡಲಾಗದು", ಎಂಬಂತಹ ವಿವರಣೆಗಳು;

ಮನುಷ್ಯನ ಮುಪ್ಪಿಗೆ ಕಾರಣ ಶೋಧಿಸಿ, ಕಾಯಕಲ್ಪ ಸಾಧಿಸಿದರೆ, ಮುದುಕರೆಲ್ಲರೂ ಯುವಕರಾಗಿಯೇ ಉಳಿದರೆ, ನೈಜ ಯುವಕರಿಗೆ ಬದುಕುವ ಅವಕಾಶ ಕಡಿಮೆಯಾಗಿ ಇಬ್ಬರ ನಡುವೆ ಸಂಘರ್ಷವೇರ್ಪಡುವುದು ಅನಿವಾರ್ಯ" (ಪುಟ 39)ಎಂಬಂತಹ ಆಲೋಚನೆಗಳು;

ಓದುಗರಲ್ಲಿ ಆಸಕ್ತಿ ಕುತೂಹಲಗಳನ್ನು ಕೆರಳಿಸಿ 'ಕಾಲ'ವನ್ನು ಓಡಿಸಿ ಓದಿಸಿಕೊಳ್ಳುತ್ತವೆ. ಮನೋಕಾಲ, ಸಸ್ಯಗಳು ಮತ್ತು ಕಾಲ, ಕ್ರಿಮಿಕೀಟಗಳು ಮತ್ತು ಕಾಲ, ವಶೀಕರಣ ಮತ್ತು ಕಾಲ, ಮನೋತೀತ ಕಾಲ, ಭೌತಶಾಸ್ತ್ರ, ಪ್ರಾರ್ಥನೆ, ಧ್ಯಾನ ಮತ್ತು ಕಾಲ ಮುಂತಾಗಿ ಕಾಲದ ಎಲ್ಲ ಎಲ್ಲ ಹರಹು, ವಿಸ್ತಾರಗಳಲ್ಲಿ ಚಿಂತನ ಮಂಥನ ನಡೆಸಿರುವ ಈ ಕೃತಿಯ ಮಂಗಳ ಅಧ್ಯಾಯದ ಅಂತ್ಯವಾಗುವುದು, ಕಾಲ ಭೈರವಾಷ್ಟಕದಿಂದ ಎಂಬುದೂ ಸೋಜಿಗದ ವಿಷಯವೇ.

ರಾ.ಶಿ.ಯವರು ಬಾಲ್ಯದಲ್ಲಿ ಚಮೂದಳದಲ್ಲಿ ನಡೆದಾಗ ಮಾರ್ಚಿಂಗ್ ಸಾಂಗ್ ಆಗಿ ಹೇಳಿಸುತ್ತಿದ್ದ "ದೇವರಾಜ ಸೇವ್ಯಮಾನ ಪಾವನಾಂಘ್ರಿ ಪಂಕಜಂ" .. ... "ಕಾಶಿಕಾ ಪುರಾಧಿನಾಥ ಕಾಲಭೈರವಂ ಭಜೆ," ಎಂಬ ಕಾಲ ಭೈರವಾಷ್ಟಕವೇ ಇವರ ಈ ಕೃತಿ ರಚನೆಗೆ ಮೂಲ ಕಾರಣ. ಕಾಲದ ಬಗೆಗಿನ ಚಿಂತನೆ, ಕುತೂಹಲ, ಅಲೆಕ್ಸಿಸ್ ಕ್ಯಾರಲ್‌ನ 'Man the unknown' ದಓದನ್ನು ಅನುಸರಿಸಿ ಕಾಲದ ಕುರಿತು ಹಲವಾರು ಪುಸ್ತಕಗಳ ಅಧ್ಯಯನ– ಈ ಎಲ್ಲವೂ ನಂತರದ ಹೆಜ್ಜೆಗಳು. ಕಾಲದ ಬಗ್ಗೆ ತಿಳಿಯಲು ತಾವು ಪಟ್ಟ ಶ್ರಮ,

ಕಷ್ಟ, ಒದ್ದಾಟಗಳ ನೆನೆಸಿ, ನಂತರ ಪಟ್ಟ ಪಶ್ಚಾತ್ತಾಪ ನಿರ್ಮೂಲನಕ್ಕೆ ಇವರು ಕಂಡುಕೊಂಡ ದಾರಿಯೇ ಇದನ್ನೆಲ್ಲ ಓದುಗರಿಗೆ ಹಂಚುವುದು ಎಂಬುದು.

"ಭವಾಬ್ಧಿ ಸಾಗರದಂತಿರುವ ಈ ಲೋಕದಲ್ಲೂ ಮತ್ತು ಪರಂ, ಸಾವಿನಾಚೆಯ ಊಹಾ ಲೋಕದಲ್ಲೂ, (ತಾರಕಂ) ಮಂಗಳದಾಯಕನೂ, ಸುರಕ್ಷಿತವಾಗಿ ನಡೆಸುವವನು, ಕಾಲ ಭೈರವನೇ. ದೇಹ ಮತ್ತು ಮನೋಕಾಲಗಳ ಕೊಂಕು ಡೊಂಕು ಗತಿಗಳನ್ನೂ, ಮನೋತೀತ ಕಾಲದ ನೇರ ಹರಿಯುವಿಕೆಯನ್ನೂ ಸಮನ್ವಯಗೊಳಿಸುವವನು ಕಾಲ ಭೈರವ" (ಪುಟ150) .. .. "ವಿಜ್ಞಾನ ಮತ್ತು ಅನುಭವಗಳಿಂದ 'ಕಾಲ'ದ ಅರಿವನ್ನೂ ಪಡೆಯಲು ಯತ್ನಿಸಿ, ದೇಹಕಾಲ, ಮನೋಕಾಲ ಮತ್ತು ಮನೋತೀತ ಕಾಲಗಳನ್ನು ತಿಳಿಯುವ ಪ್ರಯತ್ನವು ಕಾಲ ಭೈರವಾಷ್ಟಕವನ್ನು ಪಠಿಸಿದಂತೆಯೇ. ಈ ಅಧ್ಯಯನವು ಮನೋಹರವಾದುದು, ಮನಸ್ಸನ್ನು ಸೆರೆ ಹಿಡಿಯುತ್ತದೆ. ಜ್ಞಾನವನ್ನು ನೀಡುತ್ತದೆ. ಮನೋತೀತ ಕಾಲದ ಅನುಭವವು ದ್ವಂದ್ವ ಪ್ರಪಂಚದಿಂದ ಮುಕ್ತಿಯನ್ನು ಸಾಧಿಸಿಕೊಡುತ್ತದೆ", ಎಂಬ ಕಾರಣಗಳೇ ಅಲ್ಲದೆ ಕಾಲ ಭೈರವನನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕ, ಶೋಕ, ಮೋಹ, ದೈನ್ಯ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್), ಲೋಭ, ಕೋಪ, ತಾಪ, ಇತ್ಯಾದಿ ಮನೋವಿಕಾರಗಳಿಂದ ದೂರವಾಗಿ, ಅನುಭಾವಿಯಾದ ಅರಿವನ್ನೂ, ನೆಮ್ಮದಿಯನ್ನೂ ಪಡೆಯಬಹುದು, ಎಂಬುದನ್ನು ಮಾನವನ ಅನುಭವವು ಒಪ್ಪಿಕೊಂಡಿದೆ ಎನ್ನುವ ರಾ.ಶಿ.ಯವರಿಗೂ ಈ ವಿಧಾನ ಒಪ್ಪಿತವೇ. ಭಾರತೀಯ ಕಾಲಮಾನದ ಕಲ್ಪನೆ, ವಿಜ್ಞಾನದಲ್ಲಿ ಕಾಲದ ಅರ್ಥ, ಭೌತಶಾಸ್ತ್ರದಲ್ಲಿ ಕಾಲದ ವಿವರಣೆ, ಕಾಲಭೈರವಾಷ್ಟಕದ ಪ್ರಾರ್ಥನೆಯಲ್ಲಿ ಅಳವಡಿಕೆಯಾಗಿರುವ ಕಾಲ ತತ್ವ, ಇವೆಲ್ಲದರ ಸಮೀಕರಣದಲ್ಲಿ ಅವರು ಕಂಡುಕೊಂಡಿರುವುದು ಇದೇ ಸತ್ಯವನ್ನು.

ಕಾಲಭೈರವಾಷ್ಟಕ ಸ್ತೋತ್ರದ ಪದ ಪದಗಳನ್ನೂ; ಕಾಲ, ಮನಸ್ಸು, ವಿಜ್ಞಾನಗಳ ಅಂಶಗಳಿಂದಲೂ ಅರ್ಥೈಸಿರುವುದು; ಕಾಲವೆಲ್ಲಿ, ಮನಸ್ಸೆಲ್ಲಿ, ವಿಜ್ಞಾನವೆಲ್ಲಿ, ಕಾಲ ಭೈರವನೆಲ್ಲಿ, ಎತ್ತಣಿಂದೆತ್ತಣದ ಸಂಬಂಧ ಎಂಬ ಪ್ರಶ್ನೆಗೆ ಸಿಕ್ಕುವ ಸ್ಪಷ್ಟವಾದ ಉತ್ತರಗಳು. ಅನುಭವ, ಧ್ಯಾನ, ವಿಜ್ಞಾನ, ಶಾಸ್ತ್ರ, ಮನಸ್ಸು– ಈ ಅರಿವುಗಳೆಲ್ಲವನ್ನೂ ಸಮೀಕರಿಸಿ ವಿಶ್ಲೇಷಿಸಿರುವ ಅಪರೂಪದ ಅಂತ್ಯವೂ ಇರುವ ಉಪಯುಕ್ತ ಪುಸ್ತಕವಿದು. ಹಾಸ್ಯ ಸ್ವಭಾವದ ರಾ.ಶಿ.ಯವರು ಹಾಸ್ಯವನ್ನೂ ಮಾಡಬಲ್ಲರು, ಗಂಭೀರ ಚಿಂತನೆಗಳನ್ನೂ ಮಾಡುವ

ಸಾಮರ್ಥ್ಯವಿರುವವರು ಎಂಬುದನ್ನು ಪರಿಚಯಿಸಿಕೊಡುವ ಅವರ ಇನ್ನಿತರ ಕೃತಿಗಳಲ್ಲಿ ಈ 'ಕಾಲ'ವೂ ಒಂದು. ಪಾಶ್ಚಾತ್ಯ ವಿಜ್ಞಾನಿಗಳು, ಭಾರತದ ತಾತ್ವಿಕರು ಮತ್ತು ಅನುಭಾವಿಗಳು – ಇವರುಗಳ ಚಿಂತನೆಗಳ ಪರಿಶೀಲನೆಯೂ ಇದರಲ್ಲಿ ಮಾಡಿರುವುದನ್ನು ಗಮನಿಸಿದರೆ; ಅವರ ಅಧ್ಯಯನ, ಚಿಂತನೆ, ಜ್ಞಾನದ ಮಟ್ಟ, ಎಲ್ಲ ಗಮನಕ್ಕೆ ತಂದು ವಿಸ್ಮಯದ ವ್ಯಕ್ತಿತ್ವವೊಂದನ್ನು ಮುಂದೆ ನಿಲ್ಲಿಸುತ್ತವೆ ಅವರ ಇಂಥ ಕೃತಿಗಳು.

**'ಕೊರವಂಜಿಯ ಪಡುವಣ ಯಾತ್ರೆ (1968)**:

1960ರಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿನ ವೈದ್ಯಕೀಯ ಪ್ರಗತಿಯ ಕುರಿತು ಅಧ್ಯಯನ ನಡೆಸಲು ಅನುಕೂಲವಾಗುವಂತೆ, ಪ್ರವಾಸೀ ಸಂಸ್ಥೆಯೊಂದು ಕರೆ ನೀಡಿದಾಗ ರಾ.ಶಿ.ಯವರು ಈ ತಂಡದೊಂದಿಗೆ ಪ್ರವಾಸ ಹೊರಟರು. ಈ ಪ್ರವಾಸದಲ್ಲಿ ಅವರು ಸುತ್ತಿದ್ದು ಸ್ವೀಡನ್, ರಷ್ಯಾ, ಫ್ರಾನ್ಸ್, ಇಟಲಿ, ಬ್ರಿಟನ್, ಜರ್ಮನಿ, ಆಸ್ಟ್ರಿಯಾ ದೇಶಗಳನ್ನು. ಈ ಪ್ರವಾಸದಲ್ಲಿ ಆದ ಅನುಭವಗಳ ಬಿಡಿ ಲೇಖನಗಳ ಗುಚ್ಛವೇ 'ಕೊರವಂಜಿಯ ಪಡುವಣ ಯಾತ್ರೆ' ಈ ಯಾತ್ರೆ'ಯಲ್ಲಿಯೂ ರಾಶಿಯವರ ನಗೆದೃಷ್ಟಿ ರಾರಾಜಿಸಿದೆ.

ತಮ್ಮೆಲ್ಲ ಸುಖ ದುಃಖದ ಮಾತುಗಳನ್ನು ಹೇಳಿಕೊಳ್ಳಲು ರಾ.ಶಿ.ಯವರಿಗೆ ಸಿಗುತ್ತಿದ್ದ ಆಪ್ತ ಸಂಗಾತಿಯೆಂದರೆ 'ಕೊರವಂಜಿ'. ಪ್ರವಾಸಕ್ಕೆ ಮುನ್ನ ಈ ಕೊರವಂಜಿಯ ಜೊತೆಗೆ ತಮ್ಮ ಮನದ ತಾಕಲಾಟವನ್ನು ಹೇಳಿಕೊಂಡಿದ್ದು ಹೀಗೆ. "ಕಾಣದ ದೇಶದಲ್ಲಿ ಸಕತ್ ಕಾಹಿಲೆ ಬಿದ್ದು ಘಟ ಒಪ್ಪಿಸುವ ಹಾಗಾದರೆ, ಕಡೆಗಾಲದಲ್ಲಿ ಕನ್ನಡದಲ್ಲಿ ತಿಳಿದವರ ಹತ್ತಿರ ಹೋಗಿ ಬರ್ತೀನಿ, ನೀವೆಲ್ಲಾ ಚೆನ್ನಾಗಿರಿ, ಅಂತ ಚರಮ ಸಂದೇಶ ಹೇಳಲೂ ಆಗುವುದಿಲ್ಲ ಎಂದು ಯೋಚನೆ ಆರಂಭವಾಗಿದೆ", ಎಂದು.

ಪ್ರೇಕ್ಷಣೀಯ ಸ್ಥಳಗಳು, ಹುಚ್ಚೆಬ್ಬಿಸುವ ಆಡಂಬರ, ಕಣ್ಣು ಕೋರೈಸುವ ಭವ್ಯತೆ, ಗಗನ ಚುಂಬಿ ಕಟ್ಟಡಗಳ ನೋಟ, ವಿದೇಶಗಳಲ್ಲಿನ ವಿಸ್ಮಯಗಳು– ಇವೇ ಮುಂತಾದ ವರ್ಣನೆಗಳು ಬಹುತೇಕ ಭಾರತೀಯ ಪ್ರವಾಸಿಗರ ಪ್ರವಾಸ ಕಥನಗಳಲ್ಲಿ ಕಾಣ ಬರುವ ವಿಷಯಗಳು. ಆದರೆ ರಾ.ಶಿ.ಯವರು ಇಲ್ಲಿಯ ವೈದ್ಯಕೀಯ ಪ್ರಗತಿಯ ಕುರಿತಾದ ಅಧ್ಯಯನಕ್ಕೆಂದೇ ಹೋಗಿದ್ದರಿಂದ, ಅವರ ದೃಷ್ಟಿ–ಮನಸ್ಸುಗಳು ತಮ್ಮ ಹೃದಯದ ಕ್ಯಾಮರಾದಲ್ಲಿ ತೆಗೆದುಕೊಂಡು ಬಂದ ಚಿತ್ರಗಳು ಸಂಪೂರ್ಣ ಭಿನ್ನ. ವಿಯೆನ್ನಾದಲ್ಲಿ ಕಂಡಂತಹ ಭವ್ಯವಾದ

ಅರಮನೆಯ ಜೊತೆ ಜೊತೆಗೆ, ರೋಂನಲ್ಲಿ ಕಂಡದ್ದು ನಮ್ಮ ಭಾರತದ ಸಣ್ಣ ಕೇರಿಗಳನ್ನು; ಜೂಲಿಯಸ್ ಸೀಸರ್ ಕೊಲೆಯಾದ ಸ್ಥಳದಲ್ಲಿ ಕಂಡಿದ್ದು ಹಳೆಯ ಮಂಟಪದಂತರಹ ಶಿಥಿಲ ಕಟ್ಟಡ, ಸುತ್ತ ಸಣ್ಣ ಸಣ್ಣ ಗುಹೆಯಂತಹ ಕೊತಡಿಗಳು, ಭಿಕ್ಷಾಟನೆಗೆ ಯೋಗ್ಯ ಜಾಗ, ಬೆಕ್ಕುಗಳ ಕಿರುಚಾಟ–ಪರದಾಟವನ್ನು; ಅಲೆದಾಡಿದ ರಸ್ತೆಗಳಲ್ಲಿ ಕಾಣಿಸಿದ್ದು ಬೆಂಗಳೂರಿನ ಚಿಕ್ಕಪೇಟೆ ದೊಡ್ಡಪೇಟೆಯಂತಹ ಸಂದಿಗೊಂದಿಗಳು, ಚಪ್ಪಡಿ ಹಾಸುಗಳು, ಗಿಜಿಗಿಜಿ ಗುಜಗುಜುಗಳನ್ನು. ಹೋಟೆಲ್‌ನವನಿಂದ ಕೇಳಿದ್ದು ಎಲ್ಲಿ ಬೇಕಾದರೂ ಜೇಬುಗಳ್ಳರಿಬಹುದೆಂಬ ಎಚ್ಚರಿಕೆಯ ಮಾತನ್ನು, ವಿಯೆನ್ನಾದಲ್ಲಿ ನೋಡಿದ್ದು ಏಳು ಚೆಂಡುಗಳನ್ನು ಎಡ–ಬಲದ ಕೈಗಳಿಂದ ಆಡಿಸುತ್ತಿದ್ದ ಹುಡುಗಿಯೊಬ್ಬಳ ಡೊಂಬರಂತಹ ಕುಣಿತವನ್ನು. ಈ ರೀತಿಯ ಬೀದಿ, ಸಂದಿ, ಡೊಂಬರ ಕುಣಿತಗಳು ಅವರ ಅರಿವಿಗೆ ಹೋಗಿವೆ. ಸ್ಟಾಕ್ ಹೋಂನ ಪ್ರಸಿದ್ಧ ಆಸ್ಪತ್ರೆ ಕೆರೋಲಿನ್‌ಸ್ಕಾ ಅಗ್ರಸ್ಥಾನದಲ್ಲಿರುವ ಈ ಆಸ್ಪತ್ರೆಯ ಎಕ್ಸ್–ರೇ ವಿಭಾಗ, ಮಕ್ಕಳ ವಿಭಾಗ, ಟೆಲಿವಿಷನ್ ಸೌಕರ್ಯಗಳು, ರಾತ್ರಿಯಲ್ಲೂ ಬೆಳಗಿನ ಜಾವದಲ್ಲೂ ಆಕ್ರಮಿಸುವ ಹೊಸತರಹದ ಬಿರುಬಿಸಿಲು, ಹೊಸ ಸರ್ಕಾರದ ಊಟ, – ಇವೇ ಮುಂತಾಗಿ ಹತ್ತು ಹಲವು ವಿಷಯಗಳತ್ತ ಇವರ ದೃಷ್ಟಿ ಪಸರಿಸಿದೆ. ವಿಶ್ಲೇಷಣೆ ಮಾಡಿದೆ, ಚಿಂತನೆ ನಡೆಸಿದೆ. ವಿದೇಶಕ್ಕೆ ಹೋಗಿ ಬಂದವರು ಬಹುತೇಕ ಜನ ಅಲ್ಲಿಯ ವ್ಯವಸ್ಥೆಗಳನ್ನು ಬಾಯಿ ತುಂಬ ಹೊಗಳಿ, ನಮ್ಮ ದರಿದ್ರ ದೇಶದಲ್ಲಿ ಅಂತಹ ವ್ಯವಸ್ಥೆ ಸೌಕರ್ಯಗಳಿಲ್ಲವೆಂದು ದೂರುವುದೇ ಹೆಚ್ಚು. ಆದರೆ ಈ ದೇಶಗಳಲ್ಲೂ ಆಗಬಹುದಾದ ತೊಂದರೆಗಳ ಬಗ್ಗೆಯೂ ರಾ.ಶಿ. ಯವರು ಈ ಕೃತಿಯಲ್ಲಿ ಪ್ರಸ್ತಾಪಿಸಿ ಎತ್ತೇಣಿಯ(ಲಿಫ್ಟ್)ನಲ್ಲಿ ಆದ ತೊಂದರೆಯನ್ನು ಗಮನಕ್ಕೆ ತಂದಿದ್ದಾರೆ.

ಈ ಪ್ರವಾಸ ಕೃತಿಯ ಕಥನಗಳಲ್ಲಿಯೂ ಕೆಲವು ಕಡೆ ಗಮನಕ್ಕೆ ಬರುವುದು, ಕೊರವಂಜಿಯ ಕೆಣಕು–ಅಣಕು–ವಿನೋದದ ಛಾಪು. ಅಲ್ಲಿ ಅವರ ಸಂಪರ್ಕದಲ್ಲಿದ್ದ ಜನರ ವರ್ಣನೆ, ಅವರ ನಡವಳಿಕೆಗಳು, ಇವರು ಪ್ರತಿಕ್ರಿಯಿಸಿದ ರೀತಿ, ಇವು ಓದುಗರ ತುಟಿಯ ಮೇಲೆ ನಗು ಮೂಡಿಸದೇ ಬಿಡುವುದಿಲ್ಲ. ಸ್ಟಾಕ್ ಹೋಂ 'ಸ್ಟಕ್ ಹೋಂ' ಆಗಿ, ಕೋಪನ್ ಹ್ಯಾಗನ್ 'ಕೋಪಣ ಹ್ಯಾಗನ'ಆಗಿರುವ ವಿವರಗಳು, ವಿದೇಶದಲ್ಲಿ ಇಂಡಿಯಾದ ನರಕುರಿಗಳು ಪಾಡುಬಿದ್ದು ಸಾಮಾನು ಕೊಳ್ಳುವ ರೀತಿ, ಇವೆಲ್ಲ ಅವರ ಹಾಸ್ಯಕ್ಕೆ ವಸ್ತುಗಳಾಗಿವೆ. ಯಾವುದೇ ದೇಶದಲ್ಲಿರಲಿ ಮನುಷ್ಯರ ಅಂದ ಆಕಾರ

ವರ್ಣಗಳು ಬೇರೆಯಾದರೂ ಗುಣದಲ್ಲಿ ಸ್ವಭಾವಗಳಲ್ಲಿ ಎಲ್ಲರೂ ಒಂದೇ ಎಂಬುದನ್ನೂ, ಎಷ್ಟೇ ಮುಂದುವರೆದ ದೇಶವಾದರೂ ಎಲ್ಲ ಸ್ಥಳಗಳಲ್ಲೂ ಸಮಸ್ಯೆಗಳೂ, ಸೌಕರ್ಯಗಳೂ ಇದ್ದೇ ಇರುತ್ತವೆ ಎಂಬ ಸತ್ಯವನ್ನೂ ರಾ.ಶಿ. ಯವರ ಈ ಪ್ರವಾಸದ ಅನುಭವಗಳು ಓದುಗರ ಗಮನಕ್ಕೆ ತರುತ್ತವೆ. ಈ ಪಡುವಣ ಯಾತ್ರೆಯ ಕೆಲವು ಸಂದರ್ಭಗಳ ವಿವರಣೆಯಲ್ಲಿಯೂ ಅಲ್ಲಲ್ಲಿ ಸಿಗುತ್ತಲೇ ಇರುತ್ತದೆ, ಕೊರವಂಜಿಯ ಕೆಣಕು–ಅಣಕು–ವಿನೋದದ ಛಾಪು. ಹಗುರ ನಗೆಯೊಂದಿಗೆ ಓದಲು ಚೆನ್ನು. ಅಂಥ ಒಂದೆರಡು ಸಂದರ್ಭಗಳು ಇಲ್ಲಿ ನಿಮ್ಮ ಕಣ್ಣ ಮುಂದಿವೆ;

ರೋಮ್‌ನಲ್ಲಿ ಒಂದು ಕೊಳ. ತುಂಬ ಮಹತ್ವಕ್ಕೆ ಹೆಸರಾದದ್ದು. (ಹೆಸರಿಲ್ಲ) ಮೂರು ನಾಣ್ಯಗಳನ್ನು ಆ ಕೊಳದಲ್ಲಿ ಎಸೆದರೆ ಎಸೆದವರ ಇಷ್ಟಾರ್ಥ ನೆರವೇರುತ್ತದೆಂಬುದು ಅಲ್ಲಿಯ ಜನರ ನಂಬುಗೆ. ರಾ.ಶಿ.ಯವರು ತಮ್ಮ ಜೊತೆಯವರೊಡನೆ, ಅಲ್ಲಿ ಹೋದಾಗ ಯಾರು ಯಾರೋ ಎಸೆಯುವುದನ್ನು ನೋಡುತ್ತಾರೆ. ಅವರ ಇಷ್ಟ ಏನಿರಬಹುದೆಂದು ಜೊತೆಗಿರುವವರನ್ನು ನೋಡಿ ಊಹಿಸುತ್ತಾರೆ. ಆದರೆ ತಮ್ಮ ಇಷ್ಟಾರ್ಥ ನೆರವೇರಿಸುಕೊಳ್ಳುವ ಸಾಹಸಕ್ಕೆ ಕೈ ಹಾಕುವುದಿಲ್ಲ. ಯಾರೋ ಇಟಾಲಿಯನ್ ಒಬ್ಬ ಈ ಬಗ್ಗೆ ರಾ.ಶಿ.ಯವರನ್ನು ವಿಚಾರಿಸಿದಾಗ, ಇವರ ಉತ್ತರ ಇದು;'ನನ್ನ ಪ್ರಾರ್ಥನೆ ಈಡೇರುವ ಹಾಗಿಲ್ಲ"

"ಯಾಕೆ? ಅಂತಹ ಪ್ರಾರ್ಥನೆ ಏನು"

"ಸುಮಾರು ಅರ್ಧ ತಾಸಿನಿಂದ ಬಂದು ಹೋದ ಪುಷ್ಪ ಧರಿಸಿದ ಪುಷ್ಪವತಿಯರನ್ನೂ ಮತ್ತು ಅವರ ಜತೆಯನ್ನೂ ನೋಡುತ್ತಿದ್ದೇನೆ. ಏನಿಲ್ಲ ಅಂದರೂ ಈ ಕೊಳದಲ್ಲಿ ಈ ಹೊತ್ತಿಗೆ ಮಂತ್ರಿಗಳಿಗೆ ಕೊಡಬಹುದಾದಷ್ಟು ಲಂಚದ ಮೊತ್ತ ಬಿದ್ದಿರುತ್ತದೆ. ಆ ನಾಣ್ಯಗಳನ್ನೆಲ್ಲಾ ಲಪಟಾಯಿಸಬೇಕು ಎಂದು ನನ್ನ ಆಸೆ. ಆದರೆ ಈಡೇರುವಂತಿಲ್ಲ"

"ಯಾಕೆ ಈಡೇರುಲ್ಲ" ಆ ಇಟಾಲಿಯನ್ ಬಿಡದೇ ಪುನಃ ಪ್ರಶ್ನೆ ಹಾಕುತ್ತಾನೆ.

"ನನಗೆ ಈಜು ಬರುಲ್ಲ. ಅಲ್ಲದೇ ಈ ಕೊಳದೊಳಕ್ಕೆ ಯಾರೂ ಇಳಿಯಬಾರದು ಅಂತ ಎಚ್ಚರಿಕೆ ಬೋರ್ಡ್ ಹಾಕಿದ್ದಾರೆ. ಕೊಳದಲ್ಲಿ

ಸಂಗ್ರಹವಾದ ಹಣವನ್ನೆಲ್ಲಾ ಪೌರಸಭೆ ಲಪಟಾಯಿಸುತ್ತೆ ಎಂದು ಈಗ ತಾನೇ ಯಾರೋ ಹೇಳಿದರು. ಅದಕ್ಕೇ" ಎಂಬುದು ರಾ.ಶಿ.ಯವರ ರಾಗ.

"ದಿಟ ದಿಟ! ನೀವು ಹೇಳಿದ್ದು" ಎನ್ನುವ ಅವ, ಗ್ರಾಸಿ ಗ್ರಾಸಿ ಅಂತ ವಂದನೆ ಸಲ್ಲಿಸಿ, ಇಟಾಲಿಯನ್ನರ ತರಹ ತಬ್ಬಿಕೊಂಡು ಮುತ್ತು ಕೊಟ್ಟು ಹೊರಟು ಹೋಗುತ್ತಾನೆ.

ಅಷ್ಟರಲ್ಲಿ ರಾ.ಶಿ.ಯವರ ಜೊತೆಗಿದ್ದವರಲ್ಲಿ ಒಬ್ಬ ಮೂರು ನಾಣ್ಯಗಳನ್ನು ಹಠಾತ್ತನೆ ನೀರಿಗೆಸೆದು ಬೇಡಿಕೊಳ್ಳುತ್ತಾನೆ. ಮುಂದಿನ ಈ ವಿವರಣೆಯಲ್ಲಿರುವ ವಿನೋದ ನೋಡಿ; ತೆಳ್ಳಗೆ ಬೆಳ್ಳಗೆ ಇದ್ದ ಯುವಕ ಡಾಕ್ಟರ್ ಅವ. ಬಾಲ್‌ರೂಂ ಡಾನ್ಸ್ ಕಲಿತಿದ್ದ ಸ್ಫುರದ್ರೂಪಿ. ಮನೆ, ಹೆಂಡತಿ, ಊರು, ಬಿಟ್ಟು ಬಂದು ಸುಮಾರು ರಾತ್ರಿಗಳಾಗಿತ್ತು. ಏನು ಬೇಡಿಕೊಂಡ ಈಗ"? ಎಂದು ಇವರು ಯೋಚಿಸುತ್ತಿರುವಾಗಲೇ ಆ ಯುವಕ ಹೇಳುತ್ತಾನೆ;

"ಮನೆಯಿಂದ ತಂದಿದ್ದ ಚಟ್ನಿಪುಡಿ ಮುಗಿದು ಮೂರುದಿನ ಆಯ್ತು. ಊರಿಗೆ ತುರ್ತು ಕಾಗದವನ್ನು ವಿಮಾನದ ಮೂಲಕ ಕಳಿಸಿದೀನಿ. ಜ್ಯೂರಿಕ್‌ಗೆ ಇಂತಹ ತೇದಿಗಳಲ್ಲಿ, ರೋಮ್‌ಗೆ ಈ ಈ ತಾರೀಖಿನಲ್ಲಿ ತಲುಪುವ ಹಾಗೆ ಆದಷ್ಟು ಚಟ್ನಿಪುಡಿ ಕಳಿಸಿ. ಮರೆಯದೆ ಕಳಿಸಿ ಅಂತ. ಜ್ಯೂರಿಕ್‌ನಲ್ಲಿ ದಿನಾಲೂ ಅಂಚೆ ಕಚೇರಿಗೆ ಹೋದೆ. ಏನೂ ಬರಲಿಲ್ಲ. ಇಲ್ಲಾದರೂ ಬಂದರೆ, ಇನ್ನೆರಡು ದಿನ ಜೀವ ಹಿಡಕೊಂಡು ಇರಬಹುದು. ನಾಲಿಗೆ ಮೇಲೆಲ್ಲಾ ದೋಷ ಕಟ್ಟಿದ ಹಾಗಾಗಿದೆ. ಬೇಗ ಚಟ್ನಿಪುಡಿ ಬರದೇ ಇದ್ದರೆ, ಈ ಹಾಳು ಊಟ ತಿಂಡಿ ಮಾಡಲೇಬೇಕಾದರೆ ಘಟ ಇಲ್ಲೇ ಬಿದ್ದು ಹೋಗಬಹುದು ಎನ್ನಿಸುತ್ತೆ" ಎಂದು.

"ಅಯ್ಯೋ ಪಾಪ! ಹಾಗೇನೋ? ನಿನ್ನ ಇಷ್ಟಾರ್ಥ ಈಡೇರಲಿ. ನಿನ್ನ ಸಂಗಾನೇ ಇರ್ತೀನಿ. ಚಟ್ನಿಪುಡಿ ಬಂತು ಅಂತ ನನ್ನ ಸಂಗ ಬಿಡಬೇಡ" ಎಂದು ಅಂಗಲಾಚುತ್ತಾರೆ ರಾಶಿ.

ಇದು ನಡೆದದ್ದೋ ಕಲ್ಪಿತವೋ ಅಂತೂ ಇಟಲಿಗೆ ಹೋದರೂ ಅವರುಗಳಿಗೆ, ಅಲ್ಲಿಯ ದೇವರಲ್ಲಿ ವರ ಬೇಡಿ ಕೇಳುವಷ್ಟು ಮಹತ್ವದ್ದೆನಿಸಿದ್ದು ಇಂಡಿಯಾದ ಚಟ್ನಿಪುಡಿಯೇ, ಕಂಡಿದ್ದು ಭಾರತದ ಕತೆಗಳನ್ನೇ.

"ವಿಯೆನ್ನಾ ಬೈ ನೈಟ್' ಎಂಬ ಲೇಖನದಲ್ಲಿ, 'ಆ ನಂತರ ಮಾರ್ಗದರ್ಶಿ ಎದ್ದ. ಹೊರ ಹೊರಟ. ಕುರಿ, ಕುರಿಯ ಹಿಂದೆ ಮಂದೆ

ಹೋಗುವಂತೆ ನಾವೂ ಹಿಂಬಾಲಿಸಿದೆವು. ಛೇ! ಛೆ! ಹಾಗನ್ನಬಾರದೇನೋ. ಬಿಳಿ ಕುರಿಯ ಹಿಂದೆ ಕುರಿ ಮಂದೆ ಹೋಗುವಂತೆ', ಅನ್ನಬೇಕಾಗಿತ್ತು. ಹೋಗಿ ಬಸ್ಸಿನಲ್ಲಿ ಕುಳಿತೆವು. ತಿರುಗಿ ಆ ಬಸ್ಸು, ದೊಡ್ಡರಸ್ತೆ, ಅಡ್ಡ ರಸ್ತೆ, ಗಿಡ್ಡ ರಸ್ತೆಗಳಲ್ಲಿ ಹಾದು ಒಂದು ಓಣಿಯ ಪಕ್ಕ ನಿಂತಿತು" ಎನ್ನುವ ಸಾಲಿನಲ್ಲಿ; "ನಮ್ಮ ಮಂದೆಯ ಕುರುಬ ಎದ್ದು ಹೊರಟ. ಹುಷ್ ಅಂತ ಅವನು ಸಿಳ್ಳು ಹಾಕಬೇಕಾಗಿರಲಿಲ್ಲ. ಕುರಿಗಳ ಹಾಗೆ ಅವನ ಹಿಂದೆ ಮಂದೆ ಮಂದೆಯೇ ನಡೆಯಿತು", ಎಂಬಂತಹ ಸಾಲುಗಳಲ್ಲಿ, ಪ್ರೇಕ್ಷಣೀಯ ಸ್ಥಳಗಳ ತೋರಿಸಿ ವಿವರಿಸುವ ಗೈಡ್ ಅನ್ನು ಕುರುಬನಾಗಿ, ನೋಡಲು ಹೋದ ಮಂದಿ, ಕುರಿಮಂದೆಯಾಗಿ ಭಾವಿಸಿ ಬರೆದುದು ನಗು ತರಿಸುತ್ತದೆ.

ಯಾವುದೋ ಒಂದು ಅರಮನೆಯಂತಹ ಹೋಟೆಲ್‌ನಲ್ಲಿ ಒಂದು ಕಾಫಿ ಕುಡಿಯುವುದೂ ಮೋಜಿನ ವಿಷಯವೆಂದು ತಿಳಿಸುವ ಗೈಡ್, ಆ ಸ್ಥಳಕ್ಕ ಕರೆದೊಯ್ಯುತ್ತಾನೆ. ನಿಜವಾಗಿಯೂ ಅದು ಅರಮನೆಯ ಹಾಗಿತ್ತೆಂದು ಹೇಳುವ ರಾ.ಶಿ.ಯವರು ಅಲ್ಲಿಯ ಹಜಾರ, ಹುಲ್ಲುಗಾವಲು, ಕಾರಂಜಿ, ಬಯಲು ನಾಟ್ಯ ಮಂಟಪ ಮತ್ತು ಅಲ್ಲಿಯ ರಾಯಭಾರಿಗಳಂತೆ ಕಂಡ ಠಾಕುಠೀಕಾದ ಉಡುಪು ಧರಿಸಿದ ಸಪ್ಲೈಯರ್‌ಗಳ (ಈಗ ಇಲ್ಲಿಯೂ ಈ ವ್ಯವಸ್ಥೆ ಬಂದಿದೆ) ವರ್ಣನೆ ಮಾಡಿದ ನಂತರ ಕಾಫಿಗೆ ಕುಳಿತ ಸಂದರ್ಭದ ಒಂದು ವಿವರಣೆ ಕೊಟ್ಟಿರುವುದು ಹೀಗೆ, "ಅಷ್ಟು ಹೊತ್ತಿಗೆ ಹೋಟೆಲ್ ಮ್ಯಾನೇಜರ್ ಬಂದು ಆ ಮಾಣಿಗಳಿಗೆ ಏನನ್ನೋ ಹೇಳಿದ. ಜರ್ಮನ್ ಭಾಷೆಯಲ್ಲಿ ಘರ್ ಘರ್ ಅಂತ ಹೇಳಿದ. 'ಭಾರತದಿಂದ ಬಂದು ದುಡ್ಡು ಚೆಲ್ಲುವ ಮಹಾರಾಜರಿವರಲ್ಲ. ಅಲ್ಲಿಂದ ಬಂದಿರುವ ಪಾಪರ್ ಆಸಾಮಿಗಳು. ಇವರು ಹೋಗುವಾಗ ಚಮಚ ತಟ್ಟೆ ಸರಿಯಾಗಿದೆಯೇ ಎಂದು ನೋಡಿಕೋ' ಅಂತ ಹುಷಾರು ಕೊಟ್ಟನೋ ಅಥವಾ ಇನ್ನೇನಾದರೂ ಹೇಳಿದನೋ ತಿಳಿಯಲಿಲ್ಲ" ಎಂಬ ನಿರೂಪಣೆಯಲ್ಲಿಯೂ ನಗೆಜೇನುತುಪ್ಪದ ಲೇಪನ.

ರಂಗಮಂಟಪ ಒಂದರಲ್ಲಿ ಸದಾರಮೆ ನಾಟಕದ ಕಳ್ಳನ ತರಹ ಉಡುಪು ಧರಿಸಿದ್ದ ಒಬ್ಬ ಯುವಕ ಮತ್ತು ಅದೇ ರೀತಿ ಪ್ಯಾಜಾಮ ಒತ್ತಾಗಿ ಧರಿಸಿದ್ದ ಯುವತಿ ಒಬ್ಬಳು, ಅಪಾಚಿ ಡಾನ್ಸ್ ಎನ್ನಲಾದ ವ್ಯಾಯಾಮ ಪ್ರದರ್ಶನ ಮಾಡಿದ್ದನ್ನು ರಾ.ಶಿ.ಯವರ ಭಾರತೀಯ ವೈದ್ಯ ತಂಡ ನೋಡಲು ಕೂಡುತ್ತದೆ. ಅವನು ಅವಳ ತೋಳುಗಳನ್ನು ತನ್ನ ತಲೆ ಮೇಲಕ್ಕೆ ಎತ್ತುತ್ತಾನೆ. ಅಲ್ಲಿ ಆಕೆಯನ್ನು ಲೀಲಾಜಾಲವಾಗಿ ಅಪ್ಪಾಲೆ ತಿಪ್ಪಾಲೆ ತಿರುಗಿಸುತ್ತಾನೆ. ಈ

ವ್ಯಾಯಾಮದ ಚಕ್ಕಂದದಲ್ಲಿ ಆ ಹೆಣ್ಣಿನ ಸರದಿ ಬರುತ್ತದೆ. ಅದರ ವರ್ಣನೆಯನ್ನು ರಾ.ಶಿ.ಯವರ ಮಾತಿನಲ್ಲೇ ಓದಿದರೆ ಸ್ವಾರಸ್ಯ. "ಸಂಗೀತದವರು ಅಲ್ಬಿದಾಯಾ ತರಹ ಯಾವುದೋ ಮಟ್ಟನ್ನು ಬಾರಿಸಿದರು. ಏನು ಬಂತೋ ಆ ಕೃಶಾಂಗಿಗೆ, ಯಾವ ಆವೇಶ ಮೂಡಿತೋ, ಥಟ್ಟಂತ ಅವನನ್ನು ಅನಾಮತ್ತು ಎತ್ತಿ ಬಿಟ್ಟು ಹೆಗಲ ಮೇಲೆ ಹಾಕಿಕೊಂಡು ರಂಗದ ಪಕ್ಕಕ್ಕೆ ಜಗ್ಗಿ ಹಾಕುತ್ತಾ ಹೊರಟು ಹೋದಳು.

ಆರು ವರ್ಷದ ಹುಡುಗನಾಗಿದ್ದಾಗ, ನಮ್ಮಜ್ಜಿ, ಪಕ್ಕದ ಮನೆಯ ಮೂರು ವರ್ಷದ ಪಾತುವನ್ನು ಕಂಡು, "ಲೋ ಹುಷಾರಾಗಿರೋ, ಬಲು ಚೂಟಿ ಪಾತು, ಗಂಡನ್ನ ಬುಟ್ಟೀಲಿ ಹಾಕ್ಕೊಂಡು, ಹೆಗಲ ಮೇಲೆ ಇರಿಸಿ, ಸಂತೆಗೆ ಹೋಗಿ ಮಾರಿಕೊಂಡು ಬಂದು ಬಿಡುತ್ತಾಳೆ" ಅಂತ ಹೇಳುತ್ತಿದ್ದಳು. ಮೂರು ವರ್ಷದ ಪಾತು ಅಲ್ಲ ಈಕೆ. 23 ಮೀರಿದ, ಮಾತು ಆಡದ ಮಹಿಳೆ. ಅವನು ಗಂಡನೋ ಅಲ್ಲವೋ ನನಗೆ ತಿಳಿಯದು. ಆದರೆ ಗಂಡಸು ಅಂತ ಖಚಿತವಾಗಿ ಸುಲಭವಾಗಿ ಗೊತ್ತಾಗಿತ್ತು. ಅವನನ್ನು ಅನಾಮತ್ತು ಎತ್ತಿ ಹೆಗಲ ಮೇಲೆ ಹಾಕಿಕೊಂಡು ಹೋದ ಜೋರು ನೋಡಿದರೆ, ನೇರ ಸಂತೆಗೆ ಹೋಗಿ, ಅಜ್ಜಿ ಹೇಳಿದ ಹಾಗೆ ಮಾರಿಕೊಂಡು ಬರುತ್ತಾಳೇನೋ ಅಂದುಕೊಂಡೆ" ಎಂಬ ಹೋಲಿಕೆಯನ್ನು ಓದಿದರೆ ಓದುಗರ ನಗು ಯಾವ ಮೂಲೆಯಲ್ಲಿದ್ದರೂ ನುಗ್ಗಿಕೊಂಡು ಹೊರ ಬರುತ್ತದೆ. (ಹೆಣ್ಣು ಮಕ್ಕಳು, ಅದೂ ಪಾಪ ಮೂರು ವರ್ಷದ ಮಗು, ಒಂದಿಷ್ಟು ಚೂಟಿಯಾಗಿರುವುದೂ ಸಹ ತಪ್ಪೆಂಬ ಭಾವನೆ ಸಮಾಜದಲ್ಲಿತ್ತು ಎನ್ನುವುದನ್ನೂ ಅಜ್ಜಿಯ ಮಾತಿನಲ್ಲಿ ಗಮನಿಸಬಹುದು. ಅದು ಬೇರೆ ವಿಷಯ)

ಪ್ಯಾರಿಸ್ಸಿನ ನೈಟ್ ಕ್ಲಬ್‌ಗೆ ಒಮ್ಮೆ ಗೆಳೆಯರ ಜೊತೆ ಹೋದರು. ಪ್ರವೇಶ ಕೌಂಟರ್‌ನಲ್ಲಿ, ಬಂದವರನ್ನೆಲ್ಲ ಸ್ವಾಗತಿಸುವ ಹುಡುಗಿಯ ಕೈಗೆ, ಅಲ್ಲಿಂದ ಎದ್ದು ಬರುವಾಗ ಭಕ್ಷೀಸ್ ಇಟ್ಟರು. ಶಿವರಾಂ ಅವರ ಕೈ ಮತ್ತು ಮನಸ್ಸುಗಳು ಬಹು ಧಾರಾಳ. ಸಾಮಾನ್ಯವಾಗಿ ಈ ಭಕ್ಷೀಸ್ ಕೊಡುವುದು ತಿನಿಸುಗಳನ್ನು ಸರಬರಾಜು ಮಾಡಿದವರಿಗೆ ಮಾತ್ರವೇ ತಾನೇ? ಅದರಿಂದ ಅನುಮಾನಿಸಿದ ಗೆಳೆಯ ಕೇಳಿದರು, "ಅವಳಿಗೆ ಅಷ್ಟೊಂದು ಹಣ ಯಾಕೆ" ಎಂದು. ರಾ.ಶಿ.ಯವರ ಉತ್ತರ ಹೀಗಿತ್ತು; "ಪಾಪ ಆ ಹುಡುಗಿ ಮೈ ತುಂಬ ಬಟ್ಟೆ ಹಾಕಿಕೊಳ್ಳಲಿ. ಈ ಊರಿನಲ್ಲಿ ಛಳಿ ಜಾಸ್ತಿ. ಅವಳು ಬೆಚ್ಚಗಿರಲಿ ಅಂತ" ಎಂದು.

ಆ ಹುಡುಗಿ (ಅಲ್ಲಿಯ ಪದ್ಧತಿಯಂತೆ?) ಹಾಕಿದ್ದ ತುಂಡು ಬಟ್ಟೆಯ ಉಡುಪನ್ನು ಗೇಲಿ ಮಾಡುವ ಮಾತಷ್ಟೆ ಇದು.

**'ನಗುಸರಸಿ ಅಪ್ಸರೆಯರು' (1976)**

ಅಧ್ಯಾತ್ಮಕ್ಕೊಲಿದವರಾದರೂ ಅಧ್ಯಾತ್ಮವೇ ಜೀವನದ ಸರ್ವೋದ್ದೇಶ ಎಂದು ಮೊದಲು ಭಾವಿಸಿದವರಲ್ಲ ಈ ಲೇಖಕರು. ಅದರಿಂದಲೇ"ನಗುಸರಸಿ ಅಪ್ಸರೆಯರು" ಎಂಬಂತಹ ಕೃತಿಯನ್ನೂ ಇವರಿಗೆ ಬರೆಯಲು ಸಾಧ್ಯವಾಗಿದ್ದು. ಈ ಕೃತಿಯಲ್ಲಿ ಮುನ್ನುಡಿಯಾಗಿ ಬರೆದಿರುವ 'ಮುಖಾಮುಖಿ'ಯಲ್ಲಿ ಅವರ ಅನಿಸಿಕೆ–ಅನುಭವಗಳ ಅಂಶಗಳಿವೆ. ಬಾಲ್ಯದಲ್ಲಿ ಕಿವಿಗೆ ಬೀಳುತ್ತಿದ್ದ, ಮದುವೆ, ಹೆಂಡತಿ, ಸೂಳೆ– ಎಂಬ ಶಬ್ದಗಳು, ಬೆಳೆಯುತ್ತ ಹೋದಂತೆ ಆ ಶಬ್ದದ ಅರ್ಥಗಳನ್ನು ಸ್ಪಷ್ಟಗೊಳಿಸತೊಡಗಿದ ಸುತ್ತಮುತ್ತಲ ಸಂಗತಿಗಳು, ತಮ್ಮದಾಗತೊಡಗಿದ ಆ ಸಂಬಂಧದ ಕನಸುಗಳು, ಅನುಭವಗಳು – ಇದರಲ್ಲಿ ಅಪ್ಸರೆಯ ಕಲ್ಪಿತ ಕಥೆಗಳಾಗಿ ಹೆಣೆಯಲ್ಪಟ್ಟಿವೆ. ಈ ಹೆಣಿಗೆಗಳಲ್ಲಿ ಹಾಸ್ಯದ ಝಲಕುಗಳೂ ಅಲ್ಲಲ್ಲಿ ಫಳಗುಟ್ಟಿವೆ.

"ಅಪ್ಸರೆಯರು, ಚಿರಂಜೀವಿಗಳು, ಸೌಭಾಗ್ಯವತಿಯರು, ಕಾಲವನ್ನು ಮರೆಮಾಚಿ ಚಿರಕನ್ಯೆಯರೂ ಆಗಿದ್ದರು. ಆಗಿದ್ದರು ಏನು ಬಂತು? ಈಗಲೂ ನಮ್ಮ ಮನಸ್ಸಿನ ಊಹಾಪೋಹ ಗುಹೆಗಳಲ್ಲಿ ಶಾಶ್ವತ ನೆಲೆಸಿ ನನಸಿನಲ್ಲಿಯೂ, ಕನಸಿನಲ್ಲಿಯೂ ಲಲ್ಲೆಯಾಡುತ್ತ ಕಾಡಿ ಕೆಡವಿ ಕುಣಿಸುತ್ತಾರೆ'.

"ಶನಿವಾರ ಬೆಳಗ್ಗೆ ಶಾಲೆ. ಬೇಗ ಹೋಗಿದ್ದೆ. ಶಾಲೆಯ ಜವಾನರಿಬ್ಬರು ಸಿಕ್ಕಾಪಟ್ಟೆ ಬಯ್ಯತ್ತಾ, ಕಂಡಾಪಟ್ಟೆ ಜಗಳವಾಡುತ್ತಿದ್ದರು. ಮನಸ್ಸಿಗೆ ಬಂದುದನ್ನು ನಾಗರಿಕತೆಯ ಚೌಕಟ್ಟಿನಲ್ಲಿ ಸೇರಿಸದೆ ಬೈದಾಡುತ್ತಿದ್ದರು. ತಾಯಿ ಅಜ್ಜಿಯರನ್ನೂ ತಂದೆ ತಾತಂದಿರನ್ನೂ, ನಾಯಿ ನರಿಗಳನ್ನೂ, ಕುದುರೆ ಕತ್ತೆಗಳನ್ನೂ, ಎಲ್ಲವನ್ನೂ ಕಲಸು ಮೇಲೋಗರ ಮಾಡಿ ನಗ್ನ ಭಾಷೆಯಲ್ಲಿ ರಾಸಭದಂತೆ, ರಭಸದಿಂದ ಮೂದಲಿಕೆಯ ಮಾತುಗಳನ್ನು ಆಡುತ್ತಿದ್ದರು. ಶಾಲೆಗೆ ಹೋಗುವುದಕ್ಕೆ ಆರಂಭಿಸಿದ ನಂತರ ನನ್ನ ಭಾಷಾ ಸಂಪತ್ತು ಹೆಚ್ಚತೊಡಗಿತು".

ಹೆಸರಾಂತ ಪುಸ್ತಕದಂಗಡಿಯವನಿಗೆ ಹೆಚ್ಚು ಮಾರಾಟವಾಗುವ ಪುಸ್ತಕಗಳು ಯಾವುದೆಂದು ತಮ್ಮ ಓದಿಗಾಗಿ ವಿಚಾರಿಸಿದಾಗ, ಇವು ಹೆಚ್ಚು ಖರ್ಚಾಗುವ ಪುಸ್ತಕಗಳೆಂದು ತಿಳಿಸಿ ಆ ಅಂಗಡಿಯವನು ಕೊಟ್ಟ ಎರಡು ಪುಸ್ತಕಗಳನ್ನು ಓದಿದಾಗಿನ ಅನಿಸಿಕೆಯ ಸಾಲುಗಳು ಇವು:– "ಸೂಳೆಯರು,

ತುರ್ತು ಸೂಳೆಯರು (ಕಾಲ್ ಗರ್ಲ್ಸ್) ಏಳೆಂಟು ಪತಿಯರಿದ್ದ ಹೆಂಡತಿಯರು, ಬಾಲ್ಯದಲ್ಲಿ ಶಾಲೆಯ ಜವಾನರು ಆಡಿದುದನ್ನು, ಈ ಪುಸ್ತಕಗಳಲ್ಲಿ ವಾಸ್ತವಿಕವೆಂಬಂತೆ ವಿವರಣೆಯಾಗಿದ್ದುದು; ಎಲ್ಲವೂ ಕೆಂಡದಂತೆ ಕೆರಳಿಸುವ ಘಟನೆಗಳೇ. ಕಾಗದವನ್ನು ಸರಸ್ವತಿ ಎಂದು ನಾವು ಪೂಜಿಸಿದರೆ, ಆ ಪುಸ್ತಕಗಳಲ್ಲಿ ಕಾಗದದ ಸರಸ್ವತಿಯು ಸರ್ವಸತಿಯಾಗಿದ್ದಾಳೆ. ಪ್ರಾಣಿಗಳಲ್ಲಿ ಮಾನವನೂ ಒಂದು ಜಾತಿ ಮಾತ್ರ ಎಂಬುದನ್ನು ಬೆರಳು ಮಾಡಿ ತೋರಿಸುತ್ತಿತ್ತು. ಅನ್ಯೋನ್ಯಕ್ಕೆ ಅಡ್ಡಿ ಇರಲಿಲ್ಲ"

ಮೇಲಿನವು ಮುಖಾಮುಖಿಯ ಮಾತುಗಳು. ಈ ಸಂಬಂಧದ ಇನ್ನಷ್ಟು ಮುಂದುವರೆದ ವಿವರಗಳು, ವರ್ಣನೆಗಳು, ಈ ಕೃತಿಯ ಕಥೆಗಳಲ್ಲಿವೆ. ಈ ಕೃತಿಯನ್ನು ಬರೆದ ಇದೇ ರಾ.ಶಿ.ಯವರು 'ಚಂದದೂರಿಗೆ ಹೋಗೋಣು ಬಾ', 'ಸಾಕ್ಷಿ ಸಂಕಲಿಕೆ, ಇತ್ಯಾದಿ ಸತ್ಯದ ಹುಡುಕಾಟ, ಜೀವನ ತತ್ವ–ಸತ್ವಗಳ ಗಹನವಾದ ಅರ್ಥಗಳಿರುವ ಕವನಗಳನ್ನೂ ಬರೆಯಬಲ್ಲವರು. 'ನಗು ಸರಸಿ ಅಪ್ಸರೆಯರು', 'ಅಂಚೆಪೇದೆಯ ಅಂತರ್ ಹೆಂಡತಿ'ಯಂತಹ ಕೃತಿಗಳನ್ನು ಬರೆದರು, ನಂತರದಲ್ಲಿ 'ಆನಂದ ಆ್ಯನ್ ಎಕ್ಸ್‌ಪೀರಿಯನ್ಸ್" ಎಂಬ ಆತ್ಮಾನಂದದ ಅನ್ವೇಷಣೆಯ ಕೃತಿ ಹಾಗೂ 'ಡೆತ್ ಅಂಡ್ ನಚಿಕೇತ', ಎಂಬ ಸಾವಿನ ಬಗ್ಗೆ ಪ್ರಶ್ನೆಗಳಿರುವ, ಸಾವಿನ ಸ್ವೀಕಾರಕ್ಕೆ ಸಂಬಂಧಿಸಿದ ಕೃತಿಗಳನ್ನೂ ರಚಿಸಿರುವುದು, ನಗೆ–ನಲಿವುಗಳಿಂದ ಉನ್ನತಿಯತ್ತ ಹೆಜ್ಜೆ ಹಾಕಿದ ಅವರ ಮನಸ್ಸಿನ ಸ್ಥಿತಿ ಹಾಗೂ ರಚನೆಯ ಸಾಮರ್ಥ್ಯಕ್ಕೆ ಕನ್ನಡಿ.

ಈ ಕಥಾ ಸಂಕಲನದಲ್ಲಿ, ಒಟ್ಟು ಹದಿನಾರು ಕಥೆಗಳಿವೆ. "ವೇದ, ಬ್ರಹ್ಮಸೂತ್ರ, ಉಪನಿಷತ್ತುಗಳನ್ನು ಸ್ವಾನುಭವದಿಂದ ರಚಿಸಿದ ನಮ್ಮ ಜನಾಂಗದ ಕೂಟಸ್ಥರು, ಸಹಜವಾದ ಇಂತಹ ಯೋಚನೆಗಳನ್ನು ಪರಿಹರಿಸಿಕೊಂಡು ವೇದಾಧ್ಯಯನಶೀಲರಾಗಲು ಕಂಡುಕೊಂಡ ವೈದ್ಯಕೀಯ ಮಾರ್ಗವೇ, ಮನೋಲೋಕದಲ್ಲಿ ಗಂಧರ್ವರು ಮತ್ತು ಅಪ್ಸರೆಯರ ಕೃತಿಗಳ ರಚನೆ ಎಂದಿದ್ದಾರೆ ರಾ.ಶಿ.ಯವರು. ಈ ಬಗ್ಗೆ "ಮನೋಲೋಕದಲ್ಲಿ ಗಂಧರ್ವರು ಅಪ್ಸರೆಯರು ಎಂಬ 'ಕೃತಿ'ಗಳನ್ನು ರಚಿಸಿಕೊಂಡರು. ತಮ್ಮ ಮನಸ್ಸಿನಾಳದಲ್ಲಿ ಆಸೆ ಮೂಡಿದಂತೆ ಯಾವ ಯಾವುದನ್ನು ಮಾಡಬೇಕು ಎನಿಸಿತೋ, ಅವುಗಳನ್ನೆಲ್ಲಾ ಅಪ್ಸರೆಯರು ಮತ್ತು ಗಂಧರ್ವರ ಮೂಲಕ ನಡೆಯಿತು ಎಂದು ಕತೆ ಕಟ್ಟಿ ಹೇಳಿದರು. ಇಂತಹ ಕತೆಗಳು ಕೇಳುವವರ ಆಸೆ ಆಕಾಂಕ್ಷೆಗಳನ್ನು ನೆರವೇರಿಸುತ್ತಿದ್ದುದರಿಂದ ಅವರಿಗೂ ಪ್ರಿಯವಾಯಿತು. ಹೀಗಾಗಿ

ಪುರಾತನವಾದ ಈ ಹಗಲು ಕನಸುಗಳು ಪುರಾಣ ಪುಣ್ಯಕತೆ ಎನಿಸಿಕೊಂಡವು. ಈ ರೀತಿಯಲ್ಲಿ ನಮ್ಮ ದೇಶದ ಪುರಾತನ ಮನಸಿಗರು, ತಮ್ಮನ್ನು ಕಾಡ ಬಂದ ದಿವ್ಯ ಹಾಗೂ ನವ್ಯ ಆಸೆಗಳನ್ನು ನಿವಾರಿಸಿಕೊಂಡರು. ಆಗ ಮನಸ್ಸು ನಿರ್ಮಲವಾಯಿತು" ಎಂದು ಇದೇ ಮುಖಾಮುಖಿಯಲ್ಲಿ ಹೇಳಿದ್ದು, ಇವರ ಈ ಕಲ್ಪಿತ ಕೃತಿಯೂ ಅವರ ಮನಸ್ಸಿನಲ್ಲಿ ಅಲೆದ ಆಸೆಗಳ/ ಬಯಕೆಗಳ/ಕೆಡುಕುಗಳ ನಿವಾರಣೆಗಾಗಿ ರಚಿತ ಚಿಕಿತ್ಸಕ ಕೃತಿಯೂ ಇರಬಹುದೇನೋ.

ಅದರಿಂದ ಪುರಾಣ ಪುಣ್ಯ ಕಥೆಗಳೆಂದರೆ, ರಾ.ಶಿ.ಯವರಿಗೆ ಪುರಾತನ ಜನರ ಕಲ್ಪಿತ ಹಗಲುಗನಸುಗಳು. ವೇದ, ಉಪನಿಷತ್ತುಗಳನ್ನು ರಚಿಸಿದ ಋಷಿ–ಮುನಿಗಳು, ಮನುಷ್ಯ ಸಹಜ ಲೈಂಗಿಕ ಭಾವನೆಗಳ ಹತೋಟಿಗೆ ಕಂಡುಕೊಂಡ ಮಾರ್ಗವೇ ಈ ಹಗಲುಗನಸುಗಳು. ತಮ್ಮ ಮನಸ್ಸಿನ ಏಕಾಗ್ರತೆಗೆ, ಮನಸ್ಸಿನೊಳಗಿನ ದಾಹವನ್ನು ಹಾಗೂ ಆಸೆಗಳನ್ನು ನಿಯಂತ್ರಿಸಲು ಹೆಣೆದ ಕಟ್ಟು ಕತೆಗಳು. ದೇವಲೋಕದ ವೇಶ್ಯೆಯರ ಸುತ್ತ ಆ ವೃತ್ತಿಗನುಗುಣವಾಗಿ ರಚಿಸಿದ ಕಟ್ಟು ಕತೆಗಳ ಗುಚ್ಛ ಈ ಕೃತಿ.

'ಕೊರವಂಜಿ'ಯಲ್ಲಿ ಪ್ರಕಟವಾದ ಲೇಖನಗಳನ್ನು ನಾಲ್ಕಾರು ಹೊತ್ತಗೆಗಳಾಗಿ ಹೊರತಂದರು ರಾ.ಶಿ.ಯವರು. **'ಕೊರವಂಜಿ ಕಂಡ ನಗು ಸಮಾಜ'**(1975), **'ಕೊರವಂಜಿ ಕಂಡ ನಗು ದರ್ಬಾರಿಗರು** (1979), **'ಕೊರವಂಜಿ ಕಂಡ ನಗು ವ್ಯಕ್ತಿಗಳು'** (1979), ಮತ್ತು **'ಜೇಬುಗಳ್ಳ ಜಿಮ್ಮಿ' (1980)**—ಇವು ಹೀಗೆ ಪ್ರಕಟಗೊಂಡಂತಹ ಕೆಲವು ಕೃತಿಗಳು. ಈ ಕೃತಿಗಳು ಸರ್ಕಾರ ಮತ್ತು ಸಮಾಜದಲ್ಲಿನ ತಪ್ಪುಗಳಿಗೆ ಅರ್ಥಬದ್ಧ ಬಾಣ ಬಿಟ್ಟು ನಗೆ ಭೇದಿಸುವ ಕೃತಿಗಳು.

ಈ ಲೇಖನಗಳಲ್ಲಿ ನಡೆಯುವ ಘಟನೆಗಳೆಲ್ಲ ಸಮಾಜದ ಕೆಳಸ್ತರದ ಸಾಮಾನ್ಯ ಜನರ ಬದುಕಿಗೆ, ಅವರ ನಡವಳಿಕೆ ಮತ್ತು ದರ್ಬಾರುಗಳಿಗೆ ಸಂಬಂಧಿಸಿದಂತಹವು. "ಈಗ ದರ್ಬಾರು ಮಾಡುವವರು ನೌಕರರು. ಅವರ ಕಾರ್ಯಕ್ರಮವನ್ನು ಕುರಿತು ಹಿಂದಘಟ್ಟದ ಸುಂದರಮ್ಮನವರು ಸಂಗ್ರಹಿಸಿದ ಬೊಂತೆಯನ್ನು ಈಗ ಪ್ರಕಟಿಸುತ್ತಿದ್ದೇನೆ" ಎಂದು 'ಕೊರವಂಜಿ ಕಂಡ ನಗು ದರ್ಬಾರಿಗರು' ಪುಸ್ತಕದ ಮುನ್ನುಡಿಯಲ್ಲಿ ರಾ.ಶಿ.ಯವರು ಹೇಳಿದ್ದಾರೆ. ಇವುಗಳಲ್ಲಿ ಹಾಸ್ಯದ ರಸಾಯನವಿದೆ. ಸರಕಾರದ, ಸಮಾಜದ ಭ್ರಷ್ಟಾಚಾರರನ್ನು

ಸೂಕ್ಷ್ಮವಾಗಿ ಬಯಲಿಗೆಳೆದು ಓದುಗರನ್ನು ಆಲೋಚನೆಗೆ ಎಳೆದು ನ್ಯಾಯವಾಗಿ ಬಾಳಲು ಕಲಿಸುವ ಗುಣವಿದೆ.

ಸಬ್‌ರಿಜಿಸ್ಟ್ರಾರ್ ಕಛೇರಿಯ ಜವಾನ ಮಲ್ಲಯ್ಯ, ಪೋಲೀಸ್ ಕಛೇರಿಯ ದಫ್ತರಬಂದಿ ಗುಂಡಯ್ಯ, ಸೆಕ್ರೇಟರಿಯೇಟ್‌ನ ಗುಮಾಸ್ತ ಶಾಮಸೇನರಾಯ, ಕ್ಯಾಂಟೀನಿನ ಹುಡುಗ ರಾಮಲಿಂಗು, ರಾಜಭವನದಲ್ಲಿ ಅಡುಗೆ ಕೆಲಸಕ್ಕಿರುವ ವೈನಿ ಗಂಡ, ಮುಂತಾದವರೆಲ್ಲ ಕೆಳವರ್ಗದ ಕೆಲಸದಲ್ಲಿದ್ದೂ ವಶೀಲಿ ಹಚ್ಚಿ, ದರ್ಬಾರು ನಡೆಸಿಸಬಲ್ಲ ಸಮರ್ಥರು. ಜೇಬುಗಳ್ಳ ಜಿಮ್ಮಿ, ಜಟಕಾ ಸಾಬಿ, ಹಸ್ತ ಸಾಮುದ್ರಿಕದವ, ಇವರೇ ಅಲ್ಲದೇ ಡಾ. ತುರುಕರಯ್ಯ, ಕು.ರಾ. ಸಂಚಿಗಯ್ಯ ಇತ್ಯಾದಿ ಈ ಹೊತ್ತಗೆಗಳಲ್ಲಿ ಕಾಣ ಬರುವ ವೈವಿಧ್ಯಮಯ ಪಾತ್ರಗಳ ಒಂದು ದಂಡು. ರಾಜೀವಪುರ ಒಂದು ರಾಜಧಾನಿಯ ಸಾಂಕೇತಿಕ ಹೆಸರು.

ರಾಜೀವಪುರ ಸಂಸ್ಥಾನ, ಹಿಂದಘಟ್ಟ ಜಿಲ್ಲೆ, ಗುಂಜಾಲಸಂದ್ರ, ಹೆಬ್ಬಿ, ಗುಬ್ಬಾಲೆ ಮುಂತಾದ ಊರುಗಳ ಕಛೇರಿಗಳಲ್ಲಿ ಈ ಜನರ ದರ್ಬಾರುಗಳು. ಆದರೆ ವಾಸ್ತವಿಕವಾಗಿ ಸರ್ಕಾರದ ಕಛೇರಿಗಳಲ್ಲಿ ನಡೆಯುವ ಕಾರುಬಾರುಗಳು, ಲಂಚ ಆಮಿಷಗಳ ವಿವಿಧ ರೂಪಗಳು, ಮಾಡಿಕೊಳ್ಳುವ ಲಾಭ–ದುರ್ಲಾಭಗಳು, ಅವ್ಯವಹಾರಗಳ ಸ್ವರೂಪ_ ಇವುಗಳ ಕುರಿತಾಗಿ ವ್ಯಂಗ್ಯ–ವಿಡಂಬನೆಗಳೊಂದಿಗೆ ಬರೆಯಲಾದ ಲೇಖನಗಳ ಸರಮಾಲೆಗಳೇ ಈ ಕೃತಿಗಳು. ಮೈಲಿ ಮುಖಂಡರು, ಆಡಿಟ್ ಅಬ್ಜೆಕ್ಷನ್, ಮಲ್ಲಿಗೆಯ ಭುಜಕೀರ್ತಿ, ನ್ಯಾಯಾಸ್ಥಾನವೇ ದೇವಸ್ಥಾನ, ಅಂತಃಕೊಠಡಿ, ಪೋರ್ಟ್ ಪೋಲಿಯೋ ಬದಲಾವಣೆ, ಮುಂತಾಗಿ ಒಟ್ಟು ಇಪ್ಪತ್ತನಾಲ್ಕು ಲೇಖನಗಳು 'ಕೊರವಂಜಿ ಕಂಡ ನಗು ದರ್ಬಾರಿಗರು' ಪುಸ್ತಕದಲ್ಲೂ; ಜೇಬುಗಳ್ಳ ಜಿಮ್ಮಿ' 'ರೂಂ ನಂಬ್ರ 420' ಗುಂಡಯ್ಯ 'ಮನ್ಸೂರರ ರಜಾ ಪ್ರವಾಸ' ಮುಂತಾದ ಲೇಖನಗಳು 'ಕೊರವಂಜಿ ಕಂಡ ನಗು ವ್ಯಕ್ತಿಗಳು' ಕೃತಿಯಲ್ಲೂ; ನಾಲ್ಕೂ ಬಾರಿ ನಪಾಸಾದವ, ಸಿನಿಮಾ ಸ್ಟಾರ್ ಸಾಮಿ, ಪ್ರವಾಸಿ ಮಂದಿರದ ಪಿಶಾಚಿ, ಮನ್ಸೂರರ ರಜಾ ಪ್ರವಾಸ, ಶಾಮಸೇನರಾಯರಿಗೆ ಭಡ್ತಿ ಸಿಕ್ಕಿದ್ದು, 'ಜ್ವಾಲಾಪತಿಯ ರಾಜೀನಾಮೆ' ಮುಂತಾಗಿ ಒಟ್ಟ ಹನ್ನೊಂದು ಲೇಖನಗಳು, 'ಜೇಬುಗಳ್ಳ ಜಿಮ್ಮಿ' ಸಂಕಲನದಲ್ಲೂ ಇವೆ.

ಬೇಲಿಯೇ ಹೊಲವನ್ನು ಮೇಯದೇ ಇರುವ ಹಾಗೆ ನೋಡಿಕೊಳ್ಳಲು, ಮಹಾಭಾರತ ಕಾಲದಲ್ಲಿಯೇ ಬಳಸಿದ ಪಂಚತಂತ್ರಗಳನ್ನು, ಸಾಮಾನ್ಯ

ಜೀವನದ ಸಂಗತಿಗಳೊಂದಿಗೆ ಹೋಲಿಸಿ ತಿಳಿಸುವ ತಂತ್ರಗಳ ಕುರಿತು, **'ರಂಗತ್ತೆಯ ಪಂಚತಂತ್ರ'** ಲೇಖನದಲ್ಲಿ; ಬೆಳ್ತಂಗಡಿಯಲ್ಲಿ ಹೊಸ ಆಸ್ಪತ್ರೆಯೊಂದನ್ನು ನಿಯಮಗಳನ್ವಯ ಆರಂಭಿಸಲು ಕಾನೂನು ಪರ ಕಾರ್ಯದರ್ಶಿಗಳು ನಿರಾಕರಿಸಿದರೂ, ಚುನಾವಣೆಯಲ್ಲಿ ಗೆಲುವು ಸಾಧಿಸುವುದಕ್ಕಾಗಿ, ಅವರ ಅರಿವಿಗೆ ಬಾರದಂತೆ ಸಂಬಂಧಿತ ಮಂತ್ರಿಗಳು ಅನುಮತಿಯನ್ನೂ ಕೊಟ್ಟು ತಾವೇ ಉದ್ಘಾಟನೆಯನ್ನೂ ಮಾಡಲು ಸಿದ್ಧರಾಗುವ ಬಗ್ಗೆ **'ಚುನಾವಣಾ ಪಂಚಾಂಗ'**ದಲ್ಲಿ; ಪೆನ್ಷನ್ ಹಣವನ್ನು ಮುಂಚಿತವಾಗಿ ತಂದಾಗ ಮನೆಯವರ ನಡವಳಿಕೆಗಳ ಕುರಿತು **'N.G.O. ಇನ ಗಾಂಢೀವ'**ದಲ್ಲಿ; ಮೋಸದ ರೀತ್ಯಾ ಎಂಬ ಪದಗಳನ್ನು ಉಲ್ಟಾ ಮಾಡಿ ಆಡಬಹುದಾದ ಮೋಸಗಳನ್ನು ಪತ್ರಗಳ ತಂತ್ರ ನಮೂನೆಯ **'ದಸಮೋ ರೀತ್ಯಾ'**ದಲ್ಲಿ; ಹೆಬ್ಬಿ ಹಾಗೂ ಗುಬ್ಬಾಲೆ ಎಂಬ ಅವಳಿಜವಳಿ ಹಳ್ಳಿಗಳ ದ್ವಿಕ್ಷೇತ್ರದ ಚುನಾವಣೆಗೆ ಸ್ಪರ್ಧಿಸುವ ಇಬ್ಬರು ಸ್ಪರ್ಧಿಗಳು ಪೈಪೋಟಿಯ ಮೇಲೆ ಸಮಾರಾಧನೆ (ಅನ್ನ ಸಂತರ್ಪಣೆ) ಮಾಡಿದರೂ ಯಾರಿಗೂ ಓಟು ಮಾಡಬಾರದೆಂಬ ಜನರ ತೀರ್ಮಾನದಿಂದಾಗಿ ಮತದಾನದ ದಿನವೇ ದೇವಸ್ಥಾನದಲ್ಲಿ ಸತ್ಯನಾರಾಯಣ ಪೂಜೆ ಮಾಡಿಸುವ ಕುರಿತು **'ಹೆಬ್ಬಿ ಗುಬ್ಬಾಲೆಯ ಸಮಾರಾಧನೆ'**ಯಲ್ಲಿ; ಹುಡುಗಿಯೊಬ್ಬಳು ಮಧುರವಾಗಿ ಹಾಡಿದ ದಾಸರ ಪದವನ್ನು ಕೇಳಿ ಪ್ರಭಾವಿತರಾಗುವ, ಮುಖ್ಯಮಂತ್ರಿಗಳೊಬ್ಬರು ಪುರಂದರ ದಾಸರೆಂದರೆ ಯಾರೆಂಬುದನ್ನೇ ತಿಳಿಯದಿದ್ದರೂ ನಂತರ ಆ ಬಗ್ಗೆ ಸಮಿತಿ ರಚಿಸಿದಾಗ, ಪುರಂದರ ದಾಸರ ಕೃತಿಗಳ ಪುಸ್ತಕವೊಂದನ್ನು ಓದುತ್ತ ನಿಂತ ಮುಖ್ಯಮಂತ್ರಿಗಳ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಜೆ. ದಾಸ್ ಎನ್ನುವ ಹೆಸರಿನ ಸಮಿತಿಯ ಮುಖಂಡನ ಸಲಹೆಯನ್ನು ತೀರ್ಮಾನವಾಗಿ ಒಪ್ಪುವ ಕುರಿತಾಗಿ **''ಕಡೆಗೆ ತೀರ್ಮಾನ'** ಎನ್ನುವ ಲೇಖನದಲ್ಲಿ (ಈ ಲೇಖನವನ್ನು ಪೂರ್ತಿಯಾಗಿ ಕೊನೆಯಲ್ಲಿ ಕೊಡಲಾಗಿದೆ); ಕಛೇರಿ ವೇಳೆಯಲ್ಲಿ ನಿದ್ದೆ ಹೊಡೆಯುತ್ತಿದ್ದ ಜವಾನ ಮಲ್ಲಯ್ಯನ ಉದ್ಧಟತನದ ಉತ್ತರಕ್ಕೆ ಬೇಸತ್ತು ಮೇಲಧಿಕಾರಿಯು ಅವನನ್ನು ಡಿಸ್‌ಮಿಸ್ ಮಾಡುವುದರಿಂದ, ಕಳೆದುಕೊಳ್ಳಬಹುದಾದ ಓಟುಗಳ ಬಗ್ಗೆ ಯೋಚಿಸುವ ಮಂತ್ರಿಗಳು ಅವನ ಪುನರ್‌ನೇಮಕ ಮಾಡಲು ಮತ್ತು ಮೇಲಧಿಕಾರಿಗಳ ಮಾನವನ್ನೂ ಉಳಿಸಲು ಮಾಡುವ ಮುಂಬಡ್ತಿ ಹಾಗೂ ವರ್ಗಾವಣೆಗಳ ಸರ್ಕಾರೀ–ಗೋಳು–ಗೋಜಲುಗಳ ಸುತ್ತ **'ನ್ಯಾಯವೇ ಅಲ್ಲವೇನ್ರೀ?"** ಲೇಖನದಲ್ಲಿ; ಸರ್ಕಾರಿ ತೆರಿಗೆಯನ್ನು ಸಕಾದಲ್ಲಿ ಕಟ್ಟಿದರೆ ಅದನ್ನು ಸರ್ಕಾರ ಹೇಗೆ ಎಲ್ಲೆಲ್ಲಿ ಪೋಲು

ಮಾಡುತ್ತದೆ ಎಂಬುದನ್ನೂ ಮತ್ತು ಗಡದ್ದು ನಿದ್ದೆ ಮಾಡಿ ಹೊರಗಡೆಯಿಂದ ತಂದ ತಿಂಡಿ ತಿಂದು, ಅವರಿವರ ಮನೆಗಳಿಗೆ ಸುತ್ತಾಡಿ ಕಾಲ ಕಳೆದು ದಿನದೂಡುವ ರೀತಿಯನ್ನು **'ಸ್ವಾತಂತ್ರ್ಯದ ದಿನ'** ದಲ್ಲಿ; ಸಂದರ್ಶನಗಳ ರೀತಿ, ಒಳಗಿನ ಉದ್ದೇಶಗಳು, ಅಭ್ಯರ್ಥಿಯು ಪ್ರಭಾವೀ ವ್ಯಕ್ತಿಯ ಮಗನೆಂದು ತಿಳಿದ ಕೂಡಲೇ ಅವನು ಅರ್ಜಿ ಹಾಕಿದ ನೌಕರಿಗೆ ಜಾಗವಿಲ್ಲದಿದ್ದರೂ ಖಾಲಿ ಇರುವ ಬೇರೆ ಹುದ್ದೆಗೆ ನೇಮಿಸಿಕೊಳ್ಳಲು ನಿರ್ಧಾರ ಮಾಡುವ ಕತೆಯುಳ್ಳ **'ಸರ್ಕಾರಿ ನೌಕರಿಗೆ ಬೇಟೆ'**ಯಲ್ಲಿ; ನಿರೂಪಿತವಾಗಿರುವ ವಿಷಯಗಳು. ಸಮಾಜ ಹಾಗೂ ಸರಕಾರಗಳ ಟೊಳ್ಳುತನವನ್ನು ನಲವತ್ತು ವರ್ಷಗಳ ಹಿಂದೆಯೇ ಬಯಲಿಗೆಳೆದಿರುವುದರಿಂದ ಈ ಕೃತಿಗಳು ಆ ಕಾಲದ ಮಹತ್ವಪೂರ್ಣ ಕೊಡುಗೆಗಳೆನಿಸುತ್ತವೆ.

**ಜೇಬುಗಳ್ಳ ಜಿಮ್ಮಿ 1980:** ಇನ್ನು **'ಜೇಬುಗಳ್ಳ ಜಿಮ್ಮಿ'**ಯ ಪುಸ್ತಕದ ಮೊದಲ ಮೂರು ಲೇಖನಗಳಲ್ಲಿ ಒಂದೇ ಕತೆಯೇ ಮುಂದುವರೆಯುತ್ತದೆ. ಆದರೆ ನಂತರದ್ದೆಲ್ಲ ಭಿನ್ನ ವಸ್ತು, ಭಿನ್ನ ಸಂಸಾರಗಳ ಕುರಿತ ಬಿಡಿ ಲೇಖನಗಳು. ರಾಜೀವಪುರದ ರಸ್ತೆಯಲ್ಲಿ ವೀರಾಂಜನೇಯನ ಚಿತ್ರವನ್ನು ಸೊಗಾಸಾಗಿ ಬರೆದು, ಹುಚ್ಚನಂತೆ ವರ್ತಿಸಿ, ಜನರ ಮನಸ್ಸನ್ನು ಚಿತ್ರದತ್ತ ಮತ್ತು ತನ್ನ ಹುಚ್ಚುತನದತ್ತ ಆಕರ್ಷಿಸಿ, ತನ್ನ ಗೆಳೆಯರಿಗೆ ಆ ಜನರ ಜೇಬಿಗೆ ಬ್ಲೇಡ್ ಹಾಕಿಕೊಡಲು ಅನುವು ಮಾಡಿಕೊಡುವವನು ಅಹ್ಮದ್ ಎಂಬ ಕಳ್ಳ. ಹುಚ್ಚನಾದರೂ ಕಲಾಕಾರನೆಂಬ ಭಾವನೆಯಿಂದ ಅವನಿಗೆ ಸಹಾಯಿಸಲೆಂದು ಹಿಂಬಾಲಿಸಿದಾಗ ಈ ಗುಂಪಿನ ಕಳ್ಳತನದ ವಿಧಿ–ವಿಧಾನಗಳು ತಿಳಿಯುತ್ತವೆ.

ಸ್ವದೇಶಿ ಎಂದು ಸಮ್ಮೇಳನದಲ್ಲಿ ಪ್ರದರ್ಶಿಸಿಕೊಂಡು ತನ್ನ ಜೇಬಲ್ಲಿ ವಿದೇಶೀ ವಿಸ್ಕಿಯನ್ನು ಇಟ್ಟುಕೊಂಡ ಠೊಣಪ; ಅಂಥದೇ ವಿಸ್ಕಿಯ ಬಾಟಲುಗಳನ್ನು ತಮಗೆ ತಂದುಕೊಡಬೇಕೆಂದು ಹಿಂಸಿಸುವ ಪೋಲಿಸ್ ದಳ; ಕಿಟ್ಟಾಣಿ ಎಂಬ ಕಳ್ಳನ ಹೆಂಡತಿಯ ಪ್ರೇಮ ಪತ್ರವನ್ನು ತನ್ನ ಜೇಬಲ್ಲಿಟ್ಟುಕೊಂಡು ನ್ಯಾಯಕ್ಕಾಗಿ ವಾದಿಸುವ ಲಾಯರ್; ಹೆತ್ತವರು ಕಷ್ಟದಿಂದ ದುಡಿದ ಹಣವನ್ನು ಪರೀಕ್ಷೆ ಶುಲ್ಕಕ್ಕೆಂದು ಕೊಟ್ಟರೆ ಅದನ್ನು ಸಿನಿಮಾಗೆ ಬಳಸುವ ವಿದ್ಯಾರ್ಥಿಗಳು; ಜೂಜುಕಟ್ಟೆಯ ಹತ್ತಿರ ಜೇಬಿಗೆ ಬ್ಲೇಡು ಹಾಕಿಸಿಕೊಂಡು ಹಳ್ಳಿಮುಕ್ಕನಂತೆ ಕಾಣುವ ರೈತಾಪಿ ಜನ; ವಕ್ರ ತೆರಿಗೆ, ಅಪ್ರತ್ಯಕ್ಷ ತೆರಿಗೆಗಳ ಮೂಲಕ ಜನತೆಯ ಜೇಬಿಗೆ ಕೈ ಹಾಕುವ ಸರ್ಕಾರ–ಈ ಎಲ್ಲರೂ ಕಳ್ಳರೇ ಎಂಬುದನ್ನೂ, ಕಳ್ಳರಿಗಿರುವ ಅಪಾಯವನ್ನೂ ನಿರೂಪಿಸುವ ಲೇಖನ 'ಜೇಬುಗಳ್ಳ ಜಿಮ್ಮಿ'.

ಪ್ರತಿವರ್ಷ ಮ್ಯಾಟ್ರಿಕ್, ಪಿ.ಯು. ಹಾಗೂ ಪದವಿ ಪರೀಕ್ಷೆಗಳ ಫಲಿತಾಂಶಗಳ ಸಮಯದಲ್ಲಿ, ಎಲ್ಲ ರಾಜ್ಯದ ಎಲ್ಲ ಹಿರಿ ಕಿರಿಯ ಪತ್ರಿಕೆಗಳೂ, ಮನೆ ಮನೆಯ ಅಂಗಳದಲ್ಲೂ ಬಿದ್ದು, ಮಾಡುವ ಗದ್ದಲ, ಗೌಜಿ, ಸಡಗರ ಸಂಭ್ರಮಗಳು; ಮಾಡುವ ಸಂದರ್ಶನಗಳು, ಪ್ರಕಟಿಸುವ ಫೋಟೋಗಳ ಸರಮಾಲೆಗಳು, ತಿಳಿಯದವರೇ ಇಲ್ಲ. ಅದರಲ್ಲಿ ಅಂತಹ ವಿಶೇಷವೇನಿಲ್ಲ. ಆದರೆ ರಾಜೀವಪುರದ ಪತ್ರಿಕೆ ಮಾತ್ರ ಒಂದಲ್ಲ ನಾಲ್ಕು ಬಾರಿ ನಪಾಸಾದವನ ಸಂದರ್ಶನ ನಡೆಸಿರುವುದು **'ನಾಲ್ಕು ಬಾರಿ ನಪಾಸಾದವ'** ಲೇಖನದ ವಿಶೇಷ. ವಿದ್ಯಾರ್ಥಿ ಬರೆದಿದ್ದು ಯಾವ ಭಾಷೆಯಲ್ಲಿ ಎಂಬುದೇ ತಿಳಿಯದೇ ಮೊದಲು ಸಲ ಫೇಲು; ಮದುವೆ ಮನೆಯಲ್ಲಿ ರಾತ್ರಿ ಎಲ್ಲಾ ಇಸ್ಪೀಟು ಆಡಿದ್ದರಿಂದ ಪರೀಕ್ಷಾ ಹಾಲ್‌ನಲ್ಲಿ ಒದ್ದು ಆವರಿಸಿದ ನಿದ್ದೆಯಿಂದಾಗಿ ಎರಡನೇ ಸಲ ಫೇಲು; ಜಾಣ ವಿದ್ಯಾರ್ಥಿ ಬರೆದ ಉತ್ತರ ಪತ್ರಿಕೆಯ, ರಿಜಿಸ್ಟರ್ ನಂಬರ್ ಸಹಿತ ಯಥಾವತ್ ನಕಲು ಮಾಡಿದ್ದರಿಂದ ಮೂರನೇ ಬಾರಿಗೆ ಫೇಲು; ದೊಡ್ಡಪ್ಪನ ಜೊತೆ ನಾಲ್ಕನೇ ಆಟಗಾರನಾಗಿ ನಾಲ್ಕು ದಿನ ಇಸ್ಪೀಟ್ ಪಂದ್ಯ ಆಡಬೇಕಾಗಿದ್ದರಿಂದ ಗೈರುಹಾಜರಾಗಿ **'ನಾಲ್ಕನೇ ಸಲ ಫೇಲು'**. ಹೀಗೆ ಕಾರಣಗಳನ್ನು ಕೊಡುವ ವಿದ್ಯಾರ್ಥಿ, ಇಸ್ಪೀಟ್ ಪಂದ್ಯದಲ್ಲಿ ಗೆದ್ದು ದೊಡ್ಡಪ್ಪನ ಆಸ್ತಿಯನ್ನೆಲ್ಲ ತನ್ನದಾಗಿಸಿಕೊಂಡು, ಮೆರಿಟ್ ವಿದ್ಯಾರ್ಥಿಗೂ ದಕ್ಕದ ಅಪಾರ ಆಸ್ತಿಯನ್ನು ಗೆಲ್ಲುವಂತಹ ಅದೃಷ್ಟವಂತನಾಗುತ್ತಾನೆ.

ಜವಾನ ಗುಂಡಯ್ಯ ಮಾಡುವ ಮಸಾಲೆ ಮಜ್ಜಿಗೆಯ ರುಚಿಯನ್ನು ಕಳೆದುಕೊಳ್ಳಬಯಸದ ಸರ್ಕಾರಿ ನೌಕರರು, ಅವನ ವರ್ಗಾವಣೆಯನ್ನು ರದ್ದು ಪಡಿಸಲು, ಅವನಿಗೆ ಖಾಯಿಲೆ ಬರಿಸಲು ಮತ್ತು ಸುಳ್ಳು ಸರ್ಟಿಫಿಕೆಟ್ ಪಡೆಯಲು ಮಾಡುವ ಪ್ರಯತ್ನಗಳ ಮೋಜಿನ ನಿರೂಪಣೆಯುಳ್ಳ 'ಗುಂಡಯ್ಯ'; ಲಂಚಕೋರ ಕಾರಕೂನನಾದ ಜ್ವಾಲಾಪತಿಯನ್ನು ಮಟ್ಟ ಹಾಕಲು ಮಾಡುವ ವರ್ಗಾವಣೆಗಳು, ಕೊಡುವ ಮುಂಬಡ್ತಿ, ರಾಜೀನಾಮೆ ಸ್ವೀಕರಿಸದೇ ಮುಂದುವರೆಸುವ ಸೇವೆ–ಇವುಗಳ ಸುತ್ತ ಹೆಣೆದ ಹೆಣಿಗೆಯ 'ಜ್ವಾಲಾಪತಿಯ ರಾಜೀನಾಮೆ"; ಪ್ರಭಾವಿ ವ್ಯಕ್ತಿ ಅಥವಾ ಪತ್ರಿಕೋದ್ಯಮಿ ಎಂದು ತಿಳಿದರೆ, ಮನುಷ್ಯ ಪ್ರಸನ್ನನಾಗಿ ಯಾವ ಸೌಲಭ್ಯಗಳನ್ನು ಬೇಕಾದರೂ ಕರುಣಿಸುವಷ್ಟು ಪರಿವರ್ತಿತನಾಗಬಹುದು ಎಂಬುದನ್ನು, ನಿರೂಪಿಸುವ 'ಮನ್ಸೂರರ ರಜಾ ಪ್ರವಾಸ'; ಹೆಬ್ಬಿ ಗುಬ್ಬಾಲೆಯ ಒಂದು ಸಣ್ಣ ಸಹಕಾರಿ ಸೊಸೈಟಿಯ ಗೌರವ ಕಾರ್ಯದರ್ಶಿಯಾದ ಪಾಟೀಲ್ ಎಂಬುವವ, ರಾಜೀವಪುರದ ವಿನೋದ

ಸೌಧದಲ್ಲಿ ಸಾಲ ಮಂಜೂರು ಮಾಡಿಸಿಕೊಳ್ಳಲೆಂದು, ಕರ್ನಾಟಕ ಆನಂದ ಭವನದಲ್ಲಿ ಇಳಿದುಕೊಂಡಾಗ, ಆ ಹೋಟೆಲಿನವರು ಮುಂದೆ ಮಂತ್ರಿಯಾಗಲಿರುವ ಮಹಾ ಬಲಾಢ್ಯ ಪಾಟೀಲರೇ ಇವರು ಎಂದುಕೊಂಡು ಮಾಡುವ ಮರ್ಯಾದೆ, ಒದಗಿಸುವ ಸೌಲಭ್ಯ, ತಿನಿಸುವ ಆಹಾರ–ಇವುಗಳ ಸಿಹಿಹಾಸ್ಯದ ಬರವಣಿಗೆಯುಳ್ಳ ರಸಭರಿತ ಕಥೆ 'ರೂಂ ನಂಬ್ರ 420' – ಇವು ಈ ಸಂಕಲನದ ಉತ್ತಮ ಕಥೆಗಳು. ನಿಕೊಲಾಯ್ ಗೋಗಾಲ್‌ರ 'ಇನ್ಸ್‌ಪೆಕ್ಟರ್ ಜನರಲ್', ಪರ್ವತವಾಣಿಯವರ 'ಲಂಚಾಮೃತ' ನಾಟಕಗಳನ್ನು ನೆನಪಿಗೆ ತರುವ ಅದೇ ಎಳೆಯಲ್ಲಿ ಸಾಗುವ ಒಂದು ಸೊಗಸಾದ ಕಥೆ ಈ 'ರೂಂ ನಂಬ್ರ 420'.

'ಶಾಮಿ ಬಾಜಿ ಕಟ್ಟಿದ್ದು' ಒಂದು ಒಳ್ಳೆಯ ಕಥೆ. ಬೀಡಿ, ಬೀಡಾಗಳಿಗಾಗಿ ಅಂಗಡಿಗೆ ಬರುತ್ತಿದ್ದ ಶಾಮಿ, ತಾನು ಶಾಲಾ ಕಾಲೇಜುಗಳಲ್ಲಿ ಓದುತ್ತಿದ್ದಾಗ, ಚೆಂಡಾಟದ ಟೀಮಿಗೆ ತಾನೇ ಮುಖಂಡನಾಗಿದ್ದೆನೆಂದೂ, ತನ್ನ ಜೊತೆಯವರೆಲ್ಲಾ ಈಗ ಜನನಾಯಕರಾಗಿಯೋ, ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡುವವರೋ ಆಗಿದ್ದಾರೆಂದೂ, ಈಗಲೂ ಮನಸ್ಸು ಮಾಡಿ ಬುದ್ಧಿ ಬಳಸಿದರೆ ಎರಡು ದಿನದಲ್ಲಿ ಸಾವಿರ ರೂಪಾಯಿ ಸಂಪಾದಿಸಬಲ್ಲೆನೆಂದೂ, ಹೇಳಿಕೊಂಡಾಗ ಬರೀ ಬೊಕಳೆ ಎಂದುಕೊಳ್ಳುವ ಅಂಗಡಿಯವನು, ಶಾಮಿ ಕಟ್ಟುವ ಬಾಜಿಗೆ ಒಪ್ಪುತ್ತಾನೆ. ಸರ್ಕಾರದ ಆಧಾರಸ್ತಂಭದಂತಿರುವ ಸೆಕ್ರೆಟರಿ ಹಾಗೂ ರಾಜಮಹಾರಾಜರ ಉಡುಪು ಧರಿಸಿ, ಸೇವೆ ಸಲ್ಲಿಸುವಂತಹ ಅತ್ಯುನ್ನತ ಮಟ್ಟದ ಹೋಟೆಲ್‌ನ ಮಾಲಿಕರು, ಶಾಮಿಗೆ ಕೊಡುವ ಮರ್ಯಾದೆಯನ್ನೂ, ಕೇಳದೆಯೇ ಅವನಿಗೆ ಕೊಡುವ ಹಣವನ್ನೂ ಕಂಡು ದಂಗಾಗಿ ಬಾಜಿ ಸೋಲುತ್ತಾನೆ. ಮಾತ್ರವಲ್ಲ ಶಾಮಿ ಅಂಗಡಿಗೆ ಬಂದರೆ, ಎದ್ದು ನಮಸ್ಕಾರ ಮಾಡಿ, ಬೀಡಿ ಕೊಡಲೇ ಎನ್ನುವಂತಹ ಯೋಗ್ಯತೆ ಶಾಮಿಗಿದೆ ಎಂಬುದನ್ನು ಕಂಡುಕೊಳ್ಳುತ್ತಾನೆ,

ಸರ್ಕಾರಿ ವೈದ್ಯರಾಗಲು ಹಾಕಿದ ಅರ್ಜಿಗೆ ಮನ್ನಣೆ ಸಿಗದಿದ್ದುದರಿಂದ, ಸ್ವಂತ ದವಾಖಾನೆಯನ್ನು ತೆಗೆಯಬೇಕಾದ ಪರಿಸ್ಥಿತಿ ಬಂದಿದ್ದು ರಾ.ಶಿ.ಯವರ ಅದೃಷ್ಟವೇ. ಆದರೆ ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡದಿದ್ದರೂ, ಅಲ್ಲಿಯ ಕಛೇರಿಗಳ ಕಾರ್ಯ ವಿಧಾನ, ನೌಕರರ ಆಲಸ್ಯ, ಅಸಡ್ಡೆಯ ಧೋರಣೆ–ಇವುಗಳನ್ನು ಸ್ವತಃ ಕಂಡಂತೆ ಮೇಲಿನ ಕೃತಿಗಳಲ್ಲಿ ಬರೆದಿರುವುದು ಪ್ರಶಂಸನೀಯ ವಿಷಯ. ಈ ಕೃತಿಗಳಲ್ಲಿ ವಿಡಂಬನೆ ಮಾಡಿರುವುದು ಸರ್ಕಾರದ

ಕಾರ್ಯ ವಿಧಾನಗಳನ್ನು, ಸರಕಾರ ಮತ್ತು ಸಮಾಜದ ಭ್ರಷ್ಟಾಚಾರರನ್ನು, ಆಗುವ ಅನರ್ಥ–ಅನಾಹುತಗಳನ್ನು. ಬೆಳಕು ಚೆಲ್ಲಿರುವುದು ಯಾರು ಯಾವಾಗ ಬೇಕಾದರೂ ಮಂತ್ರಿ ಪದವಿಗೇರಿ, ಉನ್ನತ ಅಧಿಕಾರ ಪಡೆಯಬಹುದು ಎಂಬ ಅಂಶದ ಮೇಲೆ, ಯಾರನ್ನು ಯಾವಾಗ ಬೇಕಾದರೂ ಉದ್ಧಾರ ಮಾಡುವ ಶಕ್ತಿ ಪಡೆಯಬಹುದು ಎಂಬ ವಿಚಾರದ ಮೇಲೆ ಮತ್ತು ಮಂತ್ರಿಗಳ ಮೂರ್ಖತನದ ಮೇಲೂ ಸಹ. ಎಲ್ಲದರಲ್ಲೂ ವಿಡಂಬನೆಯ ಮಾತುಗಳ ಬರೆ. ಅಲ್ಲಲ್ಲಿ ಹೊಳೆಯುವ ಹಾಸ್ಯದ ಹೊನಲುಗಳು. ಅಂತಹ ಕೆಲವು ಹೊಳಹುಗಳು ಇಲ್ಲಿವೆ;

**ಹೊಳಹು–1 :** "ಸ್ವಾತಂತ್ರ್ಯ ದಿನ'ದಲ್ಲಿ ಬೆಳಕು ಹರಿದು ಸೂರ್ಯನ ಎಳೆಬಿಸಿಲು ಹಳದಿಗೆ ತಿರುಗಿದರೂ ಏಳದ ಕೃಷ್ಣರಾಯನೆಂಬವನ ಹೆಂಡತಿ, "ಮೂರು ನಾಲ್ಕು ಸರ್ತಿ ಬಾಗಿಲು ತಟ್ಟಿದ ಮೇಲೆ ಎಚ್ಚೆತ್ತು ಬಂದು ಬಾಗಿಲನ್ನು ತೆಗೆದ ಮೇಲೆ' ಹೇಳುವ, ಅವಳು ಕಂಡ ಕನಸಿನ ಸೊಗಸು ನೋಡಿ; "ಎಷ್ಟು ಹೊತ್ತಾಯಿತು ಅಂದ್ರೆ! ನೀವು (ಬೆಳಗ್ಗೆ ಸ್ವಾತಂತ್ರ್ಯಾಚರಣೆಗೆ) ಹೋದ ಮೇಲೆ ಬಾಗಿಲು ಹಾಕಿಕೊಂಡು, ಕಾಫಿ ಕುಡಿದು, ಸುಮ್ಮನೆ ಹಾಗೇ ಬಿದ್ದಿರೋಣ ಅಂತ ಮಲಗಿಕೊಂಡೆ. ಚೆನ್ನಾಗಿ ನಿದ್ದೇನೇ ಬಂದುಬಿಡ್ತಲ್ರಿ! ಎಂಥಾ ಕನಸು ಬೀಳ್ತಾ ಇತ್ತು ಅಂತ. ಮಳೆ ಸುರಿದ ಹಾಗೆ ಆಯ್ತು. ಆಲಿಕಲ್ಲು ಹೆಂಚಿನ ಮನೆ ಮೇಲೆ ಬಿದ್ದ ಹಾಗೆ ಸದ್ದಾಯ್ತು. ಎದ್ದು ಹೋಗಿ ಎರಡು ಆಲಿಕಲ್ಲು ಬಾಯಿಗೆ ಹಾಕಿಕೊಳ್ಳೋಣ ಅಂತ ಹೋದೆ. ಆದರೆ ಸವರನ್ ಮಳೆ ಬೀಳ್ತಾ ಇತ್ರೀ. ಒಂದೆರಡು ಆರಿಸಿಕೊಳೋಣ ಅಂತ ಕೈ ಚಾಚೋ ಹೊತ್ತಿಗೆ ಎಚ್ಚರವಾಯ್ತು. ಆಲಿಕಲ್ಲು ಸೂರಿನ ಮೇಲೆ ಬಿದ್ದ ಶಬ್ದವಲ್ಲ ಕೇಳಿಸಿದ್ದು, ಬಾಗಿಲ ತಟ್ಟಿದ ಶಬ್ದ ಎಂದು ಎದ್ದು ಬಂದು ಬಾಗಿಲು ತೆಗೆದೆ. ಎಂಥಾ ಸುಂದರ ಕನಸು ಬೀಳ್ತಾ ಇತ್ತು ಎಂದಳು'.. ..

**ಹೊಳಹು–2 :** ಸರ್ಕಾರಿ ನೌಕರಿಗೆ ಹೊಸದಾಗಿ ಸೇರಿದ ಒಬ್ಬ ನೌಕರ ತನ್ನ ತೀರ್ಥರೂಪರಿಗೆ ಬರೆವ ಪತ್ರದಲ್ಲಿ, ತನ್ನ ಕಛೇರಿಯ ಕೆಲಸದ ಸ್ವರೂಪವನ್ನು, ತಿಳಿಸುತ್ತಾನೆ. ಆ ಪತ್ರದಲ್ಲಿನ ಒಂದು ಕಂಡಿಕೆಯಲ್ಲಿ ಕೆಳಗಿನ ಒಕ್ಕಣೆ ಇದೆ.

"ಹನ್ನೊಂದು ಗಂಟೆಗೆ ಇಲ್ಲಿ ಕೆಲಸಕ್ಕೆ ಬಂದರೆ ಯಾರೂ ಇರುವುದಿಲ್ಲ, ಹನ್ನೆರಡರ ಹೊತ್ತಿಗೆ ಅರ್ಧಕ್ಕರ್ಧ ಜನ ಬಂದಿರುತ್ತಾರೆ. ಹನ್ನೆರಡು ಮುಕ್ಕಾಲು ಗಂಟೆಯ ಹೊತ್ತಿಗೆ ಬಿಸಿ ಬಿಸಿ ಕಾಫಿ ಬರುತ್ತದೆ. ಆ ಹೊತ್ತಿಗೆ ಎಲ್ಲರೂ ಬಂದಿರುತ್ತಾರೆ. ಕಾಫಿ ಕುಡಿದು ಒಂದು ಗಂಟೆಯ ಹೊತ್ತಿಗೆ ಕೆಲಸ ಶುರು

ಮಾಡುತ್ತೀನಿ. ಕೇವಲ ಒಂದು ಗಂಟೆಯಲ್ಲಿ ಕೆಲಸವೆಲ್ಲ ಮುಗಿದು ಹೋಗುತ್ತದೆ. ಆಮೇಲೆ ಸಂಜೆಯ ತನಕ ನೊಣ ಹೊಡೆಯುತ್ತಾ ಇರಬೇಕು. ಆದರೆ ಹಾಗೆ ಮಾಡುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ನೊಣಗಳೆಲ್ಲವೂ ನಿದ್ರೆ ಮಾಡುತ್ತಿರುತ್ತವೆ." ಸರ್ಕಾರಿ ನೌಕರರು ಕೆಲಸ ಮಾಡುವ ರೀತಿಯ ಬಗ್ಗೆ, ಕಛೇರಿ ವೇಳೆಯನ್ನು ದುರುಪಯೋಗ ಪಡಿಸಿಕೊಳ್ಳುವ ಬಗ್ಗೆ, ಬೇಜವಾಬ್ದಾರಿತನದ ಬಗ್ಗೆ ತುಂಬ ಮುಗ್ಧತೆಯಿಂದ ಒಬ್ಬ ಹೊಸ ನೌಕರನ ಮೂಲಕ ತಿಳಿಸುವ ಪರಿ ಇದು ಈ ಪತ್ರದ ಒಕ್ಕಣೆ. (ಕೊರವಂಜಿ ಕಂಡ ನಗು ದರ್ಬಾರಿಗರು' ನಲ್ಲಿ 'ದಸಮೋ ರೀತ್ಯಾ' ಲೇಖನ).

**ಹೊಳಹು–3** "ಹಿಂ. ಸುಂದರಮ್ಮನನ್ನು ಹೊಗಳಿದರೆ, ಮಗಳಿಗೆ ಗಂಡನ್ನು ಹುಡುಕಿ ಕೊಡಬಹುದೆಂದು, "ಹಿಂ.ಸುಂ. ಅವರೇ, ಲೇಖನಗಳು ಬಲು ಸ್ವಾರಸ್ಯವಾಗಿವೆ".. ಎಂದು ಹೊಗಳಿದ ನಂತರ, "ತನ್ಮಧ್ಯೆ ನನ್ನ ತಬ್ಬಲಿ ಮಗಳಿಗೆ ಯಾವುದಾದರೂ ಲಕ್ಷಣವಾದ ಗಂಡು ಸಿಗುವ ಹಾಗೆ ನೀವು ಪ್ರಯತ್ನ ಮಾಡಬೇಕು" ಎಂದು ಬಾಯಿ ಬಿರಿದು ಬಿನ್ನವಿಸಿಕೊಂಡೆ.

ಆಗಬಹುದು ಎನ್ನುವಂತೆ ಆಕೆಯೂ ನಕ್ಕಳು. ದಾಳಿಂಬೆ ದೋರೆಗಾಯಿ ಬಿರಿಯುವಂತೆ, ಬಾಯನ್ನು ಬಿರುಕು ಮಾಡಿದಳು. "ಅಲ್ಲರೀ! ಗಂಡು ಹುಡಕಿ ಕೊಡು ಎಂದು ನನ್ನ ಕೇಳ್ತೀರಲ್ಲಾ! ಹೊಟ್ಟೆಗಿಲ್ಲದ ದೇವರನ್ನ ಪೂಜಾರಿ ಬೇಡಿಕೊಂಡ ಹಾಗೆ; ನನಗೇ ಇನ್ನೂ ಗಂಡು ಸಿಕ್ಕಿಲ್ಲ. ಅಂದಮೇಲೆ ಇನ್ನೊಬ್ಬರಿಗೆ ಏನಂತ ಗಂಡು ಹುಡುಕೋದು?". ಎಂದು ಕೇಳಿದಳು. (ಕೊರವಂಜಿ ಕಂಡ ನಗು ದರ್ಬಾರಿಗರು' ನಲ್ಲಿ 'ಕಡೆಗೆ' ಲೇಖನ).

**ಹೊಳಹು–4**: "(ಅಧಿಕಾರಿಯ) ... .. ವರ್ಗವನ್ನು ಹುರಿಯೂರಿಗೆ ಮಾಡಿದರು. ಹೆಸರಿಗೆ ತಕ್ಕಂತೆ ಆ ಊರಿನಲ್ಲಿ ಒಂಬತ್ತು ತಿಂಗಳು ಬಾಂಡ್ಲಿಯಲ್ಲಿ ಹುರಿದ ಹಾಗೆ ಸೆಕೆ. ಇನ್ನು ಮೂರು ತಿಂಗಳು ಕರಿದ ಹಾಗೆ ಉರಿ" (ಜೇಬುಗಳ್ಳ ಜಿಮ್ಮಿ'ಯಲ್ಲಿ 'ಜ್ವಾಲಾಪತಿಯ ರಾಜೀನಾಮೆ')

**ಹೊಳಹು–5**: ಹಿಂದಿನ ರಾತ್ರಿ ಗುಂಡಯ್ಯನ ದೇಹಸ್ಥಿತಿ ವಿಷಮಿಸುವಂತೆ ಬಹಳ ಮೆಹನತ್ತು ಮಾಡಿದ್ದೆವು. ಒಂದು ತೊಲ ಹಸಿ ಇಂಗು ತಿನ್ನಿಸಿದ್ದೆವು, ಅರೆ ಬೆಂದ ಹೆಸರುಬೇಳೆಯನ್ನು ಮುಕ್ಕಿಸಿದ್ದೆವು. ದಾರಿ ಅಂಚಿನ ಬಾಂಡ್ಲೆ ಹೋಟೆಲುಗಳಿಂದ ಸೀಮೆ ಎಣ್ಣೆ ವಾಸನೆ ಬಡಿಯುತ್ತಿದ್ದ ವಡೆ ಚಕ್ಕುಲಿಗಳನ್ನು ಅವನಿಗೆ ಉಣ್ಣಿಸಿದ್ದೆವು. (ಜೇಬುಗಳ್ಳ ಜಿಮ್ಮಿಯಲ್ಲಿ 'ಗುಂಡಯ್ಯ' ಲೇಖನ)

**ಹೊಳಹು–6:** "ವೆಂಕಟಸ್ವಾಮಿಯ ಮೆದುಳು ಇಷ್ಟು ಚುರುಕಾಗಿ ಕೆಲಸ ಮಾಡಲು ಅವನು ಹೊಟ್ಟೆಗೆ ಏನನ್ನು ತಿನ್ನುತ್ತಾನೋ ಎಂದು ನೌಕರರೆಲ್ಲರೂ ಊಹಿಸತೊಡಗಿದರು. ನಾಗರಹಾವಿನ ಮೊಟ್ಟೆಗಳನ್ನು ನಾಗರಪಂಚಮಿಯ ದಿನ ಗಡದ್ದು ತಿನ್ನುತ್ತಾನೆ ಎಂದು ಕೆಲವರು ಪಿಸು ಮಾತಾಡಿಕೊಂಡರು. ಹಾಗಲ್ಲ ಕಣೋ ಗರುಡನ ಮೊಟ್ಟೆಗಳನ್ನು ಗರುಡ ಪಂಚಮಿಯ ದಿನ ಮರಗಳ ಮೇಲೆ ಕೂತು ತಿನ್ನುತ್ತಾನೆ ಎಂದು ಇನ್ನೂ ಕೆಲವರು ಅಂದಿದ್ದೂ ಉಂಟು.' (ಜೇಬುಗಳ್ಳ ಜಿಮ್ಮಿಯ 'ಗುಂಡಯ್ಯ' ಲೇಖನ)

**ಅಂಚೆ ಪೇದೆಯ ಅಂತರ್ ಹೆಂಡತಿ (1979) :**

ರಾಶಿಯವರ ಬರವಣಿಗೆಗೆ ದಕ್ಕಿದ ವಸ್ತು–ವಿಷಯಗಳ ಹರಹು ದೊಡ್ಡದು. ವೈದ್ಯಕೀಯ, ಅಡುಗೋಲಜ್ಜಿ ಕತೆಗಳು, ಮಾನಸಿಕ ಜಗತ್ತು, ಕಾಲ, ವಿಜ್ಞಾನ, ಮಾತ್ರವಲ್ಲ ದೆವ್ವ–ಪಿಶಾಚಿಗಳ ಅಸ್ತಿತ್ವ ಹಾಗೂ ಅವು ಹುಟ್ಟಿಕೊಂಡಿರುವುದಕ್ಕೆ ಇರಬಹುದಾದ ಕಾರಣಗಳನ್ನೂ ಆಲೋಚಿಸಿ, ಈ ವಿಷಯದ ಸುತ್ತ ಕಲ್ಪಿಸಿ ಬರೆದಿರುವ ಕೃತಿಗಳೆಂದರೆ 'ಅಂಚೆ ಪೇದೆಯ ಅಂತರ್ ಹೆಂಡತಿ'ಎಂಬ ಕಥಾ ಸಂಕಲನ ಮತ್ತು 'ಪೊಂಕಿಯಾನೋ' ಎಂಬ ಕಿರು ಕಾದಂಬರಿ. ಶಾಕಿನಿ ಡಾಕಿನಿಗಳಂತಹ ಪಿಶಾಚಿಗಳ ಕಲ್ಪನೆ ನಾಡಮಾನವನ ಮನಸ್ಸಿನಲ್ಲಿ ಉದ್ಭವಿಸಿರಬಹುದಾದ ರೀತಿಯನ್ನು ಕುರಿತ ಕಥೆ, ರಕ್ತವನ್ನು ಹೀರುವ 'ಪೊಂತಿಯಾನೊ'. ಈ ಪಿಶಾಚಿ ಕಥೆಯ ಸೃಷ್ಟಿಯಾಗಿರುವುದು ಮಲಯ, ಸಿಂಗಪುರಗಳ ಹಿನ್ನೆಲೆಯಲ್ಲಿ.

1979ರಲ್ಲಿ ಪ್ರಕಟಗೊಂಡಿರುವ 'ಅಂಚೆ ಪೇದೆಯ ಅಂತರ್ ಹೆಂಡತಿ' ಸಂಕಲನದಲ್ಲಿ, ಶೀರ್ಷಿಕೆಯ ಕಥೆಯೇ ಅರವತ್ತನಾಲ್ಕು ಪುಟಗಳ ಒಂದು ನೀಳ್ಗತೆ. ಇದೂ ಸೇರಿ ಒಟ್ಟು ಆರು ಕಥೆಗಳಿವೆ. ಮಾನವ ಜೀವಿಯನ್ನು ಆವಾಹನೆಗೊಂಡು ತಮ್ಮ ಗುರಿ ಸಾಧಿಸುವ ಅಥವಾ ಸೇಡು ತೀರಿಸಿಕೊಳ್ಳುವ ಆತ್ಮಗಳ ಸುತ್ತ ಹೆಣೆದಿರುವ ಈ ಕಥೆಗಳು ದೆವ್ವಗಳು ಅಸ್ತಿತ್ವದಲ್ಲಿವೆ ಎಂಬುದನ್ನೇ ಪ್ರತಿಪಾದಿಸುತ್ತವಲ್ಲದೆ, ರಕ್ತ ಹೀರುವ, ಹೊಗೆಯಾಗುವ, ಒಲೆಯಲ್ಲಿ ಕಾಲುಗಳನ್ನಿಟ್ಟು ಬೆಂಕಿ ಉರಿಸುವ, ವಿಪರೀತವಾದ ಉಗ್ರ–ಕ್ರಿಯೆಗಳನ್ನು ಮಾಡುವಂತಹ ದೆವ್ವಗಳಾಗಿವೆ. ಎಲ್ಲವನ್ನೂ ವೈಜ್ಞಾನಿಕ ದೃಷ್ಟಿಯಿಂದ, ಆಧ್ಯಾತ್ಮಿಕ ಅಥವಾ ವಾಸ್ತವಿಕ ನೆಲೆಯಿಂದ, ಬರೆಯುವ ರಾ.ಶಿ.ಯವರು ಈ ರೀತಿಯ ಕಥೆಗಳನ್ನು ಬರೆದಿರುವುದು ಅಚ್ಚರಿ ಹುಟ್ಟಿಸುತ್ತದೆ.

`Nymphomania' ಎಂಬ ಮಾನಸಿಕ ರೋಗವು ಇದೆ. ಈ ರೋಗ ಇರುವವರ ನಡವಳಿಕೆಯು ಪೈಶಾಚಿಕವಾಗಿರುತ್ತದೆ. ಅಂತಹ ಉಗ್ರ ಬೇನೆಯ ಸುತ್ತ ಹೆಣೆದಿರುವ ಜಾನಪದ ಕಥೆಯೊಂದನ್ನು ಆಧಾರಿತವಾದುದು ಈ ಕತೆ. ದೆಯ್ಯ ಬಡಿದಿದೆ ಎಂದು ಹಿಂದಿನವರು ಹೇಳುತ್ತಿದ್ದುದು, ಈಗಿನ ವೈಜ್ಞಾನಿಕ ಪ್ರಗತಿಯ ಹಂತದಲ್ಲಿ, ಮಾನಸಿಕ ಉಗ್ರ ಬೇನೆಗಳು ಎಂದು ಹೇಳಬಹುದು" ಎಂದು 'ಅಂಚೆ ಪೇದೆಯ ಅಂತರ್ ಹೆಂಡತಿ' ಎಂಬ ನೀಳ್ಗತೆಯ ಕೆಳಗೆ ಲೇಖಕರು ವಿಶೇಷವಾದೊಂದು ಸೂಚನೆ ಕೊಟ್ಟಿದ್ದಾರೆ.

ಮಾನಸಿಕ ರೋಗಿಗಳ ನಡತೆಯಲ್ಲಿ ಉಗ್ರತೆ ಇದ್ದರೆ ಅದು ಅವರೊಬ್ಬರ ನಡತೆಗೆ ಮಾತ್ರ ಸೀಮಿತ. ಆದರೆ ಈ ಕತೆಯಲ್ಲಿ ಭೀಮುಡು, ಅವನ ಹೆಂಡತಿಯರು, ಊರಿನ ಒಂದು ಹೆಣ್ಣು ಎಲ್ಲರೂ ಅಮಾನುಷ ಕ್ರಿಯೆಗಳನ್ನು ಕಾಣುತ್ತಾರೆ. ಭೀಮುಡು, ಎಂಬ ಸದೃಢ ವ್ಯಕ್ತಿಯೊಬ್ಬನ ಬದುಕಿನಲ್ಲಿ ಹಾಗೂ ಚಿಕ್ಕಮಲ್ಲನ ಜೀವನದಲ್ಲಿ ನಡೆಯುವ ಸಂಗತಿಗಳು ನಂಬಲಾಗದಂತಹವು. ಅವುಗಳ ಒಂದೆರಡು ವಿವರಗಳನ್ನು ಇಲ್ಲಿ ಗಮನಿಸಬಹುದು. ಭೀಮುಡು ತನ್ನ ಹಳ್ಳಿಯಲ್ಲಿ ಕೊಳದ ಬಳಿಯ ಹಲಸಿನ ಮರದಿಂದ ಕಿತ್ತು ತಂದ ಹಲಸಿನ ಹಣ್ಣುಗಳನ್ನು ಅವನ ಇಬ್ಬರು ಹೆಂಡತಿಯರು ಹೆಚ್ಚುತ್ತಾರೆ. ಹೆದರಿ ಬೊಬ್ಬೆ ಹೊಡೆಯುತ್ತಾರೆ. "ಹಲಸಿನ ಹಣ್ಣನ್ನು ಬಿಡಿಸುತ್ತಾ ಹೆಂಡತಿಯರಿಬ್ಬರೂ ಕುಳಿತಿದ್ದಾರೆ. ಇಬ್ಬರ ಕೈಯೂ ರಕ್ತದಿಂದ ಒದ್ದೆಯಾಗಿದೆ. ಹೆದರಿಕೊಂಡು ಇಬ್ಬರೂ ಗೋಳಿಡುತ್ತಿದ್ದಾರೆ. ಭೀಮುಡುವನ್ನು ಕಂಡ ಕೂಡಲೇ ಇಬ್ಬರೂ, "ಯಾವ ಮರದ ಹಣ್ಣುಗಳಿವು. ಕೊಚ್ಚಿ ತೊಳೆಗಳನ್ನು ಬಿಡಿಸಹೋದಾಗ, ಬರೀ ರಕ್ತವೇ ಹರಿಯತೊಡಗಿತು. ಕುರಿಯ ಕತ್ತನ್ನು ಕೊಯ್ದರೂ ಹಾಗೆ ರಕ್ತವು ಚಿಮ್ಮಲ್ಲ! ಯಾರೋ ಮಾಟ ಮಾಡಿ ನಿಮಗೆ ಹಣ್ಣನ್ನು ಕೊಟ್ಟಿದ್ದಾರೆ. ನಮ್ಮ ವಂಶಕ್ಕೆ ಏನೋ ಕೇಡು ಬಡಿಯುತ್ತದೆ" ಎಂದು ಗೋಳಾಡುವುದನ್ನು ಮುಂದುವರಿಸಿದರು. ಇತರ ಹೆಣ್ಣುಮಕ್ಕಳು ಕೊಚ್ಚಿ ತೊಳೆಗಳನ್ನು ಬಿಡಿಸಿದಾಗ ತೊಳೆಗಳಿಂದ ರಕ್ತವೇ ಹರಿಯತೊಡಗಿತು." ಎಂದು ಹೇಳುತ್ತಾರೆ. ನಂತರ ಭೀಮುಡು ತಾನೇ ಹಲಸಿನ ಹಣ್ಣು ಹೆಚ್ಚಿ ತೊಳೆಗಳನ್ನು ಬಿಡಿಸಿ ತೆಗೆಯತೊಡಗುತ್ತಾನೆ. ಆಗ ಅದೇ ಹಣ್ಣೇ ಆದರೂ ಅಲ್ಲಿ ರಕ್ತ ಹರಿಯುವುದಿಲ್ಲ. ಆದರೆ ಒಂದೊಂದು ತೊಳೆಯೂ, ಹಲಸಿನ ಬೀಜಗಳೇ ಇರದ ದನದ ನಾಲಿಗೆಗಳಂತೆ ಇರುತ್ತವೆ,

ಇದೇ ಭೀಮುಡು ಕೊಳದ ಬಳಿಯ ಹಲಸಿನ ಮರದಿಂದ ಕಿತ್ತ ಹಣ್ಣುಗಳಲ್ಲೇ ಒಂದನ್ನು ಇನ್ನೊಬ್ಬ ಹೆಣ್ಣಿಗೆ ಕೊಟ್ಟಿರುತ್ತಾನೆ. ಅ ಹೆಣ್ಣಿನ ಮನೆಯಲ್ಲಿ ನಡೆದ ಸಂಗತಿ ಬೇರೆ ರೀತಿಯದು. "ಆ ಸಂಜೆಯಲ್ಲಿ ಪಾಳ್ಯದ ಹೆಣ್ಣೊಂದು ರಕ್ತವನ್ನು ಕಾರಿಕೊಂಡು ಹಠಾತ್ತನೆ ಸತ್ತಳು".. .. "ಆಕೆಯು (ಭೀಮುಡು) ತನಗೆ ಕೊಟ್ಟಿದ್ದ ಹಲಸಿನ ಹಣ್ಣನ್ನು ಬಿಡಿಸಿ ತಿಂದಿದ್ದಳು. ರಕ್ತವೇನೂ ಆ ಹಣ್ಣಿನಿಂದ ಹರಿದಿರಲಿಲ್ಲ. ತೊಳೆಗಳೂ ಎಲ್ಲಾ ತೊಳೆಗಳಂತೆಯೇ ಇದ್ದುವು. ಭೀಮುಡು ಗುಡಿಸಿಲಿನಲ್ಲಿ ಆದ ಪ್ರಸಂಗವನ್ನು ಕಂಡು ಆಕೆಗೂ ಆಶ್ಚರ್ಯವಾಗಿದ್ದಿತು. ಅದೇ ಮರದ ಹಣ್ಣನ್ನು ನಾನು ಹೆಚ್ಚಿದಾಗ ಇಂತಹದೇನೂ ಆಗಲಿಲ್ಲವಲ್ಲ: ಭೀಮುಡು ಗುಡಿಸಿಲಿನಲ್ಲಿ ಕೊಚ್ಚಿದರೆ, ರಕ್ತವು ಏಕೆ ಸುರಿಯಿತು ಎಂದು ಅಚ್ಚರಿ ಪಟ್ಟಿದ್ದಳು. ಆದರೆ ಮೂರು ದಿನಗಳಲ್ಲಿ ಅಚ್ಚರಿಪಡುವುದು ನಿಂತು ಹೋಯಿತು. ತಾನೇ ರಕ್ತವನ್ನು ಕಾರಿ ಸತ್ತು ಹೋಗಿದ್ದಳು. ಈ ಸುದ್ದಿಯು ಭೀಮುಡುವಿಗೆ ತಿಳಿದಾಗ, ಹೆಣವನ್ನು ಹೋಗಿ ನೋಡಿಕೊಂಡು ಬಂದ ಮೇಲೆ, ಅವನಿಗೆ ಪುನಃ ಭಯವಾಯಿತು. ಕಾಟಾರಮ್ಮನ ಪ್ರಭಾವದಲ್ಲಿ ನಂಬಿಕೆಯು ಕಡಿಮೆಯಾಯಿತು" ಎಂಬೆಲ್ಲ ಕತೆಯೇ ಅಲ್ಲದೆ, ಕೊಳದಂಚಿನ ಗುಡಿಸಿಲ ಕಾಡು ಕುರುಬರ ಹೆಣ್ಣೊಂದು ಬಿಸಿಲಮಚ್ಚಿನ ಮೇಲೆ ರಾತ್ರಿ ಕಾಣಿಸಿಕೊಂಡು ಭೀಮುಡುವನ್ನು ಆಕರ್ಷಿಸುತ್ತದೆ. ಅವನ ಬಾಯೊಳಗೆ ತನ್ನ ನಾಲಿಗೆ ಚಾಚಿ ಅವನ ಪ್ರಾಣವನ್ನೇ ಹೀರುತ್ತದೆ. ಮನೆಯವರೆಲ್ಲ ಬೆಳಗ್ಗೆ ಬಂದು ನೋಡಿದಾಗ ಭೀಮುಡು ಹೆಣವಾಗಿ ಬಿದ್ದಿರುತ್ತಾನೆ. ಇಲ್ಲಿ ಭೀಮುಡು ಪುಕ್ಕಲು ಮನುಷ್ಯನೂ ಅಲ್ಲ, ಕೃಶದೇಹಿಯೂ ಅಲ್ಲ. ಅಶಕ್ತನೂ ಅಲ್ಲ. ಅದರಿಂದ ಭಯದಿಂದಾಗಿ ಅವನಿಗೆ ದೆವ್ವದ ಕಾಟದ ಭ್ರಮೆ ಇದೆ ಎಂದು ಹೇಳಲಾಗುವುದಿಲ್ಲ. ಅವನೇ ಅಲ್ಲದೇ ಅವನ ಬದುಕಿನಲ್ಲಿ ಸೇರಿರುವ ಅವನ ಇಬ್ಬರು ಹೆಂಡತಿಯರೂ ಮತ್ತು ಪಾಳ್ಯದ ಒಂದು ಹೆಣ್ಣೂ ಈ ಅಮಾನುಷ ಘಟನೆಗಳ ಪರಿಣಾಮವನ್ನು ಅನುಭವಿಸುವುದರಿಂದ ಇದು ಒಬ್ಬನ ಭ್ರಮೆ ಅಥವಾ ಅಧೈರ್ಯ ಅಥವಾ ಮಾನಸಿಕ ಅಸಮತೋಲನ ಎನ್ನಲಾಗುವುದಿಲ್ಲ.

ಈ ಕತೆಯಲ್ಲಿ ಬರುವ ಚಿಕ್ಕಮಲ್ಲನ ವಿಷಯದಲ್ಲಿಯೂ ಇದೇ ರೀತಿಯ ಅವಾಸ್ತವಿಕವೆನಿಸುವ ಅನೇಕ ಸನ್ನಿವೇಷಗಳಿವೆ. ಚಿಕ್ಕಮಲ್ಲನ ಗರ್ಭಿಣಿ ಹೆಂಡತಿ ಮಾತಾಯಿ ಕಾಳಿಗುಡಿಯಲ್ಲಿ ನಾಲಿಗೆಯ ಮೇಲೆ ಬತ್ತಿ ಇಟ್ಟುಕೊಂಡು ಬೆಂಕಿ ಹಚ್ಚಿ ಧಗ ಧಗ ಉರಿಸುತ್ತಾಳೆ. ಆ ನಾಲಿಗೆಯಿಂದಲೇ ಆರತಿ

ಮಾಡುತ್ತಾಳೆ. ಇವನ್ನು ಭ್ರಮೆ ಹಿಡಿದ ಹುಚ್ಚರು ಮಾಡಬಹುದು. ಆದರೆ ಮಗು ಹೆತ್ತ ಮೇಲೆ ಪೈಶಾಚಿಕ ರೀತಿಯಲ್ಲಿ ಕಾಳಿಯ ಪೂಜೆಯನ್ನು ಹತ್ತು ರಾತ್ರಿಗಳ ಕಾಲ ನಡೆಸಿದರೆ ತನ್ನ ಪೈಶಾಚಿಕತೆ ಮುಗಿದು ಹೋಗುತ್ತಿತ್ತು ಎಂದು ಪಿಶಾಚಿಯಾಗಿ ಹೇಳುವುದು; ನಾಲಿಗೆಯ ಮೇಲಿನ ಜ್ವಾಲೆ ಹೊಗೆಯಾಗಿ, ಆ ಹೊಗೆಯು ಮಾತಾಯಿ ಕಾಳಿಯ ಒಳ ಅಂಕಣವನ್ನೂ, ಹೊರ ಮಂಟಪವನ್ನೂ ದಟ್ಟವಾಗಿ ತುಂಬಿಕೊಳ್ಳುವುದು; ಚಿಕ್ಕಮಲ್ಲ ಭಯಗ್ರಸ್ತನಾಗಿ ಉಸಿರು ಕಟ್ಟಿ ತನ್ನ ಗುಡಿಸಿಲಿಗೆ ಓಡಿ ಬಂದಾಗ ತನ್ನ ಹೆಂಡತಿ ಮಗು ಕಾಣದಾಗುವುದು; ಕೊನೆಗೆ ಬಿಸಿಲು ಮಚ್ಚಿನ ಮೇಲೆ ಬಾಣಂತಿ ಮತ್ತು ಅವಳ ಮಗು ವಿಕಾರ ಮುಖದಲ್ಲಿ ಸತ್ತು ಬಿದ್ದಿರುವುದು – ಇವೆಲ್ಲ ಮಾನಸಿಕ ರೋಗಿಯೊಬ್ಬಳು ಮಾಡಲಾಗದ ಭಯಂಕರ ಕಾರ್ಯಗಳು. ಇಷ್ಟೇ ಅಲ್ಲದೆ ದೆವ್ವ ಆಕ್ರಮಿಸಿದ ಗರ್ಭಿಣಿ ಹೆಂಡತಿ; ಚೇಳು ಕಚ್ಚಿದ ಇನ್ನೊಬ್ಬರ ದೇಹದೊಳಗಿಂದ ಚೇಳಿನ ವಿಷವನ್ನು ತನ್ನ ನಾಲಿಗೆಯಿಂದ ಹೀರಿ ಎಳೆದು ಹೊರ ತೆಗೆಯುವುದು; ನಡುರಾತ್ರಿಯಲ್ಲಿ ಎದ್ದು ಹುಚ್ಚರ ಧೈರ್ಯದಿಂದ ಕಾಡಿನಲ್ಲಿ ಮಾತಾಯಿ ಕಾಳಿ ಗುಡಿಗೆ ಒಬ್ಬಳೇ ಹೋಗಿ ಬರುವುದು; ದರ್ಪದಿಂದ ಶಕ್ತಿಯುತ ಹೆಂಗಸಿನಂತೆ ಚಿಕ್ಕಮಲ್ಲನೊಂದಿಗೆ ನಡೆದುಕೊಳ್ಳುವುದು; ಕರ್ಕಶವಾಗಿ ಕೂಗುತ್ತ ಹಾರಿ ಬಂದ ಪ್ರೇತಪಕ್ಷಿಯ ಕುತ್ತಿಗೆಯನ್ನು ಎರಡೂ ಕೈಗಲಿಂದ ಒತ್ತಿ ಹಿಡಿದು ಮುರಿಯುವುದು– ಇಂಥದನ್ನೆಲ್ಲ ಒಬ್ಬ ಮಾನಸಿಕ ರೋಗಿಯ ನಡವಳಿಕೆಗಳಾಗಬಹುದಾದ ಸಂಭವವಿದ್ದಲ್ಲಿ, ಅದು ಹೇಗೆ ಎಂಬುದು ನಿರೂಪಣೆಯಲ್ಲಿ ಸ್ಪಷ್ಟವಾಗುವುದಿಲ್ಲ.

ಇಷ್ಟೇ ಅಲ್ಲದೆ ಕೊಳದ ಬಳಿಯ ಪಾಪಾಸು ಕಳ್ಳಿಪೊದೆಯ ಬಳಿ ನಗ್ನಳಾಗಿ ಮಲಗಿದ್ದ ಹೆಣ್ಣೊಂದರ ಜೊತೆ, ಹಲಸಿನ ಮರದ ಕೆಳಗಿನ ಹುತ್ತದಿಂದ ಎರಡು ಹಾವುಗಳು ಬಂದು ಆಡುವ ಚಕ್ಕಂದ; ಒಂದೆರಡು ಮಾರು ದೂರದ ತನಕ ಚಾಚುವ ಅವಳ ದೀರ್ಘ ನಾಲಿಗೆ; ಆ ನಾಲಿಗೆಯಿಂದ ಬರುವ ಕಪ್ಪು ಹೊಗೆ; ಸುತ್ತ ತುಂಬುವ ಆ ದಟ್ಟ ಹೊಗೆ, ಹೊಗೆಯ ಮೋಡದಲ್ಲಿ ಆ ಹೆಣ್ಣು ಕರಿ ನಾಗರಗಳಲ್ಲಿ ಮಾಯವಾಗುವಿಕೆ ಇವೆಲ್ಲ ಘಟಿಸಲು ಹೇಗೆ ಸಾಧ್ಯ ಎಂಬುದು ತಿಳಿಯದೆ ವಾಸ್ತವಕ್ಕೆ ದೂರವಾದ ಕಟ್ಟು ಕತೆಗಳೆನಿಸುತ್ತವೆ.

'ಸುಲ್ತಾನ್ ಸಾಬರ ಕೊಳ್ಳಿ ದೆವ್ವಗಳು' ಎಂಬ ಕತೆಯಲ್ಲಿ, ಕೊಳ್ಳಿ ದೆವ್ವಗಳು ಕಾಡುವ ಸಂಗತಿಗಳಿವೆ. ಸಿದ್ದಪ್ಪ ಮತ್ತು ಚೆಲುವನ ಸುತ್ತ ಕತೆ ಹೆಣೆಯಲಾಗಿದೆ. ಚೆಲುವ ಸಂತೆಯಿಂದ ಹಿಂದಿರುಗುವಾಗ ಕಾಲುದಾರಿಯ ಬಳಿ, ಸುರಿವ ಮಳೆಯಲ್ಲೂ ಕೊಳ್ಳಿ ದೆವ್ವಗಳು ಕಾಣಿಸಿಕೊಳ್ಳುತ್ತವೆ. ಸಾವಿತ್ರಮ್ಮ ಮನೆಯ

ಅಂಗಳದಲ್ಲಿ ಒಣ ಹಾಕಿದ ಒದ್ದೆ ಸೀರೆಗೆ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿ ಉರಿಯುತ್ತದೆ. ಬಾಲಕ್ಕೆ ಬೆಂಕಿ ಹತ್ತಿ ನೆಗೆದ ಬೆಕ್ಕು; ದುರ್ಗಿಗುಡಿಯ ಮಂಟಪದೊಳಕ್ಕೆ ಅತಿ ವೇಗದಿಂದ ಪ್ರವೇಶಿಸಿದ ಕೆಂಪು–ಹಸಿರಿನ ಎರಡು ಜ್ವಾಲೆಗಳು; ಲಿಂಗಾಚಾರಿಯ ಹೆಗಲ ಮೇಲೆ ಹೊತ್ತ ಬೊಂಬೆಯ ಬಿರಿದ ಬಾಯಲ್ಲಿ ಪ್ರವೇಶ ಮಾಡಿ ಮರೆಯಾಗುವಿಕೆ; ಹುಲ್ಲಿನ ಮೆದೆಯ ಹಿಂದಿನ ಗುಡಿಸಲಲ್ಲಿ ವರ್ಷಗಳ ಹಿಂದೆ, ದೀಪಾವಳಿಯ ಆಕಾಶಬಾಣದಿಂದಾಗಿ ಹೊತ್ತಿಕೊಂಡ ಬೆಂಕಿಯಲ್ಲಿ ಸುಟ್ಟು ಕೊಳ್ಳಿ ದೆವ್ವಗಳಾದ ಸುಲ್ತಾನಾ ಸಾಬಿ ಮತ್ತು ಅವನ ಹೆಂಡತಿ ಲಿಂಗಾಚಾರಿಯ ಬೊಂಬೆ ನುಂಗಿ ಮುಕ್ತಿ ನೀಡಿತೆಂಬ ಜನರ ನಂಬಿಕೆ– ಇವೇ ಈ ಕಥೆಯಲ್ಲಿ ಬರುವ ವಸ್ತು–ವಿಷಯಗಳು. ಕುತೂಹಲ ಹುಟ್ಟಿಸುವಂತೆ ಭ್ರಾಮಕ ಅಂಶಗಳನ್ನು ಸೇರಿಸಿ ಹೆಣೆದ ಕಲ್ಪಿತ ಕಥೆ.

“ದೆವ್ವ ಕೊಟ್ಟ ಹಂಡೆ’ ವಾಸ್ತವಿಕ ನೆಲೆಯಲ್ಲಿ ನಂಬಲಸಾಧ್ಯವಾದರೂ ಫ್ಯಾಂಟಸಿ ರೀತಿಯಲ್ಲಿ ಮಕ್ಕಳಿಗೆ ಮನರಂಜಕವೆನಿಸುವ ಕಥೆ. ಸರಸ ಮತ್ತು ಗುಂಡಣ್ಣ ಎಂಬ ದಂಪತಿಗಳು ಮದುವೆಗೆಂದು ಊರಿಗೆ ಹೋದಾಗ, ಮನೆಯಲ್ಲಿ ಅಜ್ಜಿಯನ್ನು ದೆವ್ವ ತನ್ನ ಹೆಂಡತಿಯ ಹೆರಿಗೆ ಮಾಡಿಸಲೆಂದು ಎತ್ತಿಕೊಂಡು ಹೋಗಿ, ಅವಳು ಮಾಡಿಸಿದ್ದಕ್ಕೆ ಒಂದು ದೊಡ್ಡ ಹಂಡೆಯನ್ನು ಕಾಣಿಕೆಯಾಗಿ ಕೊಡುತ್ತದೆ. ನಲವತ್ತು ವರ್ಷಗಳ ಕಾಲ ‘ಸಪ್ತಮಾತೃಕೆ’ಯರ ವ್ರತ ನಡೆಸಿದ ಅಜ್ಜಿಗೆ; ಹುಳು, ಹಾವು, ಚೇಳು, ದೆವ್ವ–ಪಿಶಾಚಿ– ಈ ಯಾವುವೂ ಹತ್ತಿರ ಸುಳಿಯುವುದಿಲ್ಲ ಎಂದು ಅಗಾಧ ಧೈರ್ಯ,

ರಾತ್ರಿ ಅಜ್ಜಿ ಮಲಗಿದಾಗ ಬಚ್ಚಲ ಮನೆಯಲ್ಲು ಸೌದೆ ತುಂಬಿರುವ ಅಟ್ಟದ ಮೇಲಿಂದ ದಟ್ಟವಾಗಿ ಹೊಗೆ ಎದ್ದು, ಭೂತಾಕಾರವಾಗಿ ಮನುಷ್ಯ ರೂಪದಲ್ಲಿ ಎದುರು ನಿಲ್ಲುವುದು, ಆ ದೆವ್ವದ ಮನೆಯಲ್ಲಿ ಬಿಸಿ ನೀರು ಬೇಕೆಂದಾಗ, ದೆವ್ವದ ಮಕ್ಕಳು ಒಲೆಯೊಳಗೆ ತಮ್ಮ ಕಾಲುಗಳನ್ನಿಟ್ಟು ಪರಸ್ಪರರ ಕಾಲು ತಿಕ್ಕಿ ಬೆಂಕಿ ಬರಿಸುವುದು; ಕಾಲುಗಳನ್ನೇ ಉರಿಸಿ ನೀರು ಕಾಯಿಸುವುದು, ಹುಟ್ಟಿದ ಮಗು ಥಟ್ಟಂತ ಛಂಗಿ ಜೋಪಡಿಯ ಸೂರಿಗೆ, ಬಾವಲಿಯಂತೆ ಜೋತು ಬೀಳುವುದು, ಅಜ್ಜಿ ಮನುಷ್ಯ ಲೋಕದಲ್ಲಿ ಮಾಡಿದಂತೆ, ಸಪ್ತ ಮಾತೃಕೆಯರ ಪ್ರಾರ್ಥನೆ ಮಾಡಿದಾಗ ಸೂರಿಗೆ ಅಂಟಿದ ಮಗು ಅಮ್ಮನ ಬಳಿಗೆ ಧುಮುಕಿ ತೆಪ್ಪನೆ ಮಲಗುವುದು–ಇವೇ ಮುಂತಾದ ಕ್ರಿಯೆಗಳು ಈ ಕಥೆಗಳಲ್ಲಿ ಕಾಣ ಸಿಗುತ್ತವೆ. ಯಾವುದೇ ವೈಜ್ಞಾನಿಕ ಒರೆಗಲ್ಲಿನಲ್ಲಿ ಪ್ರಮಾಣಿಕರಿಸಿ

ಬರೆದಿಲ್ಲವಾದ್ದರಿಂದ ಇವನ್ನು ಕೇವಲ ಮನರಂಜಕ ಕತೆಗಳಾಗಿ ಆಸ್ವಾದಿಸಬಹುದು.

'ಈ ಕತೆಯ ಕೊನೆಯಲ್ಲಿ ಮಗ–ಸೊಸೆ ಊರಿನಿಂದ ಹಿಂತಿರುಗಿದ ಮೇಲೆ, "ಅಜ್ಜಿ ನೀವು ಹೇಳಿದ್ದು ದಿಟವೇ? ಅಟ್ಟದ ಮೇಲೆ ಹೊಸಾ ಹಂಡೆ ಇದೆ. ದೆಯ್ಯದಂತಹ ದೊಡ್ಡ ಹಂಡೆ. ಅದನ್ನು ಸಾಕ್ಷಾತ್ ನೋಡುವ ತನಕ ನಂಬಲೇ ಇಲ್ಲ. ದೆವ್ವವೇ ಸುಳ್ಳು, ಮನಸ್ಸಿನಲ್ಲಿ ಭಯದಿಂದ ಹುಟ್ಟಿದ ಭ್ರಾಂತು ಎಂದುಕೊಂಡಿದ್ದೆ ಎಂದು ಗುಂಡಣ್ಣ ಒಪ್ಪಿಕೊಂಡ" ಎಂಬ ಹೇಳಿಕೆಯು ದೆವ್ವಗಳಿರುವುದು ಸತ್ಯ ಎಂಬುದನ್ನು ಖಚಿತ ಪಡಿಸುತ್ತದೆ. ಈ ಸಂಕಲನದ ಎಲ್ಲ ಕತೆಗಳೂ, ಪೋಂತಿಯಾನೋ ಕೃತಿಯೂ, ಈ ನಂಬಿಕೆಯನ್ನೇ ಪ್ರತಿಪಾದಿಸುತ್ತವೆ. ದೆವ್ವಗಳು ಅವರವರ ಅಂತರಂಗದ ಭಯದಿಂದ ಸೃಷ್ಟಿಗೊಳ್ಳುವ ಆಕಾರಗಳು ಅಥವಾ ಅನಿಸಿಕೆಗಳು ಎಂಬ ಧೃಢ ನಂಬಿಕೆಯ ಧೀರರ ಧೈರ್ಯಗೆಡಿಸಲೂಬಹುದು ಇವು. ಹಾಗೂ ಯಾವ ಯಾವ ರಸಾಯನಗಳಿಂದ ಹೇಗೆ ಬೆಂಕಿ ಎಬ್ಬಿಸಬಹುದು ಅಥವಾ ಹೊಗೆ ಹಾಕಬಹುದು ಎಂಬುದನ್ನು ಇಂದಿನ ವಿಜ್ಞಾನಿಗಳು ಪ್ರಯೋಗಗಳ ಮೂಲಕ ಪ್ರಮಾಣೀಕರಿಸಿ ತೋರಿಸಿ, ಜನರ ಮೌಢ್ಯತೆ ದೂರ ಮಾಡಲು ಪ್ರಯತ್ನಿಸುತ್ತಿರುವಾಗ, ಈ ವಿಜ್ಞಾನಿಗಳು ತೋರಿಸುವ ಸತ್ಯಾಂಶಗಳು ಈ ಕಥೆಗಳಿಂದ ಅನುಮಾನಕ್ಕೆಡೆಯಾಗಬಹುದು. ಎಲ್ಲಕ್ಕಿಂತ ಎಲ್ಲವನ್ನೂ ವೈಜ್ಞಾನಿಕ ದೃಷ್ಟಿಯಿಂದ, ಸತ್ಯಕ್ಕೆ ಒರೆ ಹಚ್ಚಿ ನೋಡಿ ಬರೆಯುವ ರಾಶಿಯವರು ಪ್ರಸ್ತಾವನೆಯಲ್ಲಿ ಬರೆದಿರುವ ವಿವರಗಳನ್ನು ಓದಿದ ಮೇಲೆಯೂ ಇಂಥ ಕಥೆಗಳನ್ನು ಬರೆದುದು ಹೇಗೆ ಎನ್ನುವ ಪ್ರಶ್ನೆಯು ಉದ್ಭವಿಸುತ್ತದೆ.

"ಮನುಷ್ಯನ ಜ್ಞಾನ ಭಂಡಾರ ಹಿರಿದಾದಾಗ ಪುರಾತನ ನಂಬಿಕೆಗಳು ಮೌಢ್ಯ ಎಂದು ಅನಿಸಿದಾಗ, ಅಂತಹವುಗಳು ಮನಸ್ಸಿನ ಆಳ ಹಗೇವುಗಳಲ್ಲಿ ಶೇಖರಿಸಲ್ಪಟ್ಟವು. ಆದರೆ ಅಲ್ಲಿ ಅವು ತೆಪ್ಪಗಿರಲಿಲ್ಲ. ಯಾವಾಗಲಾದರೂ, ಯಾವ ಕಾರಣದಿಂದಾದರೂ ಕೆರಳಿ ದೆವ್ವ, ಭೂತ, ಪಿಶಾಚಿ ಎಂಬ ವಿಕೃತ ರೂಪಗಳಲ್ಲಿ ಕಾಡತೊಡಗಿದುವು. ವ್ಯಕ್ತಿಯ ಹುಚ್ಚು, ಬೆಪ್ಪು, ಶಿವಲೀಲೆಗಳಾದುವು" ಎಂದು ರಾ.ಶಿ.ಯವರು ಈ ಪುಸ್ತಕದ ಪ್ರಸ್ತಾವನೆಯಲ್ಲಿ ಬ್ರಹ್ಮ ರಾಕ್ಷಸ, ಮೋಹಿನಿ, ಕಾಳ್ಗಿಚ್ಚು, ಆದಿ ಮಾನವ ಕಂಡ ಸುಂಟರಗಾಳಿ, ಜೌಗು ಪ್ರದೇಶಗಳಲ್ಲಿ ಸುಲಭವಾಗಿ ಹೊತ್ತಿಕೊಳ್ಳುವ 'ಮಾರ್ಷ್ ಗ್ಯಾಸ್' ತರಹ ಅನಿಲಗಳು; ಉಪ್ಪಿನ ಸಂಪರ್ಕದಿಂದ ಅವು ತಾಳುವ ಅರಿಶಿಣ ಬಣ್ಣ;

ಮೈಲುತುತ್ತದ ಸಂಪರ್ಕವಿದ್ದರೆ ಹೊಂದುವ ಹಸಿರು ಅಥವಾ ನೀಲಿ ಬಣ್ಣ; ಆದಿ ಮಾನವನ ಕಣ್ಣಿಗೆ ಆಗ ಕಾಣದ ವೈರಸ್‌ಗಳು, ಬ್ಯಾಕ್ಟೀರಿಯಾಗಳು, ಪ್ರೋಟೋಜೋನಾಗಳು, ಮನಸ್ಸು ಕಾಡಿ ತರುತ್ತಿದ್ದ ಸನ್ನಿ; ವಿಟಮಿನ್ 'ಬಿ'ಯ ಕೊರತೆಯಿಂದಾಗಿ ಕಾಡುವ 'ಬೆರೆ ಬೆರಿ' ಎಂಬ ಬೇನೆ – ಇವೇ ಮುಂತಾದವುಗಳ ಬಗ್ಗೆ ವಿಶ್ಲೇಷಿಸಿ, ಆದಿ ಮಾನವನ ಕಾಲದಿಂದ, ದೆವ್ವ ಭೂತಗಳ ಸೃಷ್ಟಿಗೆ ಕಾರಣವಾಗಿರಬಹುದಾದ ಅಂಶಗಳನ್ನು ವಿವರಿಸಿದ್ದಾರೆ. ಆದರೂ ಈ ಅಂಶಗಳು ಈ ಸಂಕಲನದ ಕಥೆಗಳಲ್ಲಿ ಬರುವ ಸಂದರ್ಭ–ಸನ್ನಿವೇಷಗಳಲ್ಲಿ ಹೇಗೆ ನಿಜವೆನಿಸುವಂತೆ ನಡೆಯುತ್ತವೆ ಎಂಬುದು ಸ್ಪಷ್ಟವಾಗುವುದಿಲ್ಲ. ಮತ್ತು ಹೇಗೆ ಹೊಂದುತ್ತವೆ ಎಂಬುದೂ ಅರಿವಿಗೆ ಬರುವುದಿಲ್ಲ. "ದೈವ, ದೆವ್ವ ಎಂಬ ಆದಿಮೂಲದಿಂದ ಉದ್ಭವಿಸಿದ ಪ್ರತ್ಯೇಕತೆಯನ್ನು ಕಾಲ, ದೇಶ, ನಿಮಿತ್ತದ ಕಾರಣದಿಂದಾಗಿ ಮರೆತು ಹೋದರು. ಮರೆತೆವು ಎಂಬುದನ್ನು ಅರಿಯಲು ನಿಮಿತ್ತವು ಅಡ್ಡಿಯಾಗಿತ್ತು. ಕಂಟಕವಾಗಿತ್ತು. ಪುರಾತನ ಸ್ಮರಣೆಯು ಕಂಟಕವಾಗಿತ್ತು ಪುರಾತನ ಸ್ಮರಣೆಯು ಉಂಟಾದಾಗ ದ್ವಂದ್ವವು ಮಾಯಾವಾಗುತ್ತದೆ. ಅದಾಗುವ ತನಕ ದೈವ ಮತ್ತು ದೆವ್ವಗಳು ಮಾನವನನ್ನು ಕಾಡಲೇ ಬೇಕು! ಆದಿಮೂಲದ ಅರಿವಿನಲ್ಲಿ ಇದು ಅನಿವಾರ್ಯ. ಬಹುಶಃ ಅತ್ಯಗತ್ಯ" ಎಂಬುದೇ ರಾ.ಶಿ.ಯವರ ಅಭಿಪ್ರಾಯ. ಪುರಾತನ ಸ್ಮರಣೆ ಉಂಟಾಗುವುದು ಹೇಗೆ, ಯಾವಾಗ? ಸಾಮಾನ್ಯರಿಗೆ ಸ್ಪಷ್ಟವಾಗದ ಅಂಶ. ಮುಂದುವರೆದು, "ಕೊಳ್ಳಿ ಪಿಶಾಚಿಗಳು, ಮಾನವನ ಉದ್ಧಾರದ ಪಥದಲ್ಲಿ ಅಗತ್ಯ. ಆದುದರಿಂದಲೇ ಕೊಳ್ಳಿಪಿಶಾಚಿಗಳು ಉರಿಸಿ ಕಾಡುವ ಭೂತಗಳೂ, ನಾಡಮಾನವನ ಆಳ ಮನಸ್ಸಿನಲ್ಲಿ, ಕಥೆಗಳಾಗಿ ಉಳಿದು, ಮಾನವಕುಲದ ಬಾಲ್ಯಾವಸ್ಥೆಯಲ್ಲಿ, ಮನರಂಜಕವಾಗಿರುವುದು" ಎಂದು ಇದೇ ಪ್ರಸ್ತಾವನೆಯ ಅಂತ್ಯದಲ್ಲಿ ಹೇಳಿರುವುದು, ದೆವ್ವ ಭೂತಗಳ ಕುರಿತು ಇವರು ಮಾಡಿರುವ ಶೋಧನೆಯಲ್ಲಿ, ವಸ್ತುನಿಷ್ಠ ದೃಷ್ಟಿಗಿಂತ, ತಾವು ಬಯಸಿದ ದೃಷ್ಟಿಯಿಂದ ನೋಡಿರುವುದು ಸುಸ್ಪಷ್ಟ.

**ಪಶ್ಯಾಮಿ ಕಥೆಗಳು (1980):**

"ವಿಶ್ವರೂಪವನ್ನು ವಿವರವಾಗಿ ಅರಿತ ಮೇಲೆ ವಿಶ್ವೇಶ್ವರನ ಜಾಡನ್ನು ಎಲ್ಲೆಲ್ಲಿಯೂ ಕಾಣಬಹುದು" ಎಂದು ಮುನ್ನುಡಿದಿರುವ ರಾ.ಶಿ.ಯವರು; ವಿಶ್ವರೂಪ ದರ್ಶನವನ್ನು ಕಂಡ ಅರ್ಜುನನು ಅಂಜಲಿಬದ್ಧನಾಗಿ ಭಗವದ್ಗೀತೆಯ ಹನ್ನೊಂದನೇ ಅಧ್ಯಾಯದಲ್ಲಿ ಹೇಳಿರುವ, "ಪಶ್ಯಾಮಿ

ದೇವಾಂಸ್ತವ ದೇವ ದೇಹೇ/ಸರ್ವಾಂಸ್ತಥಾ ಭೂತ ವಿಶೇಷ ಸಂಘಾನ್//
ಬ್ರಹ್ಮಾಣಮೀಶಂ ಕಮಲಾಸನಸ್ಥಂ/ಋಶೀಂಶ್ಚ ಸರ್ವಾನ್ ಉರಗಾಂಶ್ಚ ದಿವ್ಯಾನ್//
ಎಂಬ ಶ್ಲೋಕವೊಂದನ್ನೇ ಹಿನ್ನೆಲೆಯಾಗಿಟ್ಟುಕೊಂಡು, ವೈಜ್ಞಾನಿಕವಾಗಿ, ನಿತ್ಯದ ಆಗುಹೋಗುಗಳಿಗೆ ಅನುಗುಣವಾಗಿ ಆಲೋಚಿಸಿ ಆರು ಕತೆಗಳನ್ನು ಈ ಸಂಕಲನದಲ್ಲಿ ಬರೆದು ಸೇರಿಸಿದ್ದಾರೆ. "ಹೇ ದೇವಾ ನಾನು ನಿನ್ನ ಶರೀರದಲ್ಲಿ ಸರ್ವ ದೇವತೆಗಳನ್ನು ಹಾಗೂ ಸಕಲ ಜೀವ ಸಮುದಾಯಗಳನ್ನು, ಕಮಲಾಸನದ ಮೇಲೆ ವಿರಾಜ ಮಾನನಾಗಿರುವ ಬ್ರಹ್ಮನನ್ನು, ಮಹಾದೇವನನ್ನು, ಸಮಸ್ತ ಋಷಿಗಳನ್ನು ದಿವ್ಯವಾದ ಸರ್ಪಗಳನ್ನು ನೋಡುತ್ತಿದ್ದೇನೆ" ಎಂಬುದು ಅರ್ಜುನನು ಹೇಳಿದ ಈ ಶ್ಲೋಕದ ಅರ್ಥ. ಪ್ರಪಂಚದ ಮೂಲೆ ಮೂಲೆಗಳಲ್ಲಿ ನಡೆಯುವ ಯಾವುದೇ ಸಂಗತಿಗಳನ್ನು ಈ ದೃಷ್ಟಿಯಿಂದ ಅನ್ವಯಿಸಿ ನೋಡಬಹುದೆಂಬುದನ್ನು ಇದರಲ್ಲಿಯ ಕಥೆಗಳು ತಿಳಿಸಿ ಕೊಡಲು ಪ್ರಯತ್ನಿಸುತ್ತವೆ. ಇಲ್ಲಿ ಜಾತಿ, ಮತ, ಧರ್ಮ, ದೇಶ, ಯಾವುದೂ ಮುಖ್ಯವಾಗದೇ, ಕೇವಲ ಜ್ಞಾನ ಮತ್ತು ಅಗೋಚರ ಶಕ್ತಿಯು ನಡೆಸುವ ಕೈವಾಡ ಮಾತ್ರ ಕಾಣುತ್ತದೆ. ಆಸಕ್ತಿಯುತ ವಸ್ತು–ವಿಷಯಗಳನ್ನೊಳಗೊಂಡ, ಓದಿಸುವ ಗುಣವಿರುವ ಕಿರು ಕೃತಿ.

ಮಲೆನಾಡಿನ ಹಳ್ಳಿಯೊಂದರಲ್ಲಿ ಪ್ರಸಿದ್ಧ ಜ್ಯೋತಿಷಿಗಳ ಮಗಳು, ಅಷ್ಟೇನೂ ಸುಂದರಿಯಲ್ಲದ ವೆಂಕಟಲಕ್ಷ್ಮಿ. ಅವಳಿಗೆ ಅಮೆರಿಕಾದಲ್ಲಿ 'Astro physics'ನಲ್ಲಿ ಸಂಶೋಧನೆ ಮಾಡಲು ಅವಕಾಶ ಸಿಗುತ್ತದೆ. ವರ್ಷಕ್ಕೊಮ್ಮೆ ಕ್ಯಾಲಿಫೋರ್ನಿಯಾದ ರಾಮಕೃಷ್ಣ ಮಠಕ್ಕೆ ಹೋಗಿ ಬರುವ ಸಾಲಗಾಮೆ ಎಂಬುವವ, ತನಗಿಂತ ಸುಸಂಸ್ಕೃತನಾಗಿ ಕಾಣುತ್ತಾನೆ ಅವಳಿಗೆ. ಪರಸ್ಪರರು ಮೆಚ್ಚಿ ರಾಮಕೃಷ್ಣ ಮಠದಲ್ಲಿ ವಿಧಿವತ್ತಾಗಿ ವಿವಾಹವಾಗುತ್ತಾರೆ. ಬಿಸಿಲುಮಚ್ಚಿನ ಮೇಲೆ ತನ್ನ ಮೂರೂವರೆ ಅಡಿ ಉದ್ದದ ಟೆಲಿಸ್ಕೋಪ್‌ನಲ್ಲಿ ಆಕಾಶ, ನಕ್ಷತ್ರ, ಸಪ್ತರ್ಷಿ ಮಂಡಲ, ಅರುಂಧತಿ, ಭರಣಿ ನಕ್ಷತ್ರಗಳನ್ನು ವೆಂಕಟಲಕ್ಷ್ಮಿ ತೋರಿಸುತ್ತಿದ್ದರೆ, ಭರಣಯ್ಯ, 'ತವ ದೇಹೇ ಪಶ್ಯಾಮಿ ದೇವಾನ್" ಎಂದು ಅವಳಲ್ಲೇ ಸರ್ವಸ್ವವನ್ನು ಕಾಣುತ್ತಾನೆ. ಇದು 'ನಿಶಿರಾತ್ರಿಯ ಮಧುಚಂದ್ರ' ಕಥೆಯಲ್ಲಿ.

'ಸಾಲಿಗ್ರಾಮ' ಈ ಸಂಕಲನದ ಎರಡನೆಯ ಕಥೆ. ಸೌಗರ ವಿಶ್ವ ವಿದ್ಯಾಲಯ ಭೂಗರ್ಭ ಶಾಸ್ತ್ರದ ಪ್ರಕಾರ, ವಿದ್ಯಾರ್ಥಿಗಳು ವಿವಿಧ ಕಲ್ಲುಗಳ ಮಾದರಿಗಳನ್ನು ಅಧ್ಯಯನಕ್ಕಾಗಿ ಸಂಗ್ರಹಿಸಲೆಂದು ಅಲಕಾನಂದದ ದಡದ

ಕುಗ್ರಾಮವೊಂದಕ್ಕೆ ವಿದ್ಯಾರ್ಥಿಗಳು ಬಂದರೆ, ಮಂಡಿ ಸಾಹುಕಾರ ಸೀನಪ್ಪನ ಮಗಳು ಮಂದಾಕಿನಿ ಹಿಮಾಲಯದ ಪರ್ವತಾರೋಹಣ ಶಿಬಿರಕ್ಕೆ, ಸಂಸ್ಥೆಯೊಂದರಿಂದ ಆಯ್ಕೆಯಾಗಿ ಅಲ್ಲಿಗೆ ಬಂದಿರುತ್ತಾಳೆ. ಅವಳು ಹಿಮದ ಮೇಲೆ ಗುದ್ದಲಿ ನೆಡುತ್ತಿರುವಾಗ ದೊಡ್ಡ ಗಡ್ಡೆಯೊಂದು ಕೆಳಗೆ ಜಾರುತ್ತದೆ. ಕೆಳಗಿದ್ದ ಅರವಿಂದ ಎಂಬ ವಿದ್ಯಾರ್ಥಿ, ಅದು ತನ್ನ ಮೇಲೆ ಬೀಳುವುದನ್ನು ತಪ್ಪಿಸಿಕೊಳ್ಳಲು ಪಕ್ಕಕ್ಕೆ ನೆಗೆದಾಗ ಪೂರ್ತಿ ಕೆಳಗೆ ಜಾರಿ ನದಿಗೆ ಬೀಳುತ್ತಾನೆ. ಉಸಿರಿಲ್ಲದಂತಾದ ಅವನಿಗೆ, ಮಂದಾಕಿನಿ, 'mouth-to-mouth respiration' ಮಾಡಿದ ನಂತರವೇ ಉಸಿರು ಹಿಂತಿರುಗಿ ಬರುತ್ತದೆ. ತನ್ನ ಪ್ರಾಣ ರಕ್ಷಣೆಗಾಗಿ ಕೈಗೆ ಸಿಕ್ಕಿದ್ದನ್ನು ಬಿಗಿ ಹಿಡಿದ ಅರವಿಂದನ ಮುಷ್ಠಿಯಲ್ಲಿ ಕೃಷ್ಣ ಸಾಲಿಗ್ರಾಮ ಸಿಕ್ಕಿರುತ್ತದೆ. ಗಂಡಕಿ ನದಿಯ ಈ ಕಪ್ಪು ಕಲ್ಲಿನ ಅಧ್ಯಯನ, ವಿಶ್ಲೇಷಣೆಗಳು, ನಡೆಯುವುದರ ಜೊತೆಗೆ, ಅರವಿಂದನ ನಂಬಿಕೆ, ಮುಂದೆ ಅವನು ಅದನ್ನೇ ಆತ್ಮಲಿಂಗವೆಂಬಂತೆ ಮಾಡುವ ಪೂಜೆ; ಭಾರತೀಯ ಭೂಗರ್ಭಶಾಸ್ತ್ರ ಸಮ್ಮೇಳನಕ್ಕಾಗಿ ಪ್ರಬಂಧ ಬರೆಯಲು ಆಹ್ವಾನ; ಅರವಿಂದ ಬರೆದ ಪ್ರಬಂಧದ ಆಯ್ಕೆ; ಆ ಮೂಲಕ ನೌಕರಿ; ಪರಸ್ಪರರ ಪುನಃ ಭೇಟಿ, ಮಂದಾಕಿನಿಯವರೆಗೂ ಚಾಚುವ ಭಕ್ತಿ; ಇಬ್ಬರಲ್ಲೂ ಮೂಡುವ ಆಕರ್ಷಣೆ; ಕೋಟೆ ಗಣೇಶನ ಗುಡಿಗೆ ಹೋದಾಗ ಭಗವದ್ಗೀತೆಯ 'ಪಶ್ಯಾಮಿ ದೇವಾನ್" ಎಂಬ ಶ್ಲೋಕದ ಅರ್ಥ ವಿವರಣೆ ಕೊಡುವ ಸ್ವಾಮಿಗಳು; ಪರ್ವತಗಳು, ಆರ್ಕಿಡಿಗಳು, ಆತ್ಮಲಿಂಗ ಸಾಲಿಗ್ರಾಮ ಇತ್ಯಾದಿಗಳೆಲ್ಲವೂ ವಿಶ್ವದ ಪಾರ್ಶ್ವರೂಪವೆ ಎನ್ನುವ ಅರವಿಂದ ಮತ್ತು ಮಂದಾಕಿನಿಯರ ಪರಸ್ಪರ ಸೆಳೆತ– ಈ ಎಲ್ಲವೂ ಮದುವೆಯಲ್ಲಿ ಅಂತ್ಯಗೊಳ್ಳುತ್ತದೆ. ಎಲ್ಲದರಲ್ಲೂ ವಿಶ್ವೇಶ್ವರನ ಇರುವಿಕೆಯನ್ನು ತೋರಿಸುವಂತಹ ಘಟನೆಗಳ ಹೆಣಿಗೆಯೇ ಈ 'ಸಾಲಿಗ್ರಾಮ' ಕಥೆ.

'ಕರುಳಿನ ಬಳ್ಳಿ' ಕಥೆಯಲ್ಲಿ "ವಿಷ್ಣುವಿನ ತಲೆಯ ಮೇಲಿನ ಏಳು ಹೆಡೆಯ ಸರ್ಪ, ಹೊಕ್ಕುಳಿನಿಂದ ಹೊರಟ ಬಳ್ಳಿಯಲ್ಲಿನ ಕಮಲದಲ್ಲಿ ಚತುಷ್ಮುಖ ಬ್ರಹ್ಮ ಇರುವ ಚಿತ್ರಪಟವೊಂದನ್ನು ಅಜ್ಜಿಯ ಮನೆಯಲ್ಲಿ ಕಾಣುವ ಎಂಟು ವರ್ಷದ ಶ್ಯಾಮು, ದೊಡ್ಡವನಾದ ಮೇಲೆ, ಸೋಷಿಯಾಲಜಿ ಆನರ್ಸ್ ಪರೀಕ್ಷೆಯಲ್ಲಿ ರ‍್ಯಾಂಕ್ ಗಳಿಸಿ ಪ್ರೊಫೆಸರರ ಸಹಾಯದಿಂದಾಗಿ ಕಲ್ಕತ್ತಾದ ಪ್ರೊಫೆಸರ್ ಬೋಸ್ ಅವರ ಬಳಿ `plesanta'ದ ಮೇಲೆ ಸಂಶೋಧನೆ ಮಾಡುವ ಅವಕಾಶ ಪಡೆಯುತ್ತಾನೆ. ರಾಷ್ಟ್ರ ಮಟ್ಟದಲ್ಲಿ ಖ್ಯಾತಿ ಪಡೆದ ಮಹಾ ವಿದ್ವಾಂಸರಾದ, ಮಹಾ ಮುಖ್ಯೋಪಾಧ್ಯಾಯ ಜ್ಯೋತಿರ್ಮಯ

ಚಟರ್ಜಿಯವರ ಪುತ್ರಿ ಸ್ಮಿತಾ ಜೀವಶಾಸ್ತ್ರದಲ್ಲಿ ಆಸಕ್ತಿ ಇದ್ದ ವಿದ್ಯಾರ್ಥಿನಿ. ಅವಳ ಗೆಳತಿ ಮಾನೀಷಾಳ ಮೂಲಕ ಶ್ಯಾಮುನ ಮೇಧಾಶಕ್ತಿಯ ಪರಿಚಯವಾಗಿ ಬಿ.ಎಸ್‌ಸಿ ಕೊನೆಯ ವರ್ಷಕ್ಕೆ ಸ್ಪೆಷಲ್ ಕೋಚಿಂಗ್‌ಗೆ ಶ್ಯಾಮುನ ಹತ್ತಿರ ಬರುತ್ತಾಳೆ. ಪರಸ್ಪರರ ವಿದ್ವತ್ತು, ಆಸಕ್ತಿಗಳು ಹೊಂದುತ್ತ ನಿಕಟವರ್ತಿಗಳಾಗುತ್ತ ಇಬ್ಬರೂ ಒಲವಿನ ಅಂಗಳಕ್ಕಿಳಿಯುತ್ತಾರೆ. ಒಮ್ಮೆ ಸಂಶೋಧನೆಗೆಂದು ಹೆರಿಗೆ ಆಸ್ಪತ್ರೆಯಿಂದ ತಂದ ಮೂರು ತಿಂಗಳ ಪ್ಲಸೆಂಟಾಗಳ.. .. ಧೃಢವಾದ ಕರುಳ ಬಳ್ಳಿಗಳ ಬಗ್ಗೆ ಸ್ಮಿತಾ ವಿವರಿಸುತ್ತಾ, "ನೋಡಿ ಪದ್ಮ ದಳಗಳಂತೆ ಇವುಗಳಲ್ಲಿಯೂ ಕಾಟಿಲಿಡನ್ನುಗಳಿವೆ. ಕರುಳ ಬಳ್ಳಿಯ ರಕ್ತನಾಳಗಳು, ಕಾಟಿಲಿಡನ್ ದಳಗಳಲ್ಲಿ ಹೇಗೆ ಸಹಸ್ರಾರದಂತೆ ಸೂಕ್ಷ್ಮವಾಗಿ ಹರಡಿಕೊಂಡಿವೆ. ತಾಯ ಗರ್ಭ ಕೋಶವನ್ನು ಪ್ಲಸೆಂಟಾ ದಳಗಳು ಹೇಗೆ ಎಳೆ ಎಳೆಯಾಗಿ ಅಪ್ಪಿಕೊಂಡಿವೆ" ಎಂದು ವಿವರಿಸುವಾಗ; ಶ್ಯಾಮುಗೆ, ವಿಷ್ಣುವಿನ ಕರುಳ ಬಳ್ಳಿಯಿಂದ ಹೊರಟ ಕಮಲಾಸನಸ್ಥ ಬ್ರಹ್ಮನ ಚಿತ್ರಪಟವನ್ನು ಚಿಕ್ಕಂದಿನಲ್ಲಿ ತಾನು ಕಂಡದ್ದು ನೆನಪಾಗುತ್ತದೆ. "ಪಶ್ಯಾಮಿ ದೇವಾಂಸ್ತವ ದೇವ ದೇಹೇ/.. .. .. ಋಶೀಂಶ್ಚ ಸರ್ವಾನ್ ಉರಗಾಂಶ್ಚ ದಿವ್ಯಾನ್// ಎಂಬ ಶ್ಲೋಕದ ನಿಜಾಂಶವನ್ನು ಈ ಪ್ಲೆಸೆಂಟಾದಲ್ಲೂ ಹೇಗೆ ಕಾಣಬಹುದು ಎಂಬುದನ್ನು ಜಾಣೆ ಸ್ಮಿತಾ ಹೊಂದಿಸಿ ವಿವರಣೆ ಕೊಡುತ್ತಾಳೆ. 'ವಿಶ್ವ ವ್ಯಾಪಿಯೇ ವಿಷ್ಣು,. ಅವನಿಲ್ಲದಿದ್ದರೆ, ವಿಶ್ವವೇ ಇರದಿದ್ದರೆ ಹೊಸ ಸೃಷ್ಟಿ ಎಲ್ಲಿ ಬಂತು" ಎಂದು ವಿವರಿಸುತ್ತಾಳೆ. ಅವಳಿಗೆ ಗುರುವಾಗಿದ್ದರೂ, ಅವಳು ಕೊಡುವ ವಿವರಣೆಯ ನಂತರ ಶ್ಯಾಮುಗೆ ಚಿಕ್ಕಂದಿನಲ್ಲಿ ತಾನು ಕಂಡ ಚಿತ್ರಪಟದ ಅರ್ಥ ಸ್ಪಷ್ಟವಾಗುತ್ತದೆ.

"ಉರಗಾಂಶ್ಚ ದಿವ್ಯಾನ್" ಸಂಶೋಧನೆಯಿಂದ ಹೊರತಾದ ಕಥೆ. ಇದರಲ್ಲಿ ಎರಡು ಸಂಗತಿಗಳಿವೆ. ಒಂದು ಸಣ್ಣ ಉಡದೊಳಗೆ ತುಂಬಿರುವ ಅದ್ಭುತ ಶಕ್ತಿಯದು. ಇನ್ನೊಂದು, ಕ್ರೂರ ಹುಲಿಯನ್ನೂ ನುಂಗಿ ಜೀರ್ಣಿಸಿಕೊಳ್ಳಬಲ್ಲಂತಹ ವಿಚಿತ್ತ ಸಾಮರ್ಥ್ಯವುಳ್ಳ ಹೆಬ್ಬಾವುಗಳದು. ಮೊದಲ ಘಟನೆ, ಪುಟ್ಟ ಹುಡುಗನೊಬ್ಬ ರಜೆಯಲ್ಲಿ ಗುಡಿಬಂಡೆಗೆ ಹೋದಾಗ ನಡೆಯುವಂಥದು. ಹಾವಾಡಿಗನೊಬ್ಬ ಹಾವಾಡಿಸಿ ಭಕ್ಷೀಸ್ ಬೇಡಿದಾಗ. "ಹಾವು–ಮುಂಗಸಿಗಳ ಜಗಳ ತೋರಿಸು" ಎಂದು ಹುಡುಗನ ಸೋದರಮಾವ ಕೇಳುತ್ತಾನೆ. ಅವನ ಬಳಿ ಮುಂಗಸಿ ಇಲ್ಲದ್ದರಿಂದ ತನ್ನ ಬಳಿ ಇರುವ ಭಾರೀ ಉಡವು ಗುಂಡುಕಲ್ಲು ಎಳೆದುಕೊಂಡು ಬಂಡೆ ಹತ್ತುವುದನ್ನು ತೋರಿಸುತ್ತೇನೆ,

ಎನ್ನುವ ಹಾವಾಡಿಗ, ಅಲ್ಲಿ ಸೇರಿದ ಎಲ್ಲರನ್ನೂ ಊರಾಚೆಗೆ, ಕಡಿದಾದ ನೂರು ಮೆಟ್ಟಿಲುಗಳಿರುವ ಶಿವನ ಬಂಡೆಯ ಬಳಿ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಉಡದ ಬಾಲಕ್ಕೆ ದೊಡ್ಡದಾದ ಕಲ್ಲೊಂದನ್ನು ಕಟ್ಟಿ 'ಬಾ ಮಗಾ ಬಾ" ಎಂದು ಹಾಡುತ್ತಾ, ಕರೆಯುತ್ತಾ ಮೆಟ್ಟಿಲುಗಳನ್ನೇರುತ್ತಾನೆ. ಸುಮಾರು ಒಂದು-ಒಂದೂವರೆ ಅಡಿ ಉದ್ದದ ಉಡ, ಚಿಕ್ಕ ಹಲ್ಲಿಯಂತೆ ಕಾಣುವಂತಾಗುವಷ್ಟು ಎತ್ತರದಲ್ಲಿರುವ ಶಿವನ ಗುಡಿಗೆ ಅಷ್ಟು ದೊಡ್ಡ ಕಲ್ಲನ್ನೂ ಎಳೆದುಕೊಂಡು ತಲುಪುವುದನ್ನು ಕೆಳಗಿರುವ ಜನ ನೋಡಿ ಬೆಕ್ಕಸ ಬೆರಗಾಗುತ್ತಾರೆ. ಕೆಳಗಿಳಿದು ಬಂದ ಹಾವಾಡಿಗನಿಗೆ ಪುಟ್ಟ ಹುಡುಗನ ಸೋದರಮಾವ ಒಂದು ಬೆಳ್ಳಿ ನಾಣ್ಯವನ್ನು ಇನಾಮಾಗಿ ಕೊಡುತ್ತಾನೆ.

ಇನ್ನೊಂದು ಸಂದರ್ಭದಲ್ಲಿ, ದಿನಪತ್ರಿಕೆಯಲ್ಲಿ ಬರುವ ಒಂದು ಸುದ್ದಿಯ ಪ್ರಕಾರ, ಹೆಬ್ಬಾವೊಂದು ಒಂದು ಹುಲಿಯನ್ನು ನುಂಗಿರುತ್ತದೆ. ಅದು ಘರ್ಜಿಸುತ್ತಿದ್ದರೂ ಬಿಡದೇ ಅದನ್ನು ಸುತ್ತಿ ಸುತ್ತಿ ಅದರ ಕೈ ಕಾಲುಗಳನ್ನು ಬಿಗಿದು ಉಂಡೆ ಮಾಡಿ ಒಂದು ತುತ್ತಾಗಿ ನುಂಗುತ್ತದೆ, ಎಂದು, ಈ ಸುದ್ದಿಯ ಸತ್ಯತೆಯನ್ನು ಮುಂದುವರೆಸಿ, ಜ್ಯೂಯಾಲಜಿಯಲ್ಲಿ ಪಿ.ಎಚ್‌ಡಿ ಪಡೆದ ಸಂಶೋಧಕಿ-ಪತ್ನಿ ಅಂಬಿಕಾ ವಿವರಿಸುತ್ತಾಳೆ. ಸರಿಸೃಪಗಳ ಮೇಲೆ ಸಂಶೋಧನೆ ಮಾಡುವ ತನ್ನ ಪತಿಗೆ ಹೀಗೆ ವಿವರಿಸುವಾಗ, ಆತ 'ತವ ದೇಹೇ ಉರಗಾಂಶ್ಚ ದಿವ್ಯಾನ್' ಎಂಬ ಭಗವದ್ಗೀತೆಯಲ್ಲಿ ಹೇಳಲಾದ ಶ್ಲೋಕದಲ್ಲಿನ ಸತ್ಯವನ್ನು ಮನಗಾಣುತ್ತಾನೆ, ಈ "ಉರಗಾಂಶ್ಚ ದಿವ್ಯಾನ್" ಕಥೆಯಲ್ಲಿ.

"ಆಸ್ಟೈಕ್ ಶಾರಿ ಮತ್ತು ಜೆರ್ರಿ' ಕಥೆಯಲ್ಲಿ, ಶಾರಿ ವಿಶೇಷ ಅಧ್ಯಯನ ಮುಗಿಸಿ ಅಮೇರಿಕಾದಿಂದ ಹಿಂತಿರುಗಿದವಳು. ಅಲ್ಲಿ ಅವಳ ಸಹಪಾಠಿಯಾದ ಜೆರ್ರಿ ಎಂಬ ವಿದ್ಯಾರ್ಥಿ ಅಕಸ್ಮಾತ್ತಾಗಿ ಶಾರಿಯ ತಂದೆ ಅವಧಾನಿಗಳ ಬಳಿ ವೈಶೇಷಿಕ'ವನ್ನು ಕಲಿಯಲು ಬರುತ್ತಾನೆ. ಶಾರಿ ಮತ್ತು ಜೆರ್ರಿ, ಕಣಾದರ ಸೂತ್ರಗಳಿಂದ, 'ಪಾರ್ಟಿಕಲ್ಸ್' ವ್ಯಾಸಂಗಕ್ಕೆ ಸ್ಫೂರ್ತಿ ಸಿಗಬಹುದಾದ ಅಂಶಗಳ ಬಗ್ಗೆ ಚರ್ಚಿಸುತ್ತಾರೆ. ಅಣುಗಳನ್ನು ಛಿದ್ರಿಸಿ ಕಣಗಳನ್ನು ಉತ್ಪಾದಿಸಿ ಅವುಗಳ ಚಲನವಲನ ಮತ್ತಿತರ ಗುಣಗಳನ್ನು ಸಂಶೋಧಿಸುವ ಆಸಕ್ತಿ ಇಬ್ಬರಿಗೂ ಇದೆ. ಇಲ್ಲಿ ಕಲಿತದ್ದರ ಬಗ್ಗೆ ತನ್ನ ಪ್ರೊಫೆಸರ್ ಜೊತೆ ಚರ್ಚಿಸಲೆಂದು ಅಮೇರಿಕಾಗೆ ಹೋಗುವ ಜೆರ್ರಿ, ಶಾರಿಯೊಂದಿಗೆ ಚರ್ಚಿಸಿದ ಅಂಶಗಳ ಮೇಲೆ ಲೇಖನವೊಂದನ್ನು ಬರೆದು ಶಾರಿಯ ಹೆಸರನ್ನೂ ಲೇಖಕರ ಹೆಸರಿನೊಂದಿಗೆ ಸೇರಿಸಿ, ಇವಳ ಮನದಲ್ಲಿ ಅವನ ಬಗ್ಗೆ ಗೌರವ ಹುಟ್ಟುವಂತೆ ಮಾಡುತ್ತಾನೆ.

ಅಲ್ಲಿಗೇ ನಿಲ್ಲದೆ 'ಕಣಾದರ ದರ್ಶನ'ದ ಪೂರ್ಣಪಾಠಕ್ಕಾಗಿ ಪುನಃ ಭಾರತಕ್ಕೆ ಬರುತ್ತಾನೆ. ಆ ಹೊತ್ತಿಗೆ ಪರಸ್ಪರರು ಪ್ರೀತಿಸತೊಡಗಿರುತ್ತಾರೆ. ವಿವಾಹವಾದ ಮೇಲೆ ಒಂದಾಗಿ ಸಂಶೋಧನೆ ಮುಂದುವರೆಸುವ ಆಲೋಚನೆಯಿಂದ ಗುರು ಮತ್ತು ಗುರುಪತ್ನಿಯರ ಒಪ್ಪಿಗೆ ಪಡೆಯುತ್ತಾರೆ. 'ವೈಜ್ಞಾನಿಕ (ಶಾರಿ) ಮತ್ತು ವೈಶೇಷಿಕ (ಜೆರ್ರಿ)ಗಳ ಮದುವೆ ಸಾಂಗವಾಗಿ ನೆರವೇರುತ್ತದೆ.

ಈ ಸಂಕಲನದ ಕಡೆಯ ಕಥೆ, 'ದಾರ್ಶನಿಕ ವಿಜ್ಞಾನಿಗಳು'. ಲಿಂಗದ ಹೊಸೂರಿನ ಭಾಗವತ ಕೃಷ್ಣರಾಯರ ಮಗ ಸೂರ್ಯನಾರಾಯಣ, ಎಂ.ಎಸ್‌ಸಿ.ಜ್ಯೂಯಾಲಜಿಯಲ್ಲಿ ಎರಡು ಚಿನ್ನದ ಪದಕಗಳನ್ನೂ; ದರ್ಜಿ ತುಕಾರಾಸಾನ ಮಗ ವಿಕ್ರಂಸಾ, ರಾಸಾಯನಿಕ ಶಾಸ್ತ್ರದಲ್ಲಿ ಎರಡು ಚಿನ್ನದ ಪದಕಗಳನ್ನೂ; ಮೋಚಿ ರಾಚಯ್ಯನ ಮಗಳು ಚಿನ್ನವ್ವ, ಗಣಿತದಲ್ಲಿ ಎರಡು ಚಿನ್ನದ ಪದಕಗಳನ್ನೂ; ಗಳಿಸುವುದಲ್ಲದೆ, ಮುಂದೆ ಅಮೇರಿಕಾದ ಟೆಕ್ಸಸ್ ವಿಶ್ವ ವಿದ್ಯಾಲದಲ್ಲಿ ಪಿ.ಎಚ್‌ಡಿ. ವಿದ್ಯಾರ್ಥಿಗಳಾಗಿ ಒಟ್ಟಾಗುತ್ತಾರೆ. ಅಲ್ಲಿಯ ಪ್ರೊಫೆಸರ್‌ಗಳು, ತಮ್ಮ ವಿಷಯದ ಬಗ್ಗೆ ಮಾಡುವ ಅಧ್ಯಯನ, ಆವಿಷ್ಕಾರಗಳು, ಭಾರತದ ಋಷಿಮುನಿಗಳ ತಪಸ್ಸಿಗೆ ಸಮನಾದುದು ಎಂಬ ಅಭಿಪ್ರಾಯ, ಈ ವಿದ್ಯಾರ್ಥಿಗಳು ತಮ್ಮ ತಮ್ಮಲ್ಲೇ ಮಾಡುವ ಚರ್ಚೆಯಲ್ಲಿ ಮೂಡಿ ಬರುತ್ತದೆ. ಅಲ್ಲಿಯ ವಿಜ್ಞಾನಿಗಳಲ್ಲಿ ಋಷಿಗಳನ್ನು ಕಾಣುವ ಮೂಲಕ, 'ಋಶೀಂಶ್ಚ ಸರ್ವಾನ್ ಪಶ್ಯಾಮಿ" ಎಂಬ ಗೀತೆಯ ವಾಕ್ಯವನ್ನು ವಿಷನ್ ಇರುವ ವಿಜ್ಞಾನಿಗಳಿಗೆ ಅನ್ವಯಿಸಿಕೊಂಡು, ಗೀತೆಯ 'ವಿಶ್ವ ದರ್ಶನ'ಕ್ಕೆ ಹೊಸ ಅರ್ಥ, ವಿಸ್ತಾರಗಳನ್ನು ಕೊಟ್ಟು ಕೊಳ್ಳುತ್ತಾರೆ.

ಸಂಶೋಧನೆ, ಪರಸ್ಥಳ ಅಥವಾ ಪರದೇಶ, ಬಹು ಮೇಧಾವಿಗಳ ಪರಿಚಯ, ಸಮಾನಾಭಿರುಚಿ, ಸಮಾನ ಜ್ಞಾನ ದಾಹವಿರುವ ವ್ಯಕ್ತಿಗಳ ಭೇಟಿ, ಪರಸ್ಪರರಲ್ಲಿ ಆಕರ್ಷಣೆ, ಅಂತ್ಯದಲ್ಲಿ ಪ್ರೇಮ, ವಿವಾಹ– ಈ ಅಂಶಗಳ ಸುತ್ತ ಇಲ್ಲಿನ ಈ ಸಂಗ್ರಹದಲ್ಲಿನ ಹೆಚ್ಚಿನ ಕಥೆಗಳನ್ನು ಹೆಣೆಯಲಾಗಿದೆ. ಇಲ್ಲಿ ಜಾತಿ, ಮತ, ಲಿಂಗ, ಕೆಳವರ್ಗ, ಮೇಲ್ವರ್ಗಗಳಿಗಾಗಲೀ; ದೇಶ, ಕಾಲ, ಸ್ಥಳಗಳಿಗಾಗಲೀ ಪ್ರಾಧಾನ್ಯತೆ ಕೊಡದೇ, ಕೇವಲ ಜ್ಞಾನ, ಸಂಶೋಧನೆ (ಕರ್ತವ್ಯ), ತಪಸ್ವೀ ಗುಣಗಳಿಗೆ ಮಾತ್ರವೇ ಪ್ರಾಮುಖ್ಯತೆ ಕೊಟ್ಟಿರುವುದು ಬಹು ಮಹತ್ವದ ಸಂಗತಿ. ಯಾವುದೋ ಕುಗ್ರಾಮದಿಂದ ಬಂದವರಿಗೆ, ಯಾವುದೋ ದಲಿತ ವರ್ಗದಲ್ಲಿ ಹುಟ್ಟಿದವರಿಗೆ; ಹೇಗೋ ಅವಕಾಶಗಳು ದೊರೆತು, ಇನ್ನಾವುದೋ ಉನ್ನತ ವರ್ಗದಲ್ಲಿ, ಉನ್ನತ ಸ್ಥಾನದಲ್ಲಿ, ಅಭಿವೃದ್ಧಿಪರ

ದೇಶಗಳಲ್ಲಿ, ಪರಸ್ಪರರು ಸಂಧಿಸುತ್ತಾರೆ. ಕಂಡ ವ್ಯಕ್ತಿಗಳಲ್ಲಿ, ನಡೆದ ಸಂಗತಿಗಳಲ್ಲಿ ಭಗವದ್ಗೀತೆಯ ಅರ್ಜುನನ ಉವಾಚದ ಅರ್ಥವನ್ನು ವಿಜ್ಞಾನದ ಅಂಶಗಳೊಂದಿಗೆ ಸಮೀಕರಿಸಿ ಕೊಳ್ಳುತ್ತಾರೆ. ಆ ಕಾಲದ ಹೆಣ್ಣಿನಲ್ಲಿ ವಿದ್ಯೆ ಅಥವಾ ಬುದ್ಧಿಮತ್ತೆಯನ್ನು ಗಮನಿಸಿದರೂ ಕಡೆಗಣಿಸುತ್ತಿದ್ದ ಸಮಾಜದಲ್ಲಿ ಹೆಣ್ಣಿನ ಓದಿಗೆ, ವಿದ್ಯೆಗೆ, ಮೇಧಾವಿತನಕ್ಕೆ ಬೆಲೆ ಕೊಟ್ಟಿರುವುದು ಎಲ್ಲಕ್ಕಿಂತ ಗಮನಾರ್ಹವಾದ ಅಂಶ. ಆಕಾಶದಲ್ಲಿನ ಒಂದೊಂದು ನಕ್ಷತ್ರಗಳ ಬಗ್ಗೆಯೂ ಭರಣಯ್ಯನಿಗೆ ತಿಳಿಸಿಕೊಡುವ 'ನಿಶಿರಾತ್ರಿಯ ಮಧುಚಂದ್ರ'ದ ವೆಂಕಟಲಕ್ಷ್ಮಿ; ಅರವಿಂದನ ಪ್ರಾಣ ಉಳಿಸುವ 'ಸಾಲಿಗ್ರಾಮ'ದ ಮಂದಾಕಿನಿ; ವಿಷ್ಣುವಿನ ವಿಶ್ವವ್ಯಾಪ್ತಿಯ ಅರ್ಥವನ್ನು ಮನದಟ್ಟಾಗುವಂತೆ ಶ್ಯಾಮುಗೆ ವಿವರಿಸುವ 'ಕರುಳಿನ ಬಳ್ಳಿ'ಯ ಸ್ಮಿತಾ; ಸರಿಸೃಪಗಳ ಗುಣಗಳನ್ನು ಪಾಂಡಿತ್ಯಪೂರ್ಣವಾಗಿ ಪತಿಗೆ ವಿವರಿಸುವ "ಉರಗಾಂಶ್ಚ ದಿವ್ಯಾನ್" ಕಥೆಯ ಅಂಬಿಕಾ; ತಮ್ಮ ಸಂಗಾತಿಗಳಿಗಿಂತ ಒಂದು ತೂಕ ಹೆಚ್ಚು ಆಲೋಚನಾಪರ ಪಂಡಿತೆಯರು ಎಂಬಂತೆ ನಿರೂಪಿಸಿರುವುದನ್ನು, ಈ ಮಾತಿಗೆ ಉದಾಹರಣೆಗಳಾಗಿ ನೋಡಬಹುದು. ನಿಜಕ್ಕೂ ಜಾತಿ, ಮತ, ವರ್ಗ, ದೇಶಗಳ, ಲಿಂಗ ಭೇದಗಳಿಲ್ಲದೆ, ಎಲ್ಲರಲ್ಲೂ ಒಂದೇ ಬುದ್ಧಿ ಸಾಮರ್ಥ್ಯವನ್ನೂ. ಎಲ್ಲಿದ್ದರೂ ಒಬ್ಬನೇ ದೇವರೆಂಬುದನ್ನೂ, ಎಲ್ಲ ಕಡೆ ಒಂದೇ ದೈವೀಕ ಶಕ್ತಿಯನ್ನೂ ಕಾಣಿಸುವ, ಕುತೂಹಲಕರ ಮತ್ತು ಸಮದರ್ಶಿತ್ವವಿರುವ, ಉತ್ತಮ ಕಿರು ಕಥೆಗಳ ಸಂಗ್ರಹವಿದು.

**ಯೋಚಿಸಿದರೆ (1981)**

ಇದು ಕನ್ನಡ ವಿಜ್ಞಾನ ಪರಿಷತ್ತಿನ ಪ್ರಕಟಣೆ. ನಮ್ಮ ದೈನಂದಿನ ಅನುಭವಗಳನ್ನು ವೈಜ್ಞಾನಿಕ ಪ್ರಗತಿ ಪಥಗಳೊಂದಿಗೆ ಜತೆ ಜತೆ ಕೂಡಿಸಿ ಯೋಚಿಸಿದರೆ..? ಎಂದು ಯೋಚಿಸಿ, ಮಂಥಿಸಿ ರಾ.ಶಿ.ಯವರು ಬರೆದಿರುವ ಪುಟಾಣಿ ಹೊತ್ತಗೆಯೇ ಈ 'ಯೋಚಿಸಿದರೆ'. ಹೊತ್ತಿಗೆ ಕಿರಿದಾದರೂ, ಶೀರ್ಷಿಕೆಯಲ್ಲಿ ಅಂತಹ ಆಕರ್ಷಣೆಯಾಗಲೀ, ಅಸಾಮಾನ್ಯತೆಯಗಲೀ ಕಾಣದಿದ್ದರೂ ಇದರೊಳಗೆ ತುಂಬಿರುವುದು ಮಾತ್ರ ತುಂಬ ಕುತೂಹಲಕರವಾದ, ಆಸಕ್ತಿಯುತ ವಿಷಯಗಳಸಿರಿ ಹೊರಣ. ಒಟ್ಟು ಹನ್ನೊಂದು ಚಿಕ್ಕ ಚಿಕ್ಕ ಕಥೆಗಳ ಗೊಂಚಲು ಇದು.

ಯೋಚನೆಗಳು– ಅದೆಂತಹ ಅದ್ಭುತ ಶಕ್ತಿಯನ್ನು ಹೊಂದಿವೆ? ಯೋಚನೆಗಳಿಂದ ಇಡೀ ಪ್ರಪಂಚವನ್ನೇ ಹಿಮಾಲಯಕ್ಕೇರಿಸಬಹುದು. ಪಾತಾಳಕ್ಕಿಸಬಹುದು. ಆಕಾಶದ ಅಂತರಿಕ್ಷದಲ್ಲಿ ಓಡಾಡಿಸಬಹುದು. ಮನಷ್ಯನ ಯೋಚನೆಗಳಿಗೆ ಇರುವ ಶಕ್ತಿಯ ಬಗ್ಗೆ ವರ್ಣಿಸಲು ಮನುಷ್ಯ ನಿರ್ಮಿತ ದೇವರಿಗೂ ಸಾಧ್ಯವಿಲ್ಲ. ಈ ಯೋಚನೆ ಮಾಡುವುದರಿಂದ, ಮಾಡಿದ ಯೋಚನೆಗಳನ್ನು ಮುಂದುವರೆಸುವುದರಿಂದ ಏನೇನೆಲ್ಲ ಸಾಧಿಸಬಹುದೆಂಬುದನ್ನು ಸಣ್ಣ ಸಣ್ಣ ಕಥೆಗಳ ಮೂಲಕ ನಡೆದ ಸಂಗತಿಗಳ ಆಧಾರದ ಮೇಲೆ ಸೃಷ್ಟಿಸಿರುವ ಕೃತಿಯೇ 'ಯೋಚಿಸಿದರೆ..'

ಒಂದು ಮರದ ತುಂಬ ಬಿಟ್ಟ ಪೇರಲೆ ಹಣ್ಣುಗಳನ್ನು ಮರ ಹತ್ತಿ ಕೀಳುವ ಯೋಚನೆ ಮಾಡ ಹೋಗಿ ಇರುವೆಗಳಿಂದ ಕಚ್ಚಿಸಿಕೊಳ್ಳುವ ಬಾಲಕ 'ಸಿದ್ದ' ನನ್ನು ನೋಡಿ, ಅಲ್ಲೆಲ್ಲೋ ಇದ್ದ ಏಣಿಯನ್ನು ಮರಕ್ಕೆ ಆನಿಸಿಟ್ಟರೆ ಎಂದು ಆಲೋಚಿಸಿ, ಏಣಿ ಇಟ್ಟು ಕೋಲಿನಿಂದ ಹೊಡೆದು ಬೀಳಿಸಿ, ಇಬ್ಬರಿಗೂ ಪೇರಲ ಹಣ್ಣುಗಳು ಸಿಗುವಂತೆ ಮಾಡುವ 'ಲಕ್ಕ'ನ ಸಾಮಾನ್ಯವಾದೊಂದು ಯೋಚನೆಯಿಂದ ಹಿಡಿದು; ವಿಜ್ಞಾನಿಗಳು ಮಾಡುವ ಅದ್ಭುತ ಯೋಚನೆಗಳವರೆಗೆ ಇದರಲ್ಲಿಯ ಕತೆಗಳು ಓಡುತ್ತವೆ. ಯಾರ ಯಾರ, ಯಾವ ಯಾವ ಯೋಚನೆಗಳು ಏನೇನು ಕಂಡು ಹಿಡಿದವು. ಅವುಗಳಿಂದ ಪ್ರಪಂಚಕ್ಕೆ ಯಾವ ಯಾವ ರೀತಿಯ ಪ್ರಯೋಜನಗಳಾದವು ಎಂಬುದು ಇಲ್ಲಿಯ ಕತೆಗಳ ವಸ್ತುಗಳು. ರೂಢಿಗತ ಅಭ್ಯಾಸಗಳನ್ನು ತಾತ್ಕಾಲಿಕವಾಗಿಯಾದರೂ ಮರೆತು, ನವ್ಯ ರೀತಿಯಲ್ಲಿ ಪ್ರಶ್ನಿಸಿಕೊಂಡು, ಯೋಚಿಸಿದ್ದೇ ಆದರೆ ಪ್ರತಿಭೆ, ಸ್ಫೂರ್ತಿ ಸೃಜನಶೀಲತೆ–ಎಲ್ಲ ಹೊರ ಬರಲು ಸಾಧ್ಯ. ಸಂದರ್ಭಕ್ಕೆ ತಕ್ಕ ಉಪಾಯಗಳು, ಹೊಸ ದಾರಿಗಳು ಕಾಣಲು ಸಾಧ್ಯ ಎಂಬುದು ಇಲ್ಲಿಯ ಎಲ್ಲ ಕತೆಗಳ ಮೂಲಕ ತಿಳಿಸ ಬಯಸಿರುವ ವಿಷಯ. ಒಪ್ಪಿತ ಸತ್ಯ.

ಚೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ, ಬ್ರಿಟಿಷ್ ರಾಯಭಾರಿಯ ಪತ್ನಿಗೆ ಉಗ್ರವಾದ ರಕ್ತಹೀನತೆ ಸುಸ್ತು, ಆವರಿಸಿದಾಗ ದೇಶೀ ವೈದ್ಯನೊಬ್ಬ ಆಯಾ ಒಬ್ಬಳ ಮೂಲಕ ಕಳಿಸಿ ಕೊಟ್ಟ ಗುಳಿಗೆಯಿಂದ ಆಶ್ಚರ್ಯಗೊಳ್ಳುವ ಪರಿಯಲ್ಲಿ ವಾಸಿಯಾಗುತ್ತದೆ. ರಾಯಭಾರಿ ಕಛೇರಿಯ ಇಂಗ್ಲಿಷ್ ವೈದ್ಯನಿಗೆ ಆ ಗುಳಿಗೆಯಲ್ಲಿ ಅಂತಹ ಮಹತ್ವವೇನಿತ್ತು ಎಂಬುದರ ಬಗ್ಗೆ ತಿಳಿಯುವ ಆಸಕ್ತಿ. ಆ ಚೀನೀ ವೈದ್ಯನ ಮನೆಗೆ ಕೂಲಿ ಕೆಲಸಕ್ಕೆ ಹೋಗುವವನ ಮೂಲಕ ರಹಸ್ಯವಾಗಿ

ಪರೀಕ್ಷಿಸಿದಾಗ, ಗುಬ್ಬಚ್ಚಿಯ (ಲಿವರ್)ಯಕೃತ್ ಗ್ರಂಥಿಯ ಸಾರವನ್ನು ಬಳಸಿ ಗುಳಿಗೆ ತಯಾರಿಸುತ್ತಾನೆ ಆ ವೈದ್ಯ ಎಂಬುದನ್ನು ಕಂಡುಕೊಳ್ಳುತ್ತಾನೆ. ನಂತರ ಜರ್ಮನಿಯ ಔಷಧ ಸಂಸ್ಥೆಗಳು, ಪರಿಶುದ್ಧಗೊಳಿಸಿದ ಯಕೃತ್ತಿನ ಸಾರವನ್ನು ಬಳಸಿ, 'ಕ್ಯಾಂಪೊಲಾನ್' ಎಂಬ ಹೆಸರಿನ ಚುಚ್ಚು ಮದ್ದನ್ನು ಮಾರಾಟಕ್ಕೆ ತಂದುದು; ಕೊಬಾಲ್ಟ್ ಅಣುವಿನ ಸುತ್ತ ಕೃತಕ ರಾಸಾಯನಿಕ ವಸ್ತುಗಳನ್ನು ಹೆಣೆದು 'ಕೊಬಾಲಮೀನ್' ಎಂಬ ಔಷಧಿ ತಯಾರಿಸಿದ್ದು; ಉಗ್ರವಾದ ರಕ್ತಹೀನತೆಗೆ, ಕೆಲವು ರೀತಿಯ ನರದೌರ್ಬಲ್ಯಕ್ಕೆ ಅದು ಪ್ರಯೋಜನಕಾರಿ ಎನಿಸಿದ್ದು; ಅದಕ್ಕೆ 'ಬಿ12 ವಿಟಮಿನ್' ಎಂಬ ಹೆಸರಿಟ್ಟುದು– ಇವೆಲ್ಲ ವಿಜ್ಞಾನಿಗಳು ಮುಂದೆ ಮುಂದೆ ಯೋಚಿಸಿದ್ದರಿಂದ ಹೊರ ಬಂದ ಜನೋಪಕಾರಿ ಔಷಧಗಳು. ಒಂದೊಂದು ಹಂತದಲ್ಲೂ ಯೋಚನೆಯನ್ನು ಹರಿಸಿ ಒಂದುಗೂಡಿಸಿ ಹೆಣೆದಿರುವುದೇ 'ಬಿ 12ನ ಕತೆ'.

'ಎಳ್ಳಂಬಳಸೆ ಸಲ್ಫ' ಎಂಬುದು ಸಲ್ಫ್ ಔಷಧಿಗಳು ಹುಟ್ಟಿ ಬಂದ ಮೂಲ ಮಾರ್ಗವನ್ನು ತಿಳಿಸುವ ಕಥೆ. ಡಾ. ಡೊಮಾಕ್ ಎಂಬುವವ, ಬಟ್ಟೆಗೆ ಹಾಕುವ ಬಣ್ಣಗಳ ಸಂಶೋಧನೆ ನಡೆಸಿ ಪ್ರಾಂಟೋಸಿಲ್ ಎಂಬ ಪುಡಿಯಲ್ಲಿ ರೋಗಕಾರಕ ಕ್ರಿಮಿಯನ್ನು ನಾಶಮಾಡುವ ಗುಣವಿದೆ ಎಂಬುದನ್ನು ಕಂಡುಕೊಂಡಿದ್ದು ಪ್ರಯೋಗಕ್ಕೆ ಕಾಯುತ್ತಿದ್ದ. ಆ ಸಮಯದಲ್ಲೇ ಅವನ ಮಗಳಿಗೆ ಸಖತ್ ಖಾಯಿಲೆ. ಚಿಕಿತ್ಸಾ ವಿಧಾನಗಳೆಲ್ಲ ವಿಫಲವಾದಾಗ, ಅತೀವ ದುಃಖದಿಂದ ಯೋಚಿಸಿ, "ಹೇಗೂ ಮಗಳು ಸಾಯುವುದು ಖಂಡಿತ. ಲ್ಯಾಬೋರೇಟರಿಯಲ್ಲಿ ನಾನು ತಯಾರಿಸಿದ ಪ್ರಾಂಟೋಸಿಲ್ ಪುಡಿ ಇದೆ. ಅದನ್ನು ಪ್ರಯೋಗಿಸೋಣ" ಎಂದು ಸಹೋದ್ಯೋಗಿ ವೈದ್ಯರುಗಳಿಗೆ ತಿಳಿಸಿ ಮಗಳಿಗೆ ಆ ಪುಡಿಯನ್ನು ಕೊಡಿಸುತ್ತಾನೆ. ಬೆಳಗ್ಗೆ ಮಗಳು ಸತ್ತಿರುತ್ತಾಳೆ ಎಂಬ ಭಾವನೆಯಿಂದ ಆಸ್ಪತ್ರೆಗೆ ಹೋದರೆ, ಇಂದ್ರಜಾಲ ಮಾಡಿ ಬಿಟ್ಟಿರುತ್ತದೆ ಆ ಪುಡಿ. ರಾತ್ರಿ, ಸಾಯುವ ಸ್ಥಿತಿಯಲ್ಲಿದ್ದ ಮಗಳು, "ಬೆಳಗ್ಗೆ ಉಪಹಾರಕ್ಕೆ ಏನು ತಿನ್ನಬಹುದು ಡಾಕ್ಟರೇ?" ಎಂದು ಕೇಳುವಷ್ಟು ಚೈತನ್ಯ ಪಡೆದು ಬಿಟ್ಟಿರುತ್ತಾಳೆ. ನಂತರದಲ್ಲಿ, ಆ ಪುಡಿಯ ಪರಿಣಾಮದ ಬಗ್ಗೆ ಯೋಚನೆ ಮುಂದುವರೆಸಿ ನಡೆಸಿದ ಪರಿಶೀಲನೆಗಳ ಫಲವೇ ಸಲ್ಫ್ ಡಯಾಸಿನ್, ಸಲ್ಫ್ ಗ್ಯಾನಿಡೀನ್‌ಗಳ ಹುಟ್ಟಿಗೆ ಕಾರಣ. ಕರುಳಿನ ಸೋಂಕು ಜಾಡ್ಯಕ್ಕೆ ಪರಿಣಾಮಕಾರಿ ಎನಿಸಿದ ಸಲ್ಫ್ ಡಯಾಸಿನ್, ಸಲ್ಫ್ ಗ್ಯಾನಿಡೀನ್, ಇತ್ಯಾದಿ ಸಲ್ಫ್ ಔಷಧಿಗಳು ಮಾರುಕಟ್ಟೆಗೆ ಬಂದವು. ಇದು ಈ ಸಂಶೋಧಕರು ತಮ್ಮ ಯೋಚನೆಯನ್ನು ಎಲ್ಲೋ

ಒಂದೆಡೆ ನಿಲ್ಲಿಸಿ ಬಿಡದೆ, ಮುಂದುವರೆಸಿ ಎಳ್ಳಂಬಳಸಾಗಿ ನಡೆಸಿದ ಸಂಶೋಧನೆಯ ಫಲಗಳೇ ಈ ದಿವ್ಯ ಔಷಧಿಗಳು.

ನೆಗಡಿಯಾದ ಮೂಗಿನಿಂದ ಹೊರ ಬಿದ್ದ ಹನಿಯೆಂದರೆ ಯಾರಿಗಾದರೂ ಅಸಹ್ಯ. ಆದರೆ ಹಾಗೆ ಅಸಹ್ಯ ಪಡದೇ ಪರಿಶೀಲಿಸಿ ಅದರಲ್ಲಿ ರೋಗಾಣುವನ್ನು ಕುಗ್ಗಿಸುವ ಶಕ್ತಿ ಇದೆ ಎಂಬುದನ್ನೂ; ಕಣ್ಣೀರಿನಲ್ಲಿಯೂ ಮತ್ತು ಹಸಿರು ಬೂಸ್ಟ್‌ನಲ್ಲಿಯೂ, ಇಂಥ ರೋಗ ನಿರೋಧಕ ಅಂಶವಿದೆ ಎಂಬುದನ್ನೂ ಮನಗಂಡವನು ಸರ್. ಅಲೆಕ್ಸಾಂಡರ್ ಫ್ಲೆಮಿಂಗ್. ಅವನ ಸಂಶೋಧನೆ, ಯೋಚನೆ, ಸತತ ಆಲೋಚನೆಗಳ ಫಲಿತಾಂಶವೇ ಈಗ ಎಲ್ಲ ಕಡೆಯೂ ಎಲ್ಲ ರೋಗಿಗಳಿಗೂ ಬಳಸುವ ಪವಾಡಸಮ 'ಪೆನ್ಸಿಲಿನ್'.

ಶುದ್ಧ ಅಶುದ್ಧಗಳ ಮಿತಿ ಹಾಕಿಕೊಳ್ಳದೇ ಪೂರ್ವಾಗ್ರಹ ಪೀಡಿತರಾಗದೇ, ತುಂಬ ಸಹನೆಯಿಂದ ತೆರೆದ ಮನಸ್ಸಿನಿಂದ ಯೋಚಿಸಿದರೆ, ಯೋಚಿಸುತ್ತಾ ಹೋದರೆ, ಏನೆಲ್ಲ ಅದ್ಭುತ ಅಂಶಗಳು ಗೋಚರವಾಗುತ್ತವೆ ಎಂಬದನ್ನು, 'ಸರ್. ಅಲೆಕ್ಸಾಂಡರ್ ಫ್ಲೆಮಿಂಗ್', 'ಪಾಸ್ತೂರ-ಕ್ಷೇತ್ರ-ಕ್ಷೇತ್ರಜ್ಞ', 'ಕೀಟಗಳಲ್ಲೂ ದ್ವಿಜರು', ಕಿವಿಗಳಿಂದ ನೋಡಬಹುದೇ, ಎಲ್ಲಿಂದೆಲ್ಲಿಗೆ ಸಂಬಂಧ, ಟಾಚಿಯಾನ್ಸ್, ಮೆದುಳು-ಎಡ-ಬಲ, 'ಸದ್ಯಕ್ಕೆ-ಅವ್ಯಕ್ತ', ಎಂಬ ಕತೆಗಳು ವಿವರಿಸುತ್ತವೆ. ಮಲೇರಿಯಾದಿಂದ ರಕ್ಷಣೆ; ಹಸುಗಳ ಸಿಡುಬಿನ ಲಸಿಕೆಯಿಂದ ದೊಡ್ಡ ಸಿಡುಬು ಏಳದಂತಹ ರಕ್ಷಣೆ; ಕೋಳಿ ಕಾಲರಾದ ತಂಗಳು ಕಲ್ಚರ್ ಇಂಜೆಕ್ಷನ್ ಮೂಲಕ ಕಾಲರಾದಿಂದ ರಕ್ಷಣೆ; ಬಾಯಿ ಅಥವಾ ಮೂಗಿನ ಮೂಲಕ ಕತ್ತಲಲ್ಲಿ ಗುರುತಿಸುವ ಬಾವಲಿಗಳ ವಿಶೇಷ ಗುಣ(ಎಕೋ ಲೊಕೇಷನ್); ಖಗೋಳ ಶಾಸ್ತ್ರ ಮತ್ತು ನರವಿಜ್ಞಾನಕ್ಕಿರುವ ಸಂಬಂಧ_ಇವೆಲ್ಲವುಗಳ ಕುರಿತು ತುಂಬ ಆಸಕ್ತಿದಾಯಕ ಅಂಶಗಳು-ಉತ್ತಮ ಮಾಹಿತಿಯಾಗಿ ಓದಿಗೆ ದೊರಕುತ್ತವೆ 'ಯೋಚಿಸಿದರೆ' ಎಂಬ ಈ ಕಿರುಕಥಾಗೊಂಚಲಿನಲ್ಲಿ.

### 'ಮನೋನಂದನ' (1965) ಮತ್ತು 'ಮನಮಂಥನ' (1974):

ಡಾ. ಶಿವರಾಂ ಅವರ ರಚನೆಗಳಲ್ಲಿ 'ಮನೋನಂದನ' ಮತ್ತು 'ಮನಮಂಥನ', ಇವು 'ಕಾಲ'ದಂತೆಯೇ ಉತ್ತಮವಾದ ಇನ್ನೆರಡು ಮನೋವೈಜ್ಞಾನಿಕ ಕೃತಿಗಳು. ಮನೋದೈಹಿಕ ಬೇನೆಗಳ ವಿಸ್ತೃತ ಅಧ್ಯಯನವಿರುವ ಹೊತ್ತಗೆಗಳು. ಮನೋವಿಜ್ಞಾನದ ಪ್ರಾಮುಖ್ಯತೆಯನ್ನು

ಜನಸಾಮಾನ್ಯರಿಗೆ ತಿಳಿಸುವ ಪ್ರಯತ್ನದ ಪುಸ್ತಕಗಳು ಇವು. ಅನುಭವ, ವಿಜ್ಞಾನ, ಅಧ್ಯಾತ್ಮ ಮತ್ತು ತತ್ವ ಶಾಸ್ತ್ರಗಳ ಸಮ್ಮಿಳಿತ ಆಲೋಚನೆಗಳ ಫಲಶೃತಿ ಈ ಕೃತಿಗಳು.

"ರಾಜನ ಕತೆಯೂ ಬೇಡ, ಕಳ್ಳನ ಕತೆಯೂ ಬೇಡಪ್ಪ! ನಿಮ್ಮ ಹತ್ತಿರ ಬಂದ ರೋಗಿಗಳ ಕತೆ ಹೇಳಿ" ಎಂದು ಪೀಡಿಸಿ ಬಾಲ್ಯದ ಉತ್ಸಾಹದಿಂದ ಕೇಳಿದ" ತಮ್ಮ ಎರಡನೆ ಮಗಳು ಕಮಲಾಗೆ ಹರಕೆಯ ಬಳುವಳಿಯಾಗಿ ಕೊಟ್ಟ ಕೃತಿ, 'ಮನೋನಂದನ'.

ಮನೋದೈಹಿಕ ಬೇನೆಗಳಿಗೆ ಕಾರಣವಾಗುವುದು, ರೋಗಿಯ ಆಳ ಮನಸ್ಸಿನ ಭಯ ಅಥವಾ ಆತಂಕ. ಇಂಥ ಕಾಯಿಲೆಗಳಿಗೆ ಚಿಕಿತ್ಸೆ ನೀಡಬೇಕಾದರೆ ವೈದ್ಯನಿಗೆ ರೋಗಿಯ ಮನಸ್ಸು, ದೇಹ ಮತ್ತು ಜೀವನಗಳ ಪರಿಚಯ ಸ್ಪಷ್ಟವಾಗಿರಬೇಕು. ಚಿಕಿತ್ಸೆ ಯಶಸ್ವಿಯಾಗಬೇಕಾದರೆ ರೋಗಿಯ ಸಹಕಾರವೂ ಅತ್ಯಗತ್ಯ. ಆದ್ದರಿಂದ ಇಂಥ ಬೇನೆಗಳ ಮೂಲ ಸ್ವರೂಪ ಏನು ಎಂಬುದನ್ನು ವೈದ್ಯ ಪರಿಶೀಲಿಸುವುದು ಮಾತ್ರವಲ್ಲ ರೋಗಿಯೂ ಅರಿತರೆ ಒಳ್ಳೆಯದು. ಆ ದಿಸೆಯಲ್ಲಿ 'ಮನೋನಂದನ', ಇಬ್ಬರಿಗೂ ಕೈಪಿಡಿಯಾಗುವಂತಹ ಪುಸ್ತಕ.

'ಮೊಣಕಾಲು ಹಿಡಿದುಕೊಂಡಿತು' ಎಂಬ ಲೇಖನದಲ್ಲಿ, ಹೆಜ್ಜೆ ಎತ್ತಿಡಲಾಗದಷ್ಟು ಮಂಡಿ ನೋವು ಎಂದು ವೈದ್ಯರ ಬಳಿ ಬರುವ ಗೌರಮ್ಮ ಎಂಬಾಕೆಗೆ ದೈಹಿಕವಾದ ಯಾವ ಸಮಸ್ಯೆಯೂ ಇರದೇ, ಗಂಡನ ಕದಿಯುವ ಗುಣ (ಕ್ಲೆಪ್ಟೋಮೇನಿಯಾ), ಅದರಿಂದಾಗಿ ಆಗುವ ಅವಮಾನ, ಅತಿ ಆಸೆ ಇದ್ದರೂ ಹೊರಗೆ ಹೋಗಲಾಗದ ಸಂಕಷ್ಟ, ಗಂಡನನ್ನು ಕಾಯುವ ಕೆಲಸ,_ ಇವೇ ಅವಳ ಮಂಡಿ ನೋವಿಗೆ ಕಾರಣವಾಗಿರುತ್ತದೆ. ಈ ಬಗ್ಗೆ ತಿಳಿ ಹೇಳಿ, ಮಕ್ಕಳನ್ನು ಬೆಳೆಸುವ ಹೊಣೆ ಅವಳದೇ ಎಂಬ ಎಚ್ಚರಿಕೆ ನೀಡಿ ಔಷಧಿ ಮುಂದುವರೆಸಿದ ಮೇಲೆ, ಜಿಂಕೆಯಂತೆ ಚಿಮ್ಮುವಷ್ಟು ಆರೋಗ್ಯವನ್ನು ಪಡೆಯುತ್ತಾಳೆ.

ಮಲತಾಯಿ ಮತ್ತು ಅವಳ ತಮ್ಮ ಗೋಪಾಲ, ಫುಟ್‌ಬಾಲ್ ಪ್ರೇಮಿಗಳು. ಇವರಿಬ್ಬರೂ, ಪಿಲ್ಲನ್ನನ ಓದಿನ ಆಸಕ್ತಿಗಿಂತ ಆಟದ ಹವ್ಯಾಸವೇ ಮೇಲು ಎಂಬಂತೆ ತಮ್ಮ ನಡವಳಿಕೆಯಲ್ಲಿ ತೋರಿಸುವುದನ್ನು ಸಹಿಸಲಾಗದೇ ಯುವಕನಾದ ಮೇಲೆ ಅಪಸ್ಮಾರಕ್ಕೆ ಬಲಿಯಾಗುತ್ತಾನೆ ಪಿಲ್ಲ. ಆದರೆ ಅವರಿಂದ

ಬಹು ದೂರದ ಊರಿಗೆ ಹೋದ ಮೇಲೆ ಉನ್ನತ ವಿದ್ಯೆಯೂ ಗಳಿಸಿ ಆರೋಗ್ಯವಂತನಾಗಿ ಬಿಡುತ್ತಾನೆ. 'ಅಪಸ್ಮಾರ ಬಡಿಯಿತು' ಎನ್ನುವ ರೋಗಿಯೊಬ್ಬನ ಕಥೆಯಿದು.

"ತಲೆ ತಿರುಗಿದ ಹಾಗಾಗುತ್ತೆ' ಎಂದು ವೈದ್ಯರ ಹತ್ತಿರ ಪರೀಕ್ಷೆಗೆ ಬರುವ ತಿಪ್ಪಾಜಿಗೆ ದೈಹಿಕ ಬೇನೆ ಇಲ್ಲ. ತಮ್ಮ ತಂದೆಯ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿಕೊಂಡರೆ ಸಂಬಳ, ಸೌಕರ್ಯಗಳು ಹೆಚ್ಚು ಎಂದು ಹೆಂಡತಿ ನೀಡುವ ಸಲಹೆ ಹೆಚ್ಚು ನ್ಯಾಯವೆನಿಸಿದರೂ; ತನ್ನ ಇಲಾಖೆಯಲ್ಲೇ ಕೆಲಸಕ್ಕಿದ್ದು ಪ್ರವರ್ಧಮಾನಕ್ಕೆ ಬರಬೇಕೆಂದು ಬಯಸುವ ಅಪ್ಪನ ಆಸೆಯನ್ನು ತಳ್ಳಲಾಗದೇ ತಲೆ ಕೆಡಿಸಿಕೊಳ್ಳುವುದರಿಂದ ಆಗಾಗ ತಲೆ ತಿರುಗುವ ಕಾಯಿಲೆಗೆ ಈಡಾಗಿರುತ್ತಾನೆ. ತಂದೆ ತೀರಿಕೊಂಡ ಮೇಲೆ ಎಲ್ಲವೂ ಸರಿ ಹೋಗಿ, ಮಾವನ ಕಂಪೆನಿಗೂ ಸೇರಿ ಉತ್ತಮ ಸಂಬಳವನ್ನೂ ಪಡೆಯುತ್ತಾನೆ

–ಹೀಗೆ ಇದರ ಮೊದಲ ಭಾಗದಲ್ಲಿ, ಇವರ ಬಳಿ ಚಿಕಿತ್ಸೆಗೆ ಬಂದ ಎಂಟು ಜನ ರೋಗಿಗಳ ಮಾನಸಿಕ ತೊಳಲಾಟದ ಕತೆಗಳಿವೆ. ಆ ರೋಗಿಗಳಿಂದ ಕಲಿತ ಪಾಠಗಳ ಕುರಿತು ಒಳ್ಳೆಯ ನಿರೂಪಣೆ ಇದೆ. ಬೇರೆಯವರ ಅಭಿಪ್ರಾಯಗಳಿರಲಿ, ಇದರಲ್ಲಿ ತಮ್ಮ ಅಭಿಪ್ರಾಯವನ್ನೇ ಪುನರ್ ವಿಮರ್ಶಿಸಿ, ತಮ್ಮ ತಪ್ಪನ್ನು ತಿದ್ದಿಕೊಳ್ಳುವ ಪ್ರಾಮಾಣಿಕತೆ ತೋರಿರುವುದು ಪ್ರಶಂಸನೀಯ. "ಮನೋ ದೈಹಿಕ ಬೇನೆಗಳು ವಿಚಿತ್ರ ರೂಪಗಳನ್ನು ಪ್ರದರ್ಶಿಸುತ್ತವೆ. ಸರಿಯಾಗಿ ಅರ್ಥ ಮಾಡಿಕೊಳ್ಳಲು ಸುಮಾರು ತ್ರಾಸು ಆಗುತ್ತದೆ". .. .. "ಹೀಗಿರಬಹುದು ಎಂದು ತರ್ಕ ಮಾಡಿ ನಿರ್ಣಯಿಸಿ ಚಿಕಿತ್ಸೆ ನೀಡಿದೆ. ಆದರೆ ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ಅನಿರೀಕ್ಷಿತವಾಗಿ ತಿಳಿದು ಬಂದ ಸಂಗತಿಯಿಂದ ರೋಗ ಗುಣವಾಯಿತು. ಮದ್ದು ಕೊಡುವವನು ವೈದ್ಯ, ಚಿಕಿತ್ಸೆ ಮಾಡುವವನು ಭಗವಂತ" ಎಂದು ತಾವು ಎಷ್ಟು ಶ್ರದ್ಧೆಯಿಂದ ಕೆಲಸ ಮಾಡಿ ಮದ್ದು ಕೊಟ್ಟರೂ ಅದರ ಫಲ ಸಿಗುವುದು, ಭಗವಂತ ಒಲಿದರೆ ಮಾತ್ರ, ಎಂಬ ಸತ್ಯವನ್ನು ಡಾ. ಶಿವರಾಂ ಅವರು, ಈ ಪುಸ್ತಕದ ಮುನ್ನುಡಿಯಲ್ಲಿ ಹೇಳಿರುವುದು, ಕಾಣದ ಶಕ್ತಿಯ ಕೈವಾಡದ ಬಗ್ಗೆ ಅವರಿಗಿರುವ ನಂಬಿಕೆಯ ಸಂಕೇತ.

ಆ ಕಾಲದಲ್ಲಿ, ರೋಗಿ ಮತ್ತು ವೈದ್ಯರ ನಡುವೆ ಒಂದು ಗಾಢ ಸಂಬಂಧವಿರುತ್ತಿತ್ತು. ಹಣಕ್ಕಾಗಿ ರೋಗಿಗೆ ಅನಗತ್ಯ ಪರೀಕ್ಷೆಗಳನ್ನು ಮಾಡದೇ,

ಬೇಡದ ಚಿಕಿತ್ಸೆಗಳನ್ನು ಕೊಡದೇ ಮಾನವೀಯ ದೃಷ್ಟಿಯಿಂದ, ಕುಟುಂಬದ ಒಬ್ಬ ಸದಸ್ಯರೆಂಬಂತಹ ಭಾವನೆಯಿಂದ ಆಗಿನ ವೈದ್ಯರು ರೋಗಿಗಳೊಂದಿಗೆ ವೈದ್ಯಕೀಯ ಮಾಡುತ್ತಿದ್ದರೆ, ರೋಗಿಗಳಿಗೂ ತಮ್ಮ ವೈದ್ಯರ ಬಗ್ಗೆ ಅಂಥದೇ ಒಂದು ಆತ್ಮೀಯ ಭಾವನೆ ಬೆಳೆಯುತ್ತಿತ್ತೆಂಬುದು ಈ ಕೃತಿಯಲ್ಲಿ ಗಮನಕ್ಕೆ ಬರುವ ಒಂದು ಮುಖ್ಯ ಅಂಶ. ಅಲ್ಲದೆ ರೋಗಿಗಳು ಬರಲಾಗದ ಪರಿಸ್ಥಿತಿಯಲ್ಲಿದ್ದರೆ, ಎಷ್ಟು ಬಡವರೇ ಇರಲಿ, ಯಾವುದೇ ಕಿಷ್ಕಿಂಧೆಯಂತಹ ಮನೆಗಳಿರಲಿ, ವೈದ್ಯರೇ ಅವರ ಮನೆಗಳಿಗೆ ಹೋಗಿ, ಕೆಲವೊಮ್ಮೆ ಫೀಸೂ ತೊಗೊಳದೇ ತುರ್ತು ಚಿಕಿತ್ಸೆ ಕೊಟ್ಟು ಬರುವಂತಹ ದೊಡ್ಡ ಮನಸ್ಸಿನವರಿರುತ್ತಿದ್ದರೆಂಬುದನ್ನೂ ಇದರಲ್ಲಿ ಗಮನಿಸಬಹುದು.

ಬರೀ ಇಂಥ ಕತೆಗಳಿಂದ ಪ್ರಯೋಜನವಿಲ್ಲ, ಮಾನವನ ಮನಸ್ಸನ್ನು ವಿವರವಾಗಿ ಅಧ್ಯಯನ ಮಾಡಬೇಕು, "ಮನಸ್ಸಿನ ವಿಷಯವನ್ನು ಬರೆದರೆ, ಮಾನಸಿಕ ತೊಂದರೆಗಳು ಹೇಗೆ ದೇಹದ ಮೇಲೆ ಪರಿಣಾಮ ಮಾಡಬಹುದು ಎನ್ನುವುದು ತಿಳಿಯಲು ಸುಲಭ. ಮನಸ್ಸಿನ ದೃಡತೆಯನ್ನು, ಸಮಾಧಾನವನ್ನು ಸಾಧಿಸಲು ಇರುವ ಎಲ್ಲ ಮಾರ್ಗಗಳನ್ನೂ ಸರಳವಾಗಿ ತಿಳಿಸೋಣ", ಎಂದು ಶಿವರಾಂ ಅವರಿಗೆ ಅನ್ನಿಸಿದಾಗ ಅವರು ಬರೆದಿದ್ದು ಇದರ ಎರಡನೆಯ ಭಾಗ. ಇದರಲ್ಲಿ ಮನಸ್ಸಿನ ಅರ್ಥ, ಅದು ಇರುವ ಜಾಗ, ಅದರ ಸ್ವಭಾವ, ಬೆಳವಣಿಗೆ, ಚಟುವಟಿಕೆಗಳು, ಮಾನಸಿಕ ಅವಲಂಬನ, ಮುಪ್ಪು, ಮನೋದೈಹಿಕ ಬೇನೆಗಳು ಮುಂತಾದ ಮನಸ್ಸಿಗೆ ಸಂಬಂಧಿಸಿದ ಅನೇಕ ವಿಷಯಗಳ ಸುತ್ತ, ಪ್ರತ್ಯೇಕ ಅಧ್ಯಾಯಗಳನ್ನಾಗಿ ವಿಂಗಡಿಸಿ, ಒಟ್ಟ ಹತ್ತು ಅಧ್ಯಾಯಗಳಲ್ಲಿ ಬರೆದಿದ್ದಾರೆ. ಆಲೋಚನೆ, ಅನುಭವ ಹಾಗೂ ಅಧ್ಯಯನಗಳ ಹದವಾದ ಮಿಶ್ರಣವಿರುವ 'ಮನೋನಂದನ' ಅನೇಕರ ಮನೋಭಯವನ್ನು ನಿವಾರಿಸಬಲ್ಲ ಅಭಯದ ಆಶೀರ್ವಾದ.

"ಮನಸ್ಸು ಎಂದರೇನು? ಅದು ಎಲ್ಲಿದೆ? ಎಂಬಂಥ ಗಹನ ವಿಚಾರಗಳನ್ನೂ ಕೂಡ ತುಂಬಾ ಸರಳವಾಗಿ ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ಬರೆದಿದ್ದಾರೆ. ಅವರು ಬರೆದಿರುವ ಪ್ರಕಾರ, ಮೆದುಳಿನ ಸೆರಿಬ್ರಂ ಭಾಗವೇ ಮನಸ್ಸಿನ ಕಾರ್ಯಕ್ಷೇತ್ರ. ರಾಗ, ಭಾವ, ಸುಖ, ದುಃಖ, ಅಳು, ನಗು, ಮುಂತಾದ ಭಾವನೆಗಳನ್ನೆಲ್ಲ ಹತೋಟಿಯಲ್ಲಿಡುವ ನರಕೇಂದ್ರಗಳು ಮೆದುಳಿನ ಬುಡದಲ್ಲಿ ಅಂದರೆ ಲಿಂಬಿಕ್ ಸಿಸ್ಟಂನಲ್ಲಿವೆ. ದುಃಖದ ಹತೋಟಿ ಕೇಂದ್ರವು ಲಿಂಬಿಕ್ ಸಿಸ್ಟಂನಲ್ಲಿ ಅಂದರೆ ಥೆಲಾಮಸ್ ಭಾಗದ ತಳದಲ್ಲಿದೆ. ಮನಸ್ಸಿನ

ಚುರುಕಿಗಾಗಲೀ, ಭಾವಪರವಶವಾಗುವ ಗುಣಕ್ಕಾಗಲೀ, ಮೆದುಳಿಗಿಂತ, ಮೆದುಳನ್ನು ತೋಯಿಸುವ ಸೆರಿಬ್ರೋಸ್ಪೈನಲ್ ದ್ರವ ಬಲು ಮುಖ್ಯ. ಅಂದರೆ ಮೆದುಳನ್ನು ತೋಯಿಸುವ ಸೆರಿಬ್ರೋಸ್ಪೈನಲ್ ದ್ರವದಲ್ಲಿ ಮನಸ್ಸು ಕಾರ್ಯ ನಡೆಸುತ್ತದೆ.

ಮನಸ್ಸಿನ ನಿಸ್ವಾರ್ಥ ಚಟುವಟಿಕೆಯು ಕುತೂಹಲದಿಂದ ಕೆರಳಿದಾಗ ವೈಜ್ಞಾನಿಕ ಪ್ರಗತಿ ಸಾಧ್ಯವಾಗುತ್ತದೆ. ಅನುಕಂಪದಿಂದ ತುಂಬಿದಾಗ ವೈಜ್ಞಾನಿಕ ಕಲೆಯ ವಿವಿಧ ರೂಪಗಳು ಪ್ರಕಟವಾಗಿ ಕಾಲದೇಶಾತೀತವಾಗಿ ನಿಲ್ಲುತ್ತವೆ. ಇಂಥ ಕಲೆ, ರಚಿಸಿದವರ ಮನಸ್ಸಿಗೂ ನೋಡುವವರ ಮನಸ್ಸಿಗೂ ಉಲ್ಲಾಸ ಆನಂದಗಳನ್ನೀಯುತ್ತವೆ. ಆದ್ದರಿಂದಲೇ ಈ ಚಟುವಟಿಕೆಗಳತ್ತ ಮನುಷ್ಯ ಮನಸ್ಸು ಹಾಯಿಸಿದರೆ ಅವನಿಗೆ ಶಾಂತಿ ಸಮಾಧಾನಗಳು ದೊರಕುತ್ತವೆ– ಎಂಬುದನ್ನು ಡಾ. ಶಿವರಾಂ ಈ ಹೊತ್ತಗೆಯಲ್ಲಿ ಪ್ರತಿಪಾದಿಸಿದ್ದಾರೆ. "ಇದು ನನಗೆ ತುಂಬ ಇಷ್ಟವಾದ ಕೃತಿ", ಎಂಬುದು ಡಾ. ಶಿವರಾಂ ಅವರ ಅನಿಸಿಕೆಯೂ ಸಹ. "ಈ ಪುಸ್ತಕದಲ್ಲಿನ ಯಾವುದೊಂದು ಸಣ್ಣ ವಿಷಯ ಕೂಡ 'ನನ್ನದು' ಎನ್ನಲು ಬರುವುದಿಲ್ಲ. ಎಲ್ಲ ವಿಷಯಗಳೂ ಯಾವನಾದರೂ ಒಬ್ಬ ಹಿರಿಯಾತ್ಮನ ಪುಸ್ತಕದಲ್ಲಿ ಎಂದಾದರೂ ನಾನು ಓದಿದವುಗಳೇ" ಎಂದು ತನ್ನದೆಂಬುದು ಏನೂ ಇಲ್ಲವೆಂಬಂತೆ ಮುನ್ನುಡಿಯಲ್ಲಿ ಶಿವರಾಂಅವರು ಹೇಳಿರುವುದು, ದೊಡ್ಡ ಮನಸ್ಸಿನ ಮಾತು.

ರಾ.ಶಿ.ಯವರು ತಮ್ಮ ಮನಸ್ಸಿನಲ್ಲಿ ಸಂಗ್ರಹಗೊಂಡ ಅನುಭವಗಳ ಕೆನೆಯನ್ನು ಅಧ್ಯಯನದ ಕಡೆಗೋಲಿನಿಂದ ಮಥಿಸಿದಾಗ ಮೇಲೆದ್ದ ನವನೀತವೇ 'ಮನಮಂಥನ' ಕೃತಿ. ಇದು 1976ರಲ್ಲಿ ಗಳಿಸಿದ ರಾಜ್ಯ ಸಾಹಿತ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು ಈ ಪುಸ್ತಕದ ಮೌಲ್ಯಕ್ಕೆ ಹಿಡಿದ ಕನ್ನಡಿ. "ನನ್ನ ಜೀವನಕ್ಕೆ ಅತ್ಯಗತ್ಯವಾಗದೆ ಇರುವ ಜ್ಞಾನಾರ್ಜನೆಯು ಮತ್ತು ಕಲಿತ ಜ್ಞಾನವನ್ನು ಪ್ರಸಾರಮಾಡುವುದು, ಇವೆರಡೂ ನಿಸ್ವಾರ್ಥಿ ಚಟುವಟಿಕೆಗಳು. ಜ್ಞಾನಾರ್ಜನೆಯ ಕುತೂಹಲವು ನನ್ನ ಮನಸ್ಸಿನಲ್ಲಿ ಪ್ರಚೋದಿಸಿತು. ಅನುಕಂಪವು ಜ್ಞಾನಪ್ರಸಾರ ಮಾಡುವಂತೆ ಪ್ರೇರೇಪಿಸಿತು." ಎಂದು 'ಮನಮಂಥನ'ದಲ್ಲಿ ತಿಳಿಸಿರುವ ವಿಚಾರವೇ, ಇಂಥ ಬೃಹತ್ ಪುಸ್ತಕವನ್ನು ರಚಿಸಲು ಡಾ. ಶಿವರಾಂ ಅವರಿಗೆ ದೊರೆತ ಪ್ರೇರಣೆ. ಬೆಪ್ಪು, ಶಿವಲೀಲೆ, ಭೂತ ಪಿಶಾಚಿ, ಭಯ ಇವು ಮಾನಸಿಕ ರೋಗಗಳಲ್ಲದೆ ಬೇರೆಯಲ್ಲ. ಮನುಷ್ಯ ಭ್ರಾಂತಿಗಳನ್ನು ಹಠದಿಂದ ಮೆಟ್ಟುತ್ತಾನೆ.

ತೋರಮನಸ್ಸಿನಿಂದಾಚೆಗೆ ಅಂತಹ ಯೋಚನೆಗಳನ್ನು ದಬ್ಬುತ್ತಾನೆ. ಆಗ ಅಂಥ ಭ್ರಾಂತಿರೂಪಿನ ಯೋಚನೆಗಳು ಆಳ ಮನಸ್ಸಿನ ಹಗೇವುಗಳಲ್ಲಿ ಶೇಖರವಾಗುತ್ತವೆ. ಒತ್ತಡ ವಿಪರೀತವಾದಾಗ ಅದು ಹುಚ್ಚಿನ ರೂಪದಲ್ಲಿ ಹೊರಹೊಮ್ಮುತ್ತದೆ. ಇದು ಆತಂಕ, ಪ್ಯಾರಾನಾಯ್ಡ್ ಅವಸ್ಥೆ ಹಿಸ್ಟೀರಿಯಾ, ಒಬ್ಸೆಷನಲ್ ಬೇನೆ, ಸ್ಕೀಜೋಫ್ರೆನಿಯಾ ಮುಂತಾದ ವಿವಿಧ ಬಗೆಯ ಮಾನಸಿಕ ರೋಗಗಳಲ್ಲಿ ಯಾವುದಾದರೂ ಒಂದಾಗಿರಬಹುದು. ಇವನ್ನೆಲ್ಲಾ ಕಥಾ ದೃಷ್ಟಾಂತಗಳ ಮೂಲಕ ಇದರಲ್ಲಿ ಓದುಗರ ಕಣ್ಣೆದುರಿಗೆ ಕಾಣುವಂತೆ ವಿವರಿಸಿರುವುದು ಡಾ. ಶಿವರಾಂ ಅವರ ನಿರೂಪಣೆಯ ಹೆಗ್ಗಳಿಕೆ.

“ಮನೆಯಲ್ಲಿ ಒಬ್ಬನಿಗೆ ಹುಚ್ಚೋ ಬೆಪ್ಪೋ ಶಿವಲೀಲೆಯೋ ಬಡಿದರೆ, ದೈಹಿಕ ಕಾಹಿಲೆಗಳಿಗಿಂತ ಹೆಚ್ಚಾಗಿ ಮನೆಯವರೆಲ್ಲರ ನೆಮ್ಮದಿ ಕೆಡುತ್ತದೆ. ಮೊದಲ ಹಂತದಲ್ಲೇ ಇವನ್ನು ಗುರುತಿಸಿ ಚಿಕಿತ್ಸೆ ಕೈಗೊಂಡರೆ ಕಾಯಿಲೆ ಪೂರ್ಣ ಗುಣವಾಗುತ್ತದೆ ಎಂಬುದನ್ನು ಈ ಹೊತ್ತಗೆ ಮನಗಾಣಿಸುತ್ತದೆ. ಇದು ‘ಮನಮಂಥನ'ದ ರಚನೆಯ ಪ್ರಧಾನ ಉದ್ದೇಶವೂ ಹೌದು.

ಎರಡನೆಯ ಭಾಗದಲ್ಲಿ ಮನಸ್ಸಿನ ಸ್ಥೂಲ ಪರಿಚಯವಿದೆ. ಮನಸ್ಸಿನ ರೂಪ, ಅದು ಕೆಲಸ ಮಾಡುವ ಬಗೆ, ಅದರ ಬೆಳವಣಿಗೆ, ಕಾರ್ಯಕ್ರಮ ಹಳಿ ತಪ್ಪುವ ರೀತಿ_ ಈ ಕುರಿತು ನೀಡಿರುವ ವಿವರಗಳು ಕುತೂಹಲಕಾರಿ. ಮಾನವನ ಬದುಕಿನ ವಿವಿಧ ಮಜಲುಗಳಲ್ಲಿ ಪ್ರಬುದ್ಧತೆ ಹೊಂದುವ ಮನಸ್ಸು; ಅತಿ ಆಸೆ, ತೀವ್ರ ನಿರಾಸೆ, ಆತಂಕಗಳಿಂದ ಛಿದ್ರವಾಗಿ ಒಡೆಯಬಹುದಾದ ರೀತಿಯ ಬಗೆಗಿನ ವಿಶ್ಲೇಷಣೆ ಪರಿಣಾಮಕಾರಿ. ಪಾಶ್ಚಾತ್ಯ ಮನೋವಿಜ್ಞಾನದಲ್ಲಿ, ಇಡ್, ಇಗೋ ಮತ್ತು ಸೂಪರ್ ಇಗೋ–ಎಂಬುದಾಗಿ ಮಾಡಲಾದ ಮೂರು ಬಗೆಯ ಕಾಲ್ಪನಿಕ ವಿಂಗಡಣೆಗಳು; ಈ ಮೂರರ ಸಮನ್ವಯ ವಿಧಾನ, ಹಳಿ ತಪ್ಪಿದರೆ ಆಗುವ ಏರುಪೇರುಗಳು, ಇವೆಲ್ಲವುಗಳ ಬಗ್ಗೆ ಅತ್ಯಂತ ಆಸಕ್ತಿಯಿಂದ ಓದಿಸಿಕೊಳ್ಳುವಂತಹ ವಿವರಗಳು ವಿದ್ವತ್‌ಪೂರ್ಣ. ದೇಹವನ್ನು ಆರೋಗ್ಯವಾಗಿ ಇಟ್ಟುಕೊಳ್ಳುವುದರ ಮುಖಾಂತರ ಮನಸ್ಸನ್ನು ಸುಸ್ಥಿತಿಯಲ್ಲಿ ಇಡಬಹುದು ಎಂಬುದನ್ನು ಒತ್ತಿ ಹೇಳಿದ್ದಾರೆ. ಪುರಾಣಕತೆಯಾದ ಸಮುದ್ರ ಮಂಥನದ ದೃಷ್ಟಾಂತವನ್ನು ತೆಗೆದುಕೊಂಡು ಅದನ್ನು ಮನಸ್ಸಿನ ಮಂಥನಕ್ಕೆ ಹೋಲಿಸಿರುವುದು ಹೊಸಚಿಂತನೆಗಳಿಗೆ ದಾರಿ ಮಾಡಿಕೊಡುವಂತಹ ಒಂದು ಅಪೂರ್ವ ವಿಶ್ಲೇಷಣೆ. ಡಾ. ಡಿ.ವಿ.ಗುಂಡಪ್ಪನವರು ರಾ.ಶಿ.ಯವರಿಗೆ ಬರೆದ ಪತ್ರದ ಈ ಸಾಲುಗಳು, ‘ಮನಮಂಥನ'ದ ಬಗ್ಗೆ ಸ್ಪಷ್ಟ ಅಭಿಪ್ರಾಯ ಕೊಡುತ್ತವೆ.

"ಅಯ್ಯಾ ಮಹಾಶಯರೇ,

ನಿಮ್ಮ ಪುಸ್ತಕ 'ಮನಮಂಥನ'ವನ್ನು ಓದಿದ ಬಳಿಕ ನಿಮ್ಮನ್ನು 'ಮಹಾನುಭಾವ' ಎಂದು ಅಡ್ರೆಸ್ ಮಾಡಬೇಕೆಂದೆನಿಸುತ್ತದೆ. ಅಪ್ಪಣೆ ಕೋಡೋಣವಾಗಲಿ, ಎಷ್ಟು ಸೊಗಸಾಗಿದೆ! ನಾನೇನು ಮರ್ಯಾದೆಯ ಮಾಮೂಲಿಗೋಸ್ಕರ ಇದನ್ನು ಬರೆಯುತ್ತಿಲ್ಲ. ಈಗ ರಾತ್ರಿ ಒಂದು ಘಂಟೆಯ ಮೇಲೆ ಆಗಿದೆ. ನಿದ್ರೆ ಬಾರದ ಕಾರಣ ಓದುತ್ತಿದ್ದೇನೆ. ಸಂತೋಷದಿಂದ ಕಂಫರ್ಟಬಲ್ ಆಗಿ ಹಾಸಿಗೆಯಲ್ಲಿ ಕುಳಿತು ಓದುತ್ತಿದ್ದೇನೆ. ವಿಷಯ ಅಬ್ಸಾರ್ಬಿಂಗ್ ಆಗಿದೆ. ಲೇಖನ ಶೈಲಿ ಅಷ್ಟು ಸೊಗಸು. ಅಷ್ಟೇ ಚೆನ್ನು. ಶಿವರಾಂ ಟಚ್ ವಿವರಣೆಗಳು, ಉದಾಹರಣೆಗಳು ಕಥೆಗಳು, ಮನನ ವಾಕ್ಯಗಳು—ಎಲ್ಲಾ ಸ್ವಾರಸ್ಯ." — ಇದು 'ಮನಮಂಥನ'ದ ಕುರಿತು ಡಾ. ಡಿ.ವಿ.ಗುಂಡಪ್ಪನವರು ನಡುರಾತ್ರಿಯಲ್ಲಿ ಎದ್ದು ಓದಿದರೂ ಖುಷಿಯಾಗಿ ಓದಿ ಬರೆದಂತಹ ಸದಭಿಪ್ರಾಯದ ಸಾಲುಗಳು.

**'ಹರಿದ ಉಯಿಲು' (1974):**

ಸ್ವಂತ ಶ್ರಮದಿಂದ ಹಣ ಮತ್ತು ಹೆಸರುಗಳನ್ನು ಗಳಿಸಿದ ನರಸಪ್ಪ ಎಂಬ ಹೆಸರಾಂತ ವಕೀಲರ ಜೀವನದ ಕಥೆ ಇದು. ನರಸಿಂಗು ಎಂಬ ಆಪ್ತ ಗೆಳೆಯನ ಕುಟುಂಬದ ಸದಸ್ಯರೆಲ್ಲರೂ ಅವರನ್ನು ತುಂಬ ಪ್ರೀತಿಯಿಂದ ನೋಡಿಕೊಳ್ಳುವುದನ್ನು ಗಮನಿಸುವ ನರಸಪ್ಪ; ಎಷ್ಟೆಲ್ಲ ಸೌಕರ್ಯಗಳನ್ನು ತಾನು ಮಾಡಿಕೊಟ್ಟಿದ್ದರೂ, ತನ್ನ ಮನೆಯಲ್ಲಿ, ಮಕ್ಕಳು ಮತ್ತು ಕೈ ಹಿಡಿದ ಹೆಂಡತಿಯೇ ತನಗೆ ಅನಾದರ ತೋರುವುದನ್ನು ಕಂಡು, ಕೊರಗುತ್ತಾರೆ. ಅವರೆಲ್ಲರಿಗಾಗಿ ತಾವು ಹಿಂದೆ ಬರೆದ ಉಯಿಲನ್ನು ಓದುತ್ತ ಹೋದಂತೆ, ಅವರ ನೆನಪಿನ ಪರದೆ ಸಂಪೂರ್ಣ ಸರಿದು, ಹಿಂದಿನ ಜೀವನ ಎದುರು ನಿಲ್ಲುತ್ತದೆ. ಯುವ ವಯಸ್ಸಿನಲ್ಲಿ ತನ್ನನ್ನು ತುಂಬ ಪ್ರೀತಿಯಿಂದ ನೋಡಿಕೊಳ್ಳುವ ಚಿಕ್ಕಮ್ಮನ ಮುಂದೆ ನಾಟಕದೊಂದು ಹಾಡು ಹೇಳುತ್ತಿರುವುದನ್ನು ಕಂಡ ತಂದೆ ಅನುಮಾನಿಸಿ ಕೆನ್ನೆಗೆ ಹೊಡೆದುದಕ್ಕೆ ನೋವಾಗಿ ಮನೆ ಬಿಟ್ಟು ಹೋಗಿರುತ್ತಾರೆ. ಮನೆ ಬಿಟ್ಟ ಮೇಲೆ ಬೊಂಬಾಯಿ ಸೇರಿ, ಅಲ್ಲಿ ಶ್ರೀಮಂತರ ಮನೆಯ ಮಗಳೊಬ್ಬಳಿಗೆ ಕನ್ನಡ ಪಾಠ ಹೇಳಿ ಕೊಡುವ ಕೆಲಸ, ಇರಲು ವಸತಿ, ನಂತರ ಇನ್ನೂ ಒಳ್ಳೆಯ ಕೆಲಸ, ಬೇಕಾದಷ್ಟು ಸಂಬಳ, ರೋಡಾ ಎಂಬ ಹುಡುಗಿಯ ಪರಿಚಯ, ಪ್ರೇಮ, ಅವಳು ಹುಚ್ಚು ಕುಟುಂಬಕ್ಕೆ ಸೇರಿದವಳಾಗಿದ್ದು, ಅದೇ

ಹುಚ್ಚು ಖಾಯಿಲೆಯಿಂದಾಗಿ ಆತ್ಮಹತ್ಯೆ ಮಾಡಿ ಕೊಳ್ಳುವುದು, ಆ ಸಮಯಕ್ಕೆ ಸರಿಯಾಗಿ ಬರುವ ಚಿಕ್ಕಮ್ಮನ ಪತ್ರದಲ್ಲಿ, ತಂದೆಯ ಸಾವಿನ ಸುದ್ದಿ ತಿಳಿಸಿ, ಊರಿಗೆ ವಾಪಸ್ ಬರುವಂತೆ ಕೋರುವುದು, ಇವೆಲ್ಲ ಈ ಕಾದಂಬರಿಯಲ್ಲಿ ನಡೆಯವ ಘಟನೆಗಳು. ಹೆಚ್ಚು ಆರ್ಥಿಕ ಕಷ್ಟ ಕಾರ್ಪಣ್ಯಗಳಿಲ್ಲದ ಸರಾಗ ಜೀವನದ ಒಂದು ಕಥೆ ಎಂದು ಮೊದಲ ಹಂತದಲ್ಲಿ ಅನಿಸಿದರೂ ನರಸಪ್ಪನ ಆರ್ಥಿಕ ಸ್ಥಿತಿಗಿಂತ ಪ್ರೀತಿಯ ಕೊರತೆಯತ್ತ ಕಥೆಯ ಚಲನ ಕಾಣುತ್ತದೆ. ನೊಂದ ಮಲತಾಯಿ ಒಬ್ಬಳನ್ನು ಬಿಟ್ಟರೆ; ಚಿಕ್ಕಂದಿನಲ್ಲೇ ಸತ್ತ ತಾಯಿ, ಎರಡನೇ ಮದುವೆಯಾಗುವ ತಂದೆ, ಆತ್ಮಹತ್ಯೆ ಮಾಡಿಕೊಳ್ಳುವ ಪ್ರೇಮಿ, ಹೃದಯಹೀನ ಹೆಂಡತಿ ಮತ್ತು ಆಕೆಯತ್ತಲೇ ವಾಲುವ ಮಕ್ಕಳು–ಈ ಯಾರ ಪ್ರೀತಿಯೂ ನರಸಪ್ಪನಿಗೆ ದಕ್ಕುವುದಿಲ್ಲ. ಆದರೂ ತನಗೆ ನ್ಯಾಯವೆನಿಸಿದ ರೀತಿಯಲ್ಲಿ, ಎಲ್ಲರಿಗೂ ಅನುಕೂಲ ಮಾಡಿಕೊಟ್ಟ ಭಾವದಿಂದ, 'ನಾನು' ನನ್ನಿಚ್ಛೆಯಂತೆ ನಡೆಸಿಕೊಳ್ಳಲಾಗದು, 'ಅದು' (ದೈವ) ನಡೆಸುವ ರೀತಿಯಲ್ಲೇ ನಡೆಯಲಿ ಎಂದು ಯೋಚನೆಗಳನ್ನು ಕೈ ಬಿಡುವುದರೊಂದಿಗೆ ಅಂತ್ಯವಾಗುವ ಕೌಟುಂಬಿಕ ಕಾದಂಬರಿ ಇದು.

**ಕೈಲಾಸಂ ಅಂಡ್ ಐ:** ಟಿ.ಪಿ. ಕೈಲಾಸಂ ಅವರ ಪರಿಚಯದ ಬಗೆ, ಅವರೊಂದಿಗೆ ಒಡನಾಡಿದ ದಿನಗಳು, ಆದ ಅನುಭವಗಳು, ಪಡೆದ ಸಲಹೆಗಳು, ಅವರೊಂದಿಗೆ ಕಳೆದ ರಸಘಳಿಗೆಗಳು, ಕಲಿತ ಪಾಠ, ಮುಂತಾದ ಹಲವು ವಿಷಯಗಳನ್ನು ಒಳಗೊಂಡಿರುವ ಪುಸ್ತಕವಿದು. ತರಗತಿಯ ಪಾಠ ಬೇಸರಕ್ಕೆ ತಿರುಗಿದಾಗ, ಹೊರ ಬಂದು ರಂಗಮಂದಿರವೊಂದಕ್ಕೆ ನುಗ್ಗಿ ಅಲ್ಲಿ ನಡೆಯತ್ತಿದ್ದ 'ವಿವಿಧ ವಿನೋದ್ಧಾವಳಿ' ನೋಡಲು ಕುಳಿತ, ಒಂದು ದಿನ, ವೇದಿಕೆಯ ಮೇಲೆ ಕಣ್ಣಿಗೆ ಬಿದ್ದು, ನಂತರ ಇವರ ಪರಿಚಯದ ವಲಯಕ್ಕೆ ಸೇರಿದವರು ಅಲ್ಲಿ ಕಂಡ ಟಿ.ಪಿ. ಕೈಲಾಸಂ.

ಕೈಲಾಸಂರ ತಂದೆ ನ್ಯಾಯಮೂರ್ತಿ ಪರಮಶಿವ ಐಯ್ಯರ್. ಮಿಂಟೋ ಆಸ್ಪತ್ರೆಯ ಮುಂಭಾಗದಲ್ಲಿದ್ದ ವೈಟ್ ಹೌಸ್, ಅವರ ಭವ್ಯ ನಿವಾಸ. ಅದರ ಹಿಂಭಾಗದ ಕೋಣೆ ಕೈಲಾಸಂ ಅವರದು. ಶಿವರಾಂ ಅವರು, ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿದ್ದ ತಮ್ಮ ವೈದ್ಯಕೀಯ ಕಾಲೇಜಿನ ತರಗತಿಗಳನ್ನು ಮುಗಿಸಿದ ಮೇಲೆ, ಕೈಲಾಸಂ ಅವರ ಕೋಣೆಗೆ ಹೋಗುತ್ತಿದ್ದದು ಒಂದು ರೂಢಿ. ಅವರ ತಂದೆಯ ಕಣ್ಣುತಪ್ಪಿಸಿ ಹೋಗುತ್ತಿದ್ದರು. ಅಲ್ಲಿಂದ ಕೈಲಾಸಂ ಜೊತೆಗೆ ಕಂಟೋನ್ಮೆಂಟ್ ವರೆಗೆ ಸೈಕಲ್ ತುಳಿತ. ಅದು ನಿತ್ಯದ

ಪದ್ಧತಿ. ದಾರಿಯುದ್ದಕ್ಕೂ ಪರಸ್ಪರರ ಅರಿವು–ಜ್ಞಾನಗಳು ಮೊನಚಾಗುವಂತಹ ಚರ್ಚೆ, ಮಾತು, ವಾದ ವಿವಾದಗಳು. ಪರೇಡ್ ಗ್ರೌಂಡ್ಸ್‌ನಲ್ಲಿ ಕುಳಿತು ಎಷ್ಟು ಆಡಿದರೂ ಮುಗಿಯದ ಮಾತು, ಹರಟೆ.

ಕೊರವಂಜಿ ನಡೆಯುತ್ತಿದ್ದ ಸಮಯದಲ್ಲಿ ಒಮ್ಮೆ ಕೈಲಾಸಂ ಅವರು, ರಾ.ಶಿ.ಯವರ ಕೊಠಡಿಯಲ್ಲಿದ್ದವರು, ಇವರು ಬರೆದುದನ್ನು ಕೇಳಿಸಿಕೊಂಡು ನೀಡಿದ ಪ್ರತಿಕ್ರಿಯೆ ಹೀಗಿತ್ತು; 'ಆಹಾ! ಇದೆಷ್ಟು ಸೂಕ್ಷ್ಮ, ಭವ್ಯ! ಆದರೆ ಇಡೀ ನಿಮ್ಮ 'ಮಹಿಷಾಸುರನ ಊರಿನಲ್ಲಿ ಕನಿಷ್ಠ ಇಬ್ಬರಾದರೂ ಇಂಥ ಸವಿಯಾದ ಶುದ್ಧಹಾಸ್ಯವನ್ನು ಮೆಚ್ಚಬಲ್ಲವರಿದ್ದಾರಾ? ನಿಮ್ಮ ರಾಜ್ಯದಲ್ಲಿರುವ ಇವು ಕೋಣಗಳು. 'ಇದು ಜೋಕು, ನಗು' ಎಂದು ಹೇಳಿದರಷ್ಟೇ ನಕ್ಕಾವು. ಇಂಥಾ ಅಪರೂಪದ ಹಾಸ್ಯಕ್ಕೆ ಸ್ವಾಗತ, ಆದರೆ ಇದನ್ನು ಅರ್ಥ ಮಾಡಿ ಕೊಂಡು ಆಸ್ವಾದಿಸುವ ಓದುಗರು ಇದಕ್ಕೆಂದೂ ಸಿಗಲಾರರು". ಕೈಲಾಸಂ ಹಾಗಂದದ್ದು ಕೇಳಿ ರಾಶಿಯವರಿಗೆ ಸಹಜವಾಗಿಯೇ ಸಿಟ್ಟು ಬಂದಿತ್ತು. ಆದರೆ ಅದರ ಸತ್ಯಾಂಶದ ಅರಿವಾದುದು ಇಪ್ಪತ್ತೈದು ವರ್ಷಗಳ ಬಳಿಕ, ಪತ್ರಿಕೆಯನ್ನು ನಿಲ್ಲಿಸುವ ಪರಿಸ್ಥಿತಿ ಬಂದಾಗ.

ರಾ.ಶಿ.ಯವರ ಮನೆಯಲ್ಲಿ ಒಮ್ಮೆ ಆರು ತಿಂಗಳ ಕಾಲ ತಂಗಿದ್ದ ಕೈಲಾಸಂ ಅವರು ಒಂದು ದಿನ ಈ ದಂಪತಿಗಳಿಬ್ಬರದೂ ಊಟವಾಗದೇ ತಾನು ಊಟ ಮಾಡುವುದಿಲ್ಲ ಎಂದು ಹಟ ಹಿಡಿದರಂತೆ. ಕೈಲಾಸಂ ತಮ್ಮ ಅತಿಥಿ. ಅವರಿಗೆ ಮೊದಲು ತಾವಿಬ್ಬರೂ ಊಟ ಮಾಡುವುದೇ? ಅನುಮಾನಿಸಿದರು ರಾಶಿ. ಆದರೆ ಕೈಲಾಸಂ ಬಿಡಲಿಲ್ಲ. ದಂಪತಿಗಳಿಬ್ಬರಿಗೂ ಊಟಕ್ಕೆ ಬಡಿಸಿ ತಾವು ಮಾಡಿದರು. ನಂತರ ತಿಳಿದಿದ್ದು, ಅಂದು ಅವರ ತಾಯಿಯ ಶ್ರಾದ್ಧ. ಕೈಲಾಸಂ ಅವರ ಆಚರಣೆಯ ರೀತಿ ಇದು.

ಆ ರಾತ್ರಿ ಕೈಲಾಸಂ ಅವರು ರಾ.ಶಿ.ಯವರ ಮನೆಯಲ್ಲಿ ಉಳಿದಿದ್ದರು. ಅದು ಎರಡನೇ ಮಾಹಾ ಯುದ್ಧದ ಕಾಲ, ಬರ್ಮಾದಲ್ಲಿ ಯುದ್ಧ ನಡೆದಿತ್ತು. ರಾ.ಶಿ.ಯವರು ಭಗವದ್ಗೀತೆಯನ್ನನ್ನುಸರಿಸಿ ಒಂದು ಶ್ಲೋಕ ಬರೆದರು. "ಬರ್ಮಾಕ್ಷೇತ್ರೇ, ಸಮರಕ್ಷೇತ್ರೇ, ಸಮಾದೇತಾ ಯುಯುತ್ಸವೇ//ಮಾಮಕಾಕಿ ಜಪಾನೀಶ್ಚೈವ ಕಿಮ ಕುರ್ವತ ಸಂಜಯಃ//" ಎಂದು. ಅಲ್ಲೇ ಇದ್ದ ಕೈಲಾಸಂ ಅವರು, ಅದನ್ನು ಓದಿಸಿ ಕೇಳಿ, "ಚೆನ್ನಾಗಿದೆ." ರೇಡಿಯೋ ಉವಾಚ' ಎಂದು ಸೇರಿಸಿ ಅಂತ್ಯಗೊಳಿಸು" ಎಂದರಂತೆ. ಕೈಲಾಸಂ ಅವರ ಒಡನಾಟದ, ಇಂತಹ

ಹಲವಾರು ಅವಿಸ್ಮರಣೀಯ ಕ್ಷಣಗಳ ನೆನಪಿನ ಮಾಲೆಯೇ ಈ "ಕೈಲಾಸಂ ಅಂಡ್ ಐ'.

**'ಇಂದಾನೊಂದು ಕಾಲದಲ್ಲಿ'** ಜಿ.ಪಿ. ರಾಜರತ್ನಂ ಅವರಿಗೆ ಅವರ ಅರವತ್ತನೆಯ ಹುಟ್ಟು ಹಬ್ಬಕ್ಕೆ ಅರ್ಪಿಸಲಾದ ಕೃತಿ. ಕಾಗಕ್ಕ, ಗುಬ್ಬಕ್ಕ, ಹುಂಜಪ್ಪ, ನರಿರಾಯ ಮುಂತಾದ ಹಳೆಯ ಕಾಲದಲ್ಲಿ, ಎಲ್ಲಾ ಮಕ್ಕಳು ಕೇಳುತ್ತಿದ್ದ ಕತೆಗಳಿಗೆ, ಹೊಸ ವಿಷಯ ಕೊಟ್ಟು, ಆ ಕತೆಯ ಪಾತ್ರಗಳಿಗೆ, ಈ ಕಾಲದ ಜನರ ಮೋಸದ ನಡವಳಿಕೆಯ ಬಟ್ಟೆ ತೊಡಿಸಿ, ಹೊಸತೇ ಆದಂತಹ ಹಾಸ್ಯ ಚಿಮ್ಮಿಸುವ ಕಥೆಗಳನ್ನು ಈ 'ಇಂದಾನೊಂದು ಕಾಲದಲ್ಲಿ' ಹೇಳಿದ್ದಾರೆ.

ದೇಹದ ಆರೋಗ್ಯ ಕುರಿತು ವಿಶ್ಲೇಷಿಸಿರುವ ಪುಸ್ತಕ **'ಅಲರ್ಜಿ'**, 'ದಕ್ಷಿಣ ಭಾರತದ ಅಡುಗೆಯಲ್ಲಿರುವ ಸತ್ವಾಂಶಗಳು ಕುರಿತು **'ನಮ್ಮ ಅಡಿಗೆ ಪಥ್ಯದ ಊಟ'**ದಲ್ಲಿ; ಭಾರತದ ಮಹಾಕಾವ್ಯ, ಭಗವದ್ಗೀತೆ, ಶೇಕ್ಸ್‌ಪಿಯರ್‌ನ ಮಾತು, ಪಾಶ್ಚಾತ್ಯರ ಕೃತಿಗಳು, ಹಿಂದಿನ ಕಾಲದಿಂದ ರೂಢಿಯಲ್ಲಿರುವ ಸಂಪ್ರದಾಯಗಳು ಮುಂತಾದವನ್ನೆಲ್ಲ ಆಧುನಿಕ ವಿಜ್ಞಾನದ ಅಂಶಗಳಿಗೆ ಹೋಲಿಸಿ ಸಮೀಕರಿಸುವಂತಹ ಚಿಂತನೆಗಳಿರುವ **'ಮನನ'**; ಕಾಡು ಪ್ರಾಣಿಗಳ ನಡತೆಗಳನ್ನು ಮೈ ಗೂಡಿಸಿಕೊಂಡ ಮಾನವರೂಪಿಗಳ ಕುರಿತು ಬರೆದ ಸಣ್ಣ ಕಥೆಗಳ ಸಂಕಲನ **'ಮೃಗಶಿರ'**; ಐತಿಹಾಸಿಕ ವಸ್ತುವುಳ್ಳ **'ಪಂಪಾತಿಯ ಕೃಪೆ'**; ಜಿ.ಪಿ. ರಾಜರತ್ನಂ ಅವರ ವ್ಯಕ್ತಿ ಚಿತ್ರಣವಿರುವ **'ಜಿ.ಪಿ. ರಾಜರತ್ನಂ'**., ಮುಂತಾದವು ರಾ.ಶಿ.ಯವರ ಇನ್ನಿತರ ಹೊತ್ತಗೆಗಳು.

### 'ಆನಂದ ಆ್ಯನ್ ಎಕ್ಸ್‌ಪೀರಿಯನ್ಸ್' ಮತ್ತು 'ಆನಂದ ಅಂಡ್ ದಿ ತ್ರೀ ಗ್ರೇಟ್ ಆಚಾರ್ಯಾಸ್' (1976):

ವೈದ್ಯ ವೃತ್ತಿಯ ಶಿವರಾಂ ಅವರಿಗೆ ಪ್ರತಿದಿನ ಕಣ್ಣಿಗೆ ಬೀಳುತ್ತಿದ್ದುದು ರೋಗಿಗಳ ನೋವು, ರೋಗ, ಸಾವು. ಸಂಕಟಗಳೇ. ಅತ್ಯಂತ ಅನುಕಂಪವಿದ್ದ ಇವರ ಹೃದಯ ಇವುಗಳ ನಿವಾರಣೆಗೆ ಸಾಕಷ್ಟು ರೀತಿಯಲ್ಲಿ ಯೋಚಿಸಿದೆ. ಬಾಲ್ಯದಿಂದ ಅಂತರಂಗದಲ್ಲಿ ಬೇರು ಬಿಟ್ಟಿದ್ದ ದೈವ ಭಕ್ತಿ, ನಂಬಿಕೆಗಳು; ಎಲ್ಲವೂ ಮಾನವನ ಶಕ್ತಿಗೆ ಮೀರಿದ್ದು ಎಂಬುದನ್ನೂ, ಅವರವರ ಕರ್ಮದನ್ವಯ ಬದುಕು ಎನ್ನದೆ ಅನ್ಯೋಪಾಯವಿಲ್ಲ ಎಂಬುದನ್ನೂ ಮನಗಾಣಿಸಿವೆ. ಪ್ರತಿದಿನ ಜನರಲ್ಲಿ ಕಾಣುವ ಮನಃಕ್ಲೇಶವನ್ನು ಪರಿಹರಿಸುವ ದಾರಿಗಾಣದಾಗ, ಬ್ರಹ್ಮಾನಂದ, ಚಿದಾನಂದ, ಸಚ್ಚಿದಾನಂದ, ಸುಖಬೋಧಾನಂದ, ಪರಮಾನಂದ

ಎಂಬ ಆನಂದದ ವಿವಿಧ ನಾಮಧೇಯಗಳಲ್ಲಿ ಆನಂದದ ಸಾಧನೆಗೆ ಮಾರ್ಗದರ್ಶಿಗಳಂತೆ ಕಾಣುವ ಮತದ ಸ್ವಾಮಿಗಳು, ಸನ್ಯಾಸಿಗಳು, ಆಚಾರ್ಯರುಗಳು, ಅವರ ಮನಸ್ಸನ್ನು ಅತ್ತ ಸೆಳೆದಿರುವ ಸಾಧ್ಯತೆ ಇದೆ. ಆ ಆನಂದದ ಅನುಭವವನ್ನೂ ತಾವೂ ಪಡೆದು, ಇತರರಿಗೂ ಹಂಚಲು ಅವರು ಇಳಿದಿದ್ದು, ಆನಂದದ ಮಾರ್ಗ ಶೋಧನೆಗೆ. ಒಮ್ಮೆ ಯಾವುದೇ ವಿಷಯದಲ್ಲಿ ಆಸಕ್ತಿ ಹುಟ್ಟಿತೆಂದರೆ, ಆ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳು, ಲೇಖನಗಳು, ಪತ್ರಿಕೆಗಳು ಅವರ ಓದಿಗೆ ಆಹಾರವಾಗುತ್ತಿದ್ದವು. ಓದಿದ ಅಂಶಗಳು ಜೀರ್ಣಗೊಂಡು ಮಿದುಳು ಸೇರುತ್ತಿದ್ದವು. ಪುಸ್ತಕ ರೂಪದಲ್ಲಿ ಕೆಳಗಿಳಿಯುತ್ತಿದ್ದವು. ಹಾಗೆ ತಲಸ್ಪರ್ಶಿ ಅಧ್ಯಯನದಿಂದ ರೂಪುಗೊಂಡ ಎರಡು ಪುಸ್ತಕಗಳು–'ಆನಂದ ಆ್ಯನ್ ಎಕ್ಸ್‌ಪೀರಿಯನ್ಸ್' ಮತ್ತು 'ಆನಂದ ಅಂಡ್ ದಿ ತ್ರೀ ಗ್ರೇಟ್ ಆಚಾರ್ಯಾಸ್'.

ಬಿ.ಎಫ್. ಸ್ಕಿನ್ನರ್ ಎಂಬ ವಿಜ್ಞಾನಿಯು ಇಲಿಗಳ ಮೇಲೆ, ವಿದ್ಯುತ್ತಿನ ಸಹಾಯದಿಂದ, ಮಾಡಿದ ಪ್ರಯೋಗಗಳ ಮೂಲಕ ಮೆದುಳಿನ ಒಂದು ನಿರ್ದಿಷ್ಟ ಭಾಗದಲ್ಲಿ 'ಆನಂದದ ಕೇಂದ್ರ'ವಿದೆ ಎಂದು ಶೋಧಿಸಿದ. ಹಲವು ಶೋಧನೆಗಳು, ನಂತರದ ಶೋಧನೆಗಳಲ್ಲಿ ಭಿನ್ನ ಸಿದ್ಧಾಂತಗಳನ್ನು ಕಂಡುಕೊಳ್ಳುತ್ತವಾದರೂ, ಅದೇ ರೀತಿ ಮನುಷ್ಯನ ಮಿದುಳಿನ ಯಾವುದೋ ಒಂದು ಭಾಗದಲ್ಲೂ,'ಆನಂದದ ಕೇಂದ್ರ'ವಿರಬಹುದೆಂದೂ, ಧ್ಯಾನ ಮತ್ತು ಧಾರಣಗಳಿಂದ ಮನುಷ್ಯನೂ ಆನಂದದ ಚರಮಸೀಮೆಗೆ ತಲುಪಬಹುದೆಂದೂ, ಈ ಪರಮಾನಂದದ ಅನುಭವವಾದಾಗ ಸಾವಿನ ಭಯವನ್ನು ಮನುಷ್ಯ ಗೆಲ್ಲಬಹುದೆಂದೂ, ರಾ.ಶಿ.ಯವರು ಯೋಚಿಸಿ ಈ ವಿಚಾರಗಳ ಸುತ್ತ ತಮ್ಮ ಆಲೋಚನೆಗಳನ್ನು ಹರಿಸಿರುವುದು 'ಆನಂದ ಆ್ಯನ್ ಎಕ್ಸ್‌ಪೀರಿಯನ್ಸ್' ಎಂಬ ಕೃತಿಯಲ್ಲಿ. ಬಹುಶ್ರದ್ಧೆಯಿಂದ ಸಾಧನೆ ಮಾಡುವ ಯಾವುದೇ ವ್ಯಕ್ತಿಗಾದರೂ ಅತ್ಯಂತ ಉನ್ನತಮಟ್ಟದ ಈ ಆನಂದಾನುಭವವನ್ನು ಅನುಭವಿಸಲು ಸಾಧ್ಯ ಎಂಬ ಅನಿಸಿಕೆ ರಾ.ಶಿ. ಯವರದು.

ಅವರ ವೈಜ್ಞಾನಿಕ ಮನೋವೃತ್ತಿ, ಇಂಥ ಆನಂದದ ಶೋಧ ನಡೆಸಿದ ಮೂರು ಮಹಾನ್ ಸಾಧಕರ ಕುರಿತೂ ಅಧ್ಯಯನ ಮಾಡಿಸಿದೆ. ಅದ್ವೈತ, ದ್ವೈತ, ಮತ್ತು ವಿಶಿಷ್ಟಾದ್ವೈತವೆಂಬ ತ್ರಿಮತಗಳ ಸ್ಥಾಪಕರಾದ ಆಚಾರ್ಯತ್ರಯರಾದ ಶಂಕರಾಚಾರ್ಯರು, ಮಧ್ವಾಚಾರ್ಯರು ಮತ್ತು ರಾಮಾನುಜಾಚಾರ್ಯರು ದಕ್ಷಿಣ ಭಾರತದವರು. ಅವರ ಜೀವನ ಚರಿತ್ರೆಗಳನ್ನು ಹಾಗೂ ಅವರ

ಬೋಧನೆಗಳ ವಿವರಗಳನ್ನು ಮತ್ತು ಆನಂದಾನುಭವದ ಪ್ರಾಪ್ತಿಗೆ, ತತ್ವಶಾಸ್ತ್ರ, ಉಪನಿಷತ್ತು ಮತ್ತು ಮನಃಶಾಸ್ತ್ರಗಳ ತುಲನಾತ್ಮಕ ಅಧ್ಯಯನದ ವಿವರಣೆಯನ್ನೂ ಒಳಗೊಂಡಿರುವ ಕೃತಿ, ಈ'ಆನಂದ ಅಂಡ್ ದಿ ತ್ರೀ ಗ್ರೇಟ್ ಆಚಾರ್ಯಾಸ್'. ಅಹಂ ಬ್ರಹ್ಮಾಸ್ಮಿ, ತತ್ವಮಸಿ, ಜೀವಾತ್ಮ–ಹರಿಹರ ಅಭೇದ ತತ್ವಗಳು, ಈ ಆಚಾರ್ಯತ್ರಯರಿಗೆ ದೊರಕಿದ ಆನಂದಾನುಭವ, ಆ ಕಾಲದಲ್ಲಿದ್ದ ಸಾಮಾಜಿಕ ಅಸಮತೆ, ಬೋಧನೆಯ ತೊಡಕುಗಳು, ಪ್ರಯಾಣದ ತೊಂದರೆಗಳು, ಅಲ್ಪ ಸೌಕರ್ಯಗಳು, ದೊರಕಿಸಿಕೊಂಡ ಸಿದ್ಧಿ–ಸಾಧನೆಗಳು, ಇವೆಲ್ಲದರ ಕುರಿತು ಮಾಹಿತಿಗಳು ಇದರಲ್ಲಿವೆ. ಇನ್ನೂ ಹೆಚ್ಚಿನ ತುಲನಾತ್ಮಕ ಅಧ್ಯಯನಕ್ಕೆ ಅಗತ್ಯ ಸರಕು ಸಾಮಗ್ರಿಗಳನ್ನೂ ಈ ಕೃತಿ ಒದಗಿಸಿಕೊಡುತ್ತದೆ.

**ಡೆತ್ ಅಂಡ್ ನಚಿಕೇತಸ್ (1976)**: ಸಾವು ನಿಶ್ಚಿತ. ಆದರೆ ಮುಂದಿನ ಮಾರ್ಗ ನಿಗೂಢ. ಅದೊಂದು ಯಾರೂ ಕಂಡಿಲ್ಲದ ಕತ್ತಲ ಲೋಕ. ಲೌಕಿಕ ವ್ಯಾಪಾರಗಳಿಂದ ದೂರವಿದ್ದು, ಆಸೆಯನ್ನು ತೊರೆದು, ತಪಸ್ಸಿನಲ್ಲಿ ಪ್ರಪಂಚ ಗೆಲ್ಲಲು ಹೊರಟ ಋಷಿ ಮುನಿಗಳನ್ನೂ ಕಾಡಿ, ಸ್ಪಷ್ಟ ಉತ್ತರವಿಲ್ಲದೆ ಪ್ರಶ್ನೆಯಾಗಿಯೇ ಉಳಿದಿರುವುದು ಸಾವು. ಅದನ್ನು ನಿರ್ಭಯವಾಗಿ ಸ್ವೀಕರಿಸಲು ಹೆಚ್ಚಿನ ಜ್ಞಾನ ಹೊಂದಬೇಕೆನಿಸಿದಾಗ, ರಾ.ಶಿ.ಯವರಿಗೆ ನೆನಪಾದವನು, ಸಾವಿನ ಬಗ್ಗೆ ಯಮನಿಗೆ ಪ್ರಶ್ನೆಗಳನ್ನು ಹಾಕಿದ ಉಪನಿಷತ್ತಿನಲ್ಲಿ ಕಾಣ ಬರುವ ಬಾಲಕ ನಚಿಕೇತ. ಆ ಬಗ್ಗೆ ಅಧ್ಯಯನ ಮಾಡಿ ಬರೆದ ಕೃತಿ 'ಡೆತ್ ಅಂಡ್ ನಚಿಕೇತಸ್'. ಆದರೆ ಇದು ಕೇವಲ ನಚಿಕೇತನ ಕಥೆಯನ್ನು ನಿರೂಪಿಸುವ ಕೃತಿಯಲ್ಲ. ಸಾವಿನ ಸುತ್ತ ತಮ್ಮೊಳಗೆ ಎದ್ದ ಪ್ರಶ್ನೆಗಳಿಗೆ, ಅರಿವ ಆಸಕ್ತಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನದ ಕೃತಿ. ಕಠೋಪನಿಷತ್ತಿನಲ್ಲಿ ಪ್ರಸ್ತಾಪಿಸಿರುವ ಸಾವಿಗೆ ಸಂಬಂಧಿಸಿದ ವಿಷಯಗಳ ವಿವರಣೆ, ಮರೆಯಲಾಗದ ಕೆಲವು ಸಾವಿನ ಪ್ರಸಂಗಗಳ ಪರಿಚಯ, ನಚಿಕೇತನನ್ನು ಕಾಡಿದ ಸಾವಿಗೆ ಸಂಬಂಧಿಸಿದ ಪ್ರಶ್ನೆಗಳು, ವೈದ್ಯಕೀಯ ವಿಜ್ಞಾನದ ಹಿನ್ನೆಲೆಯಲ್ಲಿ ಪರಿಶೀಲನೆ, ಮನುಷ್ಯ ಸಾವನ್ನು ಗೆಲ್ಲಲು ನಡೆಸಿದ ಪ್ರಯತ್ನಗಳು, ಚಿರಂಜೀವಿಯಾಗುಳಿಯಲು ಆಲೋಚಿಸಿದ ಮಾರ್ಗಗಳು, ಸಮಾಧಿ ಸ್ಥಿತಿಯಲ್ಲಿಯೇ ಸಾವನ್ನು ತಂದುಕೊಂಡ ರಮಣಮಹರ್ಷಿ– ಇವೆಲ್ಲವುಗಳ ಅಡಕವೇ ಈ ಕೃತಿಯ ಪೂರ್ಣ ರೂಪ.

ಪ್ರಾಪಂಚಿಕವಾಗಿ ಎಲ್ಲರೊಡನೆ ಬೆರೆತು ಬದುಕಿನ ಅನುಭವಗಳ ಬುತ್ತಿ ಕಟ್ಟಿಕೊಳ್ಳುತ್ತಲೇ; ಮುಂದಿನ ಬದುಕಿನ ಪ್ರಯಾಣಕ್ಕೆ ಬೇಕಾದ ಚೈತನ್ಯವನ್ನು ಆಧ್ಯಯನದ ಮೂಲಕ ಪಡೆದುಕೊಳ್ಳುತ್ತ; ವಾನಪ್ರಸ್ಥಾಶ್ರಮದ ಹಂತವನ್ನು

ಪ್ರವೇಶಿಸಿದ್ದ ರಾ.ಶಿ.ಯವರು ಮನಸ್ಸಿನಲ್ಲಿ ಆ ವರೆಗೆ ಇರಬಹುದಾದ ಕ್ರೋಧ, ಲೋಭ, ಮೋಹ, ಮುಂತಾದ ಅರಿಷಡ್ವರ್ಗಗಳನ್ನು ಖಾಲಿ ಮಾಡಿಕೊಳ್ಳುವ ಪ್ರಯತ್ನದಲ್ಲಿ ಬರೆದಿದ್ದು, ಮೇಲಿನ ಗಂಭೀರವಾದ ಮೂರು ಆಧ್ಯಾತ್ಮಿಕ ಕೃತಿಗಳನ್ನು.

ಸಾವಿನ ನಂತರದ ಬದುಕಿನ ಯಾನಕ್ಕೆ ಮನಸ್ಸನ್ನು ಸಿದ್ಧಗೊಳಿಸಿಕೊಳ್ಳುವ ಪ್ರಯತ್ನದೊಂದಿಗೇ ರಾ.ಶಿ.ಯವರು ಸತತ ಮುಂದುವರೆಸಿದ್ದು ಇಹದ ಋಣ ತೀರಿಸುವ ಕೈಂಕರ್ಯವನ್ನು, ಬರವಣಿಗೆಯ ಮೂಲಕ. 'ತುಷಾರ' ಮಾಸ ಪತ್ರಿಕೆಯಲ್ಲಿ 'ಕಡಲೀಚೆಯ ಕುಡಿನೋಟ' ಬರೆದರು. ಸುಧಾ ವಾರ ಪತ್ರಿಕೆಗೆ ಹಲವಾರು ಕತೆಗಳನ್ನು ಬರೆದರು. 'ಪಂಪಾಪತಿಯ ಕೃಪೆ' ಎಂಬ ಐತಿಹಾಸಿಕ ಕಾದಂಬರಿಯನ್ನು ಬರೆದು 1982ರಲ್ಲಿ ಪ್ರಕಟಗೊಳ್ಳುವಂತೆ ನೋಡಿಕೊಂಡರು. ಅನಾರೋಗ್ಯದ ಸಂದೇಶದ ಮೂಲಕ, ಕಾಲನ ಕರೆ ಕೇಳಿಸತೊಡಗಿದ್ದರೂ, ಮನಸ್ಸು ಕುಗ್ಗಲಿಲ್ಲ. ಜ್ಞಾನದ ಹರಿತ ಕುಂದಿರಲಿಲ್ಲ. ತಮ್ಮ ಕೈಗಳು ಸ್ವಾಧೀನ ಕಳೆದುಕೊಳ್ಳುವರೆಗೂ, ಸಾಹಿತ್ಯ ಸೃಷ್ಟಿ ನಿಲ್ಲಿಸಲೂ ಇಲ್ಲ.

**ಕೃತಿಗಳ ಗುಣ ಲಕ್ಷಣಗಳು :**

ರಾ.ಶಿ.ಯವರ 'ತುಟಿ ಮೀರಿದುದು', ಕೊರವಂಜಿಯ ಪಡುವಣದ ಪ್ರವಾಸ, ಕೊರವಂಜಿ ಕಂಡ ನಗು ದರ್ಬಾರಿಗರು/ಸಂಸಾರಿಗರು, ನಗು ಸರಸಿ ಅಪ್ಸರೆಯರು, ಮುಂತಾದ ಹಾಸ್ಯದ ಸಕ್ಕರೆ ಸೇರಿಸಿದ ಲೇಖನಗಳ ಸಂಗ್ರಹಗಳದ್ದು ಒಂದು ಪರಿ. ವೈಜ್ಞಾನಿಕ ನೆಲೆಯಲ್ಲಿ ಅಥವಾ ಆಧ್ಯಾತ್ಮಿಕ ನೆಲೆಯಲ್ಲಿ, ತತ್ವ ಶಾಸ್ತ್ರವನ್ನೂ ಬೆರೆಸಿಕೊಂಡು, ಬಹಳ ಗಂಭೀರವಾದ ಆಲೋಚನೆಗಳೊಂದಿಗೆ ಆಳ ಆಳಕ್ಕೆ ಇಳಿಯುತ್ತ ಹೋಗುವ 'ಕಾಲ, ಯೋಚಿಸಿದರೆ, ಮನೋನಂದನ, ಮನಮಂಥನ, ಹಾಗೂ ಸಾವು–ಬದುಕು–ಭಯಗಳ ಬಗ್ಗೆ ಚಿಂತನೆಗಳಿರುವ 'ಡೆತ್ ಅಂಡ್ ನಚಿಕೇತ', 'ಆನಂದ ಆ್ಯನ್ ಎಕ್ಸಪೀರಿಯನ್ಸ್, 'ಆನಂದ ಅಂಡ್ ತ್ರೀ ಗ್ರೇಟ್ ಆಚಾರ್ಯಾಸ್', ಮುಂತಾದ ಕೃತಿಗಳದೇ ಇನ್ನೊಂದು ಪರಿ. ಇವರು ಹಾಸ್ಯ ಲೇಖನಗಳನ್ನು ಬರೆದಷ್ಟೇ ಶ್ರದ್ಧೆಯಿಂದ ವಿಜ್ಞಾನದ ಮಾರ್ಗದಲ್ಲೂ ಓಡಾಡುತ್ತಾರೆ, ತತ್ವ ಶಾಸ್ತ್ರದ ಅಂಗಳಕ್ಕೂ ಇಳಿಯುತ್ತಾರೆ. ಆಳವಾಗಿ ಚಿಂತಿಸುತ್ತಾರೆ, ಆಧ್ಯಾತ್ಮದ ಆನಂದವನ್ನೂ ಸಿದ್ಧಿಸಿಕೊಳ್ಳುತ್ತಾರೆ.

ರಾ.ಶಿ. ಯವರು ಬಹಿರಂಗವಾಗಿ ದೇವರ ಪೂಜೆ ಮಾಡುವವರಲ್ಲ. ದೇವಸ್ಥಾನಗಳಿಗೆ ಹೋಗುವ ಕ್ರಮ ಇಟ್ಟುಕೊಂಡವರೂ ಅಲ್ಲ. ಗ್ರಹಣ ಸಮಯದಲ್ಲಿ ಸ್ನಾನ, ಉಪವಾಸಗಳ ಆಚರಣೆಯನ್ನು ಒಪ್ಪುವವರಲ್ಲ.(ಕಾಲ) ಆದರೆ ತಮ್ಮ ಬಾಲ್ಯದಿಂದ ಹೃದಯದಲ್ಲಿ ಕಸಿಗೊಂಡ ಸಂಸ್ಕಾರ, ನಿಷ್ಕಲ್ಮಷ ದೈವಭಕ್ತಿ, ಮುಗ್ಧ ಮನಸ್ಸಿನ ನಂಬಿಕೆ, ಅದೇ ವಾತಾವರಣವನ್ನು ಪುನಃ ಬಯಸುತ್ತಿದ್ದ ಇಳಿವಯಸ್ಸಿನ ಮನಸ್ಸು– ಇವೆಲ್ಲವೂ ಒಂದಾಗಿ, ಆಗ ಹೇಳಿದ ಶ್ಲೋಕ, ಕೇಳಿದ ಕಥೆ, ಹಾಡಿದ ಭಜನೆಗಳನ್ನು ವೈಜ್ಞಾನಿಕ ನೆಲೆಯಲ್ಲಿ ಶೋಧಿಸಿ, ಹುಡುಕಾಟಕ್ಕೆ ಹಚ್ಚಿ, ಮನಸ್ಸು ನೆಮ್ಮದಿಗೊಳ್ಳುವಂತೆ ಸಾಮ್ಯತೆ ಕಾಣಿಸಿ ಸಮರ್ಥನೆ ಕಂಡುಕೊಂಡಿವೆ. ಅಂಚೆ ಪೇದೆಯ ಅಂತರ್ ಹೆಂಡತಿ, ಪೊಂಕಿಯಾನೋ'ಗಳಲ್ಲಿ ದೆವ್ವ ಪಿಶಾಚಿಗಳ ಅಸ್ತಿತ್ವವಿದೆ ಎಂದೂ, ಭಯಾನಕ ಕೆಲಸಗಳನ್ನು ಮಾಡಬಲ್ಲವೆಂದೂ ಪ್ರತಿಪಾದಿಸುವುದು; ಸಪ್ತ ಮಾತೃಕೆಯರು' ಪಠಿಸಿದವರಿಗೆ ದೆವ್ವ, ಹಾವು, ಚೇಳುಗಳು ತೊಂದರೆ ಕೊಡುವುದಿಲ್ಲ ಎಂದು ನಿರೂಪಿಸಿರುವುದು; 'ಪಶ್ಯಾಮಿ ಕತೆಗಳು' ಸಂಕಲನದಲ್ಲಿನ ಎಲ್ಲ ಕತೆಗಳನ್ನೂ 'ಪಶ್ಯಾಮಿ ದೇವಾಂಸ್ತವ ದೇವ ದೇಹೇ..' ಎಂಬ ಭಗವದ್ಗೀತೆಯ ಹಿನ್ನೆಲೆಯಲ್ಲಿ ರಚಿಸಿರುವುದು; 'ಸಾಲಿಗ್ರಾಮ'ದಲ್ಲಿ ಅರವಿಂದ ತನ್ನ ಕೈಯೊಳಗಿದ್ದ ಸಾಲಿಗ್ರಾಮವನ್ನೇ ಆತ್ಮಲಿಂಗವೆಂಬಂತೆ ಪೂಜೆ ಮಾಡುವುದು; 'ಮನನ'ದಲ್ಲಿ ಶೆಕ್ಸ್‌ಪಿಯರ್‌ನ 'ಟು ಬಿ ಆರ್ ನಾಟ್ ಟು ಬಿ'ಯನ್ನು ಭಗವದ್ಗೀತೆಯ 'ಇದ್ದರೂ ಇಲ್ಲದಂತಿರಬೇಕು' ಎಂಬ ತತ್ವಕ್ಕೆ ಹೋಲಿಸಿರುವುದು; ಕಾಲ ಭೈರವಾಷ್ಟಕದ ಪದಗಳ ಅರ್ಥವನ್ನು ಖ–ಭೌತ ಶಾಸ್ತ್ರಜ್ಞರ 'space Time Continuum' ಗೆ ಹೋಲಿಸುವುದು; 'ಕಾಲ' ದಲ್ಲಿ ಕಾಲ ಭೈರವಾಷ್ಟಕವನ್ನು 'ಕಾಲ'ದ ದೃಷ್ಟಿಯಲ್ಲಿ ಅರ್ಥೈಸಿ ಈ ಅಷ್ಟಕದ ಪಠನ ಹಾಗೂ ಮನನಗಳು ನೆಮ್ಮದಿಯನ್ನು ಕೊಡುವ ವಿಧಾನ ಎಂದಿರುವುದು; ಎಲ್ಲವೂ ಅವರ ಈ ಸಂಪ್ರದಾಯಬದ್ಧ ಮನಸ್ಸೇ. ಈ ಸಾಮ್ಯತೆ, ಹೋಲಿಕೆಗಳು, ಆಸ್ತಿಕರಿಗೆ, ಸಾಮಾನ್ಯರಿಗೆ ಪ್ರಿಯವೆನಿಸುವುದೂ ನಿಜ. ಆದರೆ ವಾಸ್ತವತೆ ಮಾತ್ರ ಅಸ್ಪಷ್ಟ. ವೈಜ್ಞಾನಿಕ ಶೋಧದಲ್ಲಿನ ವಸ್ತು ನಿಷ್ಠತೆ, ಸತ್ಯಾಂಶಗಳು ವಿಜ್ಞಾನಿಗಳಿಗಷ್ಟೇ ಅರ್ಥವಾಗಬಲ್ಲದು.

ರಾ.ಶಿ.ಯವರು ಮನೆಯಲ್ಲಿ ದೇವರಿಗಾಗಿ ಪ್ರತ್ಯೇಕ ಕೋಣೆ ಕಟ್ಟಿಸಿದರೋ ಇಲ್ಲವೋ, ಆದರೆ ಆಡಂಬರವಿಲ್ಲದೆ ಹಬ್ಬ–ಹರಿದಿನಗಳು ಮನೆಯಲ್ಲಿ ನಡೆಯಲೇ ಬೇಕು, ತಮ್ಮ ತಂದೆ–ತಾಯಿಗಳ ತಿಥಿ–ಶ್ರಾದ್ಧಗಳನ್ನು

ಶ್ರದ್ಧೆ ಇಟ್ಟು ಮಾಡಲೇಬೇಕು, ಸಂಸ್ಕೃತಿಯನ್ನು ಉಳಿಸಲೇ ಬೇಕು, ಆದರೆ ಇವುಗಳ ಅಂತರಾರ್ಥ ಗ್ರಹಿಸಿ ಮಾಡಬೇಕು ಎನ್ನುವ ರಾ.ಶಿ. ಯವರ ಅಪೇಕ್ಷೆಗಳೆಲ್ಲವೂ ಬಾಲ್ಯದಿಂದ ಆವರ ಜೊತೆಗೆ ಬಂದದ್ದೇ. ಆತ್ಮದ ಆನಂದವನ್ನು ಅರಸುವಲ್ಲಿ, ಕಾಣದ ನಿಗೂಢ ಶಕ್ತಿಯಲ್ಲಿ, ಅಗೋಚರ ಶಕ್ತಿಯ ಪವಾಡದಲ್ಲಿ ಅವರು ನಂಬಿಕೆ ಇಟ್ಟಿದ್ದು ಹೆಚ್ಚು. "ಮದ್ದು ಕೊಡುವುದಕ್ಕೆ ಮಾತ್ರ ವೈದ್ಯ. ಚಿಕಿತ್ಸೆ ಮಾಡುವವನು ಭಗವಂತ.." ಎಂದು ಅವರು ಹೇಳುತ್ತಿದ್ದುದು ಈ ನಂಬಿಕೆಯಿಂದಾಗಿಯೇ.

ರಂಜನೆ, ಚಮತ್ಕಾರಗಳಷ್ಟೇ ರಾ.ಶಿ.ಯವರ ಕೃತಿಗಳ ಮುಖ್ಯ ಉದ್ದೇಶವಲ್ಲ. ಸಮಾಜ, ಸರ್ಕಾರ, ಸಂಸಾರಗಳಲ್ಲಿನ ತಪ್ಪುಗಳ ಮೇಲೆ ಬೆಳಕು ಬಿಟ್ಟು, ಎಲ್ಲೆಲ್ಲಿ ತಿದ್ದುಪಡಿ ಅಗತ್ಯ ಎಂಬುದನ್ನು ತಿಳಿಸುವುದೂ ಮುಖ್ಯ. ಎಡವದಂತೆ ಎಚ್ಚರಗೊಳಿಸುವುದೂ ಇನ್ನೊಂದು ಉದ್ದೇಶ.

ಜಡ್ಡುಗೊಳ್ಳುತ್ತಿರುವ ಜನರ ಸಂವೇದನೆಗಳನ್ನು, ತನ್ನ ಚೇತನದಿಂದ ಚುರುಕುಗೊಳಿಸಿ, ಮಾನವೀಯತೆಯತ್ತ ಮತ್ತು ಪರಿಪಕ್ವತೆಯತ್ತ ಸಾಗಿರೆಂದು ಸಾರುವ ಸಾರ್ಥಕ ಸಾಹಿತ್ಯ ಕೃತಿಗಳೂ ಹೌದು ಕೆಲವು. ಮನೋರೋಗಿಗಳಿರಲಿ, ಇತರ ಖಾಯಿಲೆಗಳಿರುವ ರೋಗಿಗಳಿರಲಿ ಅವರಿಂದ ಕಲಿಯ ಬೇಕಾದ ಪಾಠಗಳೂ ಇವೆ, ಅವರಿಗೆ ತಿಳಿ ಹೇಳಬೇಕಾದ ಅಂಶಗಳೂ ಇವೆ ಎಂಬುದನ್ನು ಸ್ಪಷ್ಟ ಪಡಿಸುವುದೂ ಇವರ ಮನೋ ವೈಜ್ಞಾನಿಕ ಕೃತಿಗಳ ಪ್ರಧಾನ ಹೇಳಿಕೆ.

ನಿಸರ್ಗ ಸೌಂದರ್ಯದ ನಿಗೂಢತೆ ಅಥವಾ ಪ್ರಕೃತಿ ಸೌಂದರ್ಯದ ಹಿಂದಿರುವ ಕೈವಾಡಕ್ಕಿಂತ, ನಿಗೂಢ ಸಾವು ಮತ್ತು ಬದುಕಿನ ಪ್ರಶ್ನೆಗಳೇ ಈ ಸಾಹಿತಿಯನ್ನು ಹೆಚ್ಚು ಕಾಡಿವೆ ಎಂದು ಅವರ ಕೃತಿಗಳು ಹೇಳುತ್ತವೆ.

**ಸಾಹಿತ್ಯ ಸೇವೆಯ ಮುಂದುವರಿಕೆ:**

ತಾವೇ ಸ್ವಂತ ಕೃತಿಗಳನ್ನು ಬರೆಯುವ ಮೂಲಕ ಸಾಹಿತ್ಯ ಸರಸ್ವತಿಯ ಸೇವೆ ಮಾಡಿದುದಲ್ಲದೆ, ಇತರ ಕಿರಿಯ ಬರಹಗಾರರಿಗೆ, ಮುನ್ನುಡಿ ಬರೆದು ಕೊಟ್ಟು, ಅವರ ಮುಂದಿನ ಬರಹಕ್ಕೆ ಪ್ರೋತ್ಸಾಹಿಸಿ ಹಾರೈಸಿದ್ದಾರೆ. ಆಶೀರ್ವದಿಸಿದ್ದಾರೆ. ಸ್ಫೂರ್ತಿಯಾಗಿದ್ದಾರೆ. ಪ್ರೋತ್ಸಾಹದ ನುಡಿ ಬರೆದು ಕನ್ನಡ ಪುಸ್ತಕದ ಬೆಳೆ ಅಭಿವೃದ್ಧಿಗೊಳ್ಳಲು ಕಾರಣರಾಗಿದ್ದಾರೆ. ಕೊರವಂಜಿ ನಿಲ್ಲಿಸಿದ ಮೇಲೂ ಹಲವು ಯುವ ಬರಹಗಾರರಿಗೆ ಬರೆಯಲು ಉತ್ತೇಜನ ಕೊಟ್ಟಿದ್ದಾರೆ.

ಬರೆಯುವ ಗೆಳೆಯರ ಬೆನ್ನು ತಟ್ಟಿದ್ದಾರೆ. ತಮ್ಮ ಸ್ವಂತ ಮಕ್ಕಳೆಲ್ಲರನ್ನೂ ಪ್ರೋತ್ಸಾಹಿಸಿ, ಸಾರಸ್ವತ ಲೋಕಕ್ಕೆ ಕರೆದು ತಂದಿದ್ದಾರೆ.

ಶ್ರೀರಂಗರು ಬಹು ಮೇಧಾವಿ ಲೇಖಕ ಎಂಬ ಹೆಗ್ಗಳಿಕೆಗೆ ಪಾತ್ರರಾದ ನಾಟಕಕಾರರು. ಈ ಮೇಧಾವಿಯೂ, ರಾ.ಶಿಯವರ ಪಾಂಡಿತ್ಯಕ್ಕೆ ಅಚ್ಚರಿ ಪಟ್ಟು, ತಮ್ಮ 'ಗೀತಾ ದರ್ಪಣ' ಕೃತಿಗೆ ಮುನ್ನುಡಿ ಬರೆಯಲು ಕೋರಿ ಬರೆಸಿಕೊಂಡರೆಂದರೆ, ಇದು ರಾ.ಶಿ.ಯವರ ಅಧ್ಯಯನ, ಗ್ರಹಣ ಶಕ್ತಿ ಹಾಗೂ ಬುದ್ಧಿಮತ್ತೆಯ ಪ್ರಖರತೆಗೆ ದರ್ಪಣ.

ಕೊರವಂಜಿಯ ಚಿಕಿತ್ಸಾಲಯದಲ್ಲಿ ಹುಟ್ಟಿದ ಬರಹಗಾರರಲ್ಲಿ, ಶ್ರೀ ಎಂ.ಎಸ್. ರಾಮಸ್ವಾಮಿ (ರಾಮ್ಸಾಮಿ) ಅವರು ಒಬ್ಬರು. ಅವರು ಬರೆದ "ತಾವರೆಕೆರೆ ತೇರು' ಎಂಬ ಹಾಸ್ಯ ಲೇಖನಗಳ ಸಂಕಲನ, ಹೊರ ಬಂದಿದ್ದು 1971ರಲ್ಲಿ. ಇದಕ್ಕೆ ರಾ.ಶಿ.ಯವರು ಮುನ್ನುಡಿಯ ತೋರಣ ಕಟ್ಟಿದ್ದಾರೆ. "ಎಮ್ಮಯ ದೇಶದಲ್ಲಿ ಮಳೆ ಬಿದ್ದಾಗಲೂ ಮಂದಿ ಕೊಡೆ ಬಿಚ್ಚುವುದಿಲ್ಲ. ಅಂತಹವರು ಪುಸ್ತಕ ನೋಡಿ ಪರ್ಸ್ ಬಿಚ್ಚುವುದು ತುಂಬಾ ಅಸಂಭವ. ಹೀಗೆಂದಾಕ್ಷಣ ಹೆದರಬೇಡ. ಎಮ್ಮಯ ದೇಶದಲ್ಲಿ ಎಳೆಗರುಗಳೂ ಇದ್ದೇ ಇರುತ್ತವೆ. ಅವುಗಳಲ್ಲಿ ಹಲವರಾದರೂ ಪ್ರೋತ್ಸಾಹ ನೀಡುತ್ತಾರೆ. ಹಾಗೇನಾದರೂ ಆಗದಿದ್ದರೆ ಗ್ರಂಥಾಲಯಗಳಿದ್ದೇ ಇವೆಯಲ್ಲಾ! ಮುನ್ನುಗ್ಗು. ಇನ್ನು ಮುಂದೆಯೂ ಹವ್ಯಾಸವನ್ನು ಮುಂದುವರೆಸು. ಮನಸ್ಸಿಗೆ ತೃಪ್ತಿಯಾದರೂ ದೊರೆತೀತು ಎಂದು ಮನದಂಗಳದಿಂದ ಹಾರೈಸಬೇಕು, ಹಾರೈಸಿದ್ದೇನೆ" ಎಂದು ದುಡ್ಡು ಕೊಟ್ಟು ಓದುವ ಜನ ನಮ್ಮಲ್ಲಿಲ್ಲ ಎಂಬ ತಮ್ಮ ಅಂತರಾಳದ ನೋವನ್ನೂ, ಕೃತಿಕಾರನಿಗೆ ಶುಭ ಹಾರೈಕೆಯನ್ನೂ ಅಭಿವ್ಯಕ್ತಿಸಿದ್ದಾರೆ ತಮ್ಮ ಮುನ್ನುಡಿಯಲ್ಲಿ. ಇದು ಅವರು ಉದಯೋನ್ಮುಖರಿಗೆ ಬೆಂಬಲಿಸಿರುವ ರೀತಿ.

ರಾ.ಶಿ.ಯವರ ಗೃಹ–ಗರಡಿಯಲ್ಲಿ ಬೆಳೆದ ಮಕ್ಕಳೆಲ್ಲರೂ ಸಾಹಿತಿಗಳೇ. ದೈನಂದಿನ ಜೀವನದ ಆಸೆ–ಅಗತ್ಯಗಳನ್ನು ಪೂರೈಸುತ್ತಿದ್ದವರು ತಾಯಿಯಾದರೆ; ಪುಸ್ತಕ ಓದುವ ಪ್ರೀತಿಗೆ, ಹಾಸ್ಯ ಸ್ವಭಾವಕ್ಕೆ, ಬರಹಕ್ಕೆ, ಭಾಷಣಕ್ಕೆ––ಮಕ್ಕಳಿಗೆಲ್ಲ ಪ್ರೇರಣೆಯಾದವರು, ಸಲಹೆಗಾರರಾದವರು, ಮಾದರಿಯಾದವರು, ತಂದೆ ರಾ.ಶಿ.ಯವರು. ಅವರು ಸದಾ ಓದುತ್ತಿದ್ದುದರಿಂದ ಮಕ್ಕಳೂ ಓದಿನಲ್ಲಿ ಆಸಕ್ತಿ ತಾಳಿದರು. ಚಿಕ್ಕಂದಿನಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳುತ್ತ, ಪ್ರಶ್ನೆಗಳಿಗೆ

ಉತ್ತರಿಸುತ್ತಲೇ ಅವರೊಳಗೆ ಕಥೆ ಹೇಳುವುದರಲ್ಲಿ ಮತ್ತು ಬರೆಯುವುದರಲ್ಲಿ ಸಿಗುವ ಸಮಾಧಾನ– ಸ್ವಾರಸ್ಯಗಳ ಅನುಭವ ನೀಡಿದರು. ಸದಾ ಸಾಹಿತಿಗಳು ಮನೆಗೆ ಬರುತ್ತಿದ್ದುದರಿಂದ, ಸಾಹಿತ್ಯದಲ್ಲಿ, ಸಾಹಿತಿಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ, ಅವರ ಮಕ್ಕಳಿಗೂ ಆಸಕ್ತಿ ಮೂಡಿದ್ದು ಸಹಜ. ಸಾಹಿತಿಗಳೊಂದಿಗಿನ ದಿನನಿತ್ಯದ ಚರ್ಚೆ ವಿಚಾರಗಳು ಮಕ್ಕಳ ವೈಚಾರಿಕ ಗುಣಮಟ್ಟವನ್ನು ಎತ್ತರಿಸಿದವು. ಇವರುಗಳು ಬರೆದ ಲೇಖನಗಳ ಬಗ್ಗೆ ರಾ.ಶಿ.ಯವರ ಸಲಹೆ ಸೂಚನೆಗಳು ಸಿಗುತ್ತಿದ್ದುದೂ ಸತ್ಯ. ಮದಲನೇ ಮಗಳು, ವಿಮಲಾ ಶೇಷಾದ್ರಿಯವರು ಕೆಲವು ಲೇಖನಗಳನ್ನೂ, ತಂದೆಯವರ ಕುರಿತಾದ 'ರಾ.ಶಿ.' ಎಂಬ ಪುಸ್ತಕವನ್ನೂ ಬರೆದಿದ್ದಾರೆ. ಎರಡನೇಯವರು, ಕಮಲಾ ರಾಮಸ್ವಾಮಿ ಹಲವಾರು ನಾಟಕಗಳನ್ನೂ, ವಿವಿಧ ಪ್ರಕಾರದ ಕೃತಿಗಳನ್ನೂ ರಚಿಸಿದ್ದಾರೆ, ಮೂರನೇ ಮಗಳು ಲೀಲಾ ಮಿರ್ಲೆಯವರು, ಹಾಸ್ಯ ಪ್ರಕಾರದಲ್ಲಿ ಕೃತಿಗಳನ್ನು ರಚಿಸುವ ಬೆರಳೆಣಿಕೆಯಷ್ಟು ಮಹಿಳೆಯರಲ್ಲಿ ಒಬ್ಬರು.

ಹಿರಿಯ ಮಗ, ಶ್ರೀ ಶಿವಕುಮಾರ್ ಎಂಜಿನಿಯರಿಂಗ್ ಪದವಿ ಗಳಿಸಿದ ಕೈಗಾರಿಕೋದ್ಯಮಿ. ವಿಜ್ಞಾನ ಲೋಕ ಅವರಿಗೆ ಹೊಸದಲ್ಲ. ಅದರ ಜೊತೆಗೆ ಬರೆಯುವ ಹವ್ಯಾಸ ಹೆಚ್ಚಿಸಿಕೊಳ್ಳಲು, ಪ್ರೇರಕ ಶಕ್ತಿಯಾದವರು ಅವರ ತಂದೆಯೇ. ಕೊರವಂಜಿಯನ್ನು ಕಾಡಿಗೆ ಕಳುಹಿಸಿದ ಕೊರಗು ರಾಶಿಯವರನ್ನು ಕಾಡುತ್ತಲೇ ಇತ್ತು. ಕೊರವಂಜಿಯ ಸಾಹಿತಿಗಳ ಸೇನೆಗೆ ಇನ್ನೂ ಬರೆಯುವ ತುಡಿತ ಉಳಿದಿತ್ತು. ಓದುಗರಿಗೆ ಪುನಃ ಅಂತಹ ಹಾಸ್ಯದ ಲೇಖನಗಳು, ಪುಡಿಗಳು, ಕಿಡಿಗಳು, ಹೊರ ಸಿಡಿದಾವೇ? ಎನ್ನುವ ಕಾತರ. ತಾವೇ ಇನ್ನೊಮ್ಮೆ ಪತ್ರಿಕೆಯನ್ನು ಆರಂಭಿಸಲು ರಾ.ಶಿ.ಯವರಿಗೆ ಉತ್ಸಾಹ, ಸಾಮರ್ಥ್ಯ ಎರಡೂ ಇರಲಿಲ್ಲ. ಜನರ ನಗುವನ್ನು ನೋಡುವ ಆಸೆ ಮಾತ್ರ ಇತ್ತು. ಕನ್ನಡಿಗರ ಆರೋಗ್ಯವನ್ನು ವರ್ಧಿಸುವ ಹಂಬಲವಿತ್ತು. ಸಮಾಜವನ್ನು ಸುಧಾರಿಸುವ ಅಗತ್ಯ ಇನ್ನೂ ಹೆಚ್ಚಿದೆ ಎನಿಸಿತ್ತು. ಅಲ್ಲದೆ ಆ ಪತ್ರಿಕೆಯನ್ನು ಅಪೇಕ್ಷಿಸಿ ಪುನರಾರಂಭಿಸಲು ಕೋರುತ್ತಿದ್ದವರಿಗೆಲ್ಲ ಉತ್ತರಿಸಲು, ಅಂತಹದೊಂದು ಪತ್ರಿಕೆಯನ್ನು ತರಬೇಕಾದ ಅಗತ್ಯವಿದೆ ಎಂದು ರಾ.ಶಿ.ಯವರಿಗೂ ಅನ್ನಿಸಿತ್ತು. ಆಗ ಅವರಿಗೆ ಈ ಕೆಲಸಕ್ಕೆ ಯೋಗ್ಯರೆಂದು ಕಂಡ ವ್ಯಕ್ತಿ, ಅವರ ಹಿರಿಯ ಮಗ ಎಂ. ಶಿವಕುಮಾರ್ ಅವರು. ಅಧ್ಯಯನದಲ್ಲಿ ಆಸಕ್ತಿ ಇದ್ದ ಯುವಕ. ಹಾಸ್ಯ ಪ್ರಜ್ಞೆಯುಳ್ಳವ, ತಮ್ಮ ಮನೆಗೆ ಬರುತ್ತಿದ್ದ ಹಿರಿ–ಕಿರಿಯ ಸಾಹಿತಿಗಳೆಲ್ಲರಿಗೆ ಜೊತೆ ಕೊಟ್ಟವರು, ಎಲ್ಲರ ಪರಿಚಯವಿದ್ದವರು. ಅವರಿಗೇ ಪತ್ರಿಕೆಯನ್ನು ಆರಂಭಿಸಲು

ಉತ್ತೇಜಿಸಿದರು. ತಮ್ಮ ತಂದೆಯ ಸಾಹಿತಿ–ಸೇನಾಬಳಗದ ಹಿರಿಯ, ಅ.ರಾ.ಸೇ.ಯವರನ್ನೂ ಒಳಗೊಂಡಂತೆ ರಾಶಿಯವರೊಂದಿಗೆ ವಿಚಾರ–ಚರ್ಚೆಗಳನ್ನು ನಡೆಸಿದರು ಶಿವಕುಮಾರ್ ಅವರು. "ಕಾಡಿಗೆ ಕಳಿಸಿದ ಕೊರವಂಜಿಯ ಹೆಸರನ್ನೇ ಮತ್ತೆ ಇಡುವುದು ಬೇಡವೆಂದ ರಾ.ಶಿ.ಯವರು, ತಮ್ಮ ಪತ್ರಿಕೆಯ ಪ್ರಥಮ ಸಂಚಿಕೆಯಲ್ಲಿ ಬರೆದಿದ್ದ 'ಅಪರಂಜಿ' ಅಂಕಣವನ್ನು ನೆನಪಿಸಿಕೊಂಡು, ಆ ಹೆಸರನ್ನು ಇಡಲು ಸೂಚಿಸಿದರು. ಅವರ ಸಲಹೆ ಸೂಚನೆಗಳನ್ವಯ 'ಅಪರಂಜಿ' ಮಾಸ ಪತ್ರಿಕೆ 'ತಿಳಿನಗೆಯ ಕಾರಂಜಿ' ಎಂಬ ಉದ್ದೇಶವನ್ನೇ ಇಟ್ಟುಕೊಂಡು, 1983ರ ಅಕ್ಟೋಬರ್ ತಿಂಗಳಿನಲ್ಲಿ ಪ್ರಾರಂಭಗೊಂಡಿತು. ಚಿತ್ರದುರ್ಗದ ಕನ್ನಡ ಸ್ಕೂಲಿನ ಅಧ್ಯಾಪಕರಾಗಿದ್ದ ಆರ್. ಶೇಷಗಿರಿರಾಯರು ಇದರ ಮೊದಲ ಸಂಪಾದಕರು. ಚಿತ್ರದುರ್ಗದಲ್ಲಿ ಬಿಡುಗಡೆಯಾದ ಈ ಪತ್ರಿಕೆ, ಆರಂಭದಲ್ಲಿದ್ದ ಕೆಲವು ಆಡಳಿತಾತ್ಮಕ ಸಮಸ್ಯೆಗಳ ನಿವಾರಣೆಗಾಗಿ, ಎಂಟು ತಿಂಗಳ ನಂತರ ಬೆಂಗಳೂರಿಗೇ ವರ್ಗಾವಣೆಗೊಂಡಿತು. ಶಿವಕುಮಾರ್ ಇದರ ಮುಖ್ಯ ಸಂಪಾದಕರಾದರು. ಆರು ಸದಸ್ಯರ ಸಂಪಾದಕ ಮಂಡಳಿಯೂ ರೂಪುಗೊಂಡಿತು. ಕೊರವಂಜಿಗೆ ಬರೆಯುತ್ತಿದ್ದ ಬರಹಗಾರರಲ್ಲದೇ ಅನೇಕ ಹೊಸ ಹಾಸ್ಯ ಬರಹಗಾರರನ್ನೂ, ವ್ಯಂಗ್ಯ ಚಿತ್ರಕಾರರನ್ನೂ ಈ ಅಪರಂಜಿಯೂ ಹುಟ್ಟಿಸಿದಳು. ಲೀಲಾ ಮಿರ್ಲೆ, ಟಿ.ಎಸ್. ಅಂಬುಜ, ಚಂಚಲಾ ಶ್ರೀಕಂಠಯ್ಯ, ಚಂಚಲಾ ಸುರತ್ಕಲ್, ಇಂದು ರಮೇಶ್, ಜ್ಯೋತ್ಸ್ನಾ ಕಾಮತ್, ಸರೋಜ ಆಚಾರ್ಯ, ಶೈಲಜಾ ಪ್ರಭಾಕರ್, ಶೋಭಾ ಪ್ರಮೋದ್, ವಿಜಯಾ ಸಚ್ಚಿದಾನಂದ್, ನಂದಿನಿ ಕಾಪಡಿ, ಶ್ಯಾಮಲಾ ರವಿಶಂಕರ್, ಕುಮುದಾ ಪುರುಷೋತ್ತಮ್, ಅರುಣಾ ಕಾರಂತ, ಲೀಲಾ ಶೇಖರ್, ಭುವನೇಶ್ವರಿ ಹೆಗಡೆ, ಮುಂತಾಗಿ ಅನೇಕ ಮಹಿಳಾ ಸಾಹಿತಿಗಳ ದೊಡ್ಡ ದಂಡೇ ತಮ್ಮ ಉತ್ತಮ ಲೇಖನಗಳಿಂದ ಅಪರಂಜಿಯ ಆರೋಗ್ಯವನ್ನೂ, ಆಯಸ್ಸನ್ನೂ ಹೆಚ್ಚಿಸಿದ್ದಾರೆ. ".. .. ಈಗ ಕೊರವಂಜಿಯ ಹಳೆಯ ಜೊತೆಗಾರರು 'ಅಪರಂಜಿ'ಯಾಗಿ ನಲಿದಾಡಲು ಮುಂದೆ ಬಂದಿದ್ದಾರೆ. ಅದರಿಂದಾಗಿ ಕೊರವಂಜಿ, 'ಅಪರಂಜಿ' ಚಿರಕಾಲ ನಗುತ್ತ ಬಾಳಲಿ ಎಂದು ಬುಡುಬುಡಿಕೆ ಆಡಿಸುತ್ತಾಳೆ" ಎಂದು ತಮ್ಮ ಮರಣಕ್ಕೆ ಮೂರು ಮಾಸಗಳ ಮುನ್ನ, ಅಪರಂಜಿಯ ಪ್ರಥಮ ಸಂಚಿಕೆಯಲ್ಲಿ ಬರೆದ ರಾ.ಶಿ.ಯವರ ಹಾರೈಕೆ ನಿಜವಾಗಿದೆ. 'ಅಪರಂಜಿ' ಈ ವರೆಗೂ ಮುವ್ವತೆರಡು ಸಂವತ್ಸರಗಳನ್ನು ದಾಟಿ ಇನ್ನೂ ಮುನ್ನಡೆಯುತ್ತಿದ್ದಾಳೆ.

ಅಪರಂಜಿಯ ನಿರ್ವಹಣೆ ಮಾತ್ರವಲ್ಲದೆ, ಶಿವಕುಮಾರ್ ಅವರು 1987ರಲ್ಲಿ ಕನ್ನಡ ವಿಜ್ಞಾನ ಪರಿಷತ್ತಿನ ಮೂಲಕ ಪ್ರಕಟಗೊಂಡ 'ಯಂತ್ರ ಕಥೆ' ಎಂಬ ಕೃತಿಯನ್ನು ಬರೆದುಕೊಟ್ಟರು. ಸೈಕಲ್‌ವಾಲಾ, ಕಂಪ್ಯೂಟರ್ ಕಲೀರಿ, 'ಮಧುಚಂದ್ರ' ಎಂಬ ಹಾಸ್ಯ ಲೇಖನಗಳ ಸಂಕಲನ(1989), 'ಡಾ. ಎಂ. ಶಿವರಾಂ' (1992), 'ಯೋಗಿ ಮತ್ತು ಅಪ್ಸರೆ(1999), ಬ್ರೇಕಿಲ್ಲದ ಬೆಳ್ಳಿಯ ತೇರು(2005), ಮುಂತಾದುವು, ಶಿವಕುಮಾರ್ ಅವರ ರಚನೆಗಳು. ತಂದೆಯವರ ಕರ್ತವ್ಯ ನಿಷ್ಠೆ, ಶ್ರದ್ಧೆಗಳನ್ನು ತಮ್ಮದಾಗಿಸಿಕೊಂಡು ಶಿವಕುಮಾರ್ ಅವರು ಬರೆದ ಈ ಪುಸ್ತಕಗಳಲ್ಲಿ 'ಯಂತ್ರ ಕಥೆ'(ವಿಜ್ಞಾನ) ಮತ್ತು 'ಮಧುಚಂದ್ರ'(ವಿನೋದ ವಿಭಾಗದಲ್ಲಿ) ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಂತಹ ಕೃತಿಗಳು. ಕನ್ನಡ ಸಾಹಿತ್ಯ ಪರಿಷತ್ತು ಎಪ್ಪತ್ತೈದು ಸಂವತ್ಸರಗಳನ್ನು ಪೂರೈಸಿದ ಸಂದರ್ಭದಲ್ಲಿ ಸುವರ್ಣ ಮಹೋತ್ಸವ ಆಚರಣೆಯ ಅಂಗವಾಗಿ ಪರಿಷತ್ತಿನಿಂದ ಪ್ರಕಟಗೊಂಡ ಎಪ್ಪತ್ತೈದು ಪುಸ್ತಕಗಳಲ್ಲಿ ಶಿವಕುಮಾರ್ ಅವರು ತಮ್ಮ ತಂದೆಯ ಬಗ್ಗೆ ಬರೆದ, 'ಡಾ. ಎಂ. ಶಿವರಾಂ' (1992) ಕೃತಿಯೂ ಒಂದು.

ಕನ್ನಡ ಸಾಹಿತ್ಯ ಪರಿಷತ್ತು, ಆರೋಗ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ಹಾಕಿದಾಗ, ರಾ.ಶಿ.ಯವರು, ವೈದ್ಯರಾದ ತಮ್ಮ ಎರಡನೇ ಮಗ ಓಂ ಪ್ರಕಾಶ್ ಅವರನ್ನೂ ತಮ್ಮೊಂದಿಗೆ ಸೇರಿಸಿಕೊಂಡು ಜಂಟಿಯಾಗಿ 'ಅಲರ್ಜಿ' ಎಂಬ ಪುಸ್ತಕ ಬರೆದು ಕೊಟ್ಟು, ವೈದ್ಯಕೀಯ ಸೇವೆ ಸಲ್ಲಿಸುವ ಮಗನನ್ನು ಬರಹದ ಕ್ಷೇತ್ರಕ್ಕೂ ಕಾಲಿಡಲು ದಾರಿ ತೋರಿದ್ದರು. ಕನ್ನಡ ವಿಜ್ಞಾನ ಪರಿಷತ್ತು ಸ್ಥಾಪನೆಯಾಗಿದ್ದು 1976ರಲ್ಲಿ, ಆ ಸಂದರ್ಭದಲ್ಲಿ ಜನಪ್ರಿಯ ವಿಜ್ಞಾನದ ಕೃತಿಗಳನ್ನು ವಿವಿಧ ಲೇಖಕರಿಂದ ಬರೆಯಿಸಿ ಪ್ರಕಟಿಸುವ ಯೋಜನೆ ಹಾಕಿತು. ಆಗ ರಾ.ಶಿ.ಯವರಿಗೆ ಒಂದು ಕೃತಿ ಬರೆದು ಕೊಡುವಂತೆ ಕೋರಿಕೆ ಬಂದಿತು. ಆದರೆ ಆ ವೇಳೆಗಾಗಲೇ ರಾ.ಶಿ.ಯವರು ತಮ್ಮನ್ನು ತಾವು, ಅಧ್ಯಯನಕ್ಕಷ್ಟೆ ಸೀಮಿತಗೊಳಿಸಿಕೊಳ್ಳುವ ಮನಸ್ಸು ಮಾಡಿದ್ದರೋ ಏನೋ. ತಮ್ಮ ಮಗನಿಂದ ಬರೆಯಿಸಬಹುದೆಂದು ಸೂಚಿಸಿ, ಅವರ ಮಗ ಓಂ ಪ್ರಕಾಶ್ ಅವರಿಗೆ, ಕೃತಿ ರಚನೆಯ ಹಿನ್ನೆಲೆ, ಕಾರಣ, ಪರಿಷತ್ತಿನ ಕಾರ್ಯಕ್ರಮ ಇತ್ಯಾದಿಗಳ ಬಗ್ಗೆ, ತಾವೇ ವಿವರಣೆ ಕೊಟ್ಟರು. ಅವರ ಸಲಹೆಯ ಪ್ರಕಾರ ಓಂ ಪ್ರಕಾಶ್ ಅವರು ಬರೆದ, 'ಅಸ್ತಮ' 1982ರಲ್ಲಿ ಪ್ರಕಟಗೊಂಡಿತು.

ಮೂರನೆಯ ಮಗ ರಾಮಸ್ವಾಮಿ ವೃತ್ತಿಯಲ್ಲಿ ಎಂಜಿನಿಯರ್. ಪ್ರವೃತ್ತಿಯಿಂದ ಕವಿ. ಫ್ರೆಂಚ್ ಭಾಷಾಜ್ಞಾನವೂ ಇದೆ. 'ಮೆಲಾಂಜ್" ಎಂಬ ಕವಿತಾ ಪತ್ರಿಕೆಯನ್ನು ಆಗಾಗ ಹೊರ ತರುವ ಹವ್ಯಾಸಿ.

**ಮಾತುಗಾರಿಕೆ:**

ರಾ.ಶಿ.ಯವರು ಒಳ್ಳೆಯ ಮಾತುಗಾರರು. ಅವರ ಭಾಷಣವೆಂದರೆ ಅದೊಂದು, ಬಣ್ಣದ ನಗೆಬುಗ್ಗೆಗಳ ನಡುವಿನ ವಿದ್ವತ್ ವಿಚಾರ ಪ್ರಸ್ತುತಿ. ಅವರ ಮಾತುಗಳನ್ನು ಕೇಳಲು ಎಷ್ಟೋ ದೂರದಿಂದ ಹೋಗುವ ಭಕ್ತರೂ ಕೆಲವರಿದ್ದರು. 'ಓಹ್! ಎಂಥ ಪಾಂಡಿತ್ಯ, ಏನು ಮಾತು, ಎಂಥ ನಗೆ ಚಟಾಕಿ, ಎಲ್ಲೆಲ್ಲೋ ಹೋಗಿದ್ದೇವೆ ಆವರ ಅಂಥ ಮಾತು ಕೇಳಲು. ಈಗ ಹಾಗೆ ಯಾರಿದ್ದಾರೆ?" ಎಂದು ನೆನಪಿಸಿಕೊಳ್ಳುವವರುಂಟು. ಹಾಗೆ ನೆನಪಿಸಿಕೊಂಡವರ ಒಂದೆರಡು ಸಂದರ್ಭಗಳನ್ನು ಇಲ್ಲಿ ಕಾಣಬಹುದು. ಆದರೆ ಅವರ ಸುದೀರ್ಘ ಜೀವನದಲ್ಲಿ ಅವರು ಕೊಟ್ಟ ಉಪನ್ಯಾಸಗಳೆಷ್ಟೋ. ಮಾಡಿದ ಸಂವಾದಗಳೆಷ್ಟೋ. ವೇದಿಕೆಯ ಮೇಲೆ, ಕೆಳಗೆ, ಅಲ್ಲಿ ಇಲ್ಲಿ ಚರ್ಚಿಸಿದ ಸಂದರ್ಭಗಳೆಷ್ಟೋ. ಇಲ್ಲಿರುವುದು ಅವರ ಮಾತಿನ ರೀತಿಯ ಕುರಿತು, ಒಂದು ಕಲ್ಪನೆ ಕೊಡುವ ಕೇವಲ ಒಂದೆರಡೇ ಸಂದರ್ಭಗಳು ಮಾತ್ರ.

ಸು. 1951ರಲ್ಲಿರಬಹುದು. ಹಾಸನದಲ್ಲಿ ರಾಜ್ಯಮಟ್ಟದ ವೈದ್ಯರ ಮಹಾ ಅಧಿವೇಶನ. ಅಧಿವೇಶನದ ನಂತರ, ಹಾಸನದ ಮಿತ್ರ ವೃಂದದ ಆಶ್ರಯದಲ್ಲಿ ಏರ್ಪಾಟಾಗಿದ್ದು, 'ಅಧ್ಯಾತ್ಮ ಮತ್ತು ವಿಜ್ಞಾನ' ಎಂಬ ವಿಷಯದ ಬಗ್ಗೆ ಡಾ. ಶಿವರಾಂ ಅವರ ಭಾಷಣ. ಶಾಲಾ ವಿದ್ಯಾರ್ಥಿಗಳಿಗೆ ಮಾಡುವಂತೆ ಕಪ್ಪು ಹಲಗೆಯನ್ನು ಬಳಸಿ ವಿವರಿಸಿ ಮಾಡಿದ ಪಾಠ–ಭಾಷಣದ ಶೈಲಿ ಮನೋರಂಜಕ. 'ಅಧ್ಯಾತ್ಮ ಮತ್ತ ವಿಜ್ಞಾನ' – ಈ ಎರಡರ ಮೂಲ ಗುರಿ ಮತ್ತು ಅಂತಿಮ ಸಿದ್ಧಾಂತ ಒಂದೇ ಎಂಬ ವಿಚಾರವನ್ನು ಕೇಳುಗರ ಮನಕ್ಕೆ ಮುಟ್ಟಿಸಿದ್ದು, ಮಧ್ಯೆ ಮಧ್ಯೆ ಅವರು ಬಳಸಿದ ನಗೆ ಮಾತುಗಳೇ.*

ಸೆಂಟ್ರಲ್ ಕಾಲೇಜಿನ ಸುವರ್ಣ ಮಹೋತ್ಸವದ ಸಮಾರಂಭ 1955ರಲ್ಲಿ. ವಿಜ್ಞಾನದ ವಿಷಯಗಳ ಮೇಲೆ ವಿಶೇಷ ಉಪನ್ಯಾಸಗಳ ಮಾಲೆಯ ಏರ್ಪಾಡಾಗಿತ್ತು. ಡಾ. ಎಂ ಶಿವರಾಂ ಅವರು ಅಂದಿನ ಸಮಾರಂಭದ

(*ರಾಶಿ ರಾಶಿ ನೆನಪು– ಹಾರ್ನಹಳ್ಳಿ ರಾಮಸ್ವಾಮಿ ಲೇಖನ)

ಅಧ್ಯಕ್ಷರು. ಎಲ್ಲ ಉಪನ್ಯಾಸಕರೂ ಗಹನ ವಿಷಯಗಳನ್ನು ಗಂಭೀರವಾಗಿ, ನೆರೆದ ವಿದ್ಯಾರ್ಥಿಗಳ ಮುಂದೆ ಮಂಡಿಸಿದರು. ಮಂಡನೆಗಳು ಮುಗಿಯುವ ಮುನ್ನವೇ ಚಪ್ಪಾಳೆಗಳು, ತೂಕಡಿಕೆಗಳು, ಆಕಳಿಕೆಗಳು, ಬೇಸರದ ಮುಖ ಲಕ್ಷಣಗಳು, ಅಲ್ಲಲ್ಲಿ ಕಾಣಿಸತೊಡಗಿದವು. ಕೆಲವರು ಎದ್ದೂ ಹೋಗಿ ಅಡ್ಡಾಡಿ ಬಂದರು. ಕೊನೆಯ ಮಾತಿನ ಸರದಿ ರಾ.ಶಿ.ಯವರದು. 'ವಿಜ್ಞಾನ ಮತ್ತು ಸಮಾಜ' ಎಂಬುದು ಅವರ ಮಾತಿಗೆ ಕೊಟ್ಟ ವಿಷಯವಿರಬೇಕು. ಮಾತಿನ ವಿಷಯ ಗಂಭೀರವೇ. ಆದರೂ ಅವರು ಆರಂಭದಲ್ಲೇ ಸಭೆಯಲ್ಲಿ ಸೃಷ್ಟಿಸಿದ ನಗು, ಕ್ಷಣ ಕ್ಷಣಕ್ಕೂ ಬುಗ್ಗೆ ಬುಗ್ಗೆಯಾಗಿ ಇಡೀ ಸಭೆ ತುಂಬ ಹರಡಿ, ನಿದ್ದೆ, ತೂಕಡಿಕೆ, ಆಕಳಿಕೆ, ಬೇಸರಿಕೆಗಳನ್ನೆಲ್ಲ ಎಷ್ಟು ಮೈಲು ದೂರಕ್ಕೆ ಓಡಿಸಿತೋ ಯಾರಿಗೂ ಅದರ ಅರಿವೇ ಇಲ್ಲ. ವಿಜ್ಞಾನದ ಗಂಭೀರ ವಿಚಾರಗಳಲ್ಲಿ ತಮ್ಮ ಹಾಸ್ಯವನ್ನು ಹೊರಳಿಸುತ್ತ, ನಗುತ್ತ ನಗಿಸುತ್ತ ಎಲ್ಲರ ಮಿದುಳಿಗೆ ವಿಷಯ ತುಂಬುತ್ತಿದ್ದ ರಾ.ಶಿ.ಯವರು ಎಷ್ಟು ಹೊತ್ತು ಮಾತನಾಡಿದರೆಂಬುದರ ಪರಿವೆಯೂ ಸಭಿಕರಿಗಾಗಲಿಲ್ಲ. ಇದು ಅವರ ವಾಕ್ ಶೈಲಿ. ನಗು ಮಾತಿನಲ್ಲೇ ಮಿದುಳಿಗೆ ಜ್ಞಾನತುಂಬುತ್ತಿದ್ದ ವಿಧಾನ.*

ವೈದ್ಯಕೀಯ ವಿಷಯದಲ್ಲಿ ಶಿವರಾಮ್ ಅವರಿಗಿದ್ದುದು ಉನ್ನತ ಮಟ್ಟದ ಜ್ಞಾನ. 1964ರ ಸುಮಾರಿನಲ್ಲಿ, ಬೆಂಗಳೂರಿನಲ್ಲಿ ಒಮ್ಮೆ, ವೈದ್ಯಕೀಯ ಮಹಾ ಸಮ್ಮೇಳನ ನಡೆಯಿತು. ಡಾ. ಶಿವರಾಂ ಅವರು, ಅಪಸ್ಮಾರದ (ಎಪಿಲೆಪ್ಸಿ) ಬಗ್ಗೆ ಒಂದು ಘಂಟೆಯ ಉಪನ್ಯಾಸ ನೀಡಿದರು. ಆ ಉಪನ್ಯಾಸ, ವಿಷಯವನ್ನು ಮಂಡಿಸಿದ ವೈಖರಿ, ಹೊಸ ಹೊಸ ವಿಚಾರಗಳು, ಆಲೋಚನೆಗಳು, ಅಬ್ಬ ಎನಿಸಿದ ಕೇಳುಗರು ದಂಗು. ಮುಂಬಯಿಯಿಂದ ಬಂದಿದ್ದ ಡಾ. ಮೋನ್‌ಕರ್ ಎಂಬುವವರು ತಮ್ಮ ಕನ್ನಡಿಗ ಸ್ನೇಹಿತ ಡಾ. ದೇಶಪಾಂಡೆಯವರೊಡನೆ, "ಅಬ್ಬಬ್ಬ ನಿಮ್ಮ ಕರ್ನಾಟಕದಲ್ಲಿ ಅದೆಂತೆಂತಹ ಮೆಡಿಕಲ್ ಮೇಧಾವಿಗಳಿದ್ದಾರಪ್ಪ. ವಿ ಆಲ್ ವರ್ ರಿಯಲಿ ಸ್ಟನ್ಡ್. ವಾಟ್ ಎನ್ ಅಮೇಸಿಂಗ್ ಲೆಕ್ಚರ್" ಎಂದು ಮೆಚ್ಚುಗೆ ಸೂಚಿಸಿ ತಮ್ಮ ತಬ್ಬಿಬ್ಬು ಸ್ಥಿತಿಯನ್ನು ಹಗುರುಗೊಳಿಸಿಕೊಂಡಿದ್ದರು.

"ಕರ್ನಾಟಕದಲ್ಲಿ ಹೀಗೆ ಎಲ್ಲರೂ ಮೇಧಾವಿಗಳೇ ಆಗಿರುತ್ತಾರೆಂದು ತಿಳಿಯಬೇಡಿ. ಓನ್ಲಿ ಡಾ. ಎಂ. ಶಿವರಾಮ ಈಸ್ ಹೈಲೀ ಜೀನಿಯಸ್. ದಟ್ಸ್

(*ರಾಶಿ ರಾಶಿ ನೆನಪು–'ರಾಶಿ ನೆನಪು' ಎಂಬ ಸೂ. ಸುಬ್ರಹ್ಮಣ್ಯ ಅವರ ಲೇಖನ)

ಆಲ್" ಎಂದು ದೇಶಪಾಂಡೆಯವರು ಸ್ಪಷ್ಟ ಪಡಿಸಿದ್ದನ್ನು ಈಗಲೂ ಆ ಉಪನ್ಯಾಸವನ್ನು ಮೆಲುಕಿ 'ವಾಹ್' ಎಂದು ಹುಬ್ಬೇರಿಸುತ್ತಾರೆ. ಕರ್ನಾಟಕದಲ್ಲಿರುವ ವೈದ್ಯರೆಲ್ಲ ಇವರ ಹಾಗೆ ಮೇಧಾವಿಗಳೇ ಎಂಬ ಭಾವನೆ ಬರುವಂತೆ, ಕರ್ನಟಕದ ವೈದ್ಯ ಜಗತ್ತಿನ ಬುದ್ಧಿ ಮಟ್ಟವನ್ನು ಮೇಲೇರಿಸುವಂತೆ ಮಾಡಿದ್ದು ರಾ.ಶಿ.ಯವರ ಅಂದಿನ ಆ ಅತ್ಯುತ್ತಮ ಉಪನ್ಯಾಸ.

ರಾ.ಶಿ. ಸಾಮಾನ್ಯವಾಗಿ ಮಾತಿಗೆ ನಿಲ್ಲುವಾತ ಅಲ್ಲ. ಅವರದು ಭಾಷಣ ಎನ್ನುವದೇ ತಪ್ಪೇನೋ. ಸಭಾಸದರೊಂದಿಗೆ ಕೆಲವು ನಿಮಿಷಗಳ ಆತ್ಮೀಯ ವಾಕ್ಬಂಧ. ಮಾತಿನಲ್ಲಿ ದ್ರಾವಿಡ ಪ್ರಾಣಾಯಾಮ ಇಲ್ಲ. ಅಲಂಕಾರ, ಭಾಷಾ ಪ್ರೌಢಿಮೆಯ ಆಡಂಬರವಿಲ್ಲ, ಎಲ್ಲ ಬಿಚ್ಚು ಮಾತು. ಚುಚ್ಚು ಮಾತು. ಉದ್ದಕ್ಕೂ ನಗೆಯ ಹೊಳೆ. ಅದರ ಬೆನ್ನಿಗೇ ವಿಚಾರದ ಸೆಲೆ" ಎಂಬುದು ರಾಶಿಯವರ ಭಾಷಣದ ಕುರಿತು, ಅ.ರಾ. ಮಿತ್ರ ಅವರ ಅಭಿಪ್ರಾಯ.

**ಋಣ ಸಂದಾಯ** : " ಎಲ್ಲಿಹುದು ಋಣ ಭಯವು ಮನುಜಗೆ/ ಅಲ್ಲಿಹುದು ದೈವಾಂಶ ಮತ್ತೆಲ್ಲಿಹುದು ಸನ್ಮಾರ್ಗ ಬಳಿಕಲ್ಲಿಹುದು ಬಾಹ್ಮಣ್ಯ"—ಎಂದು ಕುಮಾರ ವ್ಯಾಸ ಭಾರತದ 'ವಿದುರ ನೀತಿ'ಯಲ್ಲಿ, ಋಣ ಹಾಗೂ ಸನ್ಮಾರ್ಗದ ಕುರಿತಾಗಿಯೇ ಹೇಳಲಾದ ಒಂದು ನೀತಿ ಷಟ್ಪದಿ. ಇದರನ್ವಯ ಋಣದ ಭಯವಿದ್ದ ಮನುಷ್ಯನಲ್ಲಿ ದೈವಾಂಶವಿರುತ್ತದೆ, ಸನ್ಮಾರ್ಗವಿದ್ದಲ್ಲಿ ಬ್ರಾಹ್ಮಣ್ಯವಿರುತ್ತದೆ ಎಂಬುದು ಸತ್ಯವಾದ ಮಾತು. ಇಂಥ ಋಣಭಯವನ್ನು ಹೊಂದಿದ್ದ ದೈವಾಂಶ ಸಂಭೂತರು ಹಾಗೂ ತಮ್ಮ ಸನ್ಮಾರ್ಗದಿಂದಾಗಿಯೂ ಬ್ರಾಹ್ಮಣ್ಯ ಗಳಿಸಿದವರು, ಡಾ. ಎಂ. ಶಿವರಾಂ ಅವರು.

ಬಾಳಿನ ಉತ್ತುಂಗದಲ್ಲಿರುವಾಗಲೇ, ತಾವು ಯಾವುದೇ ಋಣವನ್ನು ಉಳಿಸಿಕೊಳ್ಳಬಾರದೆಂಬ ಪ್ರಜ್ಞೆ ಅವರಲ್ಲಿ ತುಂಬ ಗಾಢವಾಗಿತ್ತು. ಎಷ್ಟು ಗಾಢ ಎಂಬುದು ಅವರು ಕೊರವಂಜಿಯನ್ನು ಕಾಡಿಗೆ ಕಳಿಸುವಾಗ; ''ಪಂಚ್‌ನಿಂದ ಅನುಭವಿಸಿದ ಸುಖ–ಸಂತೋಷಗಳನ್ನು ಒದಗಿಸಿಕೊಟ್ಟ ದೈವಕ್ಕೆ ತಾನು ಋಣಿ ಎನಿಸಿ, ಅಲ್ಲಿ ಕಲಿತಿದ್ದನ್ನು ಇಲ್ಲಿ ನಮ್ಮವರಿಗೆ ಬಡಿಸುವುದರಿಂದ ಈ ಸಾಂಸ್ಕೃತಿಕ ಋಣವನ್ನು ತೀರಿಸಲು ಸಾಧ್ಯ, ಎಂದು ಕೊರವಂಜಿಯನ್ನು ನಡೆಸಿ ಸ್ವಲ್ಪ ಮಟ್ಟಿಗೆ ಋಣಮುಕ್ತನಾದೆ", ಎಂದು 'ಋಣಮುಕ್ತ' ಶೀರ್ಷಿಕೆ ಅಡಿಯಲ್ಲಿ ಹೇಳಿರುವ ಮಾತಿನಲ್ಲಿ ಮಾತ್ರವಲ್ಲ, ಜೀವನದ ಆರಂಭದಿಂದಲೇ ಈ ಬಗ್ಗೆ ಅವರು ತಮ್ಮ

ಮಕ್ಕಳ ಮುಂದೆ ಹೇಳುತ್ತಿದ್ದ ಮಾತುಗಳಲ್ಲಿ ಮತ್ತು ನಡೆದುಕೊಂಡ ರೀತಿಯಲ್ಲಿಯೂ ಸುಸ್ಪಷ್ಟ.

ತಾಯಿಯವರು ತೋರಿದ ಒಲುಮೆಯ ಸುಖವನ್ನು ಪರಿಹರಿಸುವ ಸಲುವಾಗಿ, ಆ ತಾಯಿ ಇವರ ಮೇಲಿಟ್ಟ ನಂಬಿಕೆಯ ಋಣ ತೀರಿಸಲು ಇವರು ತಮ್ಮ, ತಮ್ಮಂದಿರು ಮತ್ತು ತಂಗಿಯರಿಗೆಲ್ಲ ಓದಿಸಿ, ವಿದ್ಯೆಯ ಆಭರಣ ತೊಡಿಸಿ, ಮದುವೆಗಳನ್ನೂ ಮಾಡಿಸಿ, ಎಲ್ಲರೂ ಸಮಾಧಾನಕರ ಜೀವನಗಳನ್ನು ನಡೆಸಲು ಅನುವು ಮಾಡಿಕೊಟ್ಟರು. ಅನೇಕ ಪುಸ್ತಕಗಳನ್ನು ಓದಿ, ಜ್ಞಾನಾರ್ಜನೆ ಮತ್ತು ಆನಂದವನ್ನು ಪಡೆದ ಮೇಲೆ, ಆ ಗ್ರಂಥ ಋಣವನ್ನು ಮತ್ತು ಹಾಸ್ಯ ಪ್ರವೃತ್ತಿಯ ಋಣವನ್ನು ಕೊರವಂಜಿಯ ಮೂಲಕ ಮರುಪಾವತಿ ಮಾಡಿದರು. ಬಾಳಿಗೆ ಒಂದು ಉತ್ತಮ ಮಾರ್ಗ ಮಾಡಿ ಕೊಟ್ಟ ವೈದ್ಯವಿದ್ಯೆಯ ಋಣ ತೀರಿಸಲು ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜಿನ ಸ್ಥಾಪನೆ ಮಾಡಿಸಿ, ಸರ್ಕಾರಕ್ಕೆ ವಹಿಸಿಕೊಟ್ಟರು. 'ಕೊರವಂಜಿ' ಪತ್ರಿಕೆಯನ್ನು ನಿಲ್ಲಿಸಿದ ಮೇಲೆ ಕೊರವಂಜಿ ಅಕೌಂಟ್‌ನಲ್ಲಿದ್ದ ಆರುಸಾವಿರ ರುಪಾಯಿಗಳನ್ನು ತಮಗಾಗಿ ಇಟ್ಟುಕೊಳ್ಳದೆ, ಕನ್ನಡ ಸಾಹಿತ್ಯ ಪರಿಷತ್ತಿಗೆ, 1976ರಲ್ಲಿ, ದತ್ತಿನಿಧಿಯಾಗಿ ನೀಡಿ ಋಣ ಕಳೆದುಕೊಂಡರು. ಈ ದತ್ತಿನಿಧಿಯೂ ತಮ್ಮದೊಂದೇ ಹೆಸರಲ್ಲಿ ಕೊಡಮಾಡದೇ, 'ಡಾ. ಎಂ. ಶಿವರಾಂ ಅವರ ಕೊರವಂಜಿ ಬಳಗದ ದತ್ತಿನಿಧಿ" ಎಂದು ಬಳಗವನ್ನೂ ಹೆಸರಿಸಿರುವುದು ಅವರ ಮನಸ್ಸಿನ ಔನ್ನತ್ಯದ ಸಂಕೇತ. ಇದು ಹೆಸರಿಡುವ ವಿಷಯದಲ್ಲೂ ಅವರು ಋಣ ಪರಿಹರಿಸಿಕೊಂಡಿರುವ ಪರಿ. ಈ ಭೂಲೋಕದಲ್ಲಿ ಋಣಮುಕ್ತನಾಗದೇ ಅಸು ನೀಗಬಾರದು, ಎಂಬುದು ಅವರ ಬದುಕಿನ ಪರಮ ಗುರಿಗಳಲ್ಲಿ ಒಂದು.

"ನಾನು ಬರುವಾಗ ಏನೂ ತಂದಿರಲಿಲ್ಲ. ನನ್ನ ಯೋಗ್ಯತೆಗೆ ಮೀರಿ ಸಂಪಾದಿಸಿದ್ದೇನೆ. ನಮ್ಮ ರೋಗಿಗಳಿಂದ ನಾವು ಪಡೆದುಕೊಂಡಿದ್ದೇ ಹೆಚ್ಚು. ಅದಕ್ಕೆ ಬದಲಾಗಿ ನಾನು ಅವರಿಗೆ ಕಹಿ ಔಷಧಿಯನ್ನು ಮಾತ್ರ ಕೊಟ್ಟಿದ್ದೇನೆ. ನಮ್ಮ ರೋಗಿಗಳು ನಮ್ಮ ಮೇಲೆ ಇಟ್ಟಿರುವ ವಿಶ್ವಾಸದ ಋಣ ತೀರಿಸಲು ನಮಗೆ ಇನ್ನೊಂದು ಜನ್ಮವೇ ಬೇಕಾಗುತ್ತದೆ" ಎಂದು ತಮ್ಮ ಡಿಸ್ಪೆನ್ಸರಿಯಲ್ಲಿ ಜೊತೆಯಾಗಿ ಕೆಲಸ ಮಾಡುತ್ತಿದ್ದ ಡಾ. ಕೃಷ್ಣಮೂರ್ತಿಯವರೊಂದಿಗೆ, ಅವರು ಆಗಾಗ ಹೇಳುತ್ತಿದ್ದ ಮಾತು. ಜನರಿಗಾಗಿ, ಸಮಾಜಕ್ಕಾಗಿ, ಇಷ್ಟೆಲ್ಲ ಸೇವೆ ಮಾಡಿದ ಮೇಲೂ, ತಮ್ಮಿಂದ ಇನ್ನೂ ಸಂಪೂರ್ಣ ಋಣ ಸಂದಾಯವಾಗಿಲ್ಲ ಎಂಬುದೇ ಅವರಲ್ಲಿದ್ದ ಭಾವನೆ.

ಪ್ರತಿ ತಿಂಗಳ ಒಂದನೇ ತಾರೀಖಿನಂದು ಕೊರವಂಜಿಯನ್ನು ತಮ್ಮೆಲ್ಲ ಚಂದಾದಾರರ ಮನೆಯಂಗಳಕ್ಕೆ ಮುಟ್ಟಿಸುವ ಹಾಗೆಯೇ, ಅದಕ್ಕೆ ಬರೆದವರೆಲ್ಲರಿಗೆ ಸಂಭಾವನೆಗಳನ್ನೂ ಅಷ್ಟೇ ಕರಾರುವಾಕ್ಕಾಗಿ ಅವರವರಿಗೆ ತಲುಪಿಸುತ್ತಿದ್ದುದೂ ಖಚಿತ. ಹೊಸಬರಿರಲಿ, ಹಳಬರಿರಲಿ ಬರೆದವರಿಗೆ ಕೊಡುವ ಸಂಭಾವನೆಯನ್ನಾಗಲೀ, ನಿಗದಿಸಿದ ಮೊತ್ತವನ್ನಾಗಲೀ ಕಡಿಮೆ ಮಾಡಿದವರಲ್ಲ. ಕಳಿಸದೇ ಉಳಿಸಿಕೊಂಡವರೂ ಅಲ್ಲ. ಎಲ್ಲದರಲ್ಲೂ ಋಣದ ಭಯ.

"ಬರವಣಿಗೆ ಸಾಹಿತಿಯಿಂದ ಸಮಾಜಕ್ಕೆ ಸಲ್ಲಬೇಕಾದ ಸಾಂಸ್ಕೃತಿಕ ಋಣ. ಕನ್ನಡ ಸಾಹಿತ್ಯದ ಬಗ್ಗೆ ನನಗೆ ಹೀಗನಿಸುತ್ತದೆ. ಈ ಸಾಂಸ್ಕೃತಿಕ ಋಣವನ್ನು, ಎಂಜಿನಿಯರುಗಳು, ವೈದ್ಯರು, ವ್ಯಾಪಾರಿಗಳು, ಎಲ್ಲರೂ ತೀರಿಸಬೇಕು. "Something is wrong with our kannada literature. It does not drag men from different walks of life. As a result there is no deep inflow of thought"*ಎಂಬ ಅವರ ಆಶಯದ ಮಾತುಗಳನ್ವಯ; ಉನ್ನತ ವಿದ್ಯೆ ಇರುವವರು, ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಜನರು, ಸಾಹಿತ್ಯದ ಮೂಲಕ ಋಣ ತೀರಿಸುವ ಆಸಕ್ತಿ ತೋರಿದರೆ, ಕನ್ನಡ ಸಾಹಿತ್ಯದಲ್ಲಿರುವ ಟೊಳ್ಳುತನ ಹೋಗಿ, ಹೊಸ ಹೊಸ ಅನುಭವಗಳ ಆಳವಾದ ಆಲೋಚನೆಗಳು ಹೊರ ಹರಿಯಬಹುದು.

ಋಣ ಸಂದಾಯ ಮಾಡುವ ವಿಚಾರವು ಅವರ ಕೃತಿಗಳಲ್ಲೂ ಕಾಣಬಹುದು. "ಸಾಕ್ಷಿ ಸಂಕಲಿಕೆ' ವಚನಗಳ ಸಂಗ್ರಹದಲ್ಲಿ 'ಋಣ ಸಂದನೆ' ಎಂಬ ಕವನದಲ್ಲಿ; ಗೆಲುವು ಸಂತಸದಿಂದ ಸುಂದರವನರಸುತಿಹ// ಸೋಲಿನಲು ಹಾಡುತಿಹ ಕವಿಗಳಿಗೆ ನಮಿಸಿ// ಒಲವು ಮಾರ್ದನಿಯಿದನು ಕೂಡಿಸುವೆ// ಅವರ ಋಣವನು ಸ್ವಲ್ಪ ತೀರಿಸುವೆ//.. .. ಎಂದು ತಮಗೆ ಸೋಲಿನಲ್ಲೂ ಸಮಾಧಾನವಾಗಿರುವುದನ್ನು ಕಲಿಸಿದ ಕವಿಗಳಿಗೆ ನಮಸ್ಕರಿಸಿ, ಅದೇ ಒಲವನ್ನು ಹಿಂತಿರುಗಿಸಿ ಋಣ ತೀರಿಸುವುದಾಗಿ ಹೇಳಿದರೆ; "ಕಾಲೆಡವಿ ಕೈ ತರಿದು ಒಡಲೆಲ್ಲ ಸುಟ್ಟರೂ/ ಬಲದ ಮನ ಮಥಿಸುತಿಹ ಹಿರಿಯರಿಗೆ ನಮಿಸಿ// ಶಕುತಿ ನುಡಿಯಿದನು ಅರ್ಪಿಸುವೆ// ವಿಜ್ಞಾನದಾ ಋಣವ ಸ್ವಲ್ಪ ತೀರಿಸುವೆ//".. ಎಂದು ತಮಗೆ ಎಂಥ ಕಠಿಣ ಪರಿಸ್ಥಿತಿಯಲ್ಲೂ ಮನಸ್ಸಿನ ಬಲ ಕಳೆದುಕೊಳ್ಳದಂತೆ,

(*ಅ.ರಾ. ಮಿತ್ರ ಲೇಖನ ರಾಶಿ ರಾಶಿ ನೆನಪು ಪುಟ 22)

ಉದಾಹರಣೆಯಾಗಿ ಪಾಠ ಕಲಿಸಿದ ಹಿರಿಯರಿಗೆ ನಮಸ್ಕರಿಸಿ ತಮ್ಮ ನುಡಿಶಕ್ತಿಯಿಂದ ವಿಜ್ಞಾನದ ಋಣವನ್ನು ತೀರಿಸುತ್ತಿರುವುದಾಗಿ ಸಮಾಧಾನಗೊಳ್ಳುತ್ತಾರೆ.

'ಹರಿದ ಉಯಿಲು' ಕಾದಂಬರಿಯಲ್ಲಿ ಪ್ರಧಾನ ಪಾತ್ರವಾದ ವಕೀಲ ನರಸಪ್ಪ, ತನ್ನ ಇಳಿವಯಸ್ಸಿನಲ್ಲಿ ಸಂಜೆಯ ಹೊತ್ತು ಗಾಳಿ ವಿಹಾರ, ವ್ಯಾಯಾಮ ಎಂಬ ಕಾರಣ ಹೇಳಿಕೊಂಡು ಮನೆಯಿಂದ ಹೊರ ಬರುತ್ತಿರುತ್ತಾರಾದರೂ, ಅವರ ಮನದಲ್ಲಿರುವ ನಿಜವಾದ ಉದ್ದೇಶವೆಂದರೆ, ಮನೆಯನ್ನು ಮರೆಯುವ ಅಭ್ಯಾಸವನ್ನು ಮಾಡಿಕೊಳ್ಳುವುದಾಗಿರುತ್ತದೆ. ಆ ಸಂದರ್ಭದಲ್ಲಿ, "ಈ ಲೋಕದ ಋಣವನ್ನು ತೀರಿಸಿಯಾಯಿತು. ನನಗೆ ಸಾಧ್ಯವಾದಷ್ಟು ಮಟ್ಟು, ನನ್ನನ್ನು ಈ ತನಕ ನಡೆಸಿದವನ ಮರ್ಜಿಯಂತೆ" ಎಂದು ಋಣ ಮುಕ್ತನಾದ ಭಾವ, ನರಸಪ್ಪನ ಈ ಹೇಳಿಕೆಯಲ್ಲಿ ಬರುತ್ತದೆ. ಮುಂಬಯಿಯಲ್ಲಿ ಮಾಡಿದ ಕೆಲಸಕ್ಕೆ ಬಂದ ಬಾಕಿ ಹಣವನ್ನು ರೋಡಾಳ ಹೆಸರಲ್ಲಿ ಆಸ್ಪತ್ರೆಯ ಯಾವುದಾದರೊಂದು ಅಗತ್ಯ ಉಪಕರಣಕ್ಕೆ ಉಪಯೋಗಿಸಿಕೊಳ್ಳಲೆಂದು ದಾನ ಮಾಡಿ ಋಣಮುಕ್ತರಾಗುತ್ತಾರೆ ಲಾಯರ್ ನರಸಪ್ಪ.

'ಜೇಬುಗಳ್ಳ ಜಿಮ್ಮಿ' ಸಂಕಲನದ 'ರಸ್ತೇಲಿ ವರ್ಣ ಚಿತ್ರ' ಎಂಬ ಲೇಖನದಲ್ಲಿ, ಕಲಾಪೂರ್ಣವಾಗಿ ಆಂಜನೇಯನ ಚಿತ್ರ ಬರೆದ ಹುಚ್ಚನಂತೆ ವರ್ತಿಸಿದ ವ್ಯಕ್ತಿಯ ಬಗ್ಗೆ ಆಲೋಚಿಸಿ ಹೇಳಿಕೊಳ್ಳುವ "ನಾಳೆಯ ದಿನ ತಿರುಗಿ ಬಂದರೆ, ಈ ಹುಚ್ಚನನ್ನು ಮಾತಾಡಿಸಿ, ಅವನ ಪುರೋಭಿವೃದ್ಧಿಗೆ ಏನಾದರೂ ಸಹಾಯವನ್ನು ಮಾಡಬೇಕು. ಎಂದು ನಿರ್ಧರಿಸಿದೆ. ಶಾರದೆಯ ಋಣವನ್ನು ಹೀಗಾದರೂ ತೀರಿಸುವ ಎಂದು ಅನ್ನಿಸಿತು" ಎಂಬ ವಾಕ್ಯದಲ್ಲಿ ರಾ.ಶಿ.ಯವರಿಗಿದ್ದ ಋಣ ಸಂದಾಯದ ಗುಣವನ್ನೂ, ಹುಚ್ಚರಂತಹವರ ಬಗ್ಗೆಯೂ ಅನುಕಂಪವಿರುವುದನ್ನೂ, ಕಾಣಬಹುದು.

'ಆನಂದ ಆ್ಯನ್ ಎಕ್ಸ್‌ಪೀರಿಯನ್ಸ್' ಪುಸ್ತಕದಲ್ಲಿ ಬರೆದ ವಿಷಯದಲ್ಲಿ ಕುಂದುಕೊರತೆಗಳಿದ್ದರೂ ಇರಬಹುದು  ಎನ್ನುವ ರಾ.ಶಿ.ಯವರು, "ಆದರೆ ಅವನ್ನೆಲ್ಲಾ ಕೂಲಂಕುಷವಾಗಿ ಪರಿಶೀಲಿಸಿ ಬರೆಯಲು ನನಗೆ ಸಮಯ ಮೀರುತ್ತಿದೆ. ಕಾಲನ ಕರೆಯನ್ನು ಇದಿರು ನೋಡುತ್ತಿರುವ ನಾನು, ನನ್ನ ಅನಿಸಿಕೆಗಳನ್ನು ಈ ರೀತಿ ಘನೀಕರಿಸದೇ ಹೋದರೆ, ನಮ್ಮ ಸನಾತನ ಋಷಿಗಳಿಂದ ಕಲಿತ ಜ್ಞಾನವನ್ನು ಪುನರ್ದಾನ ಮಾಡದೇ ಆ ಋಷಿಗಳ ಋಣಿಯಾಗಿಯೇ ಉಳಿಯಬಾರದೆಂಬ ಕಾರಣದಿಂದ ಈ ಪುಸ್ತಕಗಳನ್ನು ಈ

ಹಂತದಲ್ಲೇ ಪ್ರಕಟಿಸುತ್ತಿದ್ದೇನೆ" ಎಂದು ಋಷಿಗಳ ಋಣ ತೀರಿಸುವ ಮಾತಾಡಿದ್ದಾರೆ.

**ಸಾರ್ವಜನಿಕ ಸೇವೆ :**

ಡಾ.ಎಂ.ಶಿವರಾಂ ಅವರು ವೈದ್ಯ ವೃತ್ತಿಯೊಂದಿಗೆ, ಸಾಹಿತ್ಯ ಸೇವೆ ಮಾಡಿದ್ದಲ್ಲದೇ ಸಾರ್ವಜನಿಕ ಸೇವೆಯನ್ನೂ ಮಾಡಿರುವುದು ಉಲ್ಲೇಖನೀಯ. ಇವರು ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪೆನಿಯ ನಿರ್ದೇಶಕರಾಗಿದ್ದರು. ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ' ಎಂಬ ಉದ್ಯಮ ಸಂಸ್ಥೆಯೊಂದರ ನಿರ್ವಾಹಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದು ಹಲವಾರು ವರ್ಷಗಳ ಅವಧಿಗೆ. ಭಾರತೀಯ ವೈದ್ಯಕೀಯ ಸಂಘ (Indian Medical Association)ದ ರಾಜ್ಯ ಶಾಖೆಯ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಬೆಂಗಳೂರಿನ ಕ್ಯಾನ್ಸರ್ ಸೊಸೈಟಿಯ ಸ್ಥಾಪನೆಗೂ ಎಂ.ಶಿವರಾಂ ಅವರು ಕಾರಣಕರ್ತರು. Indian Oxygen and Acetylene Companyಮಾತ್ರವಲ್ಲದೆ ಇನ್ನೂ ಕೆಲವಾರು ಕಂಪೆನಿಗಳಲ್ಲಿ ಸಲಹೆಗಾರ ವೈದ್ಯರಾಗಿದ್ದರು. ವಾರಕ್ಕೊಮ್ಮೆ ಈ ಕಂಪೆನಿಗಳಿಗೆ ಭೇಟಿ ಕೊಟ್ಟು, ಅಲ್ಲಿಯ ಶ್ರಮಿಕರ, ಆರೋಗ್ಯ ಸ್ಥಿತಿಯನ್ನು ಪರೀಕ್ಷಿಸುವುದು ಇವರ ಕೆಲಸ. ಒಂದೊಂದು ದಿನ ಒಂದೊಂದು ಕಂಪೆನಿಯಂತೆ ಕಾರ್ಮಿಕರೆಲ್ಲರ ಆರೋಗ್ಯ ತಪಾಸಣೆ. Occupational Therapy ಬಗೆಗಿನ ಆಸಕ್ತಿ ಅವರನ್ನು ಆ ಸಂಬಂಧದ ಸಂಸ್ಥೆಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಕೆಲವು ವರ್ಷಗಳು ಈ ಸಂಬಂಧ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಸೆಂಟ್ರಲ್ ಕಾಲೇಜ್ ಹಾಸ್ಟೆಲ್‌ನ ಡಾಕ್ಟರಾಗಿ, ನಿಲಯಾರ್ಥಿಗಳ ಆರೋಗ್ಯ ತಪಾಸಣೆ ಮಾಡುತ್ತಿದ್ದರು.

ಪ್ರತಿ ಗುರುವಾರ ಸೇಂಟ್ ಮಾರ್ತಾಸ್ ಹಾಸ್ಪಿಟಲ್‌ನಲ್ಲಿ ದಾಖಲಾದ ಬಡರೋಗಿಗಳ ಆಪರೇಷನ್ ಮಾಡುವುದೂ ಇವರು ಒಪ್ಪಿಕೊಂಡ ಕರ್ತವ್ಯಗಳಲ್ಲಿ ಒಂದು. ಕಿವಿ, ಮೂಗು ಮತ್ತು ಗಂಟಲು ಆಪರೇಷನ್‌ಗಳು ಇವರ ಕೈಗುಣದಿಂದ ಆಗುತ್ತಿದ್ದುದು ಪ್ರತಿ ಗುರುವಾರಗಳಂದು. ಈ ಸರ್ಜರಿಗೆ ಅವರು ಹಣ ಪಡೆಯುತ್ತಿರಲಿಲ್ಲ. ಆದರೂ ಈ ಹೃತ್ಪೂರ್ವಕವಾದ ಅವರ ಉಚಿತ ಸೇವೆ ಸಣ್ಣದೂ ಆಗಿರಲಿಲ್ಲ. ಸಣ್ಣ ಅವಧಿಗೂ ಅಲ್ಲ. 1940ರಿಂದ 1960ರ ವರೆಗೆ ಇಪ್ಪತ್ತು ವರ್ಷಗಳ ದೀರ್ಘ ಕಾಲವೆಂದರೆ ನಂಬಲೇ ಬೇಕು. ಸೇಂಟ್ ಮಾರ್ತಾಸ್ ಹಾಸ್ಪಿಟಲ್‌ನಲ್ಲಿ ವೈದ್ಯರುಗಳು ಹುಶಾರಿಲ್ಲದಿದ್ದರೆ ಚಿಕಿತ್ಸೆ

ಪಡೆಯಲು ಪ್ರತ್ಯೇಕ ಕೊಠಡಿ ಇರದಿದ್ದುದನ್ನು ಗಮನಿಸಿದ ಶಿವರಾಂ ಅವರು, ಪ್ರತ್ಯೇಕ ಒಂದು ವಾರ್ಡ್‌ನ ನಿರ್ಮಾಣಕ್ಕೆ ಸಲಹೆ ಸಹಕಾರಗಳನ್ನು ನೀಡಿದ್ದೂ ಅವರು ಸಲ್ಲಿಸಿದ ವಿವಿಧ ಸೇವೆಗಳಲ್ಲಿ ಒಂದು.

ಈ ರೀತಿ ವಿಭಿನ್ನ ಸಂಸ್ಥೆಗಳಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿ ಸದಾ ಸೇವಾ ನಿರತರಾಗಿದ್ದುದು ಮಾತ್ರವಲ್ಲ, ಖಾಸಗಿಯಾಗಿಯೂ ಸಾರ್ವಜನಿಕರಿಗೆ ಬಡವರಿಗೆ ಸಂಕಷ್ಟದಲ್ಲಿದ್ದವರಿಗೆ ಅವರು ನೀಡಿದ ನೆರವು ಗಣನೀಯವಾದುದು. ಅನನ್ಯವಾದುದು.

"ಸಖ್ಯಕೆ ಸಹನೆಗೆ ಕರುಣೆಗೆ ಒಲವಿಗೆ/ ಗಡಿನುಡಿ ಅಡ್ಡಿಯ ತಂದಾವೇ?" ಎಂಬ ವೀ.ಸೀ.ಯವರ ಸಾಲುಗಳನ್ನು ತಮ್ಮ ಬದುಕಿನಲ್ಲಿ ಸತ್ಯವಾಗಿಸಿ ತೋರಿಸಿದವರು ಈ ಸಾಹಿತಿ. ತಾರುಣ್ಯದಲ್ಲಿ ತಮಗೆ ತಟ್ಟಿದ ತಬ್ಬಲಿತನದ ತಾಪವೋ, ಬವಣೆಗೊಳಿಸಿದ ಬಡತನದ ಅನುಭವವೋ, ಅಭಿವ್ಯಕ್ತಿಸದೇ ಅಂತರಂಗದಲ್ಲೇ ಅಡಗಿಸಿಟ್ಟುಕೊಂಡಿರಬಹುದಾದ ಯಾವ ಅವಮಾನವೋ; ಅವರಿಗೆ ಲಕ್ಷ್ಮಿ ಒಲಿದು ಬಂದು, ಅವರ ಜೇಬು, ಕೈ, ಮನೆಗಳನ್ನೂ ಧಾರಾಳವಾಗಿ ತುಂಬಿಸತೊಡಗಿದ ಮೇಲೂ, ಕೊನೆತನಕ ಅವರ ರಕ್ತದಲ್ಲಿ ಉಳಿದಿದ್ದು ಜನಪರ, ಜೀವಪರ ಕಕ್ಕುಲಾತಿಯೇ. ಅವರು ಕೈಗೊಂಡ ಎಲ್ಲ ಕಾರ್ಯಗಳೂ, ಕರ್ಮಗಳೂ ಅದಕ್ಕಾಗಿಯೇ.

ತಮ್ಮಲ್ಲಿ ಸಹಾಯ ಕೋರಿ ಬಂದವರ ಕೋರಿಕೆ ಸಮಂಜಸವೇ, ಅಭ್ಯರ್ಥಿ ನಿಜವಾಗಿಯೂ ಬಡವನೇ ಎಂಬುದನ್ನು ಮೊದಲು ಮನದಟ್ಟು ಮಾಡಿಕೊಳ್ಳುತ್ತಿದ್ದರು ರಾ.ಶಿ. ಅಪಾತ್ರರಿಗೆ ಸಹಾಯ ಮಾಡಬಾರದು ಎಂಬುದು ಈ ತನಿಖೆಯ ಉದ್ದೇಶ. ಇವರು ಮಾಡಿದ ಹಲವು ತೆರನ ವೈಯಕ್ತಿಕ ಸಹಾಯಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು;

ಮನೆ ಬಿಟ್ಟು ಓಡಿ ಬಂದಿದ್ದಂತಹ ಒಬ್ಬ ಬೆಂಗಾಲಿ ಹುಡುಗ ಬಳೇಪೇಟೆಯ ಇವರ ದವಾಖಾನೆಗೆ ಬಂದ. ಹೆಸರು ಹರಿದಾಸ ಚಕ್ರವರ್ತಿ. "ಈ ಊರಿಗೆ ಹೊಸಬ. ಭಾಷೆಯೂ ಗೊತ್ತಿಲ್ಲ. ಊಟಕ್ಕಿಲ್ಲ. ತುಂಬ ದೂರದಿಂದ ಬಂದಿದ್ದೇನೆ" ಎಂದು ಅಳಲು ತೋಡಿಕೊಂಡ. ಅವನ ಸಮಸ್ಯೆಗಳನ್ನು ಕೇಳಿ ತಿಳಿದುಕೊಂಡ ರಾ.ಶಿ.ಯವರು ಮಧ್ಯಾಹ್ನ ಮನೆಗೆ ಊಟಕ್ಕೆ ಹೋಗುವಾಗ ಆ ಬೆಂಗಾಲಿಯನ್ನೂ ಜೊತೆಗೆ ಕರೆದೊಯ್ದರು. ಮನೆಯಲ್ಲಿ ಐದು ತಮ್ಮಂದಿರು, ಇಬ್ಬರು ತಂಗಿಯರಿದ್ದರು. ಅವರೆಲ್ಲರ ಜೊತೆ

ಈ ಚಕ್ರವರ್ತಿಯೂ ಇವರ ಕುಟುಂಬದ ಇನ್ನೊಬ್ಬ ಸದಸ್ಯನಾದ. ಅವನಿಗೆ ಪ್ರೀತಿಯಿಂದ ಡ್ರೈವಿಂಗ್ ಕಲಿಸಿಕೊಟ್ಟರು. ಸೀನಿಯರ್ ಕೇಂಬ್ರಿಡ್ಜ್ ಪರೀಕ್ಷೆಗೆ ಕೂಡಿಸಿದರು. ಜೀವನಕ್ಕೊಂದು ದುಡಿಮೆಯ ದಾರಿ ತೋರಿಸಿದರು. ಅವನು ಇನ್ನು ನೆಮ್ಮದಿಯಾಗಿ ಬದುಕು ನಡೆಸಬಲ್ಲ ಎನಿಸಿದ ಮೇಲೆ ವಾಪಸ್ ಕಲ್ಕತ್ತಾಗೆ ಕಳಿಸಿಕೊಟ್ಟರು.

ಮನೆಯ ಸದಸ್ಯರಿಗೆ ಯಾರಿಗೂ ತಿಳಿಸದೇ, ಹಲವಾರು ಬಡ ವಿದ್ಯಾರ್ಥಿಗಳಿಗೆ ಎಂ.ಬಿ.ಬಿ.ಎಸ್ ಅಥವಾ ಬಿ.ಇ. ಕೋರ್ಸ್‌ಗಳಂತಹ ನಾಲ್ಕೈದು ವರ್ಷಗಳಷ್ಟು ದೀರ್ಘ ಖರ್ಚಿನ, ದೊಡ್ಡ ವಿದ್ಯೆಗಳನ್ನು ಓದಲೂ ಆರ್ಥಿಕ ನೆರವು ನೀಡಿದರು. ಆ ಹುಡುಗರು ಓದು ಮುಗಿದ ಮೇಲೆ ಮನೆಗೆ ಬಂದು, ಇವರ ಪತ್ನಿ ನಾಗಮ್ಮನವರಿಗೆ ನಮಸ್ಕರಿಸಿ ತಾವು ಈ ವೈದ್ಯರಿಂದ ಪಡೆದ ಸಹಾಯದ ಬಗ್ಗೆ ತಿಳಿಸಿ, ಆಶೀರ್ವಾದ ಪಡೆದು ಹೋಗುವಾಗಲೇ ಇವರು ಮಾಡಿದ ಸಹಾಯ ಗಮನಕ್ಕೆ ಬರುತ್ತಿದ್ದುದೆಂದು, ಇವರ ಮಗಳು ವಿಮಲಾ ಶೇಷಾದ್ರಿಯವರು ತಮ್ಮ ಪುಸ್ತಕದಲ್ಲಿ ನೆನೆದಿದ್ದಾರೆ.

ರಾ. ಶಿ. ಯವರ ವಯಸ್ಸು ಇನ್ನೂ ಮೂವ್ವತೆಂಟೋ ನಲವತ್ತರ ಗಡಿಯಲ್ಲಿತ್ತು. ಅವರ ತಂದೆಯ ಸಂಸಾರ ಮತ್ತು ತಮ್ಮ ಸಂಸಾರಗೆಳೆರಡರ ಭಾರವೂ ಭುಜವನ್ನೇರಿದ ಸಮಯ. ತಮಗಾಗಿ ಮತ್ತು ಮಡದಿ–ಮಕ್ಕಳಿಗಾಗಿ, ಮುಂದಿನ ಹೊಣೆಗಳನ್ನು ನಿಭಾಯಿಸುವ ಅಗತ್ಯಕ್ಕಾಗಿ, ದುಡಿದು ಗಳಿಸುವ, ಗಳಿಸಿ ಸಂಗ್ರಹಿಸಿಡುವ ಆಸೆಗಳು ಆಳಕ್ಕೆ ಬೇರೂರಿ ನಿಲ್ಲುವ ಮಧ್ಯ ವಯಸ್ಸು. ಅಂಥ ವಯಸ್ಸಿನಲ್ಲೂ ಇವರು ಸ್ವಾರ್ಥಿಗಳಾಗಲಿಲ್ಲ. ಒಬ್ಬ ಎಂ.ಬಿ.ಬಿ.ಎಸ್. ವಿದ್ಯಾರ್ಥಿ ಅತಿ ಬಡವನೆಂದು ರಾ.ಶಿ.ಯವರಿಗೆ ತಿಳಿಯಿತು. ಆತನಿಗೆ ಕಾಲೇಜು ಶುಲ್ಕ ಇವರು ಕೊಡ ತೊಡಗಿದ್ದರು. ತಮಗೆ ಏನಾದರೂ ಆದರೆ ಎನ್ನುವ ಒಂದು ಆಲೋಚನೆ ಒಮ್ಮೆ ಮನಸ್ಸನ್ನು ಕಾಡಿತು. ಮರಣಕ್ಕೆ ಯಾರದ್ದಾದರೂ ವಯಸ್ಸಿನ ಹಿರಿತನವೇ ಆಧಾರ ಅಲ್ಲವಲ್ಲ. ತಮ್ಮ ನಿಧನ ಆ ಬುದ್ಧಿವಂತ ವಿದ್ಯಾರ್ಥಿಯ ಓದಿನ ಅಂತ್ಯಕ್ಕೆ ಕಾರಣವಾಗಬಾರದು ಎನಿಸಿತು. ತಾವು ಮರಣಿಸಿದರೂ ಆ ಹುಡುಗನ ಓದು ಮುಂದುವರೆಸಲು ದಾರಿಗಳನ್ನು ಹುಡುಕಿದರು. ಜೀವವಿಮೆ ಅವರ ತಲೆಗೆ ಹೊಳೆದ ಉಪಾಯ. ತಾವಿಲ್ಲದಿದ್ದರೂ ಆ ವಿದ್ಯಾರ್ಥಿಯ ಓದು ಮುಂದುವರೆಯಲು ಅನುಕೂಲವಾಗುವಂತೆ ಅವನಿಗಾಗಿ ಒಂದು ಜೀವವಿಮೆ ಮಾಡಿಸಿದ ಮೇಲೆಯೇ ಅವರಿಗೆ ಸಮಾಧಾನ.

ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಯೊಬ್ಬ ಮೆಡಿಕಲ್ ಕಾಲೇಜಿನ ಆಯ್ಕೆ ಪಟ್ಟಿಯಲ್ಲಿ ಹೆಸರಾಗಿ ಕಾಣಿಸಿಕೊಂಡ. ರಾ.ಶಿ.ಯವರಿಗೆ ಪರಿಚಯವಿದ್ದ ಬುದ್ಧಿವಂತ ಹುಡುಗ. ಸೀಟ್ ಸಿಕ್ಕಿದ್ದರೂ ಪ್ರವೇಶ ಪಡೆಯಲು ಬರಲಿಲ್ಲ. ಅನುಮಾನ ಬಂತು ಬಡತನವನ್ನು ಉಂಡು ಬೆಳೆದ ಶಿವರಾಂ ಅವರಿಗೆ. ಮನೆಗೆ ಹೇಳಿ ಕಳುಹಿಸಿ ವಿಚಾರಣೆ ನಡೆಸಿದಾಗ ಈ ವೈದ್ಯರಿಗೆ ತಿಳಿದು ಬಂದಿದ್ದು, ಅವನಿಗೆ ಫೀಸ್ ಕಟ್ಟಲೂ ಹಣದ ಕೊರತೆ ಇದೆ ಎಂಬ ಸತ್ಯ. 'ಹಣ ನಾನು ಕೊಡುತ್ತೇನೆ. ಕಾಲೇಜಿಗೆ ಬಂದು ಸೇರಿಕೋ" ಎಂದು ಭರವಸೆ ನೀಡಿದರು. ಆದರೆ ಆ ಹುಡುಗನ ತಂದೆಗೆ, ಯಾರಿಗೂ ಕೈ ಒಡ್ಡದ ಅತೀವ ಆತ್ಮಾಭಿಮಾನ. ತಂದೆಯ ಪರವಾಗಿ ಆ ವಿದ್ಯಾರ್ಥಿಯೇ ಉತ್ತರಿಸಿದ, "ಬೇಡ ಸರ್. ನಮ್ಮ ತಂದೆಯವರಿಗೆ ನೋವಾಗುತ್ತದೆ. ಕಾಲೇಜು ಸೇರಲಾರೆ" ಎಂದ.

ಯಾವ ಬುದ್ಧಿವಂತನೂ ಹಣದ ಕೊರತೆಯಿಂದಾಗಿ ಕಾಲೇಜು ಬಿಡುವುದನ್ನು ರಾ.ಶಿ.ಯವರ ಮಾನವೀಯ ಮನಸ್ಸು ಒಪ್ಪುತ್ತಲೇ ಇರಲಿಲ್ಲ. ಅವರು ಮತ್ತೂ ಬಿಡದೇ ಹೇಳಿದರು, 'ಒಮ್ಮೆ ಅವರನ್ನೇ ಕೇಳಿ ನೋಡಿ ನನಗೆ ತಿಳಿಸು" ಎಂದು.

ತಂದೆಯನ್ನು ವಿಚಾರಿಸಿದ ಹುಡುಗ ಹಿಂತಿರುಗಿ ಬಂದ, "ಸರ್. ಒಂದು ಷರತ್ತಿನ ಮೇಲೆ ನಿಮ್ಮ ಸಹಾಯ ಸ್ವೀಕರಿಸುತ್ತೇನೆ. ನನ್ನ ಓದು ಮುಗಿದ ಮೇಲೆ ನೀವು ಆ ಹಣವನ್ನು ವಾಪಸ್ ತೆಗೆದುಕೊಳ್ಳಬೇಕು" ಎಂದ.

ಶಿವರಾಂ ಅವರ ಅಂತರಂಗ, ಬಡಹುಡುಗನ ತಂದೆಯದಕ್ಕಿಂತ ವಿಶಾಲ. "ನಿನ್ನ ಮಾತನ್ನು ಮೆಚ್ಚಿದೆ. ಆದರೆ ಒಂದು ಕೆಲಸ ಮಾಡು. ನೀನು ಆ ಹಣವನ್ನು ನನಗೆ ಹಿಂತಿರುಗಿಸಬೇಡ. ನಿನ್ನಂತೆಯೇ ಕಷ್ಟದಲ್ಲಿರುವ ಒಬ್ಬ ಯೋಗ್ಯ ವಿದ್ಯಾರ್ಥಿಗೆ ಎಂ.ಬಿ.ಬಿ.ಎಸ್ ಓದಿಸು. ಆಗ ಈ ಹಣ ನನಗೆ ಸೇರಿದಂತೆಯೇ ಆಗುತ್ತದೆ" ಎಂದು. ಅವರು ನೀಡಿದ ಸಲಹೆಯನ್ನು ಆ ಆತ್ಮಾಭಿಮಾನಿ ವಿದ್ಯಾರ್ಥಿಯೂ ಒಪ್ಪಿದ. ಬಂದು ಕಾಲೇಜು ಸೇರಿಕೊಂಡ. ಏನೂ ಕೆಲಸ ಮಾಡದೆಯೇ, ಸರ್ಕಾರದಿಂದ ಅಥವಾ ಪ್ರಾಯೋಜಕರಿಂದ ಹಣ ಪಡೆದು ದುರುಪಯೋಗ ಪಡಿಸಿಕೊಳ್ಳಲು ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುವ ಇಂದಿನ ದುರಾಸೆಯ ಜನಕ್ಕೆ ಈ ಬಡಹುಡುಗ ಮತ್ತು ಅವನ ತಂದೆಯ ಅಭಿಮಾನದ ಮಾತುಗಳು ನಿಜಕ್ಕೂ ಕಲಿಯಲೇ ಬೇಕಾದಂತಹ ಒಂದು ಉತ್ತಮ ಪಾಠ.

ಶ್ರೀರಂಗರು ರಾ.ಶಿ.ಯವರ ಮನೆಯ ಹತ್ತಿರದಲ್ಲಿದ್ದಾಗ ಅವರ ಮತ್ತು ಅವರ ಶ್ರೀಮತಿಯವರ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿದ್ದರು. ಒಮ್ಮೆ ಇಬ್ಬರೂ ಖಾಯಿಲೆ ಬಂದು ಮಲಗಿದರು. ಮನೆಯಲ್ಲಿ ಇಬ್ಬರೇ ಇರುತ್ತಾರೆಂಬುದನ್ನು ತಿಳಿದಿದ್ದ ರಾ.ಶಿ.ಯವರು, ಕಳುಹಿಸಬೇಕಾದ ಔಷಧಿಯ ಜೊತೆ, ಸ್ನೇಹಿತನಿಗೆ ಹೇಳದೇ ಕೇಳದೆ, ತಮ್ಮ ಮನೆಯಲ್ಲಿ ತಯಾರಿಸಿದ ಅಡುಗೆಯನ್ನೂ ಇವರಿಬ್ಬರಿಗಾಗಿ ಕಳುಹಿಸಿ ಕೊಟ್ಟರು.

ರೋಗಿಗಳ ಮನೆಯಲ್ಲಿ, ಆರೈಕೆ, ಉಪಚಾರಗಳಿಗೆ ಅವಕಾಶವಿಲ್ಲವೆಂಬುದು ತಿಳಿದು ಬಂದರೆ, ಈ ವೈದ್ಯರು ಮಧ್ಯಾಹ್ನ ಊಟಕ್ಕೆ ಬರುವಾಗ ಆ ರೋಗಿಗಳನ್ನು ತಮ್ಮ ಮನೆಗೇ ಜೊತೆಗೆ ಕರೆತರುತ್ತಿದ್ದರು. ಮಾತ್ರವಲ್ಲ ಅವರು ಗುಣಮುಖರಾಗುವವರೆಗೂ ಅವರಿಗೆ ಇವರ ಮನೆಯಲ್ಲೇ ಊಟ, ಉಪಚಾರ, ವಿಶ್ರಾಂತಿ ಎಲ್ಲವೂ. ಆರೋಗ್ಯಕ್ಕೆ ಇನ್ನು ಭಯವಿಲ್ಲ ಎಂಬುದು ಖಚಿತವಾದ ಮೇಲೆ ಅವರ ಸ್ವಗೃಹಕ್ಕೆ ಹೋಗಲು ಅನುಮತಿ.

ತಂದೆಯ ಈ ಗುಣ ರಕ್ತದಲ್ಲಿ ಬಂದಿದ್ದೋ ವಾತಾವರಣದ ಪ್ರಭಾವವೋ, ಹಿರಿಯ ಮಗಳಿಗೂ ಬಂದಿತ್ತೆಂಬುದಕ್ಕೆ ಒಂದು ಸಂದರ್ಭದ ಸಂಗತಿ ಇಲ್ಲಿದೆ. ಮನೆಯಲ್ಲಿ ಸದಾ ಜನ, ಜನ. ಯಾವ ಕ್ಷಣದಲ್ಲಿ ಯಾರು ಬರುತ್ತಾರೆ, ಎಷ್ಟು ದಿನ, ಎಷ್ಟು ಜನ ಇರುತ್ತಾರೆ, ಎಂಬುದರ ಸೂಚನೆಯೂ ಇರುತ್ತಿರಲಿಲ್ಲವಾದ್ದರಿಂದ ಮನೆಯಲ್ಲಿ ಅಡುಗೆಯವರ ಅತ್ಯಗತ್ಯವಿತ್ತು. ಇರುತ್ತಿದ್ದರು. ಒಮ್ಮೆ ದಲಿತ ವರ್ಗಕ್ಕೆ ಸೇರಿದ ಹುಡುಗನೊಬ್ಬ ಮನೆಗೆಲಸಕ್ಕೆ ಬಂದ. ಅಡುಗೆಯವನಿಗೆ ಅವನು ದಲಿತ ಎಂದು ತಿಳಿದಿದ್ದೇ ತಡ, ತಾನು ಅವನಿಗೆ ಊಟಕ್ಕೆ ಬಡಿಸುವುದಿಲ್ಲ ಎಂದು ಕೂಗಾಡಿದ. ಆಗ ವಿಮಲಾ ಚಿಕ್ಕ ವಯಸ್ಸಿನ ಬಾಲೆ. 'ನೀವು ಬಡಿಸದಿದ್ದರೆ ನಾನು ಬಡಿಸುತ್ತೇನೆ" ಎಂದು ಮಾಡಿಟ್ಟ ಅಡುಗೆಯನ್ನು ಆ ಹುಡುಗನಿಗೆ ಬಡಿಸಿದಳಂತೆ. ಇದನ್ನು ಗಮನಿಸಿದ ತಂದೆ, ಮಗಳು ಮರೆತರೂ ತಾವು ಮರೆಯದೇ ಇನ್ನಾವಾಗಲೋ ನೆನಪಿಸಿಕೊಂಡು, ಮಗಳ ಈ ಸದ್ಗುಣಕ್ಕೆ ತಮ್ಮ ಮೆಚ್ಚುಗೆ ಸೂಚಿಸಿದರಂತೆ. ನಂತರದಲ್ಲಿ ವಿಮಲಾ ಅವರು ಸಮಾಜ ಸೇವೆಗೆ ತೊಡಗಿಕೊಳ್ಳಲು ರಾ.ಶಿ.ಯವರ ಈ ಸ್ಫೂರ್ತಿ, ಪ್ರೋತ್ಸಾಹಗಳೇ ಕಾರಣ.

*****

ಆ ಕಾಲದ ಶಿಕ್ಷಣ ಪದ್ಧತಿಯಂತೆ. ಮ್ಯಾಟ್ರಿಕ್ ಪರೀಕ್ಷೆ ಮುಗಿದ ಮೇಲೆ, ಕಾಲೇಜಿನ ಮೊದಲ ಪ್ರವೇಶದ ಪರೀಕ್ಷೆ ಎಂದರೆ ಇಂಟರ್‌ಮೀಡಿಯೇಟ್. ಇಂದಿನ ಪಿ.ಯು.ಸಿ.ಗೆ ಸಮ. ಆ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ ಪರೀಕ್ಷೆಗೆ ಕಟ್ಟಲು ಹಣವಿಲ್ಲದೇ ಅವರಿವರ ಬಳಿ ಹೋಗಿ ಚಂದಾ ವಸೂಲಿ ಮಾಡತೊಡಗಿದ. ಎಲ್ಲೆಲ್ಲೋ ತಿರುಗಿ ಯಾರು ಯಾರನ್ನೋ ಬೇಡಿ ಐದು ರೂಪಾಯಿಗಳನ್ನು ಸಂಗ್ರಹಿಸಿದ ಮೇಲೆ, ಸರದಿ ಬಂದಿದ್ದು ಶಿವರಾಮ್ ಅವರದು. ಅವರ ಬಳಿಗೆ ಬಂದು ಸಹಾಯ ಬೇಡಿದ. ರಾ.ಶಿ.ಯವರು ಆ ಹುಡುಗ ಕಷ್ಟ ಪಟ್ಟು ಓದುತ್ತಿರುವ ವಿದ್ಯಾರ್ಥಿ ಎಂಬುದನ್ನು ತಮ್ಮ ವಿಚಾರಣೆಯ ಮೂಲಕ ತಿಳಿದುಕೊಂಡರು. ಈ ವರೆಗೆ ಯಾರು ಯಾರು ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬುದರ ವಿವರಗಳಿದ್ದ, ಚಂದಾ ಚೀಟಿಯನ್ನು ಅವನ ಕೈಯಿಂದ ಇಸಕೊಂಡು ಹರಿದು ಹಾಕಿ ಹೇಳಿದರು. “ಪರೀಕ್ಷೆ ಹತ್ತಿರ ಬಂತು. ಹೀಗೆ ನೀನು ಚಂದಾ ಎತ್ತಲೆಂದು ಮನೆ, ಬೀದಿ, ಅಂಗಡಿ, ಅಂತ ಅಲೆದಾಡ್ತಾ ಇದ್ರೆ ನಿಂಗೆ ಓದೋಕೆ ಸಮಯ ಎಲ್ಲಿ ಸಿಗುತ್ತೋ ಮರಿ. ತೊಗೊ ನಿನ್ನ ಐದು ರೂಪಾಯಿ. ಇದು ತೊಗೊ ನಿಂಗೆ ಬೇಕಾಗಿರುವ ಇಪ್ಪತ್ತೈದು ರೂಪಾಯಿ. ಈಗ ನಿಂಗೆ ಪರೀಕ್ಷೆಗೆ ಪೂರ್ತಿ ಹಣ ಸಿಕ್ಕಿದ ಹಾಗಾಯಿತಲ್ಲ. ಇನ್ನು ಚೆನಾಗಿ ಓದುವ ಕಡೆ ಗಮನ ಕೊಡು. ಒಳ್ಳೆಯದಾಗಲಿ ನಿನಗೆ” ಎಂದು ಮನಃಪೂರ್ವಕ ಆಶೀರ್ವದಿಸಿ, ಬೆನ್ನು ತಟ್ಟಿ ಕಳಿಸಿದರು. ವಿದ್ಯಾರ್ಥಿ ಉತ್ತಮವಾಗಿಯೇ ಓದಿದ. ಮುಂದೆ ಉತ್ತರ ದೇಶದ ಕಾಲೇಜೊಂದರಲ್ಲಿ ಅಧ್ಯಾಪಕನಾಗಿ, ಪ್ರೊಫೆಸರ್ ಹುದ್ದೆಗೆ ಉನ್ನತಿಯೂ ಪಡೆದು ಬಹುವಚನದ ಗೌರವಕ್ಕೆ ಪಾತ್ರನಾದ. ರಾ.ಶಿ.ಯವರಿಗೆ ಆ ಹುಡುಗನ ಮುಂದಿನ ಭವಿಷ್ಯದ ಬಗ್ಗೆ ತಿಳಿದಿತ್ತೋ ಇಲ್ಲವೋ. ಆದರೆ ಎಷ್ಟೋ ವರ್ಷಗಳ ನಂತರ ರಾ.ಶಿ.ಯವರ ಮಗಳು, ವಿಮಲಾ ಶೇಷಾದ್ರಿಯವರು ಉತ್ತರ ದೇಶದಲ್ಲಿದ್ದಾಗ, ಇವರ ಸಂಪರ್ಕಕ್ಕೆ ಸಿಕ್ಕ ಆ ಪ್ರೋಫೆಸರ್ ರಾ.ಶಿ.ಯವರು ತಮಗೆ ನೀಡಿದ ಈ ಹಣದ ನೆರವಿನ ಬಗ್ಗೆ ತಿಳಿಸಿದಾಗಲೇ ಉಳಿದವರಿಗೂ ಗೊತ್ತಾಗಿದ್ದು. “ನನಗೆ ಮಾಡಿದ ಹಾಗೇ ರಾ.ಶಿ.ಯವರು ಬೇರೆ ಬೇಕಾದಷ್ಟು ಜನಕ್ಕೆ ಅಗತ್ಯದ ಸಮಯದಲ್ಲಿ ಆರ್ಥಿಕ ಸಹಾಯ ಮಾಡುತ್ತಿದ್ದರು” ಎಂದು ಹೇಳಿದರಂತೆ ಆತ.

*****

ಹಣ ಮತ್ತು ಹೆಸರು ದೊರೆತಾಗ ತಾವು ಅನುಭವಿಸಿದ ಬಡತನವನ್ನು ಮರೆತು ಮೆರೆಯುವವರೇ ಹೆಚ್ಚು. ಬಡವರನ್ನು ದೂರವಿಡುವವರೂ ಉಂಟು.

ಆದರೆ ಶಿವರಾಂ ಅವರು ಆ ಬಡತನವನ್ನು ಮರೆಯಲಿಲ್ಲ. ಬಡತನ ಕೊಡುವ ಕಷ್ಟಗಳನ್ನೂ ಮರೆಯಲಿಲ್ಲ. ವಿಜ್ಞಾನ, ಜ್ಞಾನ, ಹಣ, ಹೆಸರುಗಳ ಬಲಕ್ಕಿಂತ ಪ್ರೀತಿ, ಅನುಕಂಪ, ಕರುಣೆಯ ಬದುಕೇ ಅತಿ ಶ್ರೇಷ್ಠ ಹಾಗೂ ಬಲಯುತವೆಂಬ ಸತ್ಯವನ್ನು ಕಂಡುಕೊಂಡವರು ಇವರು. ಬಲಗೈಯ್ಯಲ್ಲಿ ಮಾಡಿದ್ದು ಎಡಗೈಗೆ ತಿಳಿಯಬಾರದು ಎಂಬ ಭಾವನೆ. ಹೊಗಳಿಕೆ ಪ್ರಚಾರಗಳನ್ನು ಬಯಸದೇ ಕೇವಲ ಸಹಾನುಭೂತಿ ಮತ್ತು ಪ್ರೀತಿಯಿಂದ ಮಾಡಿದ ಸಹಾಯಗಳಿವು.

ಪರ ಊರಿನಿಂದ, ದೂರದ ಕುಗ್ರಾಮಗಳಿಂದ, ನಗರ ಅಥವಾ ಪಟ್ಟಣಗಳಲ್ಲಿದ್ದ ಕಾಲೇಜುಗಳಿಗೆ ಪ್ರವೇಶ ಪಡೆದು ಓದು ಮುಂದುವರೆಸುವ ವಿದ್ಯಾಸಕ್ತ ವಿದ್ಯಾರ್ಥಿಗಳಿಗೆ ಈಗಿನ ಕಾಲದಲ್ಲಿರುವಂತಹ ಅನೇಕ ಅನುಕೂಲಗಳು ಆ ಸಮಯದಲ್ಲಿ ಇರಲಿಲ್ಲ. ಈಗ ಸರ್ಕಾರಿ ಇಲಾಖೆಗಳು ನಡೆಸುವ ವಿದ್ಯಾರ್ಥಿ ನಿಲಯಗಳಾಗಲೀ, ಶುಲ್ಕ ವಿನಾಯತಿಯಾಗಲೀ, ವಿದ್ಯಾರ್ಥಿ ವೇತನಗಳಾಗಲೀ ಹೆಚ್ಚು ಇರಲೇ ಇಲ್ಲ. ಅವರಿವರ ಮನೆಗಳಲ್ಲಿ ಊಟ ಮಾಡಿಕೊಂಡು, ಯಾರದೋ ಸೂರಿನಡಿ ಮಲಗಿಕೊಂಡು, ಬರೀ ಒಂದು ಪದವಿ ಗಳಿಸುವುದೇ ಒಂದು ದೊಡ್ಡ ಸಾಧನೆ ಆಗ. ಅದೊಂದು ರೀತಿಯ ಛಲದ ಓದು. ಒಂದು ತಪಸ್ಸು. ಇಂತಹ ಬಡ ವಿದ್ಯಾರ್ಥಿಗಳು ಬೆಳಗಿನ ತಿಂಡಿಗೆ ಒಂದು ಮನೆ, ಮಧ್ಯಾಹ್ನದ ಊಟಕ್ಕೆ ಇನ್ನೊಂದು ಮನೆ, ರಾತ್ರಿಯ ಊಟಕ್ಕೆ ಮತ್ತೊಂದು ಮನೆಯನ್ನು ಆಯಾ ಮನೆಗಳ ಯಜಮಾನರ ಹತ್ತಿರ ಮಾತಾಡಿ ನಿಗದಿಸಿಕೊಂಡಿರುತ್ತಿದ್ದರು. ಪರಿಚಿತರೂ ಕೆಲವರು ವಾರದ ಮನೆಗಳನ್ನು ಈ ಮಕ್ಕಳಿಗೆ ಗೊತ್ತು ಮಾಡಿಕೊಡುತ್ತಿದ್ದರು. ಈ ಮಕ್ಕಳು ಆ ಮನೆಗಳಿಗೆ ಸಮಯಕ್ಕೆ ಸರಿಯಾಗಿ ಆಯಾ ಮನೆಗಳಿಗೆ ಹೋಗಿ ಕೈ ಕಟ್ಟಿ ನಿಂತು ತಿಂಡಿಗೋ, ಊಟಕ್ಕೋ ಕಾಯಬೇಕು. ಬಡತನದ ಲಕ್ಷಣವೇ ದೈನ್ಯತೆ ತಾನೇ? ಆ ಮನೆಯವರು ಬಡಿಸಿದಾಗ, ಬಡಿಸಿದಷ್ಟನ್ನೇ ತಿಂದು ತೃಪ್ತಿ ಪಡಬೇಕು. ಅಧೀನರಿಗೆ ಅಧಿಕಾರವೂ ಇರುವುದಿಲ್ಲ. ದನಿಯೂ ಇರುವುದಿಲ್ಲ. ಮನೆಯ ಒಡತಿ ತಕ್ಷಣ ಆಹಾರ ಪೊರೈಸಿದರೆ ಸರಿ. ತಡ ಮಾಡಿದರೆ ಆ ಮಕ್ಕಳು ಅದರ ಶಿಕ್ಷೆಯನ್ನು ಕಾಲೇಜಿನಲ್ಲಿ ಪಡೆಯುವ ಸಂದರ್ಭಗಳೂ ಬರುತ್ತಿತ್ತು. ಈ ಪದ್ಧತಿಗೆ ಬಳಸುತ್ತಿದ್ದ ಪದ 'ವಾರಾನ್ನ' ಎಂದು. ಈ ವಾರಾನ್ನದ ಪ್ರಯೋಜನ ಪಡೆಯುವ ವಿದ್ಯಾರ್ಥಿಗಳಿಗೆ 'ವಾರಾನ್ನದ ಹುಡುಗರು' ಎನ್ನುತ್ತಿದ್ದುದು ರೂಢಿ.

ರಾ.ಶಿ.ಯವರ ಮನೆಗೆ ವಾರದ ಏಳು ದಿನವೂ ಹೀಗೆ ವಾರಾನ್ನಕ್ಕೆ ಬರುವ ಹುಡುಗರಿದ್ದರು. ಆದರೆ ಅಂತಹವರಿಗೆ 'ವಾರದ ಹುಡುಗ ಬಂದ"

ಎನ್ನಬಾರದೆಂಬದು ರಾ.ಶಿ. ಯವರು ಮನೆಯವರಿಗೆಲ್ಲ ಕೊಡಿಸಿದ ಅಪ್ಪಣೆ. ಅದು ಬಡತನವನ್ನು ಅವಮಾನಿಸಿದಂತೆ ಎಂಬುದು ಅವರ ಅನಿಸಿಕೆ. ಆ ಹುಡುಗರನ್ನೂ ಸಂಬಂಧಿತರಂತೆ, ಸ್ನೇಹಿತರಂತೆ ಆದರಿಸಿ ಅನ್ನ ಹಾಕಬೇಕು. ಅವನ ಹೆಸರು ಹಿಡಿದು ಕರೆಯಬೇಕು. ಪ್ರೀತಿಯಿಂದ ಮಾತಾಡಿಸಬೇಕು. ಕಾಯಿಸದೇ, ಬಂದ ತಕ್ಷಣ ಕೂಡಿಸಿ ಊಟ ಬಡಿಸಬೇಕು. ಒಂದು ದಿನ ಅಕಸ್ಮಾತ್, ಅಂಥ ಒಬ್ಬ ಹುಡುಗ ಒಂದೆರಡು ಕ್ಷಣ ಯಾವುದೋ ಕಾರಣಕ್ಕೆ, ಕಾಯುವಂತಾಗಿ ಬಿಟ್ಟರೆ, ಮುಗಿಯಿತು ಮನೆಯವರ ಗತಿ. "ಮೊದಲೇ ಆಳುದ್ದ ದೇಹವನ್ನು ಚೋಟುದ್ದ ಮಾಡಿಕೊಂಡು ಮನೆಗೆ ಬರುತ್ತಾರೆ. ಅವರನ್ನು ಕಾಯಿಸುವುದು ಮಹಾ ತಪ್ಪು." ಎಂದು ರೇಗುತ್ತಿದ್ದುದಕ್ಕೆ ಕಾರಣ, ಅವರಿಗೆ ಆ ಬಡ ಮಕ್ಕಳ ಮೇಲೆ ಇದ್ದ ಅನುಕಂಪ. ಯಾರೋ ಅಪರಿಚಿತರ ಮನೆಗೆ ಊಟಕ್ಕಾಗಿ ಬಂದು ದೇಹವನ್ನು ಹಿಡಿ ಮಾಡಿಕೊಂಡು ನಿಲ್ಲುವ ಅವರ ಆ ಪರಿಸ್ಥಿತಿಯ ಬಗ್ಗೆ ಇದ್ದ ಕರುಣೆ.

ಆದರೆ ದೈವ ಭಕ್ತರು, ಯಾತ್ರಾರ್ಥಿಗಳು, ಸನ್ಯಾಸಿಗಳು, ಸ್ವಾಮಿಗಳು ಎಂದು ಹೇಳಿಕೊಂಡು ಮನೆಗೆ ಧನ ಸಹಾಯ ಕೇಳಲು ಬರುವವರ ಬಗ್ಗೆ ಈ ಅನುಕಂಪ, ಪ್ರೀತಿ ಇರಲಿಲ್ಲ ಅವರಿಗೆ. ದೇವರ ದರ್ಶನಕ್ಕಾಗಿ ಕಾಶಿ, ಪ್ರಯಾಗ, ಗಯಾ, ಮಧುರೈ ಮುಂತಾದ ಕಡೆ ಹೋಗುತ್ತೇವೆಂದು ಹಣ ಕೇಳಲು ಬಂದವರಿಗೆ, ಕೈ ಮುಗಿದು ಬಾಗಿಲ ಕಡೆ ಕೈ ತೋರಿಸಿ, "ಅದೇ ಕಾಶಿ, ಗಯಾಗಳಿಗೆ ದಾರಿ, ಆ ದಾರಿಯಲ್ಲಿ ಹೋಗಿ ಬನ್ನಿ" ಎಂದು ಮುಲಾಜಿಲ್ಲದೆ ಕಳಿಸುತ್ತಿದ್ದರು. ಹೆಚ್ಚು ಬೇಡಿದರೆ ನಿಘಂಟಿನ ಎಲ್ಲ ಬೈಗಳೂ ನಾಲಿಗೆಯಲ್ಲಿ ನಲಿದು ಬಿಡುತ್ತಿತ್ತಂತೆ. ಅದಕ್ಕೂ ಕಾರಣವಿತ್ತು. ಒಂದು ಅವರ ತಂದೆ ದೇವರ ಭಕ್ತಿಯ ಹೆಸರಿನಲ್ಲಿ ಮನೆಯನ್ನೇ ಮರೆತು ಮಾಡಬೇಕಾದ ಕರ್ತವ್ಯಗಳನ್ನು ಮಾಡದಿದ್ದುದು, ತಾಯಿಯ ಅನಾರೋಗ್ಯಕ್ಕೆ ದಾರಿ ಮಾಡಿ ಕೊಟ್ಟಿದ್ದು, ಸನ್ಯಾಸತ್ವದ ನೆಪದಲ್ಲಿ, ಮನೆಯನ್ನೂ ತೊರೆದು, ಎಲ್ಲ ಹೊಣೆಗಾರಿಕೆಯಿಂದ ತಾವು ಪಲಾಯನ ಮಾಡಿ, ಚಿಕ್ಕ ವಯಸ್ಸಿನ ಮುಗ್ಧ ಮಕ್ಕಳ ಮೇಲೆ ತನ್ನ ಜವಾಬ್ದಾರಿಯನ್ನು ವರ್ಗಾಯಿಸಿ ದೂರವಾಗಿದ್ದು. ಇನ್ನೊಂದು ಕಾರಣವೆಂದರೆ; ದೈವಕ್ಕೆ ಪೂಜೆ, ದೇವರ ದರ್ಶನಕ್ಕೆ ತೀರ್ಥಯಾತ್ರೆ ಅತ್ಯಗತ್ಯವಾದ ವಿಷಯವಲ್ಲ, ಯಾರಿಗಾದರೂ ಅಲ್ಲಿ ಆಯ್ಕೆ ಇದೆ. ಹಣವಿಲ್ಲದವರು ದೇವರನ್ನು ಮನಸ್ಸಿನಿಂದ ಪೂಜಿಸಿ ಒಲಿಸಿಕೊಳ್ಳಬಹುದು. ದೇವರನ್ನು ತಾವಿರುವ ಕಡೆಯೇ ಕಲ್ಪಿಸಿಕೊಂಡು ದರ್ಶನದ ತೃಪ್ತಿ ಪಡೆಯಬಹುದು. ಅನಾನುಕೂಲವಿದ್ದಾಗ ಹೀಗೆ

ಮಾಡುವುದರಲ್ಲೇ ಉತ್ತಮ ಫಲವಿದೆ. ಆದರೆ ಬದುಕಿಗೇ ಬಡತನದ ಬೇನೆಯಾದರೆ ಸಹಾಯ ಅತ್ಯಗತ್ಯ. ಅಲ್ಲಿ ಇತರರ ನೆರವಿಲ್ಲದೇ ಏಳಿಗೆಗೆ ಅನ್ಯ ಮಾರ್ಗವೇ ಇಲ್ಲ. ಜನತೆಯಲ್ಲೇ ಜನಾರ್ದನನನ್ನು ಕಂಡುಕೊಳ್ಳುವ ರಾ.ಶಿ.ಯಂತಹವರಿಗೆ ದೈವ ಪೂಜೆ, ಆಚರಣೆಗಳಲ್ಲಿ ಅರ್ಥ ಕಾಣುವುದಿಲ್ಲ.

******

ಒಮ್ಮೆ ರಾ.ಶಿ.ಯವರ ಮೊದಲ ಮಗಳು ವಿಮಲಾ, ಇನ್ನೂ ಕೆಲವೇ ತಿಂಗಳುಗಳ ಮಗು. ಅವರ ನೆಂಟರೂ ಸ್ನೇಹಿತರೂ ಆಗಿದ್ದವರೊಬ್ಬರ ಪತ್ನಿ ಮಗುವೊಂದಕ್ಕೆ ಜನ್ಮ ನೀಡಿದ ಮೇಲೆ ಏನೋ ನಂಜು ಏರಿ ನಿಧನರಾದರು. ಇನ್ನೂ ಚಿಕ್ಕ ವಯಸ್ಸಿನ ಹುಡುಗಿ. ಆಕೆಯ ಗಂಡ, ರಾ.ಶಿ.ಯವರ ಬಳಿ ಬಂದು "ಅವಳು ಹೊರಟು ಹೋದಳು. ಹುಟ್ಟಿದ ಮಗುವನ್ನು ಇನ್ನು ನೋಡಿಕೊಳ್ಳುವವರು ಯಾರು ಎಂಬುದೇ ದೊಡ್ಡ ಚಿಂತೆ" ಎಂದು ದುಃಖಿಸಿದರು. ರಾ.ಶಿ.ಯವರು ಪುನಃ ಆಲೋಚಿಸದೇ, ಆ ಮಗುವನ್ನು ತಮ್ಮ ಮನೆಗೆ ಕರೆತಂದು ಸಾಕಬೇಕೆಂದು, ಮರು ರೈಲಿಗೆ ಆ ಸ್ನೇಹಿತನ ಊರಿಗೆ ಹೊರಟೇ ಬಿಟ್ಟರು. ಅವರಿಗೆ ತಮ್ಮ ಪತ್ನಿಯ ಬಗ್ಗೆ ಅಪಾರ ನಂಬಿಕೆ. ಯಾವುದೇ ಕೆಲಸಗಳ ಹೊಣೆಗೂ ಅವರ ಹೆಗಲು, ಹೊರಲು ಸಿದ್ಧ ಎಂದು. ಆದರೆ ಮಗುವಿನ ಅಜ್ಜಿಯೇ, "ನಿಮ್ಮ ಮನೆಯಲ್ಲೇ ಸಣ್ಣ ಮಗು ಇದೆ. ಇನ್ನೂ ವರ್ಷವೂ ತುಂಬದ ಮಗು. ನಿಮಗ್ಯಾಕಪ್ಪ ತೊಂದರೆ. ನಾನೇ ಹೇಗೋ ಕೈಲಾದಂತೆ ನೋಡಿಕೊಳ್ಳುತ್ತೇನೆ" ಎಂದು ಆವೊತ್ತಿಗೆ ವಾಪಸ್ ಕಳಿಸಿದರಂತೆ. ಆದರೆ ಮತ್ತೊಮ್ಮೆ ಹೋಗಿ ಆ ಮಗುವನ್ನು ಕರೆತರಬೇಕೆಂದರೆ ಅದು ಉಳಿದಿರಲೇ ಇಲ್ಲ. ಪಾಪ ಅದಕ್ಕೆ ಏನೋ ಸಮಸ್ಯೆಯಾಗಿ ತೀರಿಕೊಂಡಿತ್ತು.

*****

ಖ್ಯಾತ ಸಾಹಿತಿ ಕೆ.ವಿ. ಅಯ್ಯರ್‌ಅವರು ಒಮ್ಮೆ ಶಿವರಾಂ ಅವರ ದವಾಖಾನೆಗೆ ಹೋದಾಗ, ಸಹೋದ್ಯೋಗಿ ಸುಬ್ಬರಾವ್ ಅವರೊಡನೆ ಯಾವ ಯಾವ ರೋಗಿಗಳಿಂದ ಎಷ್ಟೆಷ್ಟು ಹಣ ಬಾಕಿ ಇದೆ ಎಂಬ ಬಗ್ಗೆ ಪರಸ್ಪರ ಮಾತುಕತೆ ನಡೆದಿತ್ತು. ಒಬ್ಬರಿಂದ ಆರಾಣೆ, ಮಾರ್ವಾಡಿಯಿಂದ ನಾಲ್ಕಾಣೆ ಇಸಕೊಳ್ಳುವ ಬಗ್ಗೆ, ಬಂದಿದ್ದನ್ನು ತಿಳಿದುಕೊಳ್ಳುವ ಬಗ್ಗೆ ಮಾತು. ಹೊರಗಡೆ ಕುಳಿತು ಈ ಮಾತುಕತೆಯನ್ನು ಕೇಳಿಸಿಕೊಂಡ, ಅಯ್ಯರ್ ಅವರಿಗೆ ಮುಜುಗರ. ಚಿಲ್ಲರೆ ಆಣೆಗಳನ್ನು ಬಿಡದ ಲೆಕ್ಕಾಚಾರದ ಮನಷ್ಯನೇ ಈತ ಎಂಬ

ಭಾವನೆಯೂ ಬಂತು. ಅದನ್ನು ಪಕ್ಕಕ್ಕೆ ಸರಿಸಿ, ಒಳ ಹೊಗಿ ವೈದ್ಯರನ್ನು ಮಾತಾಡಿಸಿ ಬಂದರು. ಹಣದ ಲೆಕ್ಕಾಚಾರದ ಮಾತು ಮಾತ್ರ ಆ ವ್ಯಕ್ತಿಯ ಬಗ್ಗೆ ಬೇರೆಯೇ ಒಂದು ಲೆಕ್ಕಾಚಾರ ಹಾಕಿತು. ಇದಾದ ಕೆಲವು ವರ್ಷಗಳ ನಂತರ ಪುನಃ ಈ ವೈದ್ಯರನ್ನು ಭೇಟಿ ಮಾಡಬೇಕಾಗಿ ಬಂತು. ಯಾವುದೋ ಹುಡುಗನ ಸಹಾಯಾರ್ಥ.

ಒಬ್ಬ ಹುಡುಗನಿಗೆ ಕಲ್ಕತ್ತೆಯಲ್ಲಿದ್ದ ಪರಿಚಿತರೊಬ್ಬರು ವೈದ್ಯಕೀಯ ಶಿಕ್ಷಣದ ಖರ್ಚು ವೆಚ್ಚಗಳನ್ನೆಲ್ಲ ತಾವು ನೋಡಿಕೊಳ್ಳುವುದಾಗಿ ಭರವಸೆ ಇತ್ತು ತಮ್ಮಲ್ಲಿಗೆ ಬರುವಂತೆ ಕರೆದಿದ್ದರು. ಅದರಂತೆ ಆ ಹುಡುಗ ಕಲ್ಕತ್ತೆಗೆ ಹೋದ. ಆದರೆ ಪಾಪ ಅವನ ದುರಾದೃಷ್ಟ. ಅವನು ಅಲ್ಲಿಗೆ ತಲುಪುವ ಹೊತ್ತಿಗೆ ಅವರು ಇಹಲೋಕವನ್ನೇ ಬಿಟ್ಟು ಹೊರಟಿದ್ದರು. ಅವರ ಮನೆಗೆ ಹೋದಾಗ ಅವನನ್ನು ಎದುರುಗೊಂಡಿದ್ದು, ರೈಲು ಅಪಘಾತವೊಂದರಲ್ಲಿ ಅಸು ನೀಗಿದ ಅವರ ಶವ. ಹೆಣ ನೋಡಿದ ಹುಡುಗ ಕಂಗಾಲು. ಅವನ ಭವಿಷ್ಯಕ್ಕೆ ಧುತ್ತನೆ ಗೋಡೆ ಕಟ್ಟಿತ್ತು ಕಣ್ಣ ಮುಂದಿನ ಕಗ್ಗತ್ತಲು. ಕೆ.ವಿ. ಅಯ್ಯರ್ ಅವರಿಗೆ ತಕ್ಷಣ ಬಂತು ಸಹಾಯ ಕೋರುವ ತಂತಿ ಸಂದೇಶ. ಈ ಹುಡುಗನಿಗೆ ಏನಾದರೂ, ಹೇಗಾದರೂ ಸಹಾಯ ಮಾಡಬೇಕೆಂಬ ಬೃಹತ್ತಾಸೆ ಅಯ್ಯರ್ ಅವರಿಗೆ. ಸಹಾಯ ಕೋರಿ ಅಲ್ಲಿ ಇಲ್ಲಿ ಅಲೆದರು. ಅವರಿವರ ಮುಂದೆ ಹೋಗಿ ಕೂತರು. ಕಡೆಗೆ ಪರೋಪಕಾರಿ ರಾ.ಶಿ.ಯವರ ಬಳಿಗೆ ಬರುವ ಹೊತ್ತಿಗೆ ಅವರು ಸಂಗ್ರಹಿಸಿದ್ದು, ಐದು ರೂಪಾಯಿ. ಹುಡುಗನ ಬಗ್ಗೆ ಎಲ್ಲ ವಿವರಗಳನ್ನು ಕೇಳಿ ತಿಳಿದುಕೊಂಡ ಶಿವರಾಂ ಅವರು ಮುಂದಿಟ್ಟಿದ್ದು ಒಂದೇ ಪ್ರಶ್ನೆ;

"ಪೂರ್ತಿ ವರ್ಷಕ್ಕೆ ಒಟ್ಟು ಎಷ್ಟು ಹಣ ಬೇಕಾಗುತ್ತೆ"?

'ಐನೂರು ರೂಪಾಯಿ" ಅಯ್ಯರ್ ಕೊಟ್ಟ ಉತ್ತರ

ಶಿವರಾಂ ಅವರು ಇನ್ನೊಂದು ಪ್ರಶ್ನೆ, ಮತ್ತೊಂದು ಮಾತು ಆಡದೆ ಮೌನವಾಗಿ ಐನೂರು ರೂಪಾಯಿಗಳಿಗೆ ಒಂದು ಚೆಕ್ ಬರೆದು ಅಯ್ಯರ್ ಅವರ ಕೈಲಿಟ್ಟು ಅದನ್ನು ಕೊಡುವುದಕ್ಕೆ ಕಾರಣವೂ ಹೇಳಿದರು, "ನನಗೋಸ್ಕರ ಅಯ್ಯರ್ ಅವರು ಎಲ್ಲರ ಮುಂದೆ ಭಿಕ್ಷೆ ಬೇಡ ಬೇಕಾಯಿತು ಅನ್ನೋ ಭಾವನೆ ಆ ಹುಡುಗನಿಗೆ ಬರಬಾರದು. ಅವನ ಪೂರ್ತಿ ಶಿಕ್ಷಣದ ವೆಚ್ಚ ನನ್ನ ಜವಾಬ್ದಾರಿ."

'ಇದನ್ನು ತೀರಿಸೋದು ಹೇಗೆ"?

"ಓದು ಮುಗಿಸಿ ಸಂಪಾದನೆ ಶುರು ಮಾಡಿದ ಮೇಲೆ ನಿಧಾನವಾಗಿ ಕೊಡಲಿ"

ಪುಡಿ ಸಹಾಯ ಕೋರಿ ಬಂದಿದ್ದರು. ಅವರಿಗೆ ಒಬ್ಬರಿಂದಲೇ ಇಡೀ ಸಹಾಯ. ಇದರ ನಿರೀಕ್ಷೆಯೂ ಇರದ ಅಯ್ಯರ್ ಅವರು ದಂಗು. ರಾ.ಶಿ.ಯವರ ದೊಡ್ಡ ಗುಣಕ್ಕೆ ಕಂಠ ಗದ್ಗದ. ಅವರ ಮುಂದಿನ ಅಲೆತ ತಪ್ಪಿತ್ತು. ಒಂದೇ ಕೊಳಗದಲ್ಲಿ ಐದು ವರ್ಷಗಳಿಗೆ ಬೇಕಾದ ಹಣದ ರಾಶಿ ಸಿಕ್ಕಿತ್ತು.

******

ಹೊರಗಿನವರಿಗೇ ಸಾಕಷ್ಟು ಸಹಾಯ ಸಹಕಾರಗಳನ್ನು ಕೊಟ್ಟು ಉತ್ತೇಜಿಸುತ್ತಿದ್ದ ರಾ.ಶಿ.ಯವರು ಮನೆಯ ಆಳುಕಾಳುಗಳಿಗೆ ನೆರವು ನೀಡುವುದು ವಿಶೇಷವಲ್ಲ. ಅವರ ಮನೆಯಲ್ಲಿ ಸುಮಾರು ನಲವತ್ತು ವರ್ಷಗಳ ಕಾಲ ಕೆಲಸ ಮಾಡುತ್ತಿದ್ದ ಪ್ರಾಮಾಣಿಕ ಅಳು ವಾಲಾಜ ಪೇಟೆ ಮುನಿಸ್ವಾಮಿ. ಅವನ ನಿಜನಾಮ ರಾಘವ. ಅವನಿಗೆ ನಿವೇಶನ, ಅವನ ಮಕ್ಕಳಿಗೆ ಮತ್ತು ಅಳಿಯಂದಿರಿಗೆ ಹಣ ಸಹಾಯ  ಮಾಡಿದ್ದು, ಬೇಡಿದ ಸಹಾಯ ಕೊಟ್ಟದ್ದು ಸಹಜವೇ.

****

ರಂಗಮ್ಮ ಎಂಬ ವಿಧವೆ. ಇಬ್ಬರು ಮಕ್ಕಳು. ಅತಿ ಬಡವೆ. ಅವರಿವರ ಮನೆಯಲ್ಲಿ ಸಾರಿನ ಪುಡಿ, ಪಲ್ಯದ ಪುಡಿಗಳನ್ನು ಕುಟ್ಟಿ ಕೊಟ್ಟು, ಚಿಲ್ಲರೆ ಕೆಲಸಗಳನ್ನು ಮಾಡಿ ಕೊಟ್ಟು ಬದುಕು ನಡೆಸುತ್ತಿದ್ದ ಹೆಂಗಸು. ಮಗನಿಗೆ ಸಣ್ಣ ಕೆಲಸ. ಅಲ್ಪ ಸಂಪಾದನೆ. ಒಮ್ಮೆ ಅವಳ ಮಗಳಿಗೆ ಡಿಫ್ತೀರಿಯಾ ಬಂತು. ಮಗಳನ್ನು ಕರೆದುಕೊಂಡು ಶಿವರಾಂ ಅವರ ಬಳಿ ತೋರಿಸಲು ಬಂದಳು. "ಬೇಗ ಆಸ್ಪತ್ರೆಗೆ ಸೇರಿಸಿ. ಚಿಕಿತ್ಸೆ ತಕ್ಷಣ ಆಗಬೇಕು" ಎಂದು ಸಲಹೆ ಕೊಟ್ಟು ಕಳಿಸಿದರು ಶಿವರಾಂ. ಏನು ಕಾರಣವೋ ಸರ್ಕಾರಿ ಆಸ್ಪತೆಯಲ್ಲಿ ಮಗುವನ್ನು ಸೇರಿಸಿಕೊಳ್ಳಲೇ ಇಲ್ಲ ಎಂದು ಹಿಂತಿರುಗಿ ಇದೇ ವೈದ್ಯರ ಬಳಿ ಹಿಂತಿರುಗಿ ಬಂದರು ರಂಗಮ್ಮ ಮತ್ತು ಅವಳ ಮಗ. ಒಂದೊಂದು ಕ್ಷಣವೂ ಮುಖ್ಯ ಎಂದು ತಿಳಿದಿದ್ದ ಈ ವೈದ್ಯ ತಮ್ಮ ಮೋಟಾರ್ ಸೈಕಲ್‌ನ ಸೈಡ್ ಕಾರಿನಲ್ಲಿ ತಾಯಿ ಮಕ್ಕಳನ್ನು ಕೂಡಿಸಿಕೊಂಡು ತಾವೇ ಆಸ್ಪತ್ರೆಗೆ ಹೊರಟರು. ಕಾನೂನು ಪ್ರಕಾರ ಮೂವರು ಕೂಡಬಾರದು, ಪೋಲೀಸಿನವರು ಹಿಡಿಯುತ್ತಾರೆ, ಎಂದು ರಂಗಮ್ಮನಿಗೆ ಭಯ. ಆದರೆ ಮಗಳ ಪ್ರಾಣ ಮುಖ್ಯ ವೈದ್ಯರಿಗೆ. ಪೋಲಿಸರು

ಹಿಡಿದರೆ ನಾನು ನೋಡಿಕೊಳ್ಳುತ್ತೇನೆ ಎಂದು ಹೊರಡಿಸಿ ಆಸ್ಪತ್ರೆಗೆ ಮಗುವನ್ನು ದಾಖಲಿಸುವವರೆಗಿನ ಹೊಣೆಯನ್ನು ತಾವೇ ನೋಡಿಕೊಂಡರು. ಮಗು ಆಸ್ಪತ್ರೆಯಿಂದ ಬಿಡುಗಡೆಗೊಳ್ಳುವವರೆಗೆ ಅದರ ಆರೋಗ್ಯದ ಸುಧಾರಣೆಯನ್ನು ನೋಡಿ ಬರಲು, ಸಲಹೆ ಕೊಡಲು, ವಿಚಾರಣೆ ಮಾಡಲು ತಾವೇ ಓಡಾಡಿದರು. ಬಹು ದೂರ ಹೋದ ಆ ಮಗುವಿನ ಆರೋಗ್ಯ ಪುನಃ ಹಿಂತಿರುಗಿ, ಅದು ಸುಧಾರಿಸಿಕೊಂಡ ಮೇಲೆ ರಂಗಮ್ಮನ ಮಗ ಬಂದು, ಶಿವರಾಂ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ. ಖರ್ಚು ಮಾಡಿದ ಹಣವನ್ನು ಹೇಗಾದರೂ ಮಾಡಿ ವಾಪಸ್ ಮಾಡಲು ಅವಕಾಶ ಕೊಡಬೇಕು ಎಂದು ಕೇಳಿಕೊಂಡ. ಬಡವರ ಆತ್ಮಾಭಿಮಾನಕ್ಕೆ ಪೆಟ್ಟಾಗಬಾರದೆಂದು ಶಿವರಾಂ ಒಪ್ಪಿದರು. ಆ ಮಗ, ತಿಂಗಳಿಗೆ ಎರಡೋ ಇಲ್ಲವೇ ಮೂರೋ ರೂಪಾಯಿಯಂತೆ ಕಂತಿನ ಮೇಲೆ ತೀರಿಸತೊಡಗಿದ. ಅವರ ಕಷ್ಟದ ದುಡಿಮೆಯ ಅರಿವಿದ್ದ ಶಿವರಾಂ ಅವರಿಗೆ ಅದನ್ನು ಪೂರ್ತಿಯಾಗಿ ತೆಗೆದುಕೊಳ್ಳುವ ಮನಸ್ಸು ಬರಲಿಲ್ಲ. ಹದಿನೇಳು ರೂಪಾಯಿಗಳಷ್ಟು ವಾಪಸ್ ಬಂದ ಮೇಲೆ, ಇನ್ನೂ ಎಷ್ಟು ಬಾಕಿ ಇದೆ ಎಂಬುದನ್ನು ಲೆಕ್ಕ ಹಾಕಿ, ಉಳಿದ ಎಂಬತ್ತು ರೂಪಾಯಿಗಳಷ್ಟು ದೊಡ್ಡ ಮೊತ್ತವನ್ನು ಆ ಬಡವರ ಸಂಸಾರಕ್ಕೇ ಬಿಟ್ಟು ಕೊಟ್ಟರು. ವೈದ್ಯ ವೃತ್ತಿಯನ್ನು ಆರಂಭಿಸಿದ ದಿನಗಳಲ್ಲಿ, ತಮಗೇ ಹಣದ ಮುಗ್ಗಟ್ಟಿದ್ದರೂ, ಬಡತನದ ಬವಣೆಯ ಅರಿವಿದ್ದ ಶಿವರಾಂ ಅವರು ಇಷ್ಟು ದೊಡ್ಡ ಮೊತ್ತವನ್ನು ವಜಾ ಮಾಡಿದ್ದು ಅವರ ಔದಾರ್ಯ.

ಸ್ವಾತಂತ್ರ್ಯ ಹೋರಾಟದಲ್ಲಿ ಮುಂದಾಳಾಗಿದ್ದ, ದೇಶ ಭಕ್ತ ಸಿದ್ದವನಹಳ್ಳಿ ಕೃಷ್ಣಶರ್ಮರ ಹೆಸರಿನಲ್ಲಿ ಮಲ್ಲೇಶ್ವರದಲ್ಲಿರುವ ಗಾಂಧಿ ಸಾಹಿತ್ಯ ಸಂಘದಲ್ಲಿ ಒಂದು ವಿಭಾಗವನ್ನು ಪಾಶ್ಚಿಮಾತ್ಯದ ಪವಿತ್ರ ಪುಸ್ತಕಗಳಿಗಾಗಿ ತೆಗೆಯಲು ನೀಲತ್ತಹಳ್ಳಿ ಕಸ್ತೂರಿಯವರಿಗೆ ಸಲಹೆ ನೀಡಿದ ರಾ.ಶಿ.ಯವರು, ಅಗತ್ಯ ಪುಸ್ತಕಗಳನ್ನು ಖರೀದಿಸಲು ಮೂರು ಸಾವಿರ ರೂಪಾಯಿಗಳನ್ನೂ ದಾನವಾಗಿತ್ತರು. ಆದರೆ ಕೃಷ್ಣಶರ್ಮರು ಆ ವಿಭಾಗಕ್ಕೆ ತಮ್ಮ ಹೆಸರಿಡಲು ಸುತರಾಂ ಒಪ್ಪಲಿಲ್ಲ. ಅವರನ್ನು ಕೇಳದೆಯೇ ಅವರ ಹೆಸರಿಡಬೇಕೆಂದು ರಾ.ಶಿ. ಬಯಸಿದರಾದರೂ, ಕೃಷ್ಣಶರ್ಮರು ನಿರಾಕರಿಸಿದ್ದರಿಂದ ರಾ.ಶಿ.ಯವರ ಸಲಹೆ ಸಫಲವಾಗಲಿಲ್ಲ. ಸಂಘದಲ್ಲಿ ಹೊಸ ವಿಭಾಗವೊಂದು ತೆರೆಯಲ್ಪಟ್ಟಿತು. ಅದಕ್ಕೆ ಕಾರಣರಾದವರು ಮತ್ತು ಆರ್ಥಿಕ ನೆರವು ನೀಡಿದವರು ರಾ.ಶಿ.ಯವರೇ. ಅದು

ಗಾಂಧಿ ಸಾಹಿತ್ಯ ಸಂಘಕ್ಕೆ ಮೊಟ್ಟ ಮೊದಲಿಗೆ ದೊರೆತ ದೊಡ್ಡ ಮೊತ್ತದ ದಾನ. (ರಾಶಿ ರಾಶಿ ನೆನಪು– ಗಾಂಧಿವಾದಿ ನೀಲತ್ತಹಳ್ಳಿ ಕಸ್ತೂರಿಯವರ ಲೇಖನ)

******

ರಾ.ಶಿ.ಯವರ ಸಹಾಯ ಗುಣವನ್ನು ದುರುಪಯೋಗ ಪಡಿಸಿಕೊಂಡವರೂ ಕೆಲವರಿದ್ದರು. ತಮ್ಮ ಕರುಣಾಗುಣದಿಂದಾಗಿ ರಾ.ಶಿ.ಯವರು ಮೋಸ ಹೋದ ಸಂದರ್ಭಗಳೂ ಉಂಟು. ಇವರು ವೈದ್ಯ ವೃತ್ತಿ ಆರಂಭಿಸಿದ ಹೊಸತು. ಸ್ನೇಹಿತನೊಬ್ಬರಿಗೆ ಏನೋ ಸಮಸ್ಯೆ. ತುರ್ತು ಹಣದ ಅಗತ್ಯವಿತ್ತು. ಅವನು ಬಂದು ರಾಶಿಗೆ ಕೇಳಿದ. ಅನುಕಂಪದ ಈ ಮೂರ್ತಿ, ಅವನಿಗೆ ನೆರವು ನೀಡುವಷ್ಟು ಇನ್ನೂ ದುಡಿದಿರಲಿಲ್ಲ. ಆದರೆ ಸ್ನೇಹಿತನಿಗೆ ಕಷ್ಟವಿದೆ, ತನ್ನ ಸಹಾಯದ ಅಗತ್ಯವಿದೆ ಎನಿಸಿದ್ದೇ ತಡ ಇನ್ನೊಮ್ಮೆ ಆಲೋಚನೆಯೂ ಮಾಡದೇ ತಮ್ಮ ಪತ್ನಿಯ ಒಡವೆಗಳನ್ನು ಆತನಿಗೆ ಕೊಟ್ಟರು. ಅನುಕೂಲವಾದ ಮೇಲೆ ಹಿಂತಿರುಗಿ ಕೊಡಬೇಕಿತ್ತು ಅವನು. ಕೊಡುವುದಾಗಿಯೂ ಹೇಳಿದ್ದ. ಆದರೆ ಕೊಡಲಿಲ್ಲ. ಸಮಯ ದಾಟಿದರೂ ಅವನಿಂದ ಹಣ ಹಿಂತಿರುಗಿ ಬರಲಿಲ್ಲ. ಇನ್ನು ಬರುವುದೂ ಇಲ್ಲ ಎಂಬುದು ಖಾತ್ರಿಯಾಯಿತು ರಾ.ಶಿ.ಯವರಿಗೆ. ತಾವೇ ತಮ್ಮ ಪತ್ನಿಗೆ ಇನ್ನೊಮ್ಮೆ ಆ ಒಡವೆಗಳನ್ನು ಮಾಡಿಸಿಕೊಟ್ಟರು. ಪತ್ನಿಗೆ ಒಡವೆಗಳು ಬಂದವು. ಆದರೆ ರಾ.ಶಿ.ಯವರು ಮಾತ್ರ ಗೆಳೆಯನಿಗೆ ಕೊಟ್ಟಿದ್ದನ್ನು ಕಳೆದುಕೊಂಡರಷ್ಟೆ. ಹೀಗೆ ಅವರ ದಾನ–ಧಾರಾಳ ಮನಸ್ಸನ್ನು ದುರುಪಯೋಗ ಪಡಿಸಿಕೊಂಡವರ ಸಂಖ್ಯೆಯೂ ಕಡಿಮೆಯಲ್ಲ.

**ಪ್ರಶಸ್ತಿಗಳು, ಸನ್ಮಾನಗಳು:**

ರಾ.ಶಿ.ಯವರು ಪ್ರಶಸ್ತಿ, ಬಿರುದು, ಸನ್ಮಾನಗಳಿಂದ ತಮ್ಮ ಘನತೆ–ಗೌರವಗಳು ಹೆಚ್ಚುತ್ತದೆಂದು ನಂಬಿದವರಲ್ಲ. ಅದಕ್ಕಾಗಿ ಹಂಬಲಿಸಿದವರಲ್ಲ. ಹಂಬಲಿಸುವುದಿರಲಿ ಕೊಟ್ಟಿದ್ದನ್ನೂ ನಿರಾಕರಿಸಿದಂತಹ ಉನ್ನತ ವ್ಯಕ್ತಿ. ಪ್ರಚಾರ ಪ್ರಿಯರೂ ಅವರಲ್ಲ. ಅದರ ಬಗ್ಗೆ ಆಸೆಗಿಂತ ಬೇಡವೆನ್ನುವ ಔದಾರ್ಯವೇ ಹೆಚ್ಚು. ಬಹುಮಾನ ಪ್ರಶಸ್ತಿಗಳಿರಲಿ, ಯಾರಾದರೂ ಅವರನ್ನು ಹೆಚ್ಚು ಹೊಗಳಿದರೂ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಹೊಗಳಿಕೆ ಎಂದರೆ ಅವರ ನಿಘಂಟುನಲ್ಲಿ ಶ್ರದ್ಧಾಂಜಲಿ ಎಂಬರ್ಥ. ಯಾರಾದರೂ ಹೊಗಳತೊಡಗಿದರೆ, 'ಹುಂ ಶುರುವಾಯಿತು ನನ್ನ obituary' ಎಂದು ಹೇಳುವಷ್ಟು ನಿರ್ಲಕ್ಷ್ಯ.

ಮಹಾರಾಜರು ಮೈಸೂರು ಸಂಸ್ಥಾನದ ಒಡೆಯರಾಗಿ ರಾಜ್ಯವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ, ಇವರ ನಿಸ್ವಾರ್ಥ ಹಾಗೂ ಅತ್ಯುತ್ತಮ ಸೇವೆಯನ್ನು ಗುರುತಿಸಿ, ಇವರಿಗೆ ಬಿರುದೊಂದನ್ನು ಕೊಡಲು ನಿರ್ಧರಿಸಿದ್ದರು. ಸುದ್ದಿ ತಿಳಿದ ಮರುಕ್ಷಣವೇ ರಾ.ಶಿ.ಯವರು ಮೈಸೂರಿಗೆ ಓಡಿ, ಅದನ್ನು ತಾವು ವಿನಯದಿಂದ ನಿರಾಕರಿಸುತ್ತಿರುವುದಾಗಿ ಬಿನ್ನವಿಸಿಕೊಂಡರು. ತಮಗೆ ಅಂಥಹ ಬಿರುದುಗಳು ಬಂದರೆ, 'ಬಡ ಜನತೆ ತಮ್ಮಲ್ಲಿಗೆ ಬರಲು ಹೆದರುತ್ತದೆ, ಹಿಂಜರಿಯುತ್ತದೆ. ಅದರಿಂದ ದಯವಿಟ್ಟು ನನಗೆ ಈ ಬಿರುದು ಬೇಡ" ಎಂಬುದು ಅವರು ಬಿರುದನ್ನು ನಿರಾಕರಿಸಲು ಕೊಟ್ಟ ಕಾರಣ. ಹೀಗೆ ತಾನಾಗಿ ಅರಸಿಕೊಂಡು ಬಂದ ಬಿರುದನ್ನು ಜನತೆಗಾಗಿಯೇ ತ್ಯಜಿಸಿದ ವಿರಳ ವ್ಯಕ್ತಿ ಇವರು. ಆದರೂ ಮಹಾರಾಜರ ಮೈಸೂರು ಸರ್ಕಾರ, ದಸರಾ ಮಹೋತ್ಸವದಲ್ಲಿ, ಇವರನ್ನು ಸನ್ಮಾನಿಸಿತು. ರಜತಫಲಕವನ್ನು ನೀಡಿ, ಮರ್ಯಾದೆ ಮಾಡಿ, ಇವರು ಮಾಡಿದ ಸೇವೆಯನ್ನು ಪ್ರಶಂಸಿಸಿದ್ದೊಂದು ಉಲ್ಲೇಖನೀಯ ವಿಷಯ.

ಬೆಂಗಳೂರು ಮೆಡಿಕಲ್ ಕಾಲೇಜಿಗೆ ರಾ.ಶಿ.ಯವರ ಹೆಸರಿಡುವ ಪ್ರಸ್ತಾಪವಿತ್ತು. ಆದರೆ ಇವರು ತಮ್ಮ ಹೆಸರಿಡಲು ಒಪ್ಪಲೇ ಇಲ್ಲ.

ಇಷ್ಟೆಲ್ಲ ಬಿರುದು ಬಾವಲಿಗಳನ್ನು ನಿರಾಕರಿಸಿದರೂ, ಯಾವ ಜೈ ಜೈ ಸರದಾರರು, ಪರಾಕು ಪ್ರವೀಣರು ಇವರ ಹಿಂದೆ ನಿಲ್ಲದಿದ್ದರೂ, ಉನ್ನತ ವ್ಯಕ್ತಿಗಳನ್ನು ಒಲಿಸಿಕೊಳ್ಳುವ ಚಾಕಚಕ್ಯತೆ, ವಶೀಲಿ ಬಾಜಿ, ರಾಜಕೀಯ ಪ್ರಭಾವ– ಈ ಯಾವುದೂ ಆವರಿಸಿಕೊಂಡಿರದ ಅಂದಿನ ಆ ನಿರ್ಮಲ ವಾತಾವರಣದಲ್ಲಿ; ಕೃತಿಗಳ ಗುಣ ಮೌಲ್ಯಗಳೇ ಕೃತಿ ಸಮೀಕ್ಷೆಗೆ ಮಾನದಂಡವಾಗಿದ್ದ ಕಾಲದಲ್ಲಿ; ರಾ.ಶಿ.ಯವರ 'ಮನಮಂಥನ' ಕೃತಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರತಿಷ್ಠಿತ ಪ್ರಶಸ್ತಿಗಳು ದೊರೆತಿದ್ದು ದಾಖಲರ್ಹ ಅಂಶ. ಖಾಸಗೀ ಸಂಘ ಸಂಸ್ಥೆಗಳಿಂದ ಮಾಡಲಾದ ಸನ್ಮಾನಗಳಂತೂ ಅಗಣಿತ. ಆ ಸಮಯಕ್ಕೆ ಆಗಲೇ ಅವರ ಮನಸ್ಸು ದುಃಖ, ಸಂತೋಷಗಳ ಗಡಿ ದಾಟಿದ ಸ್ಥಿತ ಪ್ರಜ್ಞೆಯ ಪರಿಧಿಗೆ ಪ್ರವೇಶಿಸಿತ್ತೋ ಏನೋ. "ಈ ಪ್ರಶಸ್ತಿ ನನ್ನನ್ನು ಕೆಳ ಮಟ್ಟಕ್ಕೆ ಇಳಿಸಿ ಬಿಟ್ಟಿದೆ ಎಂದು ಒಮ್ಮೊಮ್ಮೆ ಅನಿಸುತ್ತದೆ" ಎಂದೋ, "ವಿನಾಶಕಾಲೇ ವಿಪರೀತ ಸಿದ್ಧಿಃ' ಎಂದೋ ನಕ್ಕು ಹೇಳುತ್ತಿದ್ದ ಮಾತುಗಳಲ್ಲಿ, ಪ್ರಶಸ್ತಿಗಳಿಗೆ ತಮ್ಮ ಮನದಲ್ಲಿ ಬೆಲೆಯೇ ಇಲ್ಲ ಎಂಬಂತಹ ನಿರ್ಲಿಪ್ತ ಭಾವ. ಈಗ ಪ್ರಶಸ್ತಿಗಾಗಿ ಪರದಾಡಿ, ಪರಿತಪಿಸಿ, ಪಾಡು ಪಡುವವರು ಈ ಜೀವಿಯ ಇಂಥ ಆದರ್ಶವನ್ನು, ಈ

ನಿರ್ಲಿಪ್ತ ಭಾವವನ್ನು ಪರಿಚಯಿಸಿಕೊಂಡರೆ ಮನಸ್ಸಿಗೆ ಖಂಡಿತ ಶಾಂತಿ, ನೆಮ್ಮದಿ.

ಇನ್ನೂ ಅಭಿನಂದನ ಗ್ರಂಥಗಳು ಶತಮಾನದ್ದೋ, ಬೆಳ್ಳಿ ಹಬ್ಬದ್ದೋ ಉಡುಗೊರೆಗಳಾಗಿ ಪರಿವರ್ತಿವಾಗುವುದಕ್ಕೂ ಮೊದಲ ಕಾಲದಲ್ಲಿ; ತಮ್ಮ ಅಭಿನಂದನ ಗ್ರಂಥಗಳನ್ನು ತಾವೇ ಮಧ್ಯವರ್ತಿಯೊಬ್ಬರ ಮುಖಾಂತರ ಮಾಡಿಸಿಕೊಳ್ಳುವ ಪರಿಪಾಠ ಬಂದಿರದಿದ್ದ ಹೊತ್ತಿನಲ್ಲಿ; ಕೇವಲ ಕೆಲವೇ ಕೆಲವು ಉನ್ನತ ಸಾಧಕರಿಗೆ, ಎಲ್ಲ ಅಭಿಮಾನಿಗಳೂ ಸೇರಿ ಸಂಭಾವನಾ ಗ್ರಂಥವನ್ನು ಸಮರ್ಪಿಸುತ್ತಿದ್ದ ಅಮೂಲ್ಯ ಸಂದರ್ಭದಲ್ಲಿ, ಅವರಿಗೆ 'ನಗೆ ನಂದನ' ಎಂಬ ಬೃಹತ್ ಗ್ರಂಥವೊಂದು, ಜಿ.ಪಿ. ರಾಜರತ್ನಂ ಅವರ ಮುಖಂಡತ್ವದಲ್ಲಿ ಸಮರ್ಪಣೆಯಾಗಿದ್ದೂ ಒಂದು ಪ್ರಶಸ್ತಿಗೆ ಸಮನಾದ ಮಹತ್ತರ ವಿಷಯ. ಒಟ್ಟು ನೂರಾ ಐವತ್ತು ಹಿರಿಯರು ಮತ್ತು ಕಿರಿಯರು ಬರೆದ ಹಾಸ್ಯದ ಹಣ್ಣುಗಳ ಸೀಕರಣೆಯೇ ಈ ಗ್ರಂಥದ ಸಿಹಿ ಹೂರಣ. ನಂದನ ಪ್ರಕಾಶನದ ಈ ಮಹತ್ ಗ್ರಂಥಕ್ಕೆ ಸೂರ್ಯ ನಾರಾಯಣ ಚಡಗರು ಸಾರಥಿ. ಅಭಿನಂದನ ಗ್ರಂಥ ಸಮರ್ಪಣೆಗೆ, ಇಂಥ ಸನ್ಮಾನಕ್ಕೆ ಯೋಗ್ಯ ವ್ಯಕ್ತಿಗಳು ಯಾರೆಂಬುದಕ್ಕೆ, ರಾ.ಶಿ.ಯವರಂತಹವರೇ ಉದಾಹರಣೆಯಾಗಲು ಸಾಧ್ಯ.

ರಾ.ಶಿ.ಯವರಿಗೆ ಎಪ್ಪತ್ತೈದನೇ ವರ್ಷದ ಹುಟ್ಟು ಹಬ್ಬದ ದಿನ, ಸುಳಿವು ಸೂಚನೆಗಳಿಲ್ಲದೆ, ರಾ.ಶಿ.ಯವರ ಮನೆಗೆ ಮುತ್ತಿಗೆ ಹಾಕಿತ್ತು, ಕನ್ನಡ ವಿಜ್ಞಾನ ಪರಿಷತ್ತು. ಸನ್ಮಾನ ಪ್ರಶಸ್ತಿಗಳನ್ನು ನಿರಾಕರಿಸುವ ರಾ.ಶಿ.ಯವರ ಗುಣದ ಅರಿವಿದ್ದುದರಿಂದ ಈ ರಹಸ್ಯ ಆಕ್ರಮಣ. ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಮತ್ತು ಪದಾಧಿಕಾರಿಗಳು ತಮ್ಮೆಲ್ಲರ ಗೌರವಗಳನ್ನು ಬೆಚ್ಚನೆಯ ಶಾಲಿನಲ್ಲಿ ಮಡಿಸಿಟ್ಟು, ಫಲತಾಂಬೂಲದಲ್ಲಿ ಪ್ರೀತಿಯ ಸಿಹಿ ತುಂಬಿ ಗೌರವಿಸಿ ಸಂತೃಪ್ತಿ ಪಡೆದರು. ಇದು ರಾ.ಶಿ.ಯವರಿಗೆ ಸಂದ ವಿಶಿಷ್ಟ ಬಗೆಯ ಸನ್ಮಾನ.

**ಹಾಸ್ಯ ಪರಿಚಾರಕ : (ಸ್ವಭಾವ):**

ರಾ.ಶಿ.ಯವರ ವಿಚಾರ–ಆಲೋಚನೆಗಳ ಹರಿವು ದೊಡ್ಡದು. ಅದು ಮುಗಿಲಿನಿಂದ ಭುವಿಯವರೆಗೆ. ಪ್ರಪಂಚದ ಪ್ರತಿಯೊಂದು ವಿಷಯದಲ್ಲೂ ಅವರಿಗೆ ಅದಮ್ಯ ಆಸಕ್ತಿ. ಇನ್ನೂ ಹೆಚ್ಚು ತಿಳಿಯಬೇಕು ಎಂಬ ಅನನ್ಯ ಕುತೂಹಲ, ಒಬ್ಬ ಕೂಲಿಕಾರನಿಂದ ಹಿಡಿದು ಸಿನಿಮಾತಾರೆಯವರೆಗೂ, ಅಜ್ಞಾನಿಯಿಂದ ಅತ್ಯುನ್ನತ ವಿಜ್ಞಾನಿಯವರೆಗೂ ಎಲ್ಲವನ್ನೂ ಅರಿಯುವ ದಾಹ.

ಪ್ರತಿಯೊಬ್ಬರ ಬದುಕಿನಿಂದಲೂ ಕಲಿಯುವಂತಹ ಪಾಠಗಳಿರುತ್ತವೆ ಎಂಬುದು ಅವರ ಅಭಿಪ್ರಾಯ. ಅದರಂತೆ ಕಲಿಕೆ. ಅಪಾರ ಅರಿವಿನ ಖನಿಯಾಗಿದ್ದರೂ ಅಹಂಕಾರದ ಸೋಂಕಿಲ್ಲದ ನಮ್ರ ನಡೆ–ನುಡಿ,

ಸಮಯಕ್ಕೆ ಅತ್ಯಂತ ಬೆಲೆ ಕೊಟ್ಟವರು. ಸಮಯ ಪ್ರಜ್ಞೆಯಿದ್ದವರು. ಬೆಳಗ್ಗೆ ಅವರು ದವಾಖಾನೆಯ ಕಡೆ ಹೊರಟರೆಂದರೆ ಸರಿಯಾಗಿ ಒಂಬತ್ತು ಗಂಟೆ ಎಂದು ಯಾರೇ ಆದರೂ, ತಮ್ಮ ಕೈ ಗಡಿಯಾರಗಳನ್ನು ಸರಿ ಪಡಿಸಿಕೊಳ್ಳಬಹುದಾದಷ್ಟು ನಿಖರ ವೇಳೆ. ಕೆಲಸದಲ್ಲಿ ಮೈ ಮರೆತರೆ ದೈಹಿಕ ಅಗತ್ಯಗಳ ಕಡೆ ಗಮನವಿಲ್ಲದಷ್ಟು ಶ್ರದ್ಧೆ. ಶ್ರದ್ಧೆ ಎಷ್ಟಿತ್ತೋ ಅಷ್ಟೇ ನಿಷ್ಠೆ. ಪ್ರತಿ ತಿಂಗಳ ಒಂದನೇ ತಾರೀಖಿನಂದು ಕೊರವಂಜಿ ಪತ್ರಿಕೆ, ಎಲ್ಲ ಚಂದಾದಾರರ ಮನೆಯಂಗಳವನ್ನು ಮುಟ್ಟಿರಬೇಕು ಎಂಬುದೂ ಸಮಯ ಪರಿಪಾಲನೆಯಂತೆಯೇ, ಹಾಕಿಕೊಂಡ ಅವರ ಇನ್ನೊಂದು ನೇಮ. ಕೊರವಂಜಿ ಅಂಗಳದಲ್ಲಿ ಬಂದು ಬಿದ್ದಳೆಂದರೆ ಅದು ಒಂದನೇ ತಾರೀಖು ಎಂದು ಕ್ಯಾಲೆಂಡರ್ ನೋಡದೆಯೇ ಖಾತ್ರಿಯಾಗುತ್ತಿದ್ದ ವಿಚಾರ.

ಈ ಲೇಖಕರಿಗೆ ಜೀವನದ ಎಲ್ಲ ವಿಷಯಗಳಲ್ಲೂ ಆಸಕ್ತಿ ಇರುವ ಹಾಗೇ ಬಗೆ ಬಗೆಯಾದ ಮತ್ತು ಬಿಸಿಬಿಸಿಯಾದ ತಿಂಡಿ, ಅಡುಗೆಗಳಲ್ಲೂ ಅಷ್ಟೇ ಆಸಕ್ತಿ ಇತ್ತು ಎನ್ನುವುದಕ್ಕೆ ಅವರ ಬಹುತೇಕ ಕೃತಿಗಳಲ್ಲಿ ಬರುವ ತಿನಿಸಿನ ವರ್ಣನೆಗಳೇ ಸಾಕ್ಷಿ. ಹೆಂಡತಿ ಗಂಡನನ್ನು ಓಲೈಸಲು, ವಧುವನ್ನು ನೋಡಲು ಬರುವ ಭಾವೀ ಬೀಗರ ಮನವೊಲಿಸಲು, ಚೆನ್ನಾಗಿ ಹಸಿವಾದಾಗ ಹೊಟ್ಟೆಯ ಹಸಿವು ತಣಿಸಲು, ಬಿಸಿ ಬಿಸಿ ಉಪ್ಪಿಟ್ಟು, ಆಂಬೊಡೆ, ಕೋಡುಬಳೆ, ಬೋಂಡಾ, ಹುರುಳಿ ಹಪ್ಪಳ, ಪುಳಿಯೋಗರೆ, ಇತ್ಯಾದಿಗಳನ್ನು ತಟ್ಟೆ ತಟ್ಟೆಗಳಲ್ಲಿ ತಂದು ಮುಂದಿಡುವ ಪರಿಯೇ ಅವರಿಗೆ ತಿನಿಸಿನ ಬಗೆಗಿರುವ ಆಸಕ್ತಿಯ ಅಭಿವ್ಯಕ್ತಿ ರೂಪ. ವೈದ್ಯವೃತ್ತಿ ಆರಂಭಿಸಿದ ದಿನ ಸಂಪಾದಿಸಿದ ಒಂದು ರೂಪಾಯಿಯಲ್ಲಿ, ನೂರಾ ತೊಂಬತ್ತೆರಡು ವಡೆ ಖರೀದಿಸಿ, ಗೆಳೆಯನೊಂದಿಗೆ ಕುಳಿತು ತಿಂದು ಮುಗಿಸಿದ್ದೂ ಈ ಮಾತಿಗೆ ಇನ್ನೊಂದು ಉದಾಹರಣೆ.

ರಾ.ಶಿ. ಎಂದರೆ ಹಾಸ್ಯಕ್ಕೆ ಇನ್ನೊಂದು ಹೆಸರು. ಅವರ ಮಾತುಗಳಲ್ಲಿ ಲವಲವಿಕೆ, ಚಾತುರ್ಯ ಮತ್ತು ಹಾಸ್ಯ, ವ್ಯಂಗ್ಯ ಎಲ್ಲವೂ ಇರುತ್ತಿತ್ತು. ಮಗುವಿನ ಎಳೆ ನಗು (ಮುಗ್ಧ ನಗು), ದೇಶಾವರಿ ನಗು, ಬಡವ ಸಾಲ ಕೇಳಲು ಸೇಠ್‌ನ ಮುಂದೆ ನಿಂತು ಹಲ್ಲು ಗಿಂಜುವ ನಗು, ಕೃತಿಮ ನಗು, ಯುವಕ ನಗು,

ಪರಿಪಕ್ವ ನಗು, ಕಿಸು ನಗು – ಇವು ಕೊರವಂಜಿಯಲ್ಲಿ ಅವರು ವಿವರಿಸಿರುವ ನಗುವಿನ ಹಲವು ರೀತಿಗಳು. ನಗುವಿನಿಂದ ಅರಿವು, 'ನಾನು" ಎಂಬುದನ್ನು ತೊಡೆದು ಹಾಕುವ ಚರಮಸೀಮೆಯ ಅರಿವೇ ಬ್ರಹ್ಮ ಸಾಕ್ಷಾತ್ಕಾರದ ಹಂತ. ನಗುವಿನಿಂದ ಆ ಹಂತಕ್ಕೆ ಏರುವುದೂ ಸಾಧ್ಯ ಎಂಬುದೂ ಅವರ ಅಭಿಪ್ರಾಯ. "ನಗುವು ತಿಳಿಯಾದಂತೆಲ್ಲಾ, ತಿಳಿ ತಿಳಿಯಾದಂತೆಲ್ಲ ತಿಳಿವು ಮೂಡುತ್ತದೆ. ತಿಳಿವು ಮೂಡಿದರೆ 'ನಾನು' ಎನ್ನುವ ಮಂಕನ ಸ್ವರೂಪದ ಪರಿಚಯವಾಗುತ್ತದೆ. ನಗುನಗುತ ಈ ರೀತಿ ಅಂತಹ ಮನೋಧರ್ಮವಿದ್ದವರು ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಹುದು. ನಂತರ ಮನನ ಮಾಡಿದರೆ ಅಹಂಕಾರ ಹರಿದರೆ ಬ್ರಹ್ಮ ಸಾಕ್ಷಾತ್ಕಾರವೂ ಆಗಲೇ ಬೇಕು. ಅಮಿತಾನಂದವನ್ನು ಅನುಭವಿಸಲೂಬಹುದು" ಎಂಬುದು ಅವರ ಅನುಭವದ ಮಾತುಗಳು. "ಬಾಳಿನ ನೆಮ್ಮದಿಗೆ ನಗು ದೃಷ್ಟಿ ಅಗತ್ಯ", 'ಹಸ್ ಕೇ ಲೇಂಗೆ ಆತ್ಮಜ್ಞಾನ್/ ಮನನ್ ಕರ್ಕೇ ಬ್ರಹ್ಮಜ್ಞಾನ್" ಎನ್ನುತ್ತಿದ್ದ ಅವರ ಪ್ರಕಾರ ನೆಮ್ಮದಿ, ಆತ್ಮ ಸಾಕ್ಷಾತ್ಕಾರ, ಬ್ರಹ್ಮ ಸಾಕ್ಷಾತ್ಕಾರ–ಇವೆಲ್ಲ ನಗುವಿನ ಹಲವು ಲಾಭಗಳು.

ರಾ.ಶಿ.ಯವರಿದ್ದಲ್ಲಿ ನಗುವಿರುತ್ತಿತ್ತು. ಹಾಸ್ಯ ಚಟಾಕಿಗಳು ಹಾರುತ್ತಿದ್ದವು. ಮಾತು ಮಾತಿಗೆ ಸರಾಗವಾಗಿ ಸ್ವಾಭಾವಿಕವಾದ 'ಜೋಕು'ಗಳು ಜಾರುತ್ತಿದ್ದವು, ಅವರೇ ಅಲ್ಲದೆ ಸುತ್ತಮುತ್ತಲು ಇದ್ದವರಲ್ಲೂ ಆರೋಗ್ಯದ ಗೆಲುವು ಕಾಣುತ್ತಿತ್ತು. ರಚಿತ ಕೃತಿಗಳಿಂದ ಹೊರತಾದ ಕೆಲವು ನಗುವ ಸಂದರ್ಭಗಳ ಉದಾಹರಣೆಗಳು ಇಲ್ಲಿವೆ.

ತಮ್ಮ ಮನೆಯನ್ನು ನಾಗಾಲ್ಯಾಂಡ್ (ಪತ್ನಿ ನಾಗಮ್ಮನವರದು) ಎಂದು ಕರೆಯುತ್ತಿದ್ದುದು ಅವರ ತಮಾಷೆಯ ಸ್ವಭಾವವೇ. ಒಮ್ಮೆ ಅವರ ಪತ್ನಿ ನಾಗಮ್ಮನವರು ಅವರ ತವರಾದ ಹಾಸನಕ್ಕೆ ಹೊರಟಿದ್ದರು. ಹೊರಡುವ ಮುಂಚೆ ಮನೆಯ ಉಸ್ತುವಾರಿಯ ಕಡೆ ಹಲವು ಎಚ್ಚರಿಕೆಗಳನ್ನು ನೀಡಿದರು, "ಸರಿಯಾಗಿ ಬಾಗಿಲು ಹಾಕಿಕೊಳ್ಳಿ., ಹೊತ್ತು ಹೊತ್ತಿಗೆ ಹೊಟ್ಟೆಗೆ ಹಾಕಿಕೊಳ್ಳಿ. ಅಡುಗೆ ಮಾಡುವಾಗ ಹುಷಾರು. ಮಾಡಿದ ಮೇಲೆ ಮುಚ್ಚಿಡುವುದನ್ನು ಮರೆಯಬೇಡಿ." ಇತ್ಯಾದಿ ಇತ್ಯಾದಿ.

"ಸರಿ ಸರಿ ನೀನು ಮನೆಕಡೆ ಯೋಚ್ನೆ ಮಾಡಬೇಡ, ನಾನೂ ಹೆಣ್ಣು ಮಕ್ಕಳೂ ಸೇರ್ಕೊಂಡು ಅಡುಗೆ ಮಾಡ್ಕೋತೀವಿ, ಆದ್ರೆ ಅಡುಗೆಯಲ್ಲಿ ಕೂದಲು ಯಾವಾಗ ಹಾಕ್ಬೇಕು ಅನ್ನೋದನ್ನ ಹೇಳ್ಬಿಟ್ ಹೋಗು" ಎಂದಿದ್ದರಂತೆ .

ಅಡುಗೆಯವರಿದ್ದರೂ, ಹೆಣ್ಣುಮಕ್ಕಳಿಗೆ ಅಡುಗೆ, ಮನೆಗೆಲಸ ಎಲ್ಲವನ್ನೂ ಕಲಿಸಿದ್ದರು ಮನೆಯಲ್ಲಿ. ಕೊನೆಯ ಮಗಳು ಲೀಲಾಗ ಹತ್ತು ವರ್ಷವೋ ಏನೋ. ಚಟ್ನಿ ಮಾಡುವುದನ್ನು ಕಲಿತಿರುವ ಬಗ್ಗೆ ಅವಳನ್ನು ವಿಚಾರಿಸಿದರು ತಂದೆ, 'ಚಟ್ನಿ ಹೇಗೆ ಮಾಡುತ್ತೀಯ ಲೀಲಾ" ಎಂದು. ಮಕ್ಕಳಿಗೆ ತಂದೆಯ ಬಗ್ಗೆ ಪ್ರೀತಿ ಇರುವಷ್ಟೇ ಗೌರವಪೂರ್ವಕ ಭಯ. ಕಲಿತಿದ್ದನ್ನು ಒಪ್ಪಿಸಿದಳು ಚಿಕ್ಕ ಹುಡುಗಿ. 'ಸರಿ. ಕೂದಲು ಯಾವಾಗ ಹಾಕುವುದು" ಎನ್ನುವ ಮಾಮೂಲು ಪ್ರಶ್ನೆ ತಂದೆಯದು, ಮಾಡಿದ ಅಡುಗೆಯಲ್ಲಿ ಸಣ್ಣ ಕೂದಲ ಎಳೆ ತುಣುಕು ಸಿಕ್ಕರೂ ಅಪಾರ ಕೋಪ. ಅದಕ್ಕಾಗಿ ಈ ಬಗ್ಗೆ ಮೇಲಿಂದಮೇಲೆ ಪ್ರಶ್ನೆ–ಪ್ರಸ್ತಾಪ. ಗೊತ್ತಿಲ್ಲ ಎನ್ನಲೂ ಭಯ. ಹಾಕಬೇಕಾ ನಿಜವಾಗಲೂ ಎನ್ನುವುದೂ ಅನುಮಾನ. ಗಾಬರಿಯಲ್ಲಿ ಥಟ್ಟನೆ ಉತ್ತರಿಸಿದಳು ಮಗಳು, "ಎಲ್ಲಾ ಆದಮೇಲೆ". ಎಂದು. ರಾ.ಶಿ.ಯವರಿಗೇ ಜೋರಾಗಿ ನಗು ಅವಳ ಉತ್ತರ ಕೇಳಿ.

ಒಮ್ಮೆ ಡಿ.ವಿ.ಜಿ. ಅವರನ್ನು ಕಂಡು ಬರಲು ಅವರ ಮಗಳು ಹೋಗಿದ್ದರು. ಮನೆಗೆ ಬಂದ ಮೇಲೆ "ಅಪ್ಪ. ಡಿ.ವಿ.ಜಿ.ಯವರು ನಿಮ್ಮನ್ನು ತುಂಬಾ ಕೇಳಿದರು", ಎಂದು ಹೇಳಿದಾಗ ರಾ.ಶಿ. "ಎಷ್ಟಕ್ಕೆ?" ಎಂದು ಚಟಾಕಿ ಹಾರಿಸಿದರು.

ಆ ದಿನ ಖ್ಯಾತ ಮಹಿಳಾ ಸಾಹಿತಿಯೂ, ಅವರ ಶಿಷ್ಯೆಯೂ ಆದ, ಡಾ. ಅನುಪಮಾ ನಿರಂಜನ ಅವರ ಚಿಕಿತ್ಸಾಲಯದ ಆರಂಭ. ಉದ್ಘಾಟನೆ ಡಾ. ಎಂ ಶಿವರಾಂ ಅವರಿಂದ. ಅನುಪಮಾ ಅವರು ಮಾಡಿದ ಎಲ್ಲ ವ್ಯವಸ್ಥೆಗಳನ್ನೂ ಪರಿಶೀಲಿಸಿದರು ರಾ.ಶಿ.ಯವರು. ನಂತರ, "ಅನುಪಮಾ, ನಲ್ಲಿಯಲ್ಲಿ ನೀರು ಸರಿಯಾಗಿ ಬರುತ್ತೇನಮ್ಮ?" ಎಂದು ಕೇಳಿದರು. ಯಾವುದಕ್ಕೆ ಕೇಳುತ್ತಿದ್ದಾರೆಂಬುದು ತಿಳಿಯದೇ ಅನುಪಮಾ, "ಓ ಬೇಕಾದ ಹಾಗೆ ನೀರು ಬರುತ್ತೆ" ಎಂದರು.

ತಕ್ಷಣ "ಓ ಹಾಗಾದರೆ ಪರವಾಗಿಲ್ಲ ಬಿಡು. ಎಷ್ಟು ರೋಗಿಗಳು ಬಂದ್ರೂ ಧಾರಾಳವಾಗಿ ಔಷಧಿ ಒದಗಿಸಬಹುದು" ಎಂದು ನಕ್ಕಿದ್ದರಂತೆ ರಾ.ಶಿ.ಯವರು.(ಆ ಕಾಲದಲ್ಲಿ ನೀರೌಷಧಿಗಳೇ ರೋಗಿಗಳಿಗೆ ಕೊಡುತ್ತಿದ್ದ ರೋಗ ಪರಿಹಾರಕಗಳು)

ಮನೆಯಲ್ಲಿ ಚಪಾತಿ ಸ್ವಲ್ಪ ಗಟ್ಟಿಯಾದರೆ ಅವರ ಹಾಸ್ಯ ಸಿದ್ಧವಿರುತ್ತಿತ್ತು, "ಈ ಚಪಾತಿಯಲ್ಲಿ ಎರಡು ಫಸ್ಟ್ ಕ್ಲಾಸ್ ಚಪ್ಪಲಿಗಳನ್ನು ಹೊಲಿಸಿಕೊಳ್ಳಬಹುದು"

ಪತ್ನಿಗೆ ಅನಾರೋಗ್ಯವಾದಾಗ ಎದುರಿಸಿದ ಸಂಕಷ್ಟದ ಸಂದರ್ಭವನ್ನು, ಇನ್ನೂ ಮರೆಯಲಾಗದ ದುಃಖದಲ್ಲಿದ್ದ ಒಬ್ಬ ವ್ಯಕ್ತಿ ಈ ವೈದ್ಯರ ಬಳಿ ಬಂದ. ಅವನ ಹೆಂಡತಿಗೆ ಆದ ಖಾಯಿಲೆ, ಆದರ ಭಯ, ಎದುರಿಸಿದ ಕಷ್ಟ, ಹೇಗೋ ಅಂತೂ ಆಕೆ ಉಳಿದು ಬಂದ ಸನ್ನಿವೇಷ, ಒಟ್ಟಿನಲ್ಲಿ ಸರಿದು ಹೋದ ಭೂತದ ಬಗ್ಗೆ ಎಲ್ಲವನ್ನೂ ಈ ವೈದ್ಯರ ಮುಂದೆ ಹೇಳಿಕೊಂಡು ಮನಸ್ಸನ್ನು ಖಾಲಿ ಮಾಡಿಕೊಳ್ಳಲೆಂದು ಆತ ಬಂದಿದ್ದ. "ಅವಳಿಗೆ ಖಾಯಿಲೆ ತುಂಬಾ ಜಾಸ್ತಿ ಆಗಿ ಬಿಟ್ಟಿತ್ತು ಸರ್. ನರ್ಸಿಂಗ್ ಹೋಂಗೆ ಸೇರಿಸಿದ್ದೆ.(ಈಗಿನಂತೆ ವಿನಾಕಾರಣವೋ ಸಣ್ಣ ಕಾರಣಕ್ಕೋ ಸೇರಿಸುವ ಪದ್ಧತಿ ಇರಲಿಲ್ಲ ಆಗ) ಡಾಕ್ಟರ್. ಅವರು ಚೆನ್ನಾಗಿ ಚಿಕಿತ್ಸೆ ಕೊಟ್ಟರು. ಆದರೆ ಮೂರೂವರೆ ಸಾವಿರ ರೂಪಾಯಿ ಖರ್ಚಾಯಿತು. ಮೊನ್ನೆ ತಾನೆ ಮನೆಗೆ ಕರ್ಕೊಂಡು ಬಂದೆ. ಸದ್ಯ ಹುಶಾರಾಗಿ ಮನೆಗೆ ಬಂದಿದ್ದಾಳೆ" ಎಂದು ದುಗುಡದ ಧ್ವನಿಯಲ್ಲೇ ಹೇಳಿದ.

"ಅಯ್ಯೋ ಹಳೇ ಹೆಂಡತೀಗೆ ಅಷ್ಟೊಂದು ಯಾಕೆ ಖರ್ಚು ಮಾಡಿದೆಯೋ. ಆ ದುಡ್ಡಿಗೆ ಇನ್ನೊಂದು ಹೊಸ ಮದುವೇನೇ ಮಾಡ್ಕೋಬಹುದಿತ್ತಲ್ಲೋ"? ಎಂದು ಥಟ್ಟನೆ ಹೊರ ಬಂದ ಶಿವರಾಂರ ಮಾತು, ಆ ಹುಡುಗನ ಮುಖದ ದುಗುಡವನ್ನೆಲ್ಲ ಫಳಕ್ಕನೆ ಕರಗಿಸಿ ಫಕ ಫಕ ನಗುವಾಗಿ ಬದಲಾಯಿತು. ಮುಂದುವರಿದ ಕುಶಲೋಪರಿಯ ಮಾತುಗಳು ಅವನ ಆತಂಕವನ್ನು ಇನ್ನಷ್ಟು ಕರಗಿಸಿದವು. ಬಿಗಿದ ಮುಖದಲ್ಲಿ ಒಳ ಬಂದವನು ಅರಳಿದ ಮುಖದಲ್ಲಿ ಹೊರ ಹೋದ.

ಆ ದಿನ ಕೈಲಾಸಂ ದಿನಾಚರಣೆ. ಕೈಲಾಸಂ ಅವರ ಕುರಿತು ಮಾತನಾಡುತ್ತಿದ್ದವರು ಕೊರಟಿ ಶ್ರೀನಿವಾಸ ರಾವ್ ಅವರು. ಬರಬೇಕಾಗಿದ್ದ ಇನ್ನಿಬ್ಬರು ಉಪನ್ಯಾಸಕರು ಬರಲಿಲ್ಲ. ಅವರ ಬದಲಿಗೆ ಆಹ್ವಾನಿತರಾಗಿ ಬಂದವರು ರಾ.ಶಿ. ಮತ್ತು ಬಿ. ಪುಟ್ಟಸ್ವಾಮಯ್ಯನವರು. ಈ ಇಬ್ಬರೂ ವೇದಿಕೆಗೆ ಧಡಧಡನೆ ಮೆಟ್ಟಿಲೇರಿ ಬರುವಾಗ, ಶ್ರೀನಿವಾಸ ರಾವ್ ಅವರು ಮಾತು ನಿಲ್ಲಿಸಿ, "ಓ ದಿಗ್ಗಜರು ಬರುತ್ತಿದ್ದಾರೆ. ಅವರುಗಳು ನನಗಿಂತ ಚೆನ್ನಾಗಿ ಮಾತಾಡ್ತಾರೆ" ಎಂದು ಕುಳಿತು ಬಿಟ್ಟರು. ರಾ.ಶಿ.ಯವರು ತಮ್ಮ ಭಾಷಣದ ಆರಂಭದಲ್ಲಿ,

"ಶ್ರೀನಿವಾಸ ರಾವ್ ಅವರು ನಮ್ಮನ್ನು ನೋಡಿ ದಿಗ್ಗಜರು ಎಂದರು. ಅವರು ಹೇಳಿದ್ದು ಸರಿ. ನಾವು ನೋಡಕ್ಕೇನೋ ದಿಗ್ಗಜರ ತರಹಾನೇ ಇದೀವಿ. ಆದ್ರೂ ಇಂಥ ತುಂಬಿದ ಸಭೆಯಲ್ಲಿ ಈ ಮಾತನ್ನು ಅವರು ಹೇಳಬಾರದಿತ್ತು" ಎಂದಾಗ ಸಭೆಯಲ್ಲಿದ್ದವರಿಗೆಲ್ಲ ನಗು. ಮಾತು ಮುಂದುವರೆಸಿದ ರಾ.ಶಿ.ಯವರು,'ನಾನು ಯಮ ಶಿವರಾಮ್. ಹೇಗೋ ಒಂದು ಡಾಕ್ಟರಾಗಿ ಅವನ (ಯಮನ) ಸೇವೆಯನ್ನು ತಕ್ಕಮಟ್ಟಿಗೆ ಮಾಡ್ತಾ ಇದೀನಿ." ಎಂದು ಶುರು ಮಾಡಿದ್ದನ್ನು ಆ ದಿನ ಸಭೆಯಲ್ಲಿದ್ದ ಕೆಲವರಿಗೆ ಈಗಲೂ ನೆನೆಸಿ ನಗು ಉಕ್ಕುತ್ತದೆ.*

'ಕೊರವಂಜಿ' ಪತ್ರಿಕೆ ನಿಲ್ಲಿಸಿದ್ದಕ್ಕೆ ಆರ್ಥಿಕ ದುಸ್ಥಿತಿಯೂ ಒಂದು ಕಾರಣ ಎಂದು ತಿಳಿದ ಅವರ ಸ್ನೇಹಿತರೊಬ್ಬರು, 'ಕೊರವಂಜಿಯಿಂದ ನಿನಗೆ ತುಂಬ ನಷ್ಟವಾಯಿತೇನೋ ಅಲ್ವಾ"? ಎಂದು ಕೇಳಿದರು.

"ಒಂದು ರೀತಿಯಲ್ಲಿ ನೋಡಿದರೆ ನಷ್ಟವೇ ಆಗಿದ್ದು. ಆದರೆ ಅದು ನಷ್ಟ ಎನ್ನುವಂತಿಲ್ಲ. ಲಾಭ ಆಗಿದ್ದರೆ ಇನ್‌ಕಂ ಟ್ಯಾಕ್ಸ್ ಕಟ್ಟಬೇಕಿತ್ತು. ಅದರಿಂದ ಟ್ಯಾಕ್ಸ್ ಕಟ್ಟುವುದು ಉಳಿಯಿತಲ್ಲ. ಹಾಗಾಗಿ ಇನ್‌ಡೈರೆಕ್ಟ್ ಲಾಭವೇ ಆಯಿತು ಎನ್ನಬಹುದು" ಎಂದು ನಗುವಿನಲ್ಲಿ ಸತ್ಯವನ್ನು ಮರೆಮಾಚಿದ್ದರು.

ಅವರ ಬಳಿ ಮದ್ದಿಗಾಗಿ ಬರುತ್ತಿದ್ದ ಹುಡುಗನೊಬ್ಬನ ಮದುವೆ ನಿಶ್ಚಯವಾಯಿತು. ತುಂಬ ಸಂತೋಷದಿಂದ ತನಗೆ ಮದುವೆ ಗೊತ್ತಾಗಿರುವ ವಿಷಯ ತಿಳಿಸಲು ದವಾಖಾನೆಗೆ ಬಂದ. ಯಾರೇ ಆದರೂ ಚರ್ಚೆಗೆ, ಸಾಹಿತ್ಯ ಕಾರ್ಯಕ್ರಮದ ಆಮಂತ್ರಣಕ್ಕೆ, ಮದುವೆ ಮುಂಜಿಗಳ ಕರೆಯೋಲೆ ಕೊಡುವುದಕ್ಕೆ, ಹರಟೆಗೆ–ಹೀಗೆ ಎಲ್ಲದಕ್ಕೂ ಅಥವಾ ಯಾವುದಕ್ಕೂ ಸಂಕೋಚವಿಲ್ಲದೆ, ನಿರುಮ್ಮಳವಾಗಿ ಅವರನ್ನು ಭೇಟಿ ಮಾಡಬಹುದಾದ ಸ್ಥಳವದು. ಹುಡುಗ ಬಂದ. ಆಮಂತ್ರಣ ಪತ್ರಿಕೆ ಕೊಟ್ಟು ಕರೆದ. "ಓ ಹೌದಾ ತುಂಬಾ ಸಂತೋಷನಪ್ಪ. ಹೇಗಿದ್ದಾಳೆ ಹುಡುಗಿ. ಏನು ಮಾಡ್ತಿದಾಳೆ" ಎಂದೆಲ್ಲ ಸಾಮಾನ್ಯವಾಗಿ, ಸಹಜವಾಗಿ ಕೇಳುವ ಪ್ರಶ್ನೆಗಳನ್ನು ಅವರಿಂದ ನಿರೀಕ್ಷಿಸಿ ನಿಂತ. ಆದರೆ ರಾ.ಶಿ.ಯವರು ಕೇಳಿದ್ದೇನು, 'ಅಯ್ಯೋ ಮದುವೆ ಆಗ್ತಾ ಇದೀಯ? ಪಾಪ ಏನಾಯ್ತಪ್ಪ ನಿಂಗೆ? ಆಂ? ಮೊನ್ನೆ ಮೊನ್ನೆ ತನಕ ಚೆನ್ನಾಗಿ ಇದ್ದೆಯಲ್ಲೋ" ಎಂದು. ಹುಡುಗ ಒಮ್ಮೆ ತಬ್ಬಿಬ್ಬು. ನಂತರ ನಗು.

(*ಎಂ. ಶಿವಕುಮಾರ್ ಅವರ ಪುಸ್ತಕ ಡಾ.ಎಂ. ಶಿವರಾಂ)

ಅವರ ಈ ಹಾಸ್ಯ ಪ್ರವೃತ್ತಿ ಕೊನೆಗಾಲದ ದಿನಗಳಲ್ಲಿಯೂ ಅನಾರೋಗ್ಯದ ನೋವಿನಲ್ಲೂ, ಅವರನ್ನು ಬಿಟ್ಟಿರಲಿಲ್ಲ. ಕೊರವಂಜಿ'ಗೆ ಸತತ ಬರೆಯುತ್ತಿದ್ದ ಲೇಖಕರಲ್ಲಿ ಒಬ್ಬರಾದ ಅ.ರಾ.ಸೇ.ಯವರು ಅವರನ್ನು ನೋಡಿ ಬರಲು ಹೋದಾಗ, "ನೋಡಪ್ಪ, ಸೆಕೆಂಡ್ ಸ್ಟ್ರೋಕ್ ಆಯಿತು ನಂದೀಶ್ವರ ಕೈಲಾಸದಲ್ಲಿ ಸೆಕೆಂಡ್ ಬೆಲ್ ಹೊಡೆದಿದ್ದಾನೆ. ನಾನು ಸರ್ವಾತ್ಮಭಾವಕೆ ಇಂಡಾಕ್ಟ್ರಿನೇಟ್ ಆಗುತ್ತಿದ್ದೇನೆ." ಎಂದರು.

ಇವರಿಗೆ ಹುಶಾರಿಲ್ಲದ ಸುದ್ದಿ ಕೇಳಿ, ವಿ.ಎಸ್. ನಾರಾಯಣ ರಾಯರು, ಹಿಂದಿ ಭಾಷಾ ಶಿಕ್ಷಕಿ ಕಾಮಾಕ್ಷಮ್ಮ, ಗಾಂಧಿ ಸಾಹಿತ್ಯ ಸಂಘದ ಕೃಷ್ಣ, ರಮಾಕಾಂತ್, ನೀಲತ್ತಹಳ್ಳಿ ಕಸ್ತೂರಿ, ಮುಂತಾದವರೆಲ್ಲರೂ ರಾ.ಶಿ.ಯವರ ಮನೆಗೆ ಹೋದರು. ಪ್ರತ್ಯೇಕ ಕೋಣೆಯಲ್ಲಿ ವಾಸಿಸುತ್ತಿದ್ದ ರಾ.ಶಿ.ಯೇ ತಟ್ಟಾಡುತ್ತ ಬಾಗಿಲು ತೆಗೆದರು. ಇಷ್ಟೊಂದು ಜನರನ್ನು ಒಟ್ಟಿಗೇ ನೋಡಿದ್ದೇ ನಗುತ್ತ, "ಏನ್ರಯ್ಯ ಏನು ಏನಿದು, ಎಲ್ಲ ಒಟ್ಟಾಗಿ ಸೇರ್ಕೊಂಡು ಹೀಗೆ ಬಂದಿದೀರಿ, ಕೆಟ್ಟ ಸುದ್ದಿ ಬಂದಿತ್ತಾ? ನಾನಿನ್ನೂ ಸತ್ತಿಲ್ಲ. ಬದುಕಿದೀನಿ"ಎಂಬ ಹೇಳಿ, "ಬನ್ನಿ ಒಳಗೆ" ಎಂದು ನಗುತ್ತ ಸ್ವಾಗತಿಸಿದರು. ಅವರಿಗೆ ಆರೋಗ್ಯ ಸರಿ ಇಲ್ಲ ಎಂದು ನೋಡಲು ಹೋದವರಿಗೆ ಅದು ನೋಡಿದರೇ ತಿಳಿಯುವಂತಿದ್ದು, ಬೇಸರವಾದರೂ, ಅವರ ಈ ಚಟಾಕಿಯ ಸ್ವಾಗತದಿಂದಾಗಿ ಬೇಸರ ಮರೆತು ನಕ್ಕರು.

ಡಾ. ಎಚ್.ಕೆ. ರಂಗನಾಥ್ ಅವರು ಈ ಸಾಹಿತಿಯ ಖಾಸಾ ಸ್ನೇಹಿತರು. ಸ್ನೇಹಿತನನ್ನು ನೋಡಲು ಮನೆಗೆ ಬಂದರು. ರಾ..ಶಿ.ಯವರು ತಮ್ಮೆಲ್ಲ ಚಟುವಟಿಕೆಗಳಿಗೆ ವಿದಾಯ ಹೇಳಿ ಹಾಸಿಗೆಯನ್ನೇ ಪ್ರೀತಿಸತೊಡಗಿದ ದಿನಗಳವು. ಮಾತಿರಲಿ ಧ್ವನಿಯೂ ಇರಲಿಲ್ಲ ಅವರಿಗೆ. ರಂಗನಾಥರಿಗೆ ತಮ್ಮ ಆತ್ಮೀಯ ಗೆಳೆಯನ ಈ ಸ್ಥಿತಿಯನ್ನು ಕಂಡು ಗಂಟಲು ಕಟ್ಟಿತು. ಸುಮ್ಮನೇ ಹತ್ತಿರ ಹೋಗಿ ಅವರ ಮಂಚದ ಪಕ್ಕವೇ ಕುಳಿತರು. ಪರಸ್ಪರ ಮಾತುಗಳು ಮೌನದಲ್ಲಿ, ತುಂಬಿದ ಕಣ್ಣುಗಳಲ್ಲಿ ವಿನಿಮಯಗೊಂಡವು. ನಂತರ ರಂಗನಾಥರು, 'ಹೇಗಿದ್ದೀರಿ ಸರ್?" ಎಂದು ಕೇಳಿದಾಗ, ಅವರನ್ನು ಇನ್ನೂ ಹತ್ತಿರಕ್ಕೆ ಕರೆದ ರಾ.ಶಿ.ಯವರು "ಏನಪ್ಪಾ ರಂಗನಾಥ್ ನಿಂಗೆ ಯಾವ್ ಹೊತ್ನಲ್ಲಿ ಏನ್ ಕೇಳ್ಬೇಕು ಅನ್ನೋದೂ ಗೊತ್ತಿಲ್ವಲ್ಲ? ಹೀಗೆ ಹಾಸಿಗೆ ಹಿಡಿದಿರುವ ನನ್ನನ್ನ ಹೇಗಿದ್ದೀರಿ ಅಂತ ಅಲ್ಲ, ಯಾಕಿದ್ದೀರಿ ಸರ್ ಅಂತ ಕೇಳ್ಬೇಕು ತಿಳೀತಾ?" ಎಂದು ಕ್ಷೀಣ ದನಿಯಲ್ಲಿ ಹೇಳಿ ನಕ್ಕಿದ್ದರಂತೆ. ಅವರ ಸ್ಥಿತಿಯನ್ನು

ನೋಡಿದ ರಂಗನಾಥ್ ಅವರಿಗೆ ಆ ಸಮಯದಲ್ಲೂ ಒಮ್ಮೆ ನಗು ಮಿಂಚಿದ್ದು ಸಹಜ. ಅದಾದ ನಾಲ್ಕೇ ದಿನಗಳಲ್ಲಿ ರಾ.ಶಿ.ಯವರು ನಗುನಗುತ್ತ ನಡೆದು ಬಿಟ್ಟರು.*

ಯಾರೋ ಒಬ್ಬರು ಬಂದು, 'ಸರ್ ನಿಮ್ಮ ಫೋಟೋ ಬೇಕಿತ್ತು ಸರ್, ಸಿಗುತ್ತಾ?" ಎಂದು ಕೇಳಿದರು, ಹೀಗೇ ಅವರು ಮಲಗಿದ ದಿನಗಳಲ್ಲೇ. ರಾ.ಶಿ.ಯವರು "ಇನ್ನು ಸ್ವಲ್ಪ ದಿನ ಕಾದು ಬಿಡಿ. ಇನ್ನೇನು ನನ್ನ ಫೋಟೋ ಎಲ್ಲ ಪತ್ರಿಕೆಗಳಲ್ಲಿ ಬರುತ್ತೆ, ನನ್ನ ನಿಧನದ ಸುದ್ದಿಯ ಜೊತೆಗೆ" ಎಂದು ನಕ್ಕರು. ಬಂದವರು ಏನೂ ಹೇಳದೇ ನಕ್ಕು ಫೋಟೋ ತೆಗೆದುಕೊಂಡು ಹೋದರು.

ಆಲೋಚನೆಗಳನ್ನು ವೃದ್ಧಿಸುವ, ಹೊಸ ಹೊಸ ಕತೆಗಳನ್ನು ಮನಸ್ಸಿನಲ್ಲಿ ಮೂಡಿಸುವ, ವಿಭಿನ್ನ ವಿಚಾರಗಳನ್ನು ಎಳೆ ತರುವ, ಮಾತುಕತೆಗಳಲ್ಲಿ ಹುರುಪು ಹೆಚ್ಚಿಸುವ, ರಾ.ಶಿ.ಯವರ ಏಕೈಕ ಸಂಗಾತಿಯೆಂದರೆ ಸಿಗರೇಟ್. ಉತ್ಸಾಹಕ್ಕೆ ಸ್ಫೂರ್ತಿಗೆ, ಸದಾ ಸಿದ್ಧವಿರುತ್ತಿದ್ದ ಸುಖದ ಸಖ.

ಶಾಸ್ತ್ರೀಯ ಸಂಗೀತಕ್ಕಿಂತ ಭಾವಗೀತೆಗಳು ಹೆಚ್ಚು ಮೆಚ್ಚುಗೆ. ವೀ.ಸೀ.ಯವರು ಅವರ ಆರಾಧ್ಯ ಕವಿ. ಅವರ ಶಿವರಾತ್ರಿ, ಭಾರತ ಜಗದಾಂಬ, ಕಾಲುಂಗರ ರವ. ಮುಂತಾದ ಕವಿತೆಗಳನ್ನು ಇಂಪಾಗಿ ಹಾಡುವಂತೆ ಓದುವಾಗ ಮನಸ್ಸಿಗೆ ಎಲ್ಲಿಲ್ಲದ ಸಮಾಧಾನ, ಸಂತೃಪ್ತಿ.

**ಸಾಹಿತಿಗಳ ಸ್ನೇಹ ಬಳಗ:** ರಾ.ಶಿ.ಯವರ ಸ್ನೇಹ ಬಳಗದ ಬಗ್ಗೆ ಇಲ್ಲಿ ಹೇಳಲೇ ಬೇಕು. ರಾಶಿಯವರು ಆ ಎತ್ತರಕ್ಕೆ ಬೆಳೆದು ನಿಲ್ಲಲು ಒಂದು ರೀತಿಯಲ್ಲಿ ಈ ಸ್ನೇಹ ಬಳಗವೂ ಕಾರಣ. ಸ್ವಜಾತಿಯ ಸಂಬಂಧಿಕರಿಗಿಂತ ಸಮಾನಾಭಿರುಚಿಯ ಸ್ನೇಹಿತರ ಮೇಲೆ ಅವರಿಗೆ ಹೆಚ್ಚು ಪ್ರೀತಿ. ಅವರ ಗೆಳೆಯರ ಬಳಗ ದೊಡ್ಡದು ಮಾತ್ರವಲ್ಲ, ಉನ್ನತ ಮಟ್ಟದ ಸಾಹಿತಿಗಳನ್ನು, ಅತ್ಯಂತ ಮೇಧಾವಿಗಳನ್ನು, ಉತ್ತಮ ಚಿಂತಕರನ್ನೂ ಒಳಗೊಂಡದ್ದು. ಈ ಬಳಗದಲ್ಲಿ ಮೂರು ಗುಂಪು. ಒಂದು ಸಾಹಿತಿಗಳ ಸಮೂಹ, ಇನ್ನೊಂದು ವೈದ್ಯರ ಗುಂಪು ಮತ್ತೊಂದು ಕೈಗಾರಿಕೋದ್ಯಮಿಗಳ ಕೂಟ. ಇವರ ಮಿತ್ರತ್ವಕ್ಕೆ ಜಾತಿ, ಮತ, ಧರ್ಮಗಳ ಸೀಮೆ ಇರಲಿಲ್ಲ. ಬ್ರಾಹ್ಮಣರು, ದಲಿತರು, ಕ್ರಿಶ್ಚಿಯನ್ನರು, ಮುಸ್ಲಿಮರು ಮಾತ್ರವಲ್ಲದೇ ಒಂದಿಬ್ಬರು ಪಾಶ್ಚಾತ್ಯರೂ ಇವರ

(*ಜೇನಹನಿ–ಡಾ.ಎಚ್. ಕೆ. ರಂಗನಾಥ್–2000)

ಮಿತ್ರಕೂಟದಲ್ಲಿದ್ದರು. ಎಲ್ಲರಿಗೂ ಇವರ ಹಾಸ್ಯ ಪ್ರವೃತ್ತಿ ಪ್ರಿಯ. ಸಂವಾದಕ್ಕೆ ಇಳಿದರೆ ಸ್ವಾರಸ್ಯಪೂರ್ಣ. ವೈಚಾರಿಕ ಸಂಭಾಷಣೆಗಳೆಂದರೆ ಬಿಟ್ಟು ಹೋಗಲಾಗದ ಆಕರ್ಷಣೆ. ಇವರ ನಿಷ್ಕಪಟ ಸ್ನೇಹಕ್ಕೆ ಸೋತು ಬಿಡುವ ಮನಸ್ಸುಗಳು.

ಮೆಜೆಸ್ಟಿಕ್‌ನ ಬಳೇಪೇಟೆಯಲ್ಲಿದ್ದ ಇವರ 'ಸಿಟಿ ಡಿಸ್ಪೆನ್ಸರಿ'ಗೆ, ಹಲವಾರು ಉದಿತ ಸಾಹಿತಿಗಳು, ಉದಯೋನ್ಮುಖ ಸಾಹಿತಿಗಳೂ, ರೋಗಿಗಳ ಸರದಿ ಸಾಲಿನಲ್ಲಿ ಕಾದು ನಿಂತು, ಇವರನ್ನು ಭೇಟಿ ಮಾಡುತ್ತಿದ್ದರು. ಇವರಿಂದ ಸಾಹಿತ್ಯದ ಕೆಲಸಗಳನ್ನು ಮಾಡಿಸಿಕೊಳ್ಳುತಿದ್ದರು. ಕಾರ್ಯಕ್ರಮಗಳ ವಿವರಗಳೂ, ಸಾಹಿತ್ಯದ ಚರ್ಚೆಯೂ, ಸಿಗುವ ಕಿರು ಸಮಯದಲ್ಲಿ ಅಲ್ಲಿ ನಡೆಯುತ್ತಿತ್ತು. ಕೊರವಂಜಿಗೆ ಲೇಖನಗಳನ್ನು ಕೊಡುವವರು, ಕೊಟ್ಟ ಲೇಖನಗಳ ಬಗ್ಗೆ ವಿಚಾರಿಸ ಬಯಸಿದವರು, ಪ್ರಕಟಿತ ಲೇಖನಗಳಿಗೆ ಸಂಭಾವನೆ ಪಡೆಯಬಯಸುವವರು–ಇವರುಗಳೂ ಈ ಡಿಸ್ಪೆನ್ಸರಿ'ಗೆ ಹೋಗಿ ಇವರನ್ನು ಭೇಟಿ ಮಾಡುತ್ತಿದ್ದುದು ಉಂಟು.

ಶ್ರೀಯುತರುಗಳಾದ ಹರಕೀರತ್ ಸಿಂಗ್, ಅಪ್ಪಾ ಪಂತ್, ಎಂ.ಎನ್. ಪಾರ್ಥ ಸಾರಥಿ, ಡಾ. ಡಿ.ಎಸ್. ಲಕ್ಷ್ಮಣ ರಾವ್, ಡಾ. ಬಿ.ಆರ್. ನಾರಾಯಣ ಐಯ್ಯಂಗಾರ್, ಪೂರ್ಣೇಂದು ಮೋಹನ್ ಲಾಹಿರಿ, ಜಾರ್ಜ್ ಚಾಂಡಿ, ಡಾ. ಎಂ. ಗೋವಿಂದಸ್ವಾಮಿ, ಇವರುಗಳು ಈ ಮಿತ್ರರಲ್ಲಿ ಅತ್ಯಂತ ಆಪ್ತರು. ಇವರಿಗೆಲ್ಲ ಡಾ. ಶಿವರಾಂ ಎಂದರೆ ತಮ್ಮ ಪ್ರೀತಿಯ 'ಶಿವು'.

ಎನ್.ಡಬ್ಲ್ಯೂ ಗುರ್ಜರ್, ಪಿ.ಸಿ. ಮಲ್ವಾನಿ, ಎ. ಸಾಂಬಮೂರ್ತಿ, ಮುಂತಾದ ಕೈಗಾರಿಕೋದ್ಯಮಿಗಳು ರಾ.ಶಿ.ಯವರ ನಿಕಟವರ್ತಿ ಕೈಗಾರಿಕೋದ್ಯಮಿಗಳು.

ಸಾಹಿತ್ಯ ಕ್ಷೇತ್ರದ ದಿಗ್ಗಜರುಗಳಾದ ಶಿವರಾಂ ಕಾರಂತರು, ದ.ರಾ ಬೇಂದ್ರೆ, ಕೈಲಾಸಂ. ವೀ.ಸೀ., ಡಿ.ವಿ.ಗುಂಡಪ್ಪನವರು, ಜಿ.ಪಿ. ರಾಜರತ್ನಂ, ಆದ್ಯ ರಂಗಾಚಾರ್ಯರು (ಶ್ರೀರಂಗ), ಎಂ.ಪಿ.ಎಲ್ ಶಾಸ್ತ್ರಿಗಳು, – ಇವರೆಲ್ಲರೂ ರಾ.ಶಿ.ಯವರ ಸಾಹಿತ್ಯ ಕ್ಷೇತ್ರದ ನಿಕಟವರ್ತಿಗಳು.*

(*ಎಂ. ಶಿವಕುಮಾರ್ ಅವರ ಪುಸ್ತಕ ಡಾ.ಎಂ. ಶಿವರಾಂ)

ಈ ಜೊತೆಗಾರರು ಚರ್ಚೆಗೆ ಇಳಿದರೆ ನಿದ್ದೆ, ಸಮಯಗಳ ಪರಿವೆ ಇಲ್ಲದ ತಲ್ಲೀನತೆ. ಪೂರ್ವಮಾಹಿತಿ ಇಲ್ಲದ ತಕ್ಷಣದ ಸಮ್ಮೇಳನಗಳು, ಅಘೋಷಿತ ವಿಚಾರ ಸಂಕಿರಣಗಳು, ಚರ್ಚಾ ಸ್ಪರ್ಧೆಗಳು, ಸಂವಾದಗಳು, ಕವಿ ಕೂಟಗಳು, ನಡೆಯುತ್ತಿದ್ದುದು ರಾ.ಶಿ.ಯವರ ನಡುಮನೆಯಲ್ಲೇ. ಒಮ್ಮೆ ಬೇಂದ್ರೆಯವರೊಂದಿಗೆ ಇಡೀ ರಾತ್ರಿ 'ಸಾಂಖ್ಯ ಯೋಗ'ದ ಬಗ್ಗೆ ಚರ್ಚೆ ನಡೆಸಿದ್ದರಂತೆ. ಅವರ ಮನೆಗೆ ಎಂದಾದರೂ ಬರುತ್ತಿದ್ದವರಲ್ಲಿ ವೀ.ಸೀ., ಎಚ್.ವಿ. ಸಾವಿತ್ರಮ್ಮ, ರಂಗನಾಥ್, ಅನುಪಮಾ ನಿರಂಜನ, ಕೆ.ವಿ. ಐಯ್ಯರ್ ಮುಂತಾದವರಿದ್ದರು. ರಾಜರತ್ನಂ ಅವರನ್ನು 'ಭಂತೇ" ಎಂದು ರಾ.ಶಿ.ಯವರೂ; ರಾ.ಶಿ.ಯವರನ್ನು ಕೈಲಾಸಂ ಅವರು 'ಮಗೂ" ಎಂದೂ ಕೊನೆತನಕ ಸಂಬೋಧಿಸುತ್ತಿದ್ದುದು, ಅತಿ ಪ್ರೀತಿಯ ದ್ಯೋತಕ.

ಶಿವರಾಂ ಕಾರಂತರು ಪುತ್ತೂರಿನಿಂದ ಬೆಂಗಳೂರಿಗೆ ಬಂದಾಗಲೆಲ್ಲ ರಾ.ಶಿ.ಯವರೊಂದಿಗೆ ಅವರ ಮೊದಲ ಭೇಟಿ ಆಗುತ್ತಿದ್ದುದು ಔಷಧಾಲಯದಲ್ಲಿ. ನಂತರ ಅವರೊಂದಿಗೆ ಮನೆಗೆ ಬಂದರೆ ಮನೆಯಲ್ಲೇ ವಸತಿ. ದ.ರಾ. ಬೇಂ.ದ್ರೆ, ಶ್ರೀರಂಗ, ಕಾರಂತರು ಇವರುಗಳಿಗೆಲ್ಲ ಈ ಮನೆಯೇ ಬೆಂಗಳೂರಿನ ತಂಗು ದಾಣ. ತಂಗುವುದೆಂದರೆ ಕೇವಲ ಒಂದೆರಡು ಗಂಟೆ ಅಥವಾ ಒಂದೆರಡು ದಿನಗಳ ತಂಗುವಿಕೆಯಲ್ಲ. ಆ ಕಾಲದಲ್ಲಿ ಹೊಟೆಲ್‌ಗಳಲ್ಲಿ ಲಾಡ್ಜ್‌ಗಳಲ್ಲಿ ಇಳಿದುಕೊಳ್ಳುವ ಪರಿಪಾಠ ಯಾರಿಗೂ ಇರಲಿಲ್ಲ. ಉಳಿದರೆ ಸಂಬಂಧಿಗಳು ಅಥವಾ ಸ್ನೇಹಿತರ ಮನೆಗಳಲ್ಲೇ. ಯಾವುದೇ ಕೆಲಸಗಳಿಗೆ ಬರಲಿ ಆ ಕೆಲಸ ಮುಗಿಯುವವರೆಗೆ, ಅದು ಒಂದೆರಡು ದಿನಗಳೂ ಇರಬಹುದು. ಅಥವಾ ಕೆಲವು ತಿಂಗಳುಗಳಿಗೂ ಇರಬಹುದು. ಈ ತಂಗುವಿಕೆಯೇ ಪರಸ್ಪರರ ಸಂಬಂಧಗಳನ್ನು ಗಾಢಗೊಳಿಸುತ್ತಿದ್ದ ಸಾಧನ ಆಗ.

ಬಿ. ಪುಟ್ಟಸ್ವಾಮಯ್ಯನವರು ಇವರಿಗೆ ಬಾಲ್ಯ ಮಿತ್ರ. ರಾ.ಶಿ.ಯವರು ಔಷಧಾಲಯವನ್ನು ಆರಂಭಿಸಿದಾಗ, ಪುಟ್ಟಸ್ವಾಮಯ್ಯನವರು ಜೊತೆಗೆ ನಿಂತು, ರಾತ್ರಿ ಇಡೀ ಕೆಲಸ ಮಾಡಿ, ಪಾರ್ಟಿಷನ್‌ಗಳಿಗೆಲ್ಲಾ ಮೊಳೆ ಹೊಡೆದು ಸಿದ್ಧಪಡಿಸಿದ್ದು, ಇವರಿಬ್ಬರ ಗೆಳೆತನದ ಗಾಢತೆಗೆ ಒಂದು ನಿದರ್ಶನ. ವೈದ್ಯವೃತ್ತಿಯಿಂದ ರಾ.ಶಿ.ಯವರು ಮೊದಲ ದಿನ ಸಂಪಾದಿಸಿದ್ದು ಆ ಕಾಲದ ಒಂದು ರೂಪಾಯಿ. (1931ರಲ್ಲಿ) ಆ ರೂಪಾಯಿಗೆ ಒಂದು ನೂರಾ ತೊಂಬತ್ತೆರಡು ವಡೆ ಖರೀದಿಸಿ, ಧರ್ಮಾಂಬುಧಿ ಕೆರೆ ಏರಿಯ ಮೇಲೆ ಕುಳಿತು ಎಲ್ಲ ವಡೆಗಳನ್ನು ತಿಂದು ಮುಗಿಸಿದ್ದ ಸಂಗತಿ, ಗೆಳೆಯರ ನೆನಪಿನ ಬುತ್ತಿಯಲ್ಲಿ

ಕೊನೆತನಕ ಉಳಿದು ಇತರರೊಂದಿಗೆ ಹಲವಾರು ಬಾರಿ ಹಂಚಿಕೊಂಡು ಹರ್ಷಗೊಳ್ಳುತ್ತಿದ್ದ ವಿಷಯ. ಮುಂದೆ, ಇದೇ ಪುಟ್ಟಸ್ವಾಮಯ್ಯನವರು ರಾ.ಶಿ.ಯವರ 'ಮನೋನಂದನ'ವನ್ನು ಸಂಪೂರ್ಣ ಓದಿ ಸೂಕ್ತ ಸಲಹೆಗಳನ್ನೂ ಕೊಟ್ಟರು.

ಪ್ರತಿದಿನ ಬೆಳಗ್ಗೆ ಕೆಲವು ಸ್ನೇಹಿತರೆಲ್ಲ ಸೇರಿ ಹರಟುವ ಸಂಪ್ರದಾಯವೂ ಇತ್ತು. ಇವರ ಮನೆಯ ನಡುಮನೆಯೇ ಚರ್ಚೆ ಮತ್ತು ಸಂವಾದಗಳಿಗೆ ನಿಗದಿತವಾದ ಸ್ಥಳ. ಅದೇ ಬೀದಿಯಲ್ಲಿ ಮನೆ ಇದ್ದ ಜಿ.ಪಿ. ರಾಜರತ್ನಂ ಮತ್ತು ಶ್ರೀರಂಗರು, ಇವರ ಮನೆಗೆ ನಿತ್ಯ ಬರುತ್ತಿದ್ದವರು. ಎಂ.ಪಿ.ಎಲ್ ಶಾಸ್ತ್ರಿಗಳು ಹಾಗೂ ಬಿ. ಪುಟ್ಟಸ್ವಾಮಯ್ಯನವರೂ ಕೆಲವೊಮ್ಮೆ ಬಂದು ಸೇರುತ್ತಿದ್ದುದುಂಟು. ಅದೇ ನಡುಮನೆಯನ್ನು ಇಬ್ಭಾಗಿಸಿದ ಮರದ ಹಲಗೆಯ ಗೋಡೆಯ ಹಿಂದೆ ನಿಂತು ರಾ.ಶಿ.ಯವರ ಮಕ್ಕಳು ಇವರಾಡುವ ಆಸಕ್ತಿಯುತ ಕಥೆಗಳನ್ನೋ, ಅಣಕುವಾಡುಗಳನ್ನೋ ಆಲಿಸಿ ಆನಂದಿಸುವುದೂ ಆಗಾಗ ನಡೆಯುತ್ತಿದ್ದ ಪರಿಪಾಠ. ಅವರ ಪಥದಲ್ಲಿಯೇ ಈ ಮಕ್ಕಳು ಹೆಜ್ಜೆ ಹಾಕುತ್ತಿರುವುದಕ್ಕೂ ಈ ವಾತಾವರಣವೇ ಪ್ರೇರಣೆ.

ಡಿ.ವಿ.ಜಿ.ಯವರೂ ರಾ.ಶಿ.ಯವರಿಗೆ ಪರಮಾಪ್ತ ಸ್ನೇಹಿತರು. ಇಬ್ಬರ ಆಸಕ್ತಿ ಅಭಿರುಚಿಗಳು ವಯಸ್ಸನ್ನು ಮರೆತು ಒಂದಾಗಿಸಿದ್ದವು. ಡಿ.ವಿ.ಜಿ.ಯವರನ್ನು ವಾರಕ್ಕೊಮ್ಮೆಯಾದರೂ ಕಂಡು ಮಾತಾಡಿಸಿ ಬರುವುದು ರಾ.ಶಿ. ಯವರ ರೂಢಿ. ಅವರು ನಿಧನರಾದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂತಾಪ ಸೂಚಕ ಸಭೆ ಏರ್ಪಡಿಸಲಾಗಿತ್ತು. ರಾ.ಶಿ. ಯವರು ಅವರ ಬಗ್ಗೆ ಮಾತನಾಡುತ್ತಾ,"ಪ್ರೇಮ ಉಕ್ಕಿ ಬೆಸನ ಕುದಿದೊಡಾಗ ದೀಪವೊಂದನು/ ಸೋಮ ಶಿವನ ಗುಡಿಯೊಳಿರಿಸಿ ದೇವಗೆ ನಮೋ ಎನ್ನಿರಿ"/ ಎಂದು 'ಮಂಕು ತಿಮ್ಮನ ಕಗ್ಗ'ದ ಎರಡು ಸಾಲನ್ನು ಹೇಳಿ ದೀಪವೊಂದನ್ನು ಹಚ್ಚಿಟ್ಟರಂತೆ. ಆ ಕ್ಷಣ, ಗೆಳೆಯನ ಅಗಲುವಿಕೆಯ ದುಃಖ ಒಳಗಿನಿಂದ ಒತ್ತರಿಸಿ ಬಂದು ಗಂಟಲಲ್ಲಿ ಕುಳಿತು ಗದ್ಗದಿತವಾಯಿತು. ಮುಂದೆ ಮಾತಾಡಲಾಗದೆ ಹಿಂತಿರುಗಿ ಬಂದು ತಮ್ಮ ಆಸನದಲ್ಲಿ ಕುಳಿತು ಬಿಟ್ಟರಂತೆ ರಾ.ಶಿ. ಇದು ಈ ಇಬ್ಬರ ಗೆಳೆತನದ ಗಾಢತೆಯನ್ನು ತಿಳಿಸುವ ಒಂದು ಸಂಗತಿ.

ಕೈಲಾಸಂ ಮತ್ತು ನಾ. ಕಸ್ತೂರಿಯವರ ಸ್ನೇಹದಿಂದಾಗಿಯೇ, ರಾ.ಶಿ.ಯವರು ಹಾಸ್ಯ ಪತ್ರಿಕೆ 'ಕೊರವಂಜಿ'ಯನ್ನು ಆರಂಭಿಸುವುದರ ಮೂಲಕ,

ಕನ್ನಡ ಸಾಹಿತ್ಯಕ್ಕೆ ಹೊಸತೊಂದು ಆಯಾಮ ನೀಡಲು ಹಾಗೂ ಹಾಸ್ಯ ಪರಂಪರೆಯನ್ನು ಸೃಷ್ಟಿಸಲು ಸಾಧ್ಯವಾಗಿದ್ದು.

ಮೈಸೂರಿನ ಅರಮನೆಯನ್ನು ಹೊಸ ರೀತಿಯಲ್ಲಿ ಶೃಂಗರಿಸಲೆಂದು ದಿವಾನರಾಗಿದ್ದ ಸರ್ ಮಿರ್ಜಾ ಅವರು ಜರ್ಮನಿಯಿಂದ ಶ್ರೀ ಎಕ್ಸ್‌ನರ್ ಎಂಬ ಕಲಾಕಾರರನ್ನು ಕರೆಸಿಕೊಂಡಿದ್ದರು. ಅವರು ಬಂದ ನಂತರದಲ್ಲಿ ಎರಡನೆಯ ಮಹಾ ಯುದ್ಧ ಶುರುವಾಯಿತು. ಯುದ್ಧದಿಂದಾಗಿ ಈ ಕಲೋಪಾಸಕನಿಗೆ ತನ್ನ ಊರಿಗೆ ಹಿಂತಿರುಗಲಾಗದ ಪರಿಸ್ಥಿತಿ. ಈ ದೇಶದಲ್ಲಿ ಬ್ರಿಟಿಷರ ಆಡಳಿತವಿದ್ದುದರಿಂದ, ಆತನಿಗೆ ಇಲ್ಲೇ ಉಳಿದುಕೊಳ್ಳಲು ದೇಶದ ಕೆಲವು ಕಾರ್ಯನೀತಿಯ ಸಮಸ್ಯೆಗಳು. ಇಂಥ ಪರದಾಟದ ಪರಿಸ್ಥಿತಿಯಲ್ಲಿ ಆತನಿಗೆ ಉಳಿಯಲು ಆಶ್ರಯ ಕೊಟ್ಟವರು ರಾ.ಶಿ. ಆತ ಇವರಿಗೆ ಯೂರೋಪಿನ ಅನೇಕ ಕಲಾ ಪ್ರಕಾರಗಳ ಬಗ್ಗೆ ತಿಳಿಸಿ ಕೊಟ್ಟರು. ಪರಸ್ಪರ ವಿಚಾರ ವಿನಿಮಯಗಳಿಂದ ಈರ್ವರಿಗೂ ಕಲಾಜ್ಞಾನವೃದ್ಧಿ.

ಆಧ್ಯಾತ್ಮಿಕ ಸಾಧನೆಗಾಗಿ ಬಂದಿದ್ದ ಡಾ. ಮೀಸ್ ಎಂಬುವವರು ಹಾಲೆಂಡ್‌ನವರು. ಕೇರಳದ ವರ್ಕಳದಲ್ಲಿ ಮತ್ತು ರಮಣ ಮಹರ್ಷಿಗಳ ಆಶ್ರಮದಲ್ಲಿ ಹಲವಾರು ವರ್ಷಗಳ ಕಾಲ ಉಳಿದುಕೊಂಡಿದ್ದವರು. ಈತ ಎಕ್ಸ್‌ನರ್ ಅವರಿಗೆ ಮಿತ್ರ. ತನ್ಮೂಲಕ ರಾ.ಶಿ.ಯವರಿಗೆ ಪರಿಚಯ. ಆತನೂ ಭಾರತಕ್ಕೆ ಬಂದಾಗ ಮೊದಲು ಉಳಿದುಕೊಂಡಿದ್ದು ರಾ.ಶಿ.ಯವರ ಮನೆಯಲ್ಲೇ. ಆ ನಂತರವೂ ಭಾರತಕ್ಕೆ ಹಲವಾರು ಸಾರಿ ಬಂದಾಗಲೆಲ್ಲ ರಾ.ಶಿ.ಯವರೊಂದಿಗೆ ಆತನ ಭೇಟಿ ಮಾತ್ರವಲ್ಲ ವಸತಿಯೂ ಇವರ ಮನೆಯಲ್ಲೇ. ಈ ಇಬ್ಬರ ಪರಸ್ಪರ ವಿಚಾರ ವಿನಿಮಯ ಮತ್ತು ಸಂವಾದಗಳಿಗೆ ವಿಷಯವೆಂದರೆ 'ಅಧ್ಯಾತ್ಮ'.

ಬಿ.ಎ.ಪದವಿ ಗಳಿಸಿದ ಮೇಲೆ, ರಾ.ಶಿ.ಯವರಿಗಿದ್ದ, ಎಂ.ಎ. ಮಾಡುವ ಆಲೋಚನೆಯನ್ನು ಬದಲಾಯಿಸಿದವರು ಬಿ.ಎಂ.ಶ್ರೀ.ಯವರು. 'ಎಂ.ಎ. ಮಾಡಿ ಏನು ಮಾಡುತ್ತೀ. ಎಂ.ಬಿ.ಬಿ.ಎಸ್.ಗೆ ಸೇರಿಕೋ" ಎಂದು ಸಲಹೆ ಇತ್ತ ಸಾಹಿತಿಗಳು. ರಾ.ಶಿ.ಯವರು ಅವರ ಮಾತನ್ನು ಶಿರಸಾವಹಿಸಿ, ಎಂ.ಬಿ.ಬಿ.ಎಸ್.ಗೆ ಸೇರಿದರು.

**ವ್ಯಕ್ತಿತ್ವ:** ರಾ.ಶಿ.ಯವರು ನೋಡಲು ನಾಜೂಕಾದವರಲ್ಲ. ಚೌಕ ಮುಖ. ಕಿವಿಯ ಹೊರಕ್ಕೆ ಚಾಚಿದ ಕೂದಲು. ಎತ್ತರವಾದ ದೇಹ. ದಪ್ಪ ಮೂಗು, ದಟ್ಟ ಹುಬ್ಬು,

ಬಟ್ಟಲು ಗಣ್ಣಿನ ತೀಕ್ಷ್ಣ ನೋಟ, ಗತ್ತು, ಶ್ರೀಮಂತಿಕೆಯ ಕಳೆ, ಮೊದಲ ನೋಟಕ್ಕೆ ಸ್ವಲ್ಪ ಹಿಂಜರಿಕೆ ಹೆದರಿಕೆ ಹುಟ್ಟಿಸುವ ಹುಟ್ಟೇ ಅವರದು. ಆದರೆ ಮಮತೆ ಮತ್ತು ಮಾನವೀಯತೆಯಲ್ಲಿ ಎಲ್ಲರನ್ನೂ ಮೀರಿದ ಮನುಷ್ಯ. ಮಹಾ ಹೆಂಗರುಳು. ಇವರ ಒಳ ಹಾಗೂ ಹೊರ ವ್ಯಕ್ತಿತ್ವದ ಬಗ್ಗೆ, ಶ್ರೀ. ಅ.ರಾ. ಮಿತ್ರ ಅವರ ಅಭಿಪ್ರಾಯ ತಿಳಿಸಿದರೆ ಸೊಗಸಿನೊಂದಿಗೆ ಸ್ಪಷ್ಟ ಚಿತ್ರಣವೂ ದೊರಕುವುದು ಖಂಡಿತ. ಅವರ ಹೇಳಿಕೆ ಇದು; "ಗಡಸು ಮುಖ. ಏರಿಳಿದ ಹುಬ್ಬು, ಗತ್ತಿನ ದನಿ, ಸಿರಿವಂತಿಕೆಯ ಕಳೆ, ಪೆಡಸಿನ ನಡಿಗೆ–ಇವಿಷ್ಟೆ ರಾ.ಶಿ.ಯವರ ಹೊರಮುಖ. ಮೊದಲ ನೋಟಕ್ಕೆ ಅಪರಿಚಿತರಿಗೆ ಅವರು ಕಂಡು ಬರುವ ರೀತಿ ಇದು. ಆದರೆ ಈ ಗುಹೆಯನ್ನು ದಾಟಿ ಮಾತಿಗೆ ನಿಲ್ಲಿ. ಆತ್ಮೀಯ ಸಂಭಾಷಣೆಗೆ ತೊಡಗಿ, ವಿಚಾರಗಳನ್ನು ಕೆದಕಿ, ವಿವರಗಳನ್ನು ಬಯಸಿ, ಆಗ ಒಳಗೆ ಒಂದು ಸಮೃದ್ಧ ಸ್ವಚ್ಛ ಶೀತಲ ಪುಷ್ಕರಿಣಿ! ಅದಕ್ಕೆ ಮೂಲ ಒಂದು ಚಿರಂತನ ವಿಚಾರದ ಬುಗ್ಗೆ. ಅದಕ್ಕೆ ಕೂಡಿಕೊಂಡಂತಿರುವ ಹತ್ತಾರು ಜಲಮಾರ್ಗಗಳು. ಅದರ ಆಳ, ಅಗಲ ಹರಿವುಗಳನ್ನು ಕಂಡರೆ ಜನ ಬೆರಗಾಗುತ್ತಾರೆ. ರಾ.ಶಿ. ಯವರ ಬರವಣಿಗೆಯ ಮಾರ್ಗವೂ ಇದೇ. ಹೊರಮುಖ ಹಾಸ್ಯ, ವಕ್ರತೆ, ಗಡಸು ಪೆಡಸುಗಳೇ ಈ ಸಾಹಿತಿಯ ಖಾದ್ಯ ವಸ್ತುಗಳು. ಆದರೆ ಅದರ ಮೂಲಕ ವಿಚಾರಗಳನ್ನು ಕೆದಕಿದರೆ ಜೀವನದಲ್ಲಿ ಆಳವಾದ ಶ್ರದ್ಧೆ, ಸಹಾನುಭೂತಿ, ಅನುಭವಕ್ಕೆ ಅರಗಿಸಿಕೊಳ್ಳಬಲ್ಲ ರಕ್ತಶುದ್ಧಿ. ವಿಚಾರದ ದೇಹಾರೋಗ್ಯಕ್ಕೆ ಅಹಿತಕರವಾದ್ದು ಬಂದರೆ ಸ್ಫೋಟಿಸುವ ಮೈಗುಣ.." ಇದು ರಾ.ಶಿಯವರು.

**ಕೌಟುಂಬಿಕ ಹಿನ್ನೆಲೆ :**

ರಾ.ಶಿ.ಯವರು ಹುಟ್ಟಿದ್ದು, ಬೆಂಗಳೂರಿನ ಮಲ್ಲೇಶ್ವರದಲ್ಲಿ, 1905ನೇ ಇಸವಿಯ ನವೆಂಬರ್ ಹತ್ತರಂದು. ಏಕೀಕರಣದ ನಂತರ ಆಚರಣೆಗೆ ಬಂದಿರುವ ರಾಜ್ಯೋತ್ಸವದ ತಿಂಗಳಲ್ಲಿ. ತುಂಬ ಸಂಪ್ರದಾಯಸ್ಥ ಹಾಗೂ ಧಾರ್ಮಿಕ ಕ್ರಮಗಳನ್ನು ಆಚರಿಸುತ್ತಿದ್ದ ಮನೆಯಲ್ಲಿ ಅವರ ಜನನ. ಸೀತಮ್ಮ ಮತ್ತು ರಾಮಸ್ವಾಮಯ್ಯ ದಂಪತಿಗಳ ಪ್ರಥಮ ಪುತ್ರ. ರಾಮ ಮತ್ತು ಶಿವ ದೇವರಿಬ್ಬರ ಸಾಮರ್ಥ್ಯವೂ ಮಗುವಿಗೆ ಬರಲಿ ಎಂದೋ ಏನೋ ಶಿವರಾಂ ಎಂದು ಹೆಸರಿಟ್ಟರು.

ಶಿವರಾಮ್ ಅವರ ತಂದೆ ರಾಮಸ್ವಾಮಯ್ಯನವರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಬಿ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದ ಬುದ್ಧಿವಂತರು. ಅಠಾರಾ ಕಛೇರಿಯಲ್ಲಿ ಸೂಪರಿಂಟೆಂಡೆಂಟ್ ಆಗಿ ಕೆಲಸ ಮಾಡಿದ್ದು 1920ರಿಂದ 1925ರ ವರೆಗೆ. ಸರ್ಕಾರಿ ಕಛೇರಿಯ ಕೆಲಸವೇ ಬದುಕಿನ ನೆಮ್ಮದಿಗೆ ಉತ್ತಮ ಮಾರ್ಗವೆಂಬ ಭಾವನೆ ಇದ್ದ ಕಾಲದಲ್ಲಿ ಇವರಿಗೆ ದೊರೆತಿದ್ದು, ಕಛೇರಿಯ ವ್ಯವಸ್ಥಾಪಕರ ದೊಡ್ಡ ಹುದ್ದೆ. ದೊಡ್ಡ ಮನೆ. ಮನೆ ತುಂಬ ಶ್ರೀಮಂತಿಕೆಯನ್ನು ಎತ್ತಿ ಸಾರುವ ಅನುಕೂಲಕರ ವ್ಯವಸ್ಥೆಗಳು. ರಾಮಸ್ವಾಮಯ್ಯನವರ ತಂದೆ ಮಲ್ಲೇಶ್ವರದ ವೆಸ್ಟ್ ಆಫ್ ಕಾರ್ಡ್ ರೋಡಿನಲ್ಲಿ ಕಟ್ಟಿಸಿದ್ದು ಸ್ವಂತದ್ದಾದೊಂದು ಭಾರೀ ಮನೆ. ಮಾವನಿಂದ ಸೊಸೆ ಸೀತಮ್ಮನವರಿಗೆ (ರಾ.ಶಿ.ಯವರ ತಾಯಿಗೆ) ಒಂದು ಪರಾತದ ತುಂಬ ಚಿನ್ನದ ಆಭರಣಗಳ ಬಳುವಳಿ ಸಿಕ್ಕಾಗ ಸಂತೋಷಕ್ಕೆ ಬದಲು ಯೋಚನೆಯಾಗಿತ್ತು. 'ಇಷ್ಟು ಒಡವೆಗಳನ್ನು ಹಾಕಿಕೊಂಡು ಓಡಾಡಲಾರೆ" ಎಂದು ಹೊರಲಾಗದ ಭಾರಕ್ಕೆ ಅತ್ತಿದ್ದಳು ಹುಡುಗಿ. ಅವರಿಗೆ ಸಿಕ್ಕಿದ್ದು ಹಾಗೆ ಹೊರಲಾರದೆ ಅಳುವಷ್ಟು ಬಂಗಾರ.

ರಾ.ಶಿ.ಯವರ ತಂದೆಗೆ ಯಾವುದೇ ದುಶ್ಚಟಗಳಿರಲಿಲ್ಲ. ಕಛೇರಿ ಕೆಲಸದಲ್ಲಿಯೂ ಅಪಾರ ದಕ್ಷತೆ ತೋರುತ್ತಿದ್ದ ಮನುಷ್ಯ. ಆದರೆ ಅತಿಯಾದ ದೈವ ಭಕ್ತಿಯೇ ಅವರಿಗಿದ್ದ ಒಂದು ಅಮಿತ ಚಟ. ದೇವರು, ದಿಂಡರು, ಸ್ವಾಮಿಗಳು, ಗುರುಗಳು ಎಂದರೆ ಇದ್ದುದನ್ನೆಲ್ಲ ದಾನ ಮಾಡಲು ಸಿದ್ಧಗೊಳ್ಳುವಂತಹ ಹುಚ್ಚು ಪ್ರೇಮ. ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು, ಮಡಿಯಾಗಿ ಕುಳಿತರೆ ಕಛೇರಿಗೆ ಹೊರಡುವವರೆಗೂ ದೇವರ ಪೂಜೆಯಲ್ಲಿಯೇ ತಲ್ಲೀನವಾಗುತ್ತಿದ್ದ ವ್ಯಕ್ತಿ. ಸಂಜೆ ಪುನಃ ಕಛೇರಿಯಿಂದ ಬಂದ ಮೇಲೂ ಸ್ನಾನ ಮಾಡಿ, ಮಡಿಯಾಗಿ ದೇವರ ಮನೆ ಸೇರುವ ಆತುರ. ಪೂಜೆಗೆ ಕುಳಿತು ಬಿಟ್ಟರೆ ರಾತ್ರಿ ಊಟದ ವೇಳೆಯಾಗುವವರೆಗೂ ಮುಂದುವರೆಸಿದ ತನ್ನ ಪೂಜೆಯಲ್ಲೇ ಮುಳುಗಿ ಮೈ ಮರೆತು ಬಿಡುವ ಮನಸ್ಸು. ಪ್ರಪಂಚದ ಎಲ್ಲ ಸಂಗತಿಗಳನ್ನೂ ಮರೆತು ದೇವರ ಜಗತ್ತಿಗೇ ಎಲ್ಲವನ್ನೂ ಧಾರೆ ಎರೆದು ಬಿಡುವ ಗುಣ. ಇದ್ದ ಆಸ್ತಿ–ಆಭರಣಗಳೆಲ್ಲ ಕ್ರಮೇಣ ಕರಗುತ್ತ ಖಾಲಿಯೇ ಆಗಿಹೋಗಿದ್ದು, ಬಡತನ ಅಮರಿದ್ದು, ಅವರ ಈ ಹುಚ್ಚಿನಿಂದಲೇ.

ಪತ್ನಿ ಸೀತಮ್ಮನವರ, ಪುಟ್ಟ ಮೈ ಮೇಲೆ ಹೊರಲಾರದಷ್ಟಿದ್ದ ಒಡವೆಗಳು ಮಾತ್ರವಲ್ಲದೆ, ರಾಮಸ್ವಾಮಯ್ಯನವರ ಸಂಬಳವೂ ಸೇರಿಕೊಂಡು,

ಯಾವುದೋ ಸ್ವಾಮಿಗಳ ಪಾದಪೂಜೆಗೆ, ಯಾವುದೋ ಮಠದ ಸೇವೆಗೆ, ಯಾವುದೋ ಆರಾಧನೆಯ ಖರ್ಚಿಗೆ, ಯಾರಿಗೋ ದಾನಕ್ಕೆ, ಎಂದು ಒಂದೊಂದಾಗಿ, ದೇವರ ಹೆಸರಿನಲ್ಲಿ ಹೊರ ಹೋಗತೊಡಗಿದ ಒಡವೆ, ವಸ್ತ್ರ, ಹಣ, ಶ್ರೀಮಂತಿಕೆಯಿಂದ ತುಂಬಿದ್ದ ಈ ಮನೆಯನ್ನು ಸಂಪೂರ್ಣ ಬರಿದುಗೊಳಿಸಿತ್ತು. ಒಡವೆಗಳ ಭಾರಕ್ಕೆ ಬೇಡವೆಂದು ಅಳುತ್ತಿದ್ದ ಸೀತಮ್ಮನವರು ಅದೆಲ್ಲವೂ ಕಳೆದು ಹೋಯಿತಲ್ಲ ಎಂದು ಅಳುವಂತಹ ದುಸ್ಥಿತಿ. ಪತಿಯಿಂದ ಸೀತಮ್ಮನವರ ಅಸಹಾಯಕತೆಗೆ ಸಿಗುತ್ತಿದ್ದುದು, ಬರೀ ಅಳು, ಕಷ್ಟ, ಏಳು ಮಕ್ಕಳ ಪೋಷಣೆಯ ಹೊಣೆ, ಸೂರ್ಯೋದಯಕ್ಕೆ ತಾಸು ತಾಸುಗಳ ಮುಂಚೆ ಎದ್ದು ದೇವರಪೂಜೆಗೆ ಅಗತ್ಯವಿದ್ದುದನ್ನು ಅಣಿಗೊಳಿಸಕೊಡುವ ಕರ್ತವ್ಯ, ಕರಗುತ್ತಿರುವ ಸಿರಿಯನ್ನು ಉಳಿಸಿಕೊಳ್ಳಲಾಗದ ಚಿಂತೆ. ಈ ಎಲ್ಲವೂ ಸೀತಮ್ಮನವರ ತಲೆಯಲ್ಲಿ ತುಂಬಿ ತುಂಬಿ ಒತ್ತರಿಸಿ ರಕ್ತದೊತ್ತಡವಾಗಿ ನಲವತ್ತರ ಪ್ರಾಯದಲ್ಲಿಯೇ 'ಸೆರಬ್ರಲ್ ಬ್ರೇನ್ ಹೆಮರೇಜ್' ಆಕ್ರಮಿಸಿ, ಅವರನ್ನು ಅಕಾಲದಲ್ಲೇ ಅಪಮೃತ್ಯುವಿಗೆ ಆಹುತಿಗೊಳಿಸಿತು.

ತಮ್ಮ ತಾಯಿ ತೀರಿಕೊಂಡಾಗ, ಶಿವರಾಂ ಅವರಿಗೆ ಕೇವಲ ಇಪ್ಪತ್ತಮೂರು ವರ್ಷ. ಅವರು ಆಗ ವೈದ್ಯಕೀಯದ ಮೂರನೇ ವರ್ಷದ ವಿದ್ಯಾರ್ಥಿ. ತಾಯಿಯ ಆ ಅಸಹಾಯಕತೆ, ಸಂಕಷ್ಟ, ಒತ್ತಡಗಳೆಲ್ಲವೂ, ತಾಯಿಯ ಮರಣದ ದುಃಖದೊಂದಿಗೆ ರಾ.ಶಿ.ಯವರನ್ನು ಆಕ್ರಮಿಸಿದವು. "ನಮ್ಮ ಶಿವು, ಉಳಿದ ಮಕ್ಕಳನ್ನೆಲ್ಲ ಖಂಡಿತ ನೋಡಿಕೊಳ್ತಾನೆ ಅನ್ನೋ ನಂಬಿಕೆ ನನಗಿದೆ" ಎಂದು ತಾಯಿ ಆಗಾಗ ಹೇಳುತ್ತಿದ್ದ ಮಾತು ಅವರ ತಲೆಯಲ್ಲಿ ಕಡೆಯತನಕ ಉಳಿದ ಅಂಶ. ಅದನ್ನು ನಿಜವಾಗಿಸಬೇಕು ಎನ್ನುವುದೇ ಅವರು ನಂತರದ ಬದುಕಿನಲ್ಲಿ ಕೈಗೊಂಡ ವ್ರತ. ಆ ವ್ರತವನ್ನು ತಪ್ಪದೆ ಮರೆಯದೇ ನಿಭಾಯಿಸಿ ಆಚರಿಸಿಕೊಂಡು ಬಂದಿದ್ದು, ಅವರಿಗೆ ತಮ್ಮ ತಾಯಿಯ ಮೇಲಿದ್ದ ಅಗಾಧ ಪ್ರೀತಿಯ ಸಂಕೇತ. ತಾಯಿಯವರು ತೀರಿಕೊಳ್ಳುವ ಮೊದಲೇ ರಾ.ಶಿ.ಯವರ ವಿವಾಹವಾಗಿತ್ತು.

ದೇವರೊಂದಿಗಿನ ನಂಬಿಕೆ–ನಂಟಸ್ತನಗಳನ್ನು ವಿಪರೀತವಾಗಿಸಿಕೊಂಡ ತಂದೆಯವರು ಕಡೆಗೆ ಸನ್ಯಾಸತ್ವ ಸ್ವೀಕರಿಸಿ, ಕುಟುಂಬವನ್ನು ತ್ಯಜಿಸಿ ನಂಜನಗೂಡಿನಲ್ಲಿ ವಾಸ್ತವ್ಯ ಹೂಡಿದರು. ಆಗಲಂತೂ, ಶಿವರಾಂ ಅವರಿಗೆ ಕಣ್ಣಿಗೆ ಬಟ್ಟೆ ಕಟ್ಟಿ, ಕಾಡಿನಲ್ಲಿ ಕಳೆದು ಹೋದಂತಹ ಭಯ–ಆತಂಕಗಳ ಸ್ಥಿತಿ.

ತಾಯಿಯ ಮರಣದಿಂದಾಗಿ ತಮ್ಮ, ತಂಗಿಯರನ್ನು ನೋಡಿಕೊಳ್ಳುವ ಜವಾಬ್ದಾರಿ, ರಾ.ಶಿ.ಯವರ ಸ್ವಂತ ಸಹೋದರನೊಬ್ಬನ ಅಕಾಲ ನಿಧನ, ತಂದೆ ಮನೆ ಬಿಟ್ಟು ಹೋದ ಚಿಂತೆ, ತಮ್ಮನೊಬ್ಬನ ನಾಪತ್ತೆ – ಇಂಥವೇ ಹಲವು ಕೌಟುಂಬಿಕ ಸಮಸ್ಯೆಗಳ ಕಟು ಅನುಭವಗಳು, ಶಿವರಾಂ ಅವರ ದೇಹವನ್ನು ದೃಢಗೊಳಿಸಿದವು. ಮನಸ್ಸನ್ನು ಮೃದುಗೊಳಿಸಿದವು, ಹೃದಯದ ವೈಶಾಲ್ಯತೆಯನ್ನು ಹೆಚ್ಚಿಸಿದವು. ಆಗ ಅವರನ್ನು ಕಾಡಿದ ತಬ್ಬಲಿತನ, ಅನಾಥಭಾವ ಕೊನೆಯವರೆಗೂ ಮರೆಯದೇ, ಇತರೇ ತಬ್ಬಲಿಗಳನ್ನು, ಬಡವರನ್ನು ಮತ್ತು ಅನಾಥರನ್ನು ಅನುಕಂಪದಿಂದ ನೋಡುವ ಪಾಠವನ್ನೂ ಕಲಿಸಿ ಕೊಟ್ಟಿದ್ದವು. ಸಂಕಷ್ಟದ ಸಂದರ್ಭಗಳಿಂದ ಗಟ್ಟಿಗೊಳ್ಳುತ್ತ ಹೋದ ಈ ವ್ಯಕ್ತಿಯ ಬದುಕು, ಈ ಕಾಲದಲ್ಲಿ, ಸಣ್ಣದೊಂದು ಪರೀಕ್ಷೆಯಲ್ಲಿ ಫೇಲಾಗಬಹುದೆಂಬ ಅನುಮಾನಕ್ಕೇ ಆತ್ಮಹತ್ಯೆ ಮಾಡಿಕೊಳ್ಳುವ ಮಕ್ಕಳಿಗೆ ಉತ್ತಮ ಪಾಠವಾಗಬೇಕು.

ಅದೊಂದು ದಿನ, ಮನೆಯಲ್ಲಿ ಯಾವುದೋ ಮಠದ ಸ್ವಾಮಿಗಳ ಪಾದಪೂಜೆಯ ಅದ್ದೂರಿ ಸಮಾರಂಭಕ್ಕೆ ತಂದೆಯವರು ಏರ್ಪಾಡು ಮಾಡಿದ್ದರು. ಅಂದು ಸ್ವಾಮಿಗಳಿಗೆ ಸಲ್ಲಿಸಲು ತೆಗೆದಿಟ್ಟಿದ್ದು, ನೂರಾ ಎಂಟು ನಾಣ್ಯಗಳ ದೊಡ್ಡ ಮೊತ್ತ. ರಾ.ಶಿ. ಯವರ ವೈದ್ಯ ವಿದ್ಯೆಯ ಓದು ಇನ್ನೂ ಮುಂದುವರೆದಿದ್ದ ದಿನಗಳವು. ತಂದೆಯೂ ಇನ್ನೂ ಮನೆ ಬಿಟ್ಟು ಹೋಗಿರಲಿಲ್ಲ. ಅವರು ಆ ದಿನ ಕಾಲೇಜ್ ಫೀಸ್ ಕಟ್ಟಲೇ ಬೇಕಿತ್ತು. ಆದರೆ ಅದ್ದೂರಿ ಸಮಾರಂಭಕ್ಕೆ ಎಲ್ಲ ಸಿದ್ಧತೆಗೂ ಹಣ ಖರ್ಚು ಮಾಡಿದ್ದ ತಂದೆ ರಾಮಸ್ವಾಮಯ್ಯನವರಿಗೆ, ಮಗನ ಕಾಲೇಜು ಶುಲ್ಕ ಕಟ್ಟಲು ಮಾತ್ರ ಹಣದ ಕೊರತೆ. ಮಗ ಶುಲ್ಕಕ್ಕೆ ಹಣ ಕೇಳಿದಾಗ ದುಡ್ಡಿಲ್ಲ ಎಂಬ ಉತ್ತರ ಬಂತು. ಅಸಹಾಯಕ ರಾ.ಶಿ. ಯವರು ನಿರಾಶೆಯಿಂದ ಕಾಲೇಜಿಗೆ ಹೋದರು. ಕಡೆಯ ದಿನದಲ್ಲೂ ಶುಲ್ಕ ಕಟ್ಟದಿದ್ದ ಕಾರಣಕ್ಕೆ, ಉಪಾಧ್ಯಾಯರು "ಯು ಪ್ಲೀಸ್ ಗೆಟ್ ಔಟ್ ಫ್ರಂ ದ ಕ್ಲಾಸ್" ಎಂದು ಇಡೀ ತರಗತಿಯ ಸಮಸ್ತ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮುಂದೆ ಹೇಳಿ ಹೊರ ಕಳಿಸಿದಾಗ, ಆ ಎಳೆಯನಿಗಾದ ಅವಮಾನ ಜನ್ಮೇಪಿ ಮರೆಯಲಾಗದ್ದು. ತಂದೆ ಪಾದಪೂಜೆಗಿಟ್ಟ ಹಣದಲ್ಲಿ ಶುಲ್ಕಕ್ಕಾಗುವಷ್ಟು ಕೊಟ್ಟಿದ್ದರೆ ! ಎಂಬ ಒಳಗಿನ ಪ್ರಶ್ನೆಗೆ ಉತ್ತರವಾಗಿ ಮನದಲ್ಲೆದ್ದಿದ್ದು ದೇವರು, ಸನ್ಯಾಸಿಗಳು, ಮಠಗಳು ಮುಂತಾದವುಗಳ ಬಗ್ಗೆ ಒಂದು ಕೆಟ್ಟ ಕೋಪದ ಕುದಿ, ತಾತ್ಸಾರ, ಕೊನೆಯ ತನಕ ಅಳಿಸಲಾಗದ

ದಂಗೆಯ ಭಾವನೆಗಳು. ಹಾಗೆಂದು ಅವರು ಮನೆಯಲ್ಲಿ ಹಬ್ಬಗಳನ್ನು ಮಾಡುವುದು ಬಿಡಲಿಲ್ಲ. ಹಿರಿಯರಿಂದ ಚಿಕ್ಕಂದಿನಲ್ಲೇ ಕಲಿತ ದೇವರ ಶ್ಲೋಕಗಳನ್ನು ಮರೆಯಲಿಲ್ಲ. ಮೇಲೊಂದು ಕಾಣದ ಶಕ್ತಿ ಇದೆ ಅದೇ ದೇವರು ಎನ್ನುವುದೇ ಅವರ ನಂಬಿಕೆ. ಮನೆಗೆ ಬಂದ ಹೆಣ್ಣು ಮಕ್ಕಳಿಗೆ ಕುಂಕುಮ ಕೊಟ್ಟು ಕಳಿಸುವ ಪದ್ಧತಿ ಬಿಡಲಿಲ್ಲ. ತಮ್ಮ ಕೊನೆಯ ದಿನಗಳಲ್ಲಿ ತಮ್ಮನ್ನು ನೋಡಲು ಬಂದ ಹೆಣ್ಣು ಮಕ್ಕಳಿಗೆ, ಹೆಂಗಸರಿಗೆ, ತಾವೇ ತಟ್ಟಾಡುತ್ತ ಎದ್ದು ಭರಣಿಯನ್ನು ಮುಂದೆ ಹಿಡಿದು ಕುಂಕುಮ ಕೊಡುತ್ತಿದ್ದರಂತೆ. ನೀಲತ್ತಹಳ್ಳಿ ಕಸ್ತೂರಿಯವರ ಮಗಳಿಗೆ ಕುಂಕುಮ ಕೊಟ್ಟು ಹರಸಿದ್ದನ್ನು ಕಸ್ತೂರಿಯವರೇ ತಮ್ಮದೊಂದು ಲೇಖನದಲ್ಲಿ ಹೇಳಿದ್ದಾರೆ. ಬರೀ ಕುಂಕುಮವೇ ಅಲ್ಲ ಸೀರೆ, ರವಕೆ ಬಟ್ಟೆಗಳನ್ನೂ ತಮ್ಮ ಗ್ರಂಥಾಲಯ–ಕೋಣೆಯ ಒಂದು ಬೀರುನಲ್ಲಿಟ್ಟುಕೊಂಡಿದ್ದು, ಅದನ್ನೂ ಜೊತೆಗಿಟ್ಟು ತಾವೇ ಹರಸಿ ಕೊಡುತ್ತಿದ್ದರಂತೆ. ಕೈಲಾಸಂ ಅವರ ಮಗಳು ಕೇತಕಿ(ಕಮಲಾ ಸುಬ್ರಹ್ಮಣ್ಯಂ ಅವರು ಕೊನೆಯ ದಿನಗಳಲ್ಲಿ ರಾ.ಶಿ.ಯವರನ್ನು ನೋಡಲು ಬಂದಾಗ, ಹೀಗೆ ಬೀರುನಲ್ಲಿಟ್ಟ ಸೀರೆಗಳಲ್ಲಿ ಒಂದನ್ನು ಅವರಿಗೆ ಕೊಟ್ಟಾಗ, ಸೂಚನೆ ಕೊಡದೆ ಬಂದ ಅವರಿಗೆ ಅಚ್ಚರಿಯೋ ಅಚ್ಚರಿ. ಜೊತೆಗೆ ಅವರ ಆ ಪ್ರೀತಿಗಾಗಿ ಅಷ್ಟೇ ಸಂತೋಷವೂ ಆಗಿತ್ತಂತೆ.

ತಾಯಿ ಇಲ್ಲವಾದ ನಂತರ ತಂದೆಯೇ ಏನೋ ಒಂದು ಅಡುಗೆ ಮಾಡಿಟ್ಟು ಕಛೇರಿಗೆ ಹೋಗುತ್ತಿದ್ದರು. ಆದರೆ ಪ್ರೀತಿಯಿಂದ ತಿನಿಸುವ ಕೈಗಳು ಆ ಮನೆಯಲ್ಲಿರಲಿಲ್ಲ. ಯಾರು ಏನು ತಿಂದರು, ಯಾರು ತಿನ್ನಲಿಲ್ಲ ಎಂದು ಗಮನಿಸಿ ತೆಗೆದಿಟ್ಟು ಉಣಿಸುವ ಮಮತೆಯ ಹೃದಯವಿರಲಿಲ್ಲ. ಕಾಲೇಜಿನಿಂದ ಮನೆಗೆ ಬಂದರೆ ಹೊಟ್ಟೆಯ ಹಸಿವಿನ ಬಗ್ಗೆ ವಿಚಾರಿಸುವವರಿರಲಿಲ್ಲ. ಉಳಿದಿದ್ದೋ, ತಂಗಳದೋ ಏನೋ ಒಂದು ತಿಂದು, ಹೊಟ್ಟೆಯ ಸಂಕಟ ಪರಿಹರಿಸಿಕೊಳ್ಳುವುದು ವಾಡಿಕೆಯಾಯಿತು ರಾ.ಶಿ.ಯವರಿಗೆ. ಜೊತೆಗೆ ತಮ್ಮ ಒಂಬತ್ತು ವರ್ಷದ ಹಿರಿಯ ತಂಗಿ ಮಾಡಬೇಕಾದ ಕೆಲಸಗಳನ್ನು ಕಂಡಾಗ ಮರುಕ ಹುಟ್ಟುತ್ತಿತ್ತು. ಆ ಬಾಲೆ, ಒಂದೂವರೆ ವರ್ಷದ ಕೊನೆಯ ತಮ್ಮನನ್ನು ನೋಡಿಕೊಳ್ಳಬೇಕಿತ್ತು. ತಂದೆಯ ದೇವರ ಪೂಜೆಗೆ ಅಣಿ ಮಾಡಿಕೊಡಬೇಕಿತ್ತು. ಪ್ರತಿ ಪೂಜೆಗೆ ನಿಂಬೆ ಹಣ್ಣಿನ ಗಾತ್ರದಷ್ಟು ಗಂಧ ತೇಯ್ದು ಕೊಡಬೇಕಿತ್ತು. ಇವೆಲ್ಲ ರಾ.ಶಿ. ಯವರ ಮನದಲ್ಲಿ ಮರೆಯಲಾಗದ ಮರುಕದ ನೆನಪುಗಳಾಗಿ ಉಳಿದವು. ಇನ್ನು ತಾವು ಓದು ಮುಂದುವರೆಸುವುದೂ ಅಸಾಧ್ಯ ಎನಿಸಿತ್ತು.

ತಮ್ಮ ಈ ಒಡಹುಟ್ಟಿದವರನ್ನೆಲ್ಲ ಬೇರೆ ಕರೆದೊಯ್ದು, ಸುಖವಾಗಿ ಸಾಕಬೇಕೆಂಬ ತಹತಹಿಕೆಯಿಂದ ದಾರಿಗಳನ್ನು ಹುಡುಕಿದರು ರಾ.ಶಿ. ಯವರು. ತಾವು ನೌಕರಿಗೆ ಸೇರಿ ದುಡಿದರೆ ಅದು ಸಾಧ್ಯ ಎನ್ನುವದೇ ಆಗ ಅವರಿಗೆ ಹೊಳೆದ ದಾರಿ. ಚಲನ ಚಿತ್ರದಲ್ಲಿ ಅವರು ದುಡಿಯಬೇಕೆಂಬುದು ಅವರು ಕೈಗೊಂಡ ನಿರ್ಧಾರ.

ಏನಾಕ್ಷಿ ಭವನಾನಿಯವರು ಆ ಸಮಯದಲ್ಲಿ ತಯಾರಿಸುತ್ತಿದ್ದ ಚಿತ್ರ 'ವಸಂತ ಸೇನ'. ರಾ.ಶಿ. ಯವರ ಪ್ರಯತ್ನಕ್ಕೆ ದಾರಿ ಸಿಕ್ಕಿತು. ಸ್ಕ್ರೀನ್ ಟೆಸ್ಟ್ ಆಯಿತು. ಆಯ್ಕೆಯೂ ಆದರು. ಆದರೆ, ರಾ.ಶಿ. ಯವರ ಬದುಕಿನ ಗುರಿ ಪೂರ್ವ ನಿಗದಿತವಾಗಿತ್ತು. ವಿದ್ಯೆ ಮುಂದುವರೆಸಲಾಗದೆ ನಿರಾಶೆ ಹೊತ್ತು ಇವರು ಸೋಲಿನ ಕಡೆ ವಾಲಿದರೂ, ವಿದ್ಯಾಲಕ್ಷ್ಮಿ ಇವರನ್ನು ವರಿಸಲು ಕಾದಿದ್ದಳು. ಈ ಸಿನಿಮಾದಲ್ಲಿ ವಿದೂಷಕನ ಪಾತ್ರ ವಹಿಸಲಿದ್ದ ಕೈಲಾಸಂ ಅವರನ್ನು ಅಲ್ಲಿಗೆ ಕಳಿಸಿ ರಾ.ಶಿ. ಯವರಿಗೆ ಛೀ ಮಾರಿ ಹಾಕಿಸಿತು, ಇವರ ಅದೃಷ್ಟ. "ಇದೇನು ಹುಚ್ಚು ನಿಂದು. ಎಂ.ಬಿ.ಬಿ.ಎಸ್. ಪೂರ್ತಿ ಮುಗಿಸಿ, ಡಾಕ್ಟರಾಗಿ ಜನಸೇವೆ ಮಾಡೋದನ್ನು ಬಿಟ್ಟು ಈ ಬಣ್ಣದ ಬದುಕಿಗೆ ಬಂದಿದ್ದೀಯಲ್ಲ ನಾಚಿಕೆಗೇಡು" ಎಂದು ಬೈದು ರಾ.ಶಿ. ಯವರನ್ನು ಮನೆಗೆ ಕಳಿಸಿದರು. ಅಷ್ಟೇ ಅಲ್ಲ, ಭವನಾನಿಯವರಿಗೂ 'ಈ ಹುಡುಗನಿಗೆ ಇನ್ನು ಮೇಲೆ ಇಲ್ಲಿ ಕೆಲಸ ಕೊಡಬೇಡಿ. ಅವನು ಓದು ಮುಂದುವರೆಸಿ ವೈದ್ಯನಾಗಲು ಬಿಡಿ" ಎಂದು ಅಪ್ಪಣೆ ಇತ್ತರಂತೆ.

ಕೈಲಾಸಂ ಅವರ ಈ ಕೈವಾಡದಿಂದ ರಾ.ಶಿ. ಯವರು ಪದವಿಯ ಮುಂದುವರಿಕೆಗೆ ಅಗತ್ಯ ಪರಿಹಾರಗಳನ್ನು ಕಂಡುಕೊಂಡರು. ಅದು ಹೇಗೆ ಎನ್ನುವುದು ಹೇಳಲಾಗದಂತೆ ಅಂತೂ ಹೇಗೋ ವೈದ್ಯ ಪದವಿಗಳಿಕೆಯ ಗೆಲುವು ಇವರನ್ನು ವರಿಸಿ ಜೊತೆಗೇ ಉಳಿಯಿತು. ಆ ನಂತರದಿಂದ, ತಬ್ಬಲಿಗಳನ್ನು ಬಡವರನ್ನು ಸಂಕಷ್ಟದಲ್ಲಿರುವವರನ್ನು ಮುಂದೆ ತರಲು ಸಹಾಯ ಮಾಡಬೇಕೆನ್ನುವುದೇ ಅವರ ಬದುಕಿನ ಗುರಿಯಾಯಿತು. ವೈದ್ಯಕೀಯ ವೃತ್ತಿ ದುಡಿಮೆಯ ಕ್ಷೇತ್ರವಾಯಿತು. ಬಿ.ಎ., ಎಂ.ಬಿ.ಬಿ.ಎಸ್. ರಾ.ಶಿ.ಯವರ ವಿದ್ಯಾರ್ಹತೆ. ಟೈಪ್‌ರೈಟಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಈ ಪದವಿಗಳ ಮೇಲೆ ಗಳಿಸಿದ ಕೊಸರು ವಿದ್ಯೆಗಳು. ಇನ್ನು ಜ್ಞಾನಾರ್ಜನೆ? ಅದು ಲೆಕ್ಕಕ್ಕೆ ಸಿಗದಷ್ಟು.

**ವೈವಾಹಿಕ ಜೀವನ:**

**1925**ರಲ್ಲಿ ರಾ.ಶಿ.ಯವರು ಗೃಹಸ್ಥಾಶ್ರಮಕ್ಕೆ ಕಾಲಿಟ್ಟರು. ಹಾಸನದಲ್ಲಿ ವಕೀಲರಾಗಿ ಪ್ರಸಿದ್ಧರಾಗಿದ್ದ ಬೆಳವಾಡಿ ಸೂರ್ಯನಾರಾಯಣ ರಾಯರು ಮತ್ತು ಲಕ್ಷ್ಮೀದೇವಮ್ಮನವರ ಸುಪುತ್ರಿ ಹನ್ನೊಂದು ವರ್ಷದ ಬಾಲೆ ನಾಗಮ್ಮ, ಹತ್ತೊಂಬತ್ತು ವರ್ಷದ ರಾ.ಶಿ.ಯವರ ಧರ್ಮಪತ್ನಿ. ಲೆಕ್ಕಕ್ಕೆ ಈ ಕುಟುಂಬದ ಇನ್ನೊಬ್ಬ ಸದಸ್ಯೆಯಾಗಿ ಸೇರ್ಪಡೆಯಾದರೂ ಪತಿಯ ಓದು ಮುಗಿಯುವವರೆಗೆ ಪತ್ನಿಯ ಬದುಕು ಮುಂದುವರೆದಿದ್ದು ತವರು ಮನೆಯಲ್ಲಿಯೇ. ಬೆಂಗಳೂರಿನಲ್ಲಿ ರಾ.ಶಿ.ಯವರ ವಿದ್ಯಾಭ್ಯಾಸ ನಡೆದರೆ, ಹಾಸನದಲ್ಲಿ ಪತ್ನಿಯ ವಿದ್ಯಾಭ್ಯಾಸ ಮುಂದುವರೆದಿತ್ತು. ಹದಿನಾರನೇ ವರ್ಷದಲ್ಲಿ ನಾಗಮ್ಮನವರು ಮಾವನ ಮನೆಗೆ ಕಾಲಿಟ್ಟಾಗ ಮನೆ ತುಂಬ ತುಂಬಿದ್ದ ದೊಡ್ಡ ಸಂಸಾರ ಇವರನ್ನು ಸ್ವಾಗತಿಸಿತ್ತು. ಮಾವ, ನಾಲ್ವರು ಮೈದುನರು, ಇಬ್ಬರು ನಾದಿನಿಯರು. ಮಾವನ ಮನೆಯವರನ್ನೆಲ್ಲ ತಮ್ಮವರೆಂದೇ ಭಾವಿಸಿದ ಈಕೆಗೆ ಕುಟುಂಬದ ಎಲ್ಲರೊಡನೆ ತುಂಬು ಪ್ರೀತಿ. ಈ ಕುಟುಂಬ ನಿರ್ವಹಣೆಯ ಹೊಣೆಗೆ ರಾ.ಶಿ. ಯವರ ಹೆಗಲಿಗೆ ತಮ್ಮ ಹೆಗಲು ಸೇರಿಸಿದರು. ಅನನುಭವಿ ಪುಟ್ಟ ನಾಗಮ್ಮನವರು. ರಾ.ಶಿ.ಯವರು ಇತರ ಕ್ಷೇತ್ರಗಳಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡ ಮೇಲೆ ತಮ್ಮ ಕುಟುಂಬದ ಸಂಪೂರ್ಣ ಹೊಣೆಯನ್ನು ತಾವೇ ಹೊತ್ತು ಪತಿಯ ಭಾರವನ್ನು ಕಡಿಮೆ ಮಾಡುವಷ್ಟು ಬೆಳೆದರು.

ನಾಗಮ್ಮನವರು, ಅವರ ತಂದೆಯಂತೆಯೇ ಸಾಹಿತ್ಯಾಭಿಮಾನಿ, ಚಿಕ್ಕಂದಿನಲ್ಲಿಯೇ ಸಂಗೀತ ಕಲಿತ ಹುಡುಗಿ. ದಾಕ್ಷಿಣಾತ್ಯ ಶಾಸ್ತ್ರೀಯ ಸಂಗಿತದಲ್ಲಿ ಹೆಚ್ಚು ಒಲವು. ವಿವಾಹಪೂರ್ವದಲ್ಲಿ, ಹಾಸನದಲ್ಲಿ ಕರ್ಪೂರ ಶ್ರೀನಿವಾಸರಾಯರು ಹೆಣ್ಣು ಮಕ್ಕಳಿಗಾಗಿ ಆರಂಭಿಸಿದ ಶಾಲೆಯಲ್ಲಿ ನಾಗಮ್ಮನವರು ಓದಿದ್ದು ಎಸ್.ಎಸ್.ಎಲ್.ಸಿ.ಯ ವರೆಗೆ. ಈಕೆ ಓದಿದ ಶಾಲೆಯ ಎಲ್ಲ ಕಾರ್ಯಕ್ರಮಗಳೂ ಆರಂಭಗೊಳ್ಳುತ್ತಿದ್ದುದು ಈಕೆಯ ಪ್ರಾರ್ಥನಾ ಗೀತೆಯಿಂದಲೇ. ಹಾಸನದಲ್ಲಿ ಐದಾರು ಗೆಳೆತಿಯರು ಸೇರಿ ಒಂದು ಮನೆಯಲ್ಲಿ ಅಲ್ಲಿಯ ಹೆಣ್ಣು ಮಕ್ಕಳಿಗೆ ಸಂಗೀತ, ಕಸೂತಿ, ಹೊಲಿಗೆ, ಚಿತ್ರಕಲೆ ಹೇಳಿಕೊಡುತ್ತಿದ್ದಾಗ, ಹಾಗೆ ಹೇಳಿಕೊಡುವವರಲ್ಲಿ ಒಬ್ಬರಾಗಿದ್ದವರು ನಾಗಮ್ಮ. ಜೊತೆಗೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಅಗತ್ಯವೆಂಬುದನ್ನು ಮನದಟ್ಟು ಮಾಡುವ ಕೆಲಸವನ್ನೂ ಈ ಗೆಳೆತಿಯರ ತಂಡ ಮಾಡಿತ್ತು.

ಬುದ್ಧಿವಂತ ನಾಗಮ್ಮನವರು ಕನ್ನಡವನ್ನೂ, ಇಂಗ್ಲಿಷ್ ಭಾಷೆಯನ್ನೂ ಚೆನ್ನಾಗಿ ಬಲ್ಲವರಾಗಿದ್ದರು. ಮಾತ್ರವಲ್ಲ ತೆಲುಗು, ತಮಿಳು, ಹಿಂದಿ ಭಾಷೆಗಳನ್ನೂ ಈಕೆ ಕಲಿತಿದ್ದು ವಿಶೇಷ. ಆದರೆ ಈ ಮೂರು ಭಾಷೆಗಳ ಕಲಿಕೆ, ಸಂದರ್ಭ ಬಂದಾಗ ವ್ಯವಹಾರಗಳನ್ನು ನಿಭಾಯಿಸಲು ಅಗತ್ಯವಾದಷ್ಟು ಮಾತ್ರ. ಹೊಲಿಗೆಯನ್ನು ಚೆನ್ನಾಗಿ ಕಲಿತಿದ್ದುದರಿಂದ ತಮ್ಮ ಮನೆಯ ಬಟ್ಟೆಗಳನ್ನು ತಾವೇ ಹೊಲಿಯುತ್ತಿದ್ದರು, ಮತ್ತು ಕುಶಲ ಕಲೆಗಳನ್ನು ಒಲಿಸಿಕೊಂಡಿದ್ದರಿಂದ ಮನೆಯನ್ನು ಅಂದವಾಗಿ ಅಲಂಕರಿಸಿ ಇಡುತ್ತಿದ್ದರು. ಮನೆಯ ಎಲ್ಲ ವ್ಯವಹಾರ–ವಹಿವಾಟುಗಳ ಹೊಣೆ ನಾಗಮ್ಮನವರದೇ ಆಗಿದ್ದರಿಂದ ತಮ್ಮ ಮನೆಯನ್ನು 'ನಾಗಾಲ್ಯಾಂಡ್' ಎಂದು ತಮಾಷೆಯಾಗಿ ಕರೆಯುತ್ತಿದ್ದರು ರಾ.ಶಿ.

ರಾ.ಶಿ. ದಂಪತಿಗಳಿಗೆ ಹುಟ್ಟಿದ್ದು ಒಟ್ಟು ಆರು ಮಕ್ಕಳು. ಮೂರು ಹೆಣ್ಣು, ಮೂರು ಗಂಡು. ಮೊದಲ ಮಗಳು ವಿಮಲಾ ಶೇಷಾದ್ರಿ, ಎರಡನೆಯ ಮಗಳು ಕಮಲಾ ರಾಮಸ್ವಾಮಿ, ಮೂರನೆಯವಳು ಲೀಲಾ ಮಿರ್ಲೆ. ಈ ಮೊದಲೇ ಹೇಳಿರುವಂತೆ, ಎಲ್ಲರಿಗೂ ಬರವಣಿಗೆಯ ಕಸರತ್ತು ಗೊತ್ತು. ಈ ಮಕ್ಕಳಲ್ಲಿ ಈಗ ವಿಮಲಾ ಮತ್ತು ಕಮಲಾ ಇವರುಗಳು ಇನ್ನಿಲ್ಲವಾಗಿದ್ದಾರೆ.

ರಾ.ಶಿ.ಯವರ ಸಾಹಿತ್ಯ ರಚನೆಗೆ ಅಗತ್ಯ ಸಲಹೆ ಸೂಚನೆಗಳನ್ನು ಕೊಡುವಷ್ಟು ತಿಳಿವಳಿಕೆ ಇತ್ತೋ ಇಲ್ಲವೋ, ಆದರೆ ಅವರ ಎಲ್ಲ ಕೃತಿಗಳನ್ನೂ ಓದಿ ಮೆಚ್ಚುತ್ತಿದ್ದವರು ನಾಗಮ್ಮ. ಪತಿಯ ಸಾಹಿತಿ–ಸ್ನೇಹಿತರನ್ನು ಗೌರವಿಸುತ್ತಿದ್ದರು. ಶಿವರಾಂ ಕಾರಂತರು, ದ.ರಾ ಬೇಂದ್ರೆ, ಕೈಲಾಸಂ. ಮುಂತಾಗಿ ಯಾರೇ ಮನೆಗೆ ಬರಲಿ, ವಾರಗಟ್ಟಲೆ, ತಿಂಗಳುಗಟ್ಟಲೆ ಮನೆಯಲ್ಲಿ ಅತಿಥಿಗಳಾಗಿ ಉಳಿದರೆ, ಅವರನ್ನು ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದರು. ಪತಿಯ ಎಲ್ಲ ಕೆಲಸಗಳಿಗೂ ತಲೆದೂಗುತ್ತಿದ್ದರು. "ನಾವು ಬೆಳೆದು ಬಂದ ವಾತಾವರಣವೇ ಹಾಗಿತ್ತು. ನಮ್ಮವರು ಅವರ ಮನಸ್ಸಿನ ಸಂತೋಷಕ್ಕೆ ಏನು ಮಾಡಿದರೂ ಅದು ನನಗೆ ಸರಿ ಎನಿಸುತ್ತದೆ. ಅದರಿಂದ ನಾನು ಅವರ ಯಾವ ಕೆಲಸಕ್ಕೂ ಅಡ್ಡಿ ಮಾಡುವುದಿಲ್ಲ. ಸಂಸಾರದ ಯಾವ ತೊಂದರೆಯನ್ನೂ ಅವರಿಗೆ ಮುಟ್ಟಗೊಡಿಸುವುದಿಲ್ಲ" ಎಂಬುದು ಅವರೇ ಹೇಳುತ್ತಿದ್ದ ಮಾತು.* ಆದರೆ ದೇವರನ್ನು ಪೂಜಿಸುವ ವಿಷಯದಲ್ಲಿ ಮಾತ್ರ, ರಾ.ಶಿ.ಯವರಿಗೆ ಇಲ್ಲದ, ಅಪಾರ ನಂಬಿಕೆ ನಾಗಮ್ಮನವರಿಗಿತ್ತು. ಅವರಿಗೆ ಶಾಸ್ತ್ರ ಸಂಪ್ರದಾಯ, ಹಬ್ಬ

(*ಡಾ. ಕಮಲಾ ಹಂಪನಾ ಅವರ 'ಆ ಮುಖ' ಕೃತಿಯಲ್ಲಿ)

ಹರಿದಿನಗಳೆಂದರೆ ಮನಸ್ಸಿಗೆ ಅತ್ಯಂತೆ ಮುದ ನೀಡುವ ಸಂಗತಿಗಳು. ಅವರ ಬದುಕಿನ ಸಮಸ್ಯೆಗಳಿಗೆ ಸಮಾಧಾನದ ಔಷಧಿ ನೀಡುತ್ತಿದ್ದ ಪರಿಹಾರದ ದಾರಿಗಳು. ಮಲ್ಲೇಶ್ವರದಲ್ಲಿ ಎಲ್ಲ ಅನುಕೂಲಗಳಿರುವ, ಒಳಾಂಗಣದ ಅಲಂಕಾರ–ಅಂದಗಳಿರುವ (ಇಂಟೀರಿಯರ್ ಡಿಸೈನ್) ಮನೆಯನ್ನು ಕಟ್ಟಿದಾಗ (ಸು.1940) ನಾಗಮ್ಮನವರಿಗೆ ದೇವರಿಗಾಗಿ ಒಂದು ಪ್ರತ್ಯೇಕ ಸಣ್ಣ ಕೋಣೆ ಇರಬೇಕೆಂಬ ಸಹಜ ಆಸೆ ಇತ್ತು. ಆದರೆ ಶಿವರಾಂ ಅವರಿಗೆ ಎಲ್ಲ ವಿಷಯದಲ್ಲೂ ತಮಾಷೆ. "ಓಹೋ ಅದಕ್ಕೇನಂತೆ? ನಿನ್ನ ದೇವರನ್ನು ಟೆರ್ರೇಸ್ ಮೇಲೆ ಬಿಟ್ಟು ಬಿಡೋಣ. ಆ ಪೂರ್ತಿ ಜಾಗ ಅವನಿಗೇ. ಅಲ್ಲಿ ಉದ್ದಗಲಕ್ಕೂ ಹಾಯಾಗಿ ಓಡಾಡಿಕೊಂಡಿರಲಿ ಅವನು" ಎಂಬುದು ಅವರ ನಗೆಯ ಉತ್ತರ. ಅಂದಿನ ಸಮಾಜದ ಕಟ್ಟು–ಕಟ್ಟಳೆಗಳಿಗೆ, ಅಪೇಕ್ಷೆ–ಅರಿವುಗಳಿಗೆ ಅನುಗುಣವಾಗಿ, ಮನೆಯಲ್ಲಿ ಪ್ರತಿಯೊಂದೂ ನಡೆಯುತ್ತಿದ್ದುದು ರಾ.ಶಿ.ಯವರ ಇಷ್ಟದಂತೆಯೇ. ರಾಜಿ ಮಾಡಿಕೊಂಡು ನಡೆಯುವುದಷ್ಟೆ ನಾಗಮ್ಮನವರ ಜೀವನ. ರಾ.ಶಿ.ಯವರು ಮಾತುಗಾರ. ಮಹಾ ಸರಸಿ. ನಾಗಮ್ಮನವರು ಮಿತ ಭಾಷಿ. ಅಂದಿನ ಸಮಾಜದ ನಡವಳಿಕೆಯಂತೆ ರಾಶಿಯವರದು ಆಜ್ಞೆ, ಪತ್ನಿಯದು ಆಜ್ಞಾ ಪಾಲನೆ ಮಾತ್ರ. ಎಲ್ಲರನ್ನೂ ಹೊಂದಿಕೊಂಡು ನಡೆಯುವಂತಹ ದೊಡ್ಡ ಗುಣ.

ತಮ್ಮ ಅಪರಿಮಿತ ಕರ್ತವ್ಯಗಳಲ್ಲಿ ಮುಳುಗಿ ಮಕ್ಕಳನ್ನು ಕಡೆಗಣಿಸಿದವರಲ್ಲ ರಾ.ಶಿ.ಯವರು. ಪ್ರಪಂಚದ ಎಲ್ಲ ಮಕ್ಕಳನ್ನೂ ತಮ್ಮ ಮಕ್ಕಳೆಂದೇ ಭಾವಿಸುವಷ್ಟು ದೊಡ್ಡ ಮನಸ್ಸಿನ ಈತ, ಬಿಡುವು ಮಾಡಿಕೊಂಡು ತಮ್ಮ ಮಕ್ಕಳಿಗೆ ಜಗ್ಗೋಜಿ ಕತೆಗಳನ್ನು, ದೆವ್ವದ ಕಥೆಗಳನ್ನು ಪ್ರತಿ ನಿತ್ಯ ಹೇಳುವುದು ಅವರ ದಿನಚರಿಯ ಒಂದು ಭಾಗ. ಮಕ್ಕಳಿಗೇ ಅಲ್ಲ ಮೊಮ್ಮಕ್ಕಳಿಗೂ ಇದೇ ಕಥೆಗಳನ್ನು ಹೇಳುವ ಪರಿಪಾಠ ಮುಂದುವರೆದಿತ್ತು. ಆದರೆ ಈ ಸೌಲಭ್ಯ ದೊರೆತಿದ್ದು ಮೊದಲ ಮೂರು ಹೆಣ್ಣುಮಕ್ಕಳಿಗೆ ಮತ್ತು ಆ ನಂತರದಲ್ಲಿ ಮೊಮ್ಮಕ್ಕಳಿಗೆ ಮಾತ್ರವೇನೋ. ನಡುವಯಸ್ಸಿನಲ್ಲಿ ಕೆಲಸ ಕರ್ತವ್ಯಗಳ ಹೊರೆಯೇ ದಿನದ ಅಷ್ಟೂ ಸಮಯವೂ ಸಾಲದು ಎಂಬಷ್ಟು ಹೆಚ್ಚಾಗಿತ್ತು.

ಶಿವರಾಂ ಅವರಿಗೆ ಮಕ್ಕಳ ಮೇಲೆ ಅಗಾಧ ಮಮತೆ. ಇವರ ಎರಡನೇ ಮಗಳು ಹೇಳಿರುವ ಒಂದು ಸಂದರ್ಭ ಇದಕ್ಕೆ ಉತ್ತಮ ಉದಾಹರಣೆ. ನಾಲ್ಕನೇ ಮಗು ಶಿವಕುಮಾರ್ ಹುಟ್ಟಿದಾಗ ಕಮಲಾಗೆ ಐದು

ವರ್ಷ. ಹುಟ್ಟಿದ ಮಗುವನ್ನು ನೋಡಲು, ಶಿವರಾಂ ಅವರ ಪೇಷಂಟ್ ಒಬ್ಬಾಕೆ ಬಂದರು. ತಮ್ಮ ವೈದ್ಯರಿಗೆ, ಮೂರು ಹೆಣ್ಣು ಮಕ್ಕಳ ನಂತರ ಗಂಡು ಹುಟ್ಟಿದ್ದು ತುಂಬ ಸಂತೋಷವಾಯಿತೆಂದು ತಿಳಿಸಿದ ಆಕೆ, 'ಮೂರು ಮಣ್ಣು ಕಲಶಗಳ ಮೇಲೆ ಒಂದು ಹೊನ್ನ ಕಲಶ" ಎಂಬ ಒಂದು ಸಣ್ಣತನದ ಮಾತನ್ನೂ ಸೇರಿಸಿದರು. ಈ ಮಾತಿನಿಂದ ಅಗಾಧ ಪೆಟ್ಟು ತಗುಲಿದ, ಪುಟ್ಟ ಮಗು ಕಮಲಾಳ ಮನಸ್ಸು ಒಳಗೇ ಸ್ಫೋಟಿಸಿತು, ನೊಂದುಕೊಂಡಿತು. ಹೆಣ್ಣು ಎಂದರೆ ಮಣ್ಣು ಕಲಶವೇ ತಾವು? ಆಕೆಯಮೇಲೆ ಕೋಪ ಏರಿ, ಊಟವೂ ಬೇಡವೆಂದು ಮೂಲೆಯೊಂದರಲ್ಲಿ ಮುಖ ಉಬ್ಬಿಸಿ ಕುಳಿತಿತು ಮಗು. ಅದೇ ಸಮಯಕ್ಕೆ ಮನೆಗೆ ಬಂದ ತಂದೆ, ಪ್ರೀತಿಯಿಂದ ಅವಳ ಕೋಪಕ್ಕೆ ಕಾರಣ ತಿಳಿದುಕೊಂಡರು. 'ಅಯ್ಯೋ ಹುಚ್ಚಿ. ಆಕೆಗೆ ಅರುಳು ಮರುಳು ಖಾಯಿಲೆ. ಅದಕ್ಕೇನೆ ನನ್ನ ಹತ್ತಿರ ಔಷಧಿಗೆ ಬರೋದು. ಆಕೆಗೆ ವಿಪರೀತ ಮರೆವು. ನಿಜವಾಗಿ, ಮೂರು ಹೊನ್ನ ಕಲಶಗಳ ಮೇಲೆ ಒಂದು ಮಣ್ಣು ಕಲಶ, ಎಂದು ಇರೋದು. ಹಾಗೆ ಹೇಳುವ ಬದಲು ತಪ್ಪಾಗಿ ಅದಲು ಬದಲು ಹೇಳಿದ್ದಾರೆ. ನೀನು ಹೊನ್ನ ಕಲಶ ಮಗೂ. ಈಗ ಬಾ ಊಟ ಮಾಡೋಣ" ಎಂದು ರಮಿಸಿ, ಸಮಾಧಾನ ಮಾಡಿ ತಮ್ಮೊಂದಿಗೆ ಊಟಕ್ಕೆ ಕೂಡಿಸಿಕೊಂಡರಲ್ಲದೆ, ಆ ನಂತರ ಆ ಹೆಂಗಸಿನ ಒಂದು ಚಿತ್ರ ಬರೆದು ಆಕೆಗೆ ಕೋರೆ ಹಲ್ಲು, ಕೊಂಬು ಎಲ್ಲ ಕೊಟ್ಟು, ಆ ಚಿತ್ರಕ್ಕೆ ಬಣ್ಣ ತುಂಬಿ, ಕಮಲಾ ನಗುವವರೆಗೆ ಓಲೈಸಿದರಂತೆ.

ಗಂಡು ಮಕ್ಕಳು ಹುಟ್ಟುವ ಕಾಲಕ್ಕೆ ಆಗಲೇ ರಾಶಿಯವರ ಅಧ್ಯಯನ, ಕೆಲಸ ಕರ್ತವ್ಯಗಳ ಹೊರೆ ಅಗಾಧದ ಗಡಿಗೆ ತಲುಪಿತ್ತು. ಮಕ್ಕಳೊಂದಿಗೆ ಇರಲು ಸಮಯ ಸಿಗುತ್ತಿದ್ದುದೇ ಕಡಿಮೆ. ಆದ್ದರಿಂದ ಸಹಜವಾಗಿಯೇ ಮಕ್ಕಳಿಗೆ ಅವರ ಬಗ್ಗೆ ಒಂದು ರೀತಿ ಸಲುಗೆ ಇಲ್ಲದ ಭಯ. ಆದರೆ ಎಂದೂ ಮಕ್ಕಳನ್ನು ಯಾವುದಕ್ಕೂ ಬೈದವರಲ್ಲ. ಕೋಪಗೊಂಡವರಲ್ಲ. ಯಾರೇ ಆದರೂ ಸುಳ್ಳು ಹೇಳಿದರೆ ಮಾತ್ರ ಅಸಾಧ್ಯ ಕೋಪ. ಏನೇ ಆದರೂ ಮಕ್ಕಳಿಗೆ ಸಮಾಧಾನವಾಗಿ ತಿಳಿ ಹೇಳುವುದೇ ಅವರ ಸ್ವಭಾವ. ಶಾಲೆಯ ಶುಲ್ಕವೊಂದನ್ನು ಮಾತ್ರ ಮಕ್ಕಳೇ ಕೇಳಬೇಕೆಂದು ರಾ.ಶಿ.ಯವರು ನಿಗದಿಸಿದ ನಿಯಮ. ಅದರಿಂದ ಅದೊಂದನ್ನು ಬಿಟ್ಟು, ಮಕ್ಕಳಿಗೆ ಶಾಲೆಯ ಪ್ರವಾಸ, ಪ್ರವೇಶ, ಪುಸ್ತಕ, ಬಟ್ಟೆ, ಹೀಗೆ ಬೇಕಾದುದನ್ನೆಲ್ಲ ಒದಗಿಸಿಕೊಳ್ಳಲು ಅಮ್ಮನ ನೆರವಿನ ಮಾಧ್ಯಮ ಅತ್ಯಗತ್ಯವಿತ್ತು. ಆಕೆಯೇ ಅವರಿಗೆ ಸದಾ ಸರ್ವಸ್ವ.

ಜಾತಿ ಭೇದ, ಲಿಂಗಭೇದವಿಲ್ಲದ ವಿಶಾಲ ಮನಸ್ಸು ರಾ.ಶಿ.ಯವರದು. ಇದು ಅವರ ಕೃತಿಗಳಲ್ಲೂ, ದಿನನಿತ್ಯದ ನಡವಳಿಕೆಗಳಲ್ಲೂ ಕಾಣ ಬರುತ್ತಿದ್ದ ಗುಣ. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೂ, ಗಂಡು ಮಕ್ಕಳ ವಿದ್ಯಾಭ್ಯಾಸಕ್ಕೆ ಕೊಡುವಷ್ಟೇ ಪ್ರಾಶಸ್ತ್ಯ. ಹೆಣ್ಣುಮಕ್ಕಳು ಓದುತ್ತಿರುವಾಗ ಯಾರೂ ಅವರಿಗೆ ಮನೆಗೆಲಸಕ್ಕೆ ಕರೆಯಬಾರದೆಂಬುದು ಅವರು ಮನೆಯಲ್ಲಿ ವಿಧಿಸಿದ್ದ ಕಟ್ಟಪ್ಪಣೆ.

ರಾ.ಶಿ.ಯವರಿಗೆ ತಮ್ಮ ಮಕ್ಕಳ ಮೇಲಿದ್ದ ಪ್ರೀತಿಯ ಅಳತೆಗೆ, ಅವರು ತಮ್ಮ ಎಲ್ಲ ಮಕ್ಕಳಿಗೂ ಹಾರೈಸಿ ಪ್ರಕಟಿಸಿರುವ ಕೃತಿಗಳೇ ಒಂದು ಮಾಪಕ. ಕುಮಾರ್, ಪ್ರಕಾಶ್ ಮತ್ತು ರಾಮಸ್ವಾಮಿ ಇವರುಗಳ ಉಪನಯನ ಪೂರ್ವಕ, 'ಸಾಕ್ಷಿ ಸಂಕಲಿಕೆ' ಕೃತಿ; ಹಿರಿಯ ಮಗಳು ವಿಮಲಾ ಶೇಷಾದ್ರಿಯವರಿಗೆ, ಒಲವಿನ ಹರಕೆಗಳೊಂದಿಗೆ 'ಕಾಲ' ಕೃತಿ; ಎರಡನೇ ಮಗಳು ಕಮಲಾ ರಾಮಸ್ವಾಮಿಗೆ ಹರಕೆಯ ಬಳುವಳಿಯಾಗಿ, 'ಮನೋನಂದನ'; ಮೊಮ್ಮಗಳು ಆರತಿಗೆ 'ಅಂಚೆಪೇದೆಯ ಅಂತರ್‌ಹೆಂಡತಿ' ಕಥಾ ಸಂಕಲನ, ಸಲ್ಲಿಸಲ್ಪಟ್ಟಿವೆ.

ಶಿವರಾಮ ಅವರಿಗೆ ತಾಯಿ ಎಂದರೆ ದೈವ. ಅವರು ಚಿಕ್ಕವರಿದ್ದಾಗ ಟೆನ್ನಿಸ್ ರ್‍ಯಾಕೆಟ್‌ಗೆ ಅಮ್ಮನ ಬಳಿ ಹಣ ಕೇಳಿದಾಗ, ಆಕೆ ತಕ್ಷಣ ಕೊಡಲಾಗದೇ ಸಂಜೆ ಕೊಡುವೆ ಎಂದು ಹೇಳಿ, ಸಂಜೆ ಮಗನಿಗೆ ಹಣ ಕೊಟ್ಟರು. ಆದರೆ ಆ ಹಣ ಸಂಜೆಗೆ ಹೇಗೆ ಸಿಕ್ಕಿತು ಎಂಬುದರ ಹಿಂದಿನ ಸತ್ಯ ಶಿವರಾಂ ಅವರಿಗೆ ಗೊತ್ತಾಗಿದ್ದು ತಾಯಿ ತೀರಿಕೊಂಡಾಗಲೇ. ತಂದೆ ಎಲ್ಲವನ್ನೂ ಬರಿದು ಮಾಡಿದ ಮೇಲೆ ಆ ತಾಯಿಯ ಬಳಿ ಉಳಿದಿದ್ದು ಒಂದೇ ಒಂದು ಚಿನ್ನದ ಆಭರಣ, ಕಾಪು. ಮಗನ ರ್‍ಯಾಕೆಟ್‌ಗೆ ಹಣ ಒದಗಿಸಲು ಆಕೆ ಅದನ್ನು ಮಾರಿದ್ದರು. ಯಾರಿಗೂ ತಿಳಿಯಬಾರದೆಂದು ಅದೇ ಥರದ ಹಿತ್ತಾಳೆಯ ಕಾಪು ಮಾಡಿಸಿಕೊಂಡು ಹಾಕುತ್ತಿದ್ದರು. ಅವರು ತೀರಿಕೊಂಡಾಗ, ಯಾರೋ ಅದು ಬಂಗಾರದ್ದೆಂದು ತಿಳಿದು ಶವದ ಕೈಗಳಿಂದ ತೆಗೆದು ಶಿವರಾಂ ಅವರ ಅಜ್ಜಿಯ ಕೈಲಿ ಕೊಟ್ಟಿದ್ದರು. ಅಜ್ಜಿ ಆ ಹಿತ್ತಾಳೆಯ ಕಾಪನ್ನು, ಮೊಮ್ಮಗ ಶಿವರಾಂ ಅವರ ಕೈಗೊಪ್ಪಿಸಿ, ಈ ಸತ್ಯವನ್ನು ಹೇಳಿದಾಗ ಶಿವರಾಂ ಅವರಿಗೆ ಆದ ಸಂಕಟ ಅಷ್ಟಿಷ್ಟಲ್ಲ. ತಮ್ಮ ತಾಯಿಯೇ ಆ ಕಾಪು ಎಂಬಂತೆ, ತಾಯಿಯ ಪ್ರೇಮದ ಕುರುಹಾಗಿ ತಾವು ಸಾಯುವ ದಿನದವರೆಗೂ ಅದನ್ನು ತಮ್ಮ ದಿಂಬಿನ ಕೆಳಗಿಟ್ಟುಕೊಂಡಿದ್ದರಂತೆ ಅವರು. ಅದರಲ್ಲಿ ಅವರ ತಾಯಿಯ ಪ್ರೀತಿ ಇತ್ತು. ಹಾರೈಕೆ ಇತ್ತು ಎಂಬಂತೆ.

ರಾ.ಶಿ.ಯವರಿಗೆ ಸು.1978ರಿಂದಲೇ ದೈಹಿಕ ತೊಂದರೆಗಳು ಬಾಧಿಸತೊಡಗಿದ್ದವು. ಅದನ್ನು ಲೆಕ್ಕಿಸದೇ ಅವರು ತಮ್ಮ ಕರ್ತವ್ಯವನ್ನು ಮುಂದುವರೆಸಿದರೂ, ಕ್ರಮೇಣ ಈ ತೊಂದರೆಗಳು ಬೃಹತ್ತಾಗುತ್ತ ಅವರ ಅಂತಃಶಕ್ತಿಯನ್ನೂ ಮೀರಿ ನಿಂತವು. ಕೈಗಳ ಸ್ವಾಧೀನ ಕಳೆದುಕೊಂಡ ಇವರು, ಹಾಲು, ನೀರು ಕುಡಿಯಲೂ ಮಕ್ಕಳ ಮರ್ಜಿಗೆ ಕಾಯಬೇಕಾದ ಪರಿಸ್ಥಿತಿ. ಒಂದೆಂದರೆ ದೇಹ ಕ್ಷೀಣಿಸುತ್ತ ಹೋಗುತ್ತಿತ್ತೇ ವಿನಹ, ಅವರು ಮಾನಸಿಕವಾಗಿ ಕಿಂಚಿತ್ತೂ ಕುಂದಿರಲಿಲ್ಲ. ಇದಕ್ಕೆ ಅವರ ಕೆಲವು ಮಾತಿನ ನಿದರ್ಶನಗಳು ಇಲ್ಲಿವೆ;

ಅವರ ದೈಹಿಕ ಬಾಧೆ ನೋಡಿ "ಅಯ್ಯೋ ಪಾಪ ಎಷ್ಟು ಕಷ್ಟ ಪಡುತ್ತಿದ್ದಾರೆ. ಇಷ್ಟು ಒಳ್ಳೆಯವರಿಗೆ ದೇವರು ಹೀಗೆ ಮಾಡಬಾರದಿತ್ತು", ಎಂದವರಿಗೆ, "ಸುಖವಾಗಿದ್ದಾಗ ಸುಖ ಅನುಭವಿಸಲಿಲ್ಲವೇ? ಸುಖ ಕೊಟ್ಟ ಅಂತ ಹೊಗಳೋದು, ಕಷ್ಟ ಕೊಟ್ಟಾಗ ಆ ದೇವರನ್ನ ಬಯ್ಯೋದಾ? ಸುಖವೂ ಅವನದೇ, ಕಷ್ಟವೂ ಅವನದೇ. ಸುಖ ಬೇಕು ಕಷ್ಟ ಬೇಡ ಅಂದ್ರೆ ಹೇಗೆ? ಬೇಡದ್ದನ್ನು ಯಾರಿಗೆ ಕೊಡಬೇಕು ಅವನು?" ಎಂದು ಉತ್ತರಿಸಿದ್ದರಲ್ಲಿ;

ಕೊರವಂಜಿಯ ಆಜೀವ ಲೇಖಕರಾದ ದಾಶರಥೀ ದೀಕ್ಷಿತರು ಇವರನ್ನು ಕಾಣಲು ಹೋದಾಗ, ಹೊಟ್ಟೆಯಿಂದ ಪಕ್ಕಕ್ಕಿಳಿಯುವ ಒಂದು ಟ್ಯೂಬ್ ಹಾಕಿಕೊಂಡು ಮಲಗಿದ್ದರು ಇವರು. ದೀಕ್ಷಿತರು ಕಣ್ಣೀರು ಹಾಕಿ, 'ಏನಾಯ್ತು"? ಎಂದು ಕೇಳಿದಾಗ "ಹೋಗುವ ದೇಹಕ್ಕೆ ಏನಾದರೂ ಆಗಲೇ ಬೇಕಲ್ಲ" ಎಂದು ಆಡಿದ ಒಂದೇ ಮಾತಿನಲ್ಲಿ;

ನೋಡಲು ಬಂದ ಆತ್ಮೀಯ ಗೆಳೆಯರಿಗೆ 'ಎರಡು ಬೆಲ್ ಆಗಿದೆ. ಮೂರನೇ ಬೆಲ್‌ಗೆ ಹೊರಡಲು ಕಾದಿದ್ದೀನಿ" ಎಂದು ಹೇಳುತ್ತಿದ್ದುದರಲ್ಲಿ;

"ಖಾಯಿಲೆ ಬಂದಿರುವುದು ದೇಹಕ್ಕೆ, ಅದರ ಕರ್ಮ ಅದು ಅನುಭವಿಸುತ್ತೆ 'ನನಗೂ' ಅದಕ್ಕೂ ಯಾವ ಸಂಬಂಧವೂ ಇಲ್ಲ" ಎಂದು ಇವರ ನರಳಾಟಕ್ಕೆ ಸಂಕಟ ಪಟ್ಟವರೊಬ್ಬರ ಮುಂದೆ ಕೊಟ್ಟ ಹೇಳಿಕೆಯಲ್ಲಿ;

"ಕಾಯುತ್ತಿದ್ದೇನೆ. ಪ್ರಯಾಣಿಸಲು ಕರೆ ಬರುವುದೇ ಬಾಕಿ', ಎಂಬುದರಲ್ಲಿ;

ಅವರು ತಮ್ಮ ದೇಹದ ಸಂಬಂಧವನ್ನು ಆಗಲೇ ತೊರೆದು, ಇಲ್ಲಿಯ ಎಲ್ಲ ಸಂಬಂಧಗಳನ್ನೂ ಬಿಟ್ಟು ಹೋಗಲು ಮನಸ್ಸನ್ನು ಸಿದ್ಧ ಪಡಿಸಿಕೊಂಡಿದ್ದರೆಂಬುದು ಸ್ಪಷ್ಟಗೊಳ್ಳುತ್ತದೆ. ಶಿವರಾಮ ಕಾರಂತರು "ನಮ್ಮ ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿರಬೇಕು. ಅಂಡ್ ಪ್ಯಾಕ್ ಅಪ್ ವೆನ್ ದ ಕಾಲ್ ಕಮ್ಸ್" ಎಂದು ಹೇಳುತ್ತಿದ್ದರಂತೆ. ಅದೇ ಪ್ರಕಾರವೇ ರಾ.ಶಿ.ಯವರೂ 'ಹರಿದ ಉಯಿಲು'ನಲ್ಲಿ "(ಯಮ) ದೂತರನ್ನು ಕಳಿಸಿದರೆ ವಿನಯದಿಂದ "ಸಿದ್ಧನಾಗಿದ್ದೀನಿ, ಹೊರಡೋಣವೇ?" ಎಂದು ನಗುತ್ತ ನಗುತ್ತ, ಅವರನ್ನು ಎದುರುಗೊಳ್ಳಬೇಕು" ಎಂದು ನರಸಪ್ಪ ಹೇಳುವಂತೆ, ತಾವೂ ತಮ್ಮ ಆತ್ಮವನ್ನು ದೇಹದಿಂದ ಬೇರ್ಪಡಿಸಿಟ್ಟುಕೊಂಡು, ಮೇಲೇರಲು ಸಿದ್ಧರಾಗಿ, ಕಾಲನ ಕರೆಗಾಗಿ ಕಾಯುತ್ತಿದ್ದ ಒಬ್ಬ ಅಪರೂಪದ ಅಧ್ಯಾತ್ಮಸಾಧಕ.

ಯಾವುದೇ ಒಂದು ಆದರ್ಶವನ್ನು ಇಟ್ಟುಕೊಳ್ಳದೇ ಹಲವು ರೀತಿಯಲ್ಲಿ ಇತರರಿಗೆ ಆದರ್ಶವಾಗುವಂತಹ ರಾ.ಶಿ.ಯವರ ಜೀವನದಿಂದ, ಸಾಹಿತಿಗಳು ಕಲಿತುಕೊಳ್ಳಬೇಕಾದ ಒಂದು ವಿಚಾರವೆಂದರೆ, ಬರವಣಿಗೆ ಅಥವಾ ಕೃತಿ ರಚನೆ, ಋಣ ತೀರಿಸುವ ಸಹಜ ಕ್ರಿಯೆಯಾಗಬೇಕೇ ಹೊರತು ಪ್ರಶಸ್ತಿ ಬಿರುದುಗಳನ್ನೋ, ಹಣದ ಲಾಭವನ್ನೋ ಪಡೆಯುವ ಸಲುವಾಗಿ ಮಾಡುವ ಒಂದು ಸ್ವಾರ್ಥದ ಕೆಲಸವಾಗಬಾರದು ಎಂಬುದು.

ವೈದ್ಯರಾದವರು ಕಲಿಯಬೇಕಾದ ಮುಖ್ಯ ಪಾಠವೆಂದರೆ, ರೋಗಿಗಳು ತಮ್ಮೊಳಗಿನ ಹಣದಾಹವನ್ನು ತೀರಿಸುವ ಪಿಶಾಚಿಗಳೆಂದು ಭಾವಿಸದೆ, ತಮ್ಮ ಕುಟುಂಬದ ಸದಸ್ಯರಂತೆ ಕಂಡು, ತುಂಬು ಕಾಳಜಿಯಿಂದ, ಹೃತ್ಪೂರ್ವಕವಾದ ಮನಸ್ಸಿನಿಂದ ಅಗತ್ಯ ಚಿಕಿತ್ಸೆಗಳನ್ನು ನೀಡಿದರೆ ನೆಮ್ಮದಿಗೆ ಅದು ಸನ್ಮಾರ್ಗ ಎಂಬುದು.

"ನಾನೇನಾದರೂ ಕಡೆಗಾಲದಲ್ಲಿ ಜ್ಞಾನವಿಲ್ಲದೆ ಹೆಣಗಿದರೆ ಆಸ್ಪತ್ರೆಗೆ ಸೇರಿಸಿ ಹಿಂಸಿಸಬೇಡಿ. ನನ್ನ ಮನೆಯಲ್ಲಿ ನಾನು ಶಾಂತಿಯಿಂದ ಕೊನೆ ಉಸಿರು ಎಳೆಯಲು ಬಿಟ್ಟುಬಿಡಿ." ಎಂದು ಆಗಾಗ ಹೇಳುತ್ತಿದ್ದರಂತೆ ಶಿವರಾಂ ಅವರು. ಈ ಮಾತಿನ ಹಿಂದಿರುವ ಅರ್ಥವನ್ನು, ಅಗತ್ಯವನ್ನು, ಶಾಂತ ಬಯಕೆಯನ್ನು ಪ್ರತಿ ವೈದ್ಯನೂ ಅರಿತುಕೊಂಡು ಅಭ್ಯಾಸ ಮಾಡಬೇಕಾಗಿರುವುದು ಇಂದಿನ ಅಗತ್ಯ.

ವಯಸ್ಸಾಗಿ ಜೀವನ ಮೃತ್ಯುಗಳ ನಡುವೆ ಹೋರಾಡುತ್ತಿರುವ ರೋಗಿಗಳನ್ನು ಅವರ ಸಾವು ಶತಸಿದ್ಧವೆಂದು ತಿಳಿದಿದ್ದರೂ ಐ.ಸಿ.ಯು.ಗೆ ಸೇರಿಸಿ, ಕುಟುಂಬದವರಿಂದ ದೂರವಿಟ್ಟು ಅವರಿಂದ ಲಕ್ಷ ಲಕ್ಷ ರೂಪಾಯಿಗಳನ್ನು ಗಳಿಸಲು ಹೊಂಚು ಹಾಕದೇ; ರೋಗಿಗಳ ಮತ್ತು ಕುಟುಂಬದವರ ನೆಮ್ಮದಿ ಕೆಡಿಸಿ, ತಮ್ಮ ಸೌಧಗಳನ್ನು ಇನ್ನೂ ಬೃಹತ್ತಾಗಿಸಿಕೊಳ್ಳುವ ಯೋಜನೆ ಹಾಕದೇ; ಸತ್ಯವನ್ನು ಬಹಿರಂಗಗೊಳಿಸಿ, ಶಾಂತಿಯಿಂದ ಕುಟುಂಬದವರೊಡನೆ ಕೊನೆಯುಸಿರು ಎಳೆಯಲು ಬಿಡುವುದು ವೈದ್ಯಧರ್ಮವಾಗಬೇಕು, ಎಂಬ ರಾಶಿಯವರ ಅಂತರಂಗದ ಆಶಯವನ್ನು ಅಭ್ಯಾಸದಲ್ಲಿ ಅಳವಡಿಸಿಕೊಳ್ಳಬೇಕೆಂಬುದು ಇಂದಿನ ವೈದ್ಯರಿಂದ ಸಮಾಜ ಬಯಸುತ್ತಿರುವ ಅತ್ಯಗತ್ಯ ಮಾನವೀಯತೆಯ ಅಂಶ.

1984ರ ಜನವರಿ ಹದಿಮೂರಂದು, ಸೂರ್ಯೋದಯಕ್ಕೆ ಮುನ್ನ, ಇನ್ನೂ ಹಿಂದಿನ ರಾತ್ರಿಯ ಕತ್ತಲು ಕರಗುವ ಮುನ್ನ, ನಾಲ್ಕೈದು ದಶಕಗಳ ಕಾಲ ಕರ್ನಾಟಕದಾದ್ಯಂತ ಬೆಳಗಿದ ಕನ್ನಡದ ಈ ಉಜ್ವಲ ದೀಪ ಆರಿ ಆಕಾಶದ ಆತ್ಮವಾಯಿತು. ಎರಡು ಮೂರು ವರ್ಷಗಳ ಕಾಲ ಅನಾರೋಗ್ಯದಿಂದ ಬಳಲಿದ ದೇಹಕ್ಕೆ ಎಲ್ಲ ನರಳಾಟದಿಂದ ಬಿಡುಗಡೆ ದೊರೆಯಿತು. ರಾಜ್ಯಾದ್ಯಂತ ಬೆಳಗಿದ ಈ ದೀಪ ಭೌತಿಕವಾಗಿ ಇಹದ ನೆಲದಿಂದ ನೇಪಥ್ಯಕ್ಕೆ ಸರಿದು ಮುವ್ವತ್ತೊಂದು ವರ್ಷಗಳೇ ಕಳದಿವೆ. ಆದರೆ ಬೇಕೆನಿಸಿದವರು ಬಯಸಿ ಹುಡುಕಿದರೆ, ಈಗಲೂ ಸಾಹಿತ್ಯದ ರಾಶಿಯಿಂದ ಎದ್ದು ಬಂದು, ನಿಮಗೆ ಬೇಕಾದ, 'ಕೊರವಂಜಿ'ಯ ಸಂಚಿಕೆಯನ್ನೋ; ಕಾಲದ ವಿವಿಧ ವಿಶ್ಲೇಷಣೆಯುಳ್ಳ 'ಕಾಲ'ವನ್ನೋ ಕಣ್ಣ ಮುಂದೆ ಹಿಡಿಯುತ್ತಾರೆ, 'ಕೆಣಕೋಣ ಬಾರ'ದ 'ಜೀವನ ಒಂದು ಕಾಟಕಾ/ ಬೇವು ಬೆಲ್ಲದ ಕೂಟಕಾ' ಎಂಬ ಕವಿತೆಯನ್ನೋ, ಜಟಕಾ ಸಾಬಿಯ ಭವಿಷ್ಯದ ಮಾತನ್ನೋ, ಕೈ ಗಿಡುತ್ತಾರೆ. 'ಆತುಮವು ನಕ್ಕಾಗ ಬೆಳಕು ಚೆಲ್ಲಿ/ಮನ ಒಡಲ ಕುಣಿತಗಳ ಕಾಣಿಪುದು ಇಲ್ಲಿ' ಎಂದು ಆನಂದದ ಅನುಭವವನ್ನೋ ಆತ್ಮದ ಬೆಳಕನ್ನೋ ಮುಂದೆ ಚೆಲ್ಲುತ್ತಾರೆ. ನಸುನಗೆ ಸೂಸುವ ಲಘು ಲೇಖನಗಳಿಂದ ಹಿಡಿದು ನಿಗೂಢ ಸಾವಿನ ವರೆಗೆ ಚರ್ಚಿಸಿದ ಕೃತಿಗಳೆಲ್ಲವನ್ನೂ ನಿಮ್ಮ ಮುಂದಿಟ್ಟು, ತಾವು ಹಿಂದೆ ನಿಲ್ಲುತ್ತಾರೆ. ಸಾಧಕರಿಗೆ ಸಾವಿಲ್ಲ.

*******

## ರಾ.ಶಿ.ಯವರ ಬದುಕಿನ ಪ್ರಮುಖ ಘಟ್ಟಗಳು:

1905 : ನವೆಂಬರ್ 10 : ಬೆಂಗಳೂರಿನಲ್ಲಿ ಜನನ

1925 : ಬಿ.ಎ. ಪದವಿ ಪರೀಕ್ಷೆಯಲ್ಲಿ ತೇರ್ಗಡೆ

1925 : ಶ್ರೀಮತಿ ನಾಗಮ್ಮನವರೊಂದಿಗೆ ವಿವಾಹ

1930 :ಎಂ.ಬಿ.ಬಿ.ಎಸ್.ವೈದ್ಯಕೀಯ ಪದವಿ ತೇರ್ಗಡೆ

1931 : ಖಾಸಗಿ ದವಾಖಾನೆ 'ಸಿಟಿ ಡಿಸ್ಪೆನ್ಸರಿ'ಯ ಆರಂಭ

1942 : 'ಕೊರವಂಜಿ' ಮಾಸಿಕದ ಮೊದಲ ಸಂಚಿಕೆಯ ಪ್ರಕಟಣೆ

1956 : 'ಬೆಂಗಳೂರು ವೈದ್ಯಕೀಯ ಕಾಲೇಜು ಸ್ಥಾಪನೆ

1967 : ಮಾರ್ಚ್, 'ಕೊರವಂಜಿ' ಮಾಸಿಕದ ಕೊನೆಯ ಸಂಚಿಕೆಯ ಪ್ರಕಟಣೆ

1971 : ಕರ್ನಾಟಕ ರಾಜ್ಯ ಪ್ರಶಸ್ತಿ

1974 : ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

1974 : 'ಮನಮಂಥನ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

1976 : 'ಮನಮಂಥನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

1978–80 : ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆ.

1984 : ಜನವರಿ 13. ಮರಣ

*********

| ರಾ.ಶಿ.ಯವರು ಬರೆದ ಕೃತಿಗಳ ಪಟ್ಟಿ | | | |
|---|---|---|---|
| **ಸಂ.** | **ಕೃತಿಗಳ ಹೆಸರು ಮತ್ತು** ಪ್ರಕಟಣೆಯ ವರ್ಷ | **ಸಂ.** | **ಕೃತಿಗಳ ಹೆಸರು ಮತ್ತು** ಪ್ರಕಟಣೆಯ ವರ್ಷ |
| 1 | ತುಟಿ ಮೀರಿದದು (1939) | 24 | ನಗು (1979) |
| 2 | ಆದರ್ಶ ಆರೋಗ್ಯ (1953) | 25 | ಕೊರವಂಜಿ ಕಂಡ ನಗು ದರ್ಬಾರಿಗರು (1979) |
| 3 | ಕೆಣಕೋಣಬಾರ (1957) | 26 | ಕೊರವಂಜಿ ಕಂಡ ನಗು ವ್ಯಕ್ತಿಗಳು. (1979) |
| 4 | ಜಗ್ಗೋಜಿ (1962) | 27 | ಬುದ್ಧೋಜಿ (1979) |
| 5 | ಥಳಕು ತುಣುಕು (1962) | 28 | ಅಂಚೆ ಪೇದೆಯ ಅಂತರ್ ಹೆಂಡತಿ (1979) |
| 6 | ನಮ್ಮ ಅಡಿಗೆ ಪಥ್ಯದ ಊಟ (1963) | 29 | ಪಶ್ಯಾಮಿ ಕಥೆಗಳು (1980) |
| 7 | ಸಾಕ್ಷಿ ಸಂಕಲಿಕೆ (1964) | 30 | ಜೇಬುಗಳ್ಳ ಜಿಮ್ಮಿ (1980) |
| 8 | ಮನೋನಂದನ 1965/2005 | 33 | ಯೋಚಿಸಿದರೆ (1981) |
| 10 | ಕೊರವಂಜಿಯ ಪಡುವಣ ಯಾತ್ರೆ (1968) | 34 | ಪಂಪಾಪತಿಯ ಕೃಪೆ (1982) |
| 11 | ಇಂದಾನೊಂದು ಕಾಲದಲ್ಲಿ (1968) | 15 | ಕಾರ್ತೀಕ ಸೋಮವಾರ |
| 12 | ಭಯ–ಸರಳವಿಶ್ಲೇಷಣೆ (1969) | 13 | ಕೊರವಂಜಿ ಕಂಡ ನಗು ಸಂಸಾರಗಳು (1969) |
| 9 | ಅಲರ್ಜಿ (1970) | 9 | ಮಧುವನದಲ್ಲಿ ಮೇಳ |
| 14 | ಮೃಗಶಿರ (1971) | 31 | ಮನನ (1980) |

| | | | |
|---|---|---|---|
| 16 | ಪೊಂತಿಯಾನೋ (1972) | 32 | ಜಿ.ಪಿ. ರಾಜರತ್ನಂ (1980) |
| 35 | ಕಾಲ (1963) | 17 | ಟಿ.ಪಿ. ಕೈಲಾಸಂ. 1972 |
| 18 | ಮನಮಂಥನ (1974 | 36 | Kailasam and I (1969) |
| 19 | ಹರಿದ ಉಯಿಲು(1974 | 37 | Moral and Health (1976) |
| 20 | ನಗೆಗೆರೆ ಚಿತ್ರಗಳು (1974) | 38 | Ananda An Experience (1976) |
| 21 | ಕೊರವಂಜಿ ಕಂಡ ನಗು ಸಮಾಜ (1975) | 39 | Ananda and the three Great Acharyas (1976) |
| 22 | ನಗು ಸರಸಿ ಅಪ್ಸರೆಯರು (1976) | 40 | Death and Nachiketas (1981) |

*******


## ಭಾವಚಿತ್ರಗಳು



Ra.Shi. along with Sri.S.G.Ramachandra of Kirloskar Electric Company.



From left to right:
Masthi, Ra.Shi. , T.P.Kailasam, Na. Kasturi, C.K.Venkara ramaiah, Vee.Cee.,and D.R.Bendre.





Dr.Sivaram along with the then Mayor of Bangalore Sri.JeenaBhoy Devidas



Dr.Sivaram at a public Function

**ಗ್ರಂಥ ಋಣ :**

1. ಕೊರವಂಜಿ ಸಿ.ಡಿ.(25 ವರ್ಷಗಳ ಅಂಕಾಕ್ಷರ ಅವತರಣಿಕೆ), ರಾ.ಶಿ.ಯವರು ಬರೆದ ಕೃತಿಗಳು;

2. ತುಟಿ ಮೀರಿದುದು, 3. ಕೆಣಕೋಣು ಬಾರ, 4. ಸಾಕ್ಷಿ ಸಂಕಲಿಕೆ, 5. ಮನೋನಂದನ, 6. ಕೊರವಂಜಿಯ ಪಡುವಣ ಯಾತ್ರೆ, 7. ಭಯ–ಸರಳ ವಿಶ್ಲೇಷಣೆ, 8. ಕಾಲ, 9. ಹರಿದ ಉಯಿಲು, 10. ಕೊರವಂಜಿ ಕಂಡ ನಗು ಸಮಾಜ, 11. ನಗು ಸರಸಿ ಅಪ್ಸರೆಯರು, 12. ಕೊರವಂಜಿ ಕಂಡ ನಗು ದರ್ಬಾರಿಗರು, 13. ಕೊರವಂಜಿ ಕಂಡ ನಗು ವ್ಯಕ್ತಿಗಳು. 14. ಅಂಚೆ ಪೇದೆಯ ಅಂತರ್ ಹೆಂಡತಿ, 15. ಪಶ್ಯಾಮಿ ಕಥೆಗಳು, 16. ಜೇಬುಗಳ್ಳ ಜಿಮ್ಮಿ, 17. ಯೋಚಿಸಿದರೆ, 18. ಕೊರವಂಜಿ ಕಂಡ ನಗು ಸಂಸಾರಗಳು, 19. 'ರಾ.ಶಿ.'– ವಿಮಲಾ ಶೇಷಾದ್ರಿ (1984), 20. 'ಡಾ. ಎಂ. ಶಿವರಾಂ' – ಎಂ. ಶಿವಕುಮಾರ್, (1992), 21. ಬೆಸ್ಟ್ ಆಫ್ ಕೊರವಂಜಿ – 1999, (ಸಂಪಾದಕರು ಅಪರಂಜಿ ಶಿವು, ಕೃಷ್ಣ ಸುಬ್ಬರಾವ್ ಬೇಲೂರು ರಾಮಮೂರ್ತಿ), 22. ರಾಶಿ ರಾಶಿ ನೆನಪು – ಪ್ರಧಾನ ಸಂಪಾದಕ– ಶಿವಕುಮಾರ್ (2005) 23. ಆ ಮುಖ– ಡಾ, ಕಮಲಾ ಹಂಪನಾ, 1985, 2011, 24. ನಗೆಗನ್ನಡಂ ಗೆಲ್ಗೆ–ಪ್ರಧಾನ ಸಂಪಾದಕರು; ಎಚ್.ಕೆ. ನಂಜುಂಡಸ್ವಾಮಿ ಮತ್ತು ಎಚ್.ಐ. ರಾಜಗೋಪಾಲ್–(2007), 25. (ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ 'ವಾರ್ತಾ ಪತ್ರ'ದ ಜನವರಿ–ಮಾರ್ಚ್ 1980ರ ಸಂಚಿಕೆ 26. ನಗೆಗಾರಕಾ ಶಿ.1999: ಸಂಪಾದಕರು ಅಪರಂಜಿ ಶಿವು.

********